ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

¨ÁU – 4ಎ Part – IVA	ಬೆಂಗಳೂರು, ಮಂಗಳವಾರ,20,ಅಕ್ಟೋಬರ್, 2020(ಆಶ್ವಯುಜ, 28, ಶಕವರ್ಷ ೧೯೪2) Bengaluru, TUESDAY, 20, OCTOBER, 2020(Aashwayuja,28, ShakaVarsha 1942)	ನಂ. 491 No. 491

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಸಂಖ್ಯೆ :ಸಂವ್ಯಶಾಇ 15 ರಾಶಾಪ್ರ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:20.10..2020.

ಅಧಿಸೂಚನೆ

The Karnataka co-operative societies Act,1959 (Karnataka Act 11of 1959) ಇದರ ಅಧಿಕೃತ ಕನ್ನಡ ಭಾಷಾಂತರವನ್ನು the Karnataka Official Language Act, 1963 ರ ಪ್ರಕರಣ 5Aರ ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರದಲ್ಲಿ ಪ್ರ ಕಟಿಸಲು ಆದೇಶಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959

ಪ್ರಕರಣಗಳ ಅನುಕ್ರಮಣಿಕೆ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು:

ಅಧ್ಯಾಯ-I

ಪ್ರಾರಂಭಿಕ

1 ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

2 ಪರಿಭಾಷೆಗಳು

ಅಧ್ಯಾಯ-Iಎ

ಪ್ರಾಧಿಕಾರಿಗಳು ಮತ್ತು ಅಪೀಲು ನ್ಯಾಯಾಧಿಕರಣ

2ಎ. ರಿಜಿಸ್ಟ್ರಾರ್, ಅಡಿಷನಲ್ ರಿಜಿಸ್ಟ್ರಾರ್, ಸಹ ರಿಜಿಸ್ಟ್ರಾರರು, ಉಪ ರಿಜಿಸ್ಟ್ರಾರರು, ರಾಜ್ಯ ಪ್ರತಿನಿಧಿಗಳು ಮತ್ತು ಸಹಾಯಕ ರಿಜಿಸ್ಟ್ರಾರರು

2ಎಎ. ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕ, ಸಹಕಾರ ಲೆಕ್ಕಪರಿಶೋಧನಾ ಅಡಿಷನಲ್ ನಿರ್ದೇಶಕ, ಸಹಕಾರ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕ, ಸಹಕಾರ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು ಮತ್ತು ಸಹಕಾರ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರು

2ಬಿ. (ಬಿಟ್ಟು ಬಿಡಲಾಗಿದೆ)

ಅಧ್ಯಾಯ-II

ಸಹಕಾರ ಸಂಘಗಳ ನೋಂದಣಿ

3. ಬಿಟ್ಟು ಬಿಡಲಾಗಿದೆ

4. ನೋಂದಾಯಿಸಬಹುದಾದ ಸಂಘಗಳು

5. ನಿಯಮಿತ ಅಥವಾ ಅನಿಯಮಿತ ಹೊಣೆಗಾರಿಕೆಯೊಂದಿಗೆ ನೋಂದಣಿ

6. ಸಹಕಾರ ಸಂಘಗಳ ನೋಂದಣಿಗಾಗಿ ಅರ್ಜಿ

7. ನೋಂದಣಿ

8. ನೋಂದಣಿ ಪ್ರಮಾಣಪತ್ರ

9. ಸಹಕಾರ ಸಂಘಗಳು ನಿಗಮಿತ ನಿಕಾಯಗಳಾಗಿರುವುದು

10. ಸಹಕಾರ ಸಂಘದ ಹೆಸರಿನ ಬದಲಾವಣೆ

11. ದಾಯಿತ್ವದ ಬದಲಾವಣೆ

11ಎ. ಉಪವಿಧಿಗಳು

12. ಸಹಕಾರ ಸಂಘದ ಉಪವಿಧಿಗಳ ತಿದ್ದುಪಡಿ

13. ಉಪವಿಧಿಗಳ ತಿದ್ದುಪಡಿಗಳು ಯಾವಾಗ ಜಾರಿಯಲ್ಲಿ ಬರುತ್ತವೆ

14. ಸಹಕಾರ ಸಂಘಗಳ ಸಮ್ಮಿಳನ, ಆಸ್ತಿಗಳು ಮತ್ತು ದಾಯಿತ್ವಗಳ ವರ್ಗಾವಣೆ ಮತ್ತು ವಿಭಜನೆ

14ಎ. [ಬಿಟ್ಟು ಬಿಡಲಾಗಿದೆ]

14ಬಿ. ಕೆಲವು ಪ್ರದೇಶಗಳಲ್ಲಿ ರಿಜಿಸ್ಟ್ರಾರನು ಸಹಕಾರ ಬ್ಯಾಂಕುಗಳ ಸಮ್ಮಿಳನಕ್ಕೆ ಯೋಜನೆಯನ್ನು ತಯಾರಿಸುವುದು

14ಸಿ. ಠೇವಣಿ ವಿಮಾ ನಿಗಮಕ್ಕೆ ಸಹಕಾರ ಬ್ಯಾಂಕಿನ ದಾಯಿತ್ವ

15. ಕೆಲವು ಸಂದರ್ಭಗಳಲ್ಲಿ ಸಹಕಾರ ಸಂಘಗಳ ನೋಂದಣಿ ಪ್ರಮಾಣ ಪತ್ರಗಳ ರದ್ದಿಯಾತಿ

ಅಧ್ಯಾಯ-III

ಸಹಕಾರ ಸಂಘಗಳ ಸದಸ್ಯರು ಮತ್ತು ಅವರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು

16. ಸದಸ್ಯರಾಗಬಹುದಾದ ವ್ಯಕ್ತಿಗಳು

17. ಸದಸ್ಯತ್ವಕ್ಕೆ ಅನರ್ಹತೆ

18. ನಾಮಮಾತ್ರದ ಅಥವಾ ಸಹವರ್ತಿ ಸದಸ್ಯರು

18ಎ. ಸದಸ್ಯತ್ವದ ಸಮಾಪ್ತಿ

18ಬಿ. ನಿರ್ದೇಶಕತ್ವದ ಸಮಾಪ್ತಿ

19. ಬಾಕಿ ಸಂದಾಯ ಮಾಡುವವರೆಗೆ ಸದಸ್ಯನು ಹಕ್ಕುಗಳನ್ನು ಚಲಾಯಿಸತಕ್ಕುದಲ್ಲ

19ಎ. ಮಾಹಿತಿಗೆ ಪ್ರವೇಶ

20. ಸದಸ್ಯರ ಮತಗಳು

21. ಮತ ಚಲಾಯಿಸುವ ರೀತಿ

22. [ಬಿಟ್ಟು ಬಿಡಲಾಗಿದೆ]

23. ಷೇರುಗಳ ಅಥವಾ ಹಿತಾಸಕ್ತಿಗಳ ವರ್ಗಾವಣೆಗಳ ಮೇಲೆ ನಿರ್ಬಂಧಗಳು

23ಎ. ಷೇರು ಮೌಲ್ಯದ ಮರುಪಾವತಿ

24. ಸದಸ್ಯನ ಮರಣಾನಂತರ ಹಿತಾಸಕ್ತಿಯ ವರ್ಗಾವಣೆ

25. ಹಿಂದಿನ ಸದಸ್ಯನ ಹೊಣೆ ಮತ್ತು ಮೃತ ಸದಸ್ಯನ ಆಸ್ತಿಪಾಸ್ತಿ

ಅಧ್ಯಾಯ-IV

ಸಹಕಾರ ಸಂಘಗಳ ವ್ಯವಸ್ಥಾಪನೆ

26. ಸಹಕಾರ ಸಂಘದಲ್ಲಿ ಅಂತಿಮ ಅಧಿಕಾರ

26ಎ. ಸಹಕಾರ ಸಂಘಗಳ ಪಾಲುಗಾರಿಕೆ

26ಬಿ. ಸಹಕಾರ ಸಂಘಗಳಿಂದ ಸಹೋದ್ಯಮ

27. ವಾರ್ಷಿಕ ಮಹಾ ಸಭೆ

28. ವಿಶೇಷ ಮಹಾ ಸಭೆ

28ಎ. ಸಹಕಾರ ಸಂಘಗಳ ವ್ಯವಸ್ಥಾಪನೆಯು ಸಮಿತಿಯಲ್ಲಿ ನಿಹಿತವಾಗಿರುವುದು

28ಬಿ. ಸಮಿತಿಯು ಚುನಾವಣೆಗೆ ವ್ಯವಸ್ಥೆ ಮಾಡಬೇಕು.

28ಸಿ. ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

28ಡಿ. ಸಹಕಾರ ಸಂಘಗಳ ಸದಸ್ಯರು, ನಿರ್ದೇಶಕರು, ಪದಾಧಿಕಾರಿಗಳು ಮತ್ತು ನೌಕರರ ವಿದೇಶ ಪ್ರಯಾಣಗಳು

29. [ಬಿಟ್ಟು ಬಿಡಲಾಗಿದೆ]

29ಎ. ಪದಾವಧಿಯ ಪ್ರಾರಂಭ

29ಬಿ. ಸಹಕಾರ ಸಂಘಗಳ ಸಮಿತಿಯ ಸದಸ್ಯರ ಅಥವಾ ಪದಾಧಿಕಾರಿಗಳ ರಾಜೀನಾಮೆ

29ಸಿ. ಸಮಿತಿಯ ಸದಸ್ಯತ್ವಕ್ಕೆ ಅನರ್ಹತೆಗಳು

29ಡಿ. [ಬಿಟ್ಟು ಬಿಡಲಾಗಿದೆ]

29ಇ. ಸಮಿತಿಯ ಸದಸ್ಯರ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡುವುದು.

29ಎಫ್. ಅಧ್ಯಕ್ಷ, ಸಭಾಧ್ಯಕ್ಷ, ಉಪಾಧ್ಯಕ್ಷ ಅಥವಾ ಉಪ ಸಭಾಧ್ಯಕ್ಷ ಮುಂತಾದವರ ಚುನಾವಣೆ

29ಜಿ. ಮುಖ್ಯ ಕಾರ್ಯನಿರ್ವಾಹಕನ ನೇಮಕ

30. ಸಮಿತಿಯ ರದ್ದಿಯಾತಿ

30ಎ. [ಬಿಟ್ಟು ಬಿಡಲಾಗಿದೆ]

30ಎಎ. ಸಹಕಾರ ಚುನಾವಣಾ ಆಯೋಗ

30ಬಿ. ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ದೇಶನ ನೀಡಲು ಅಧಿಕಾರ

31. ರಿಜಿಸ್ಟ್ರಾರ್‌ನಿಂದ ವಿಶೇಷಾಧಿಕಾರಿಯ ನೇಮಕಾತಿ

31ಎ. ಸಹಕಾರ ಸಂಘಗಳ ದಾಖಲೆಗಳು ಮತ್ತು ಸ್ವತ್ತುಗಳ ಸ್ವಾಧೀನತೆಯನ್ನು ಒಪ್ಪಿಸುವುದು

ಅಧ್ಯಾಯ-V

ಸಹಕಾರ ಸಂಘಗಳ ವಿಶೇಷಾಧಿಕಾರಗಳು

32. ಕೆಲವು ಸ್ವತ್ತುಗಳ ಮೇಲೆ ಸಹಕಾರ ಸಂಘದ ಪ್ರಥಮ ಭಾರ

33. ಕೆಲವು ಸಹಕಾರ ಸಂಘಗಳಿಂದ ಸಾಲ ಪಡೆದ ಸದಸ್ಯರ ಒಡೆತನದಲ್ಲಿರುವ ಅಥವಾ ಸದಸ್ಯರು ಗೇಣಿದಾರರಾಗಿ ಧಾರಣ ಮಾಡಿರುವ ಭೂಮಿಗಳ ಮೇಲಣ ಭಾರ

34. ಕೆಲವು ಸಂದರ್ಭಗಳಲ್ಲಿ ಸಂಘದ ಕ್ಲೇಮನ್ನು ವೇತನದಿಂದ ಕಳೆದುಕೊಳ್ಳುವುದು

35. ಸಹಕಾರ ಸಂಘದ ಷೇರುಗಳ ಅಥವಾ ಬಂಡವಾಳದಲ್ಲಿ ಸದಸ್ಯರ ಹಿತಾಸಕ್ತಿಯ ಸಂಬಂಧದಲ್ಲಿ ಭಾರ ಮತ್ತು ವಜಾವಟ್ಟು

36. ಷೇರುಗಳು ಅಥವಾ ಹಿತಾಸಕ್ತಿಗಳು ಜಪ್ತಿಗೆ ಒಳಪಡತಕ್ಕುದಲ್ಲ

37. ಕೆಲವು ತೆರಿಗೆಗಳು, ಸುಂಕಗಳು ಮತ್ತು ಫೀಜುಗಳಿಂದ ವಿನಾಯಿತಿ

38. ಕಡ್ಡಾಯ ನೋಂದಣಿಯಿಂದ ಲಿಖಿತಗಳ ವಿನಾಯಿತಿ

39. ಸಹಕಾರ ಸಂಘಗಳ ಪರವಾಗಿ ಬರೆದುಕೊಡಲಾದ ದಸ್ತಾವೇಜುಗಳ ನೋಂದಣಿ

ಅಧ್ಯಾಯ Vಎ

ಸಹಕಾರ ಸಂಘಗಳ ಸಮಿತಿಗಳ ಸದಸ್ಯರ ಚುನಾವಣೆ

39ಎ. ಚುನಾವಣೆಗಳನ್ನು ನಡೆಸುವುದು

39ಬಿ. ಚುನಾವಣೆಗಳನ್ನು ನಡೆಸುವುದಕ್ಕಾಗಿ ವೆಚ್ಚ

39ಸಿ. ಭ್ರಷ್ಟಾಚಾರಗಳು

39ಡಿ. ಮತದಾನದ ರಹಸ್ಯವನ್ನು ಕಾಪಾಡುವುದು

39ಇ. ಅಧಿಕಾರಿಗಳು ಮುಂತಾದವರು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಪರವಾಗಿ ಕಾರ್ಯ ನಿರ್ವಹಿಸಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಬೀರಕೂಡದು.

39ಎಫ್. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಮತ ಕೋರಿಕೆಯ ನಿಷೇಧ

39ಜಿ. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ

39ಎಚ್. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡ

39ಐ. ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲಂಘನೆಗಳು

39ಜೆ. ಮತದಾನ ಕೇಂದ್ರದಿಂದ ಮತ ಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ

39ಕೆ. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು

ಅಧ್ಯಾಯ-VI

ಸಹಕಾರ ಸಂಘಗಳಿಗೆ ರಾಜ್ಯದ ನೆರವು

40. ಸಹಕಾರ ಚಳುವಳಿಯ ಪ್ರವರ್ಧನೆ

41. ಸಹಕಾರ ಸಂಘಗಳಲ್ಲಿ ರಾಜ್ಯ ಸರ್ಕಾರದ ಪ್ರತ್ಯಕ್ಷ ಪಾಲುಗಾರಿಕೆ

42. ಸಹಕಾರ ಸಂಘಗಳಲ್ಲಿ ರಾಜ್ಯಸರ್ಕಾರದ ಪರೋಕ್ಷ ಪಾಲುಗಾರಿಕೆ

43. ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿ

44. ರಾಜ್ಯ ಪಾಲುಗಾರಿಕೆ ಉಪನಿಧಿ

45. ಷೇರುಗಳನ್ನು ಖರೀದಿಸಲು ರಾಜ್ಯ ಸರ್ಕಾರದ ಅನುಮೋದನೆ

46. ಕೆಲವು ಷೇರುಗಳ ಸಂಬಂಧದಲ್ಲಿ ಹೊಣೆಗಾರಿಕೆಯನ್ನು ಪರಿಮಿತಗೊಳಿಸುವುದು

47. ಲಾಭಾಂಶದ ಮೊಬಲಗಿನ ಮೇಲೆ ನಿರ್ಬಂಧ

48. ಅಪೆಕ್ಸ್ ಮತ್ತು ಕೇಂದ್ರ ಸಂಘಗಳಿಗೆ ನಷ್ಟಭರ್ತಿ

49. ಷೇರು ಬಂಡವಾಳ ಮತ್ತು ಲಾಭಾಂಶ ಮೊದಲಾದವುಗಳ ವಿಲೆ

50. ಅಪೆಕ್ಸ್ ಅಥವಾ ಕೇಂದ್ರ ಸಂಘದ ಸಮಾಪನದ ತರುವಾಯ `ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿ'ಯ ಮತ್ತು `ರಾಜ್ಯ ಪಾಲುಗಾರಿಕೆ ಉಪನಿಧಿ'ಯ ವಿಲೆ

51. ಮುಖ್ಯ ರಾಜ್ಯಪಾಲುಗಾರಿಕೆ ನಿಧಿಯು ಮತ್ತು ರಾಜ್ಯ ಪಾಲುಗಾರಿಕೆ ಉಪನಿಧಿಯು ಆಸ್ತಿಗಳ ಭಾಗವಾಗದಿರುವುದು

52. ರಾಜ್ಯ ಸರ್ಕಾರ ಮತ್ತು ಅಪೆಕ್ಸ್ ಸಂಘಗಳು ಮಾಡಿಕೊಳ್ಳುವ ಒಪಂ್ಪದ

53. ಸಹಕಾರ ಸಂಘಗಳಿಗೆ ನೀಡಲಾಗುವ ರಾಜ್ಯ ನೆರವಿನ ಇತರ ಪ್ರಕಾರಗಳು

53ಎ. [ಬಿಟ್ಟು ಬಿಡಲಾಗಿದೆ]

54. ನೆರವು ನೀಡಲಾದ ಸಂಘದ ನಿಯಂತ್ರಣ

55. ಈ ಅಧ್ಯಾಯದ ಉಪಬಂಧಗಳು ಇತರ ಕಾನೂನುಗಳ ಮೇಲೆ ಅಧ್ಯಾರೋಹಿಯಾಗಿರುವುದು.

ಅಧ್ಯಾಯ-VII

ಸಹಕಾರ ಸಂಘಗಳ ಸ್ವತ್ತುಗಳು ಮತ್ತು ನಿಧಿಗಳು

56. ನಿಧಿಗಳ ಸಂಗ್ರಹಣೆ

57. ನಿವ್ವಳ ಲಾಭಗಳು ಮತ್ತು ಅವುಗಳ ವಿಲೆ

57ಎ. ಸಹಕಾರ ಶಿಕ್ಷಣ ಮತ್ತು ತರಬೇತಿ

58. ನಿಧಿಗಳ ಹೂಡಿಕೆ

59. ಎರವಲುಗಳ ಮೇಲೆ ನಿರ್ಬಂಧಗಳು

60. ಸಾಲಗಳ ಮೇಲೆ ನಿರ್ಬಂಧಗಳು

61. ಸದಸ್ಯರಲ್ಲದ ಇತರರೊಡನೆ ನಡೆಸುವ ಇತರ ವ್ಯವಹಾರಗಳ ಮೇಲೆ ನಿರ್ಬಂಧ

62. ಭವಿಷ್ಯ ನಿಧಿ

ಅಧ್ಯಾಯ-VIII

ಲೆಕ್ಕ ಪರಿಶೋಧನೆ, ವಿಚಾರಣೆ, ಪರಿಶೀಲನೆ ಮತ್ತು ಅಧಿಭಾರ

63. ಲೆಕ್ಕ ಪರಿಶೋಧನೆ

64. ರಿಜಿಸ್ಟ್ರಾರನಿಂದ ವಿಚಾರಣೆ

65. ಸಹಕಾರ ಸಂಘದ ಪುಸ್ತಕಗಳ ಪರಿಶೀಲನೆ

65ಎ. ವಿಚಾರಣೆ ಹಾಗೂ ಪರಿಶೀಲನೆ ವರದಿಯನ್ನು ಮತ್ತು ಅಂತಿಮ ವರದಿಯನ್ನು ಪತ್ತಿನ ಏಜೆನ್ಸಿಗೆ ಒದಗಿಸತಕ್ಕುದು

65ಬಿ. ಪತ್ತಿನ ಏಜೆನ್ಸಿಯಿಂದ ಸಹಕಾರ ಸಂಘದ ಪುಸ್ತಕಗಳ ಪರಿಶೀಲನೆ

66. ಪುಸ್ತಕಗಳನ್ನು ಮತ್ತು ಸ್ವತ್ತನ್ನು ವಶಪಡಿಸಿಕೊಳ್ಳುವ ಅಧಿಕಾರ

67. ವಿಚಾರಣೆಯ ವೆಚ್ಚಗಳು

68. ರಿಜಿಸ್ಟ್ರಾರನ ಆದೇಶ

69. ಅಧಿಭಾರ

ಅಧ್ಯಾಯ-IX

ವಿವಾದಗಳ ಇತ್ಯರ್ಥ

70. ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಉಲ್ಲೇಖಿಸಬಹುದಾದ ವಿವಾದಗಳು

70ಎ. ಕಾಲಪರಿಮಿತಿಯ ಅವಧಿ

71. ವಿವಾದಗಳ ವಿಲೆ

71ಎ. ಹಣಕಾಸು ನೀಡಿಕೆ ಬ್ಯಾಂಕಿಗೆ ಯಾವೊಂದು ಸಹಕಾರ ಸಂಘದಿಂದ ಬರಬೇಕಾದ ಹಣಗಳ ವಸೂಲಿಗಾಗಿ ಅಂಥ ಸಂಘದ ಸದಸ್ಯರ ವಿರುದ್ಧ ವ್ಯವಹರಣೆ ನಡೆಸಲು ಆ ಹಣಕಾಸು ನೀಡಿಕೆ ಬ್ಯಾಂಕಿನ ಅಧಿಕಾರ

71ಬಿ. ಪತ್ತಿನ ಏಜೆನ್ಸಿಗೆ ಸಹಕಾರ ಸಂಘದಿಂದ ಬಾಕಿ ಇರುವ ಹಣದ ವಸೂಲಿಗಾಗಿ ಏಜೆನ್ಸಿಯು ಅಂಥ ಸಂಘದ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಲು ಆ ಪತ್ತಿನ ಏಜೆನ್ಸಿಯ ಅಧಿಕಾರಗಳು

ಅಧ್ಯಾಯ-X

ಸಹಕಾರ ಸಂಘಗಳ ಸಮಾಪನ ಮತ್ತು ವಿಸರ್ಜನೆ

72. ಸಹಕಾರ ಸಂಘಗಳ ಸಮಾಪನ

72ಎ. ರಿಸರ್ವ್ ಬ್ಯಾಂಕು ಯಾವೊಂದು ಸಹಕಾರಿ ಬ್ಯಾಂಕನ್ನು ಸಮಾಪನಗೊಳಿಸಬೇಕೆಂದು ಅಗತ್ಯಪಡಿಸುವಲ್ಲಿ ಹಾಗೆ ಮಾಡುವುದು

72ಬಿ. ಸಮಾಪಕರು ಠೇವಣಿ ವಿಮಾ ನಿಗಮಕ್ಕೆ ಹಣ ತುಂಬಿಕೊಡುವುದು

73. ಸಮಾಪಕ

74. ಸಮಾಪಕನ ಅಧಿಕಾರಗಳು

75. ಸಹಕಾರ ಸಂಘದ ನೋಂದಣಿಯ ರದ್ದಿಯಾತಿ

ಅಧ್ಯಾಯ-XI

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು

76. ಪರಿಭಾಷೆಗಳು

76ಎ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಈ ಅಧ್ಯಾಯದ ಅನ್ವಯ

76ಬಿ. ರಾಜ್ಯದ ಮತ್ತು ಇತರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು

77. ನ್ಯಾಸಧಾರಿಯ ನೇಮಕಾತಿ ಮತ್ತು ಅವನ ಅಧಿಕಾರಗಳು ಮತ್ತು ಪ್ರಕಾರ್ಯಗಳು

78. ನ್ಯಾಸಧಾರಿಯು ಏಕೈಕ ನಿಗಮವಾಗಿರುವುದು

79. ಡಿಬೆಂಚರುಗಳ ನೀಡಿಕೆ

80. ಕೆಲವೊಂದು ಸ್ವತ್ತುಗಳ ಮೇಲೆ ಡಿಬೆಂಚರು ಧಾರಕರ ಭಾರ

81. ಡಿಬೆಂಚರುಗಳ ಅಸಲು ಮತ್ತು ಅದರ ಮೇಲಣ ಬಡ್ಡಿಗೆ ರಾಜ್ಯಸರ್ಕಾರದ ಖಾತರಿ

82. ರಾಜ್ಯಸರ್ಕಾರದಿಂದ ಇತರ ಖಾತರಿಗಳು

82ಎ. ಸಾಲಗಳನ್ನು ನೀಡಲು ಮತ್ತು ಭೂಮಿಗಳನ್ನು ಧಾರಣ ಮಾಡಲು

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಅಧಿಕಾರಗಳು

82ಬಿ. ಸಾಲಗಳ ಅರ್ಜಿಗಳನ್ನು ವ್ಯವಹರಿಸುವ ವಿಧಾನ

82ಸಿ. ಸಾಲ ಮಂಜೂರು ಮಾಡಿದ ಆದೇಶವು ಕೆಲವು ವಿಷಯಗಳಲ್ಲಿ ನಿರ್ಣಾಯಕವಾಗಿರುವುದು

83. ಕೆಲವು ಕ್ಲೇಮುಗಳ ಮೇಲೆ ಅಡಮಾನದ ಆದ್ಯತೆ

84. ಅಡಮಾನ ಮಾಡಲಾದ ಸ್ವತ್ತನ್ನು ಖರೀದಿಸಲು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಥವಾ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಹಕ್ಕು

85. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಹೆಸರಿಗೆ ಬರೆದುಕೊಟ್ಟ ಅಡಮಾನಗಳು ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ನಿಹಿತವಾಗಿರುವುದು

85ಎ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಹೆಸರಿಗೆ ಅಡಮಾನ ಅಥವಾ ಗುತ್ತಿಗೆಯ ನೋಂದಣಿ

86. ಹಣಗಳನ್ನು ಸ್ವೀಕರಿಸಲು ಮತ್ತು ವಿಮೋಚನೆ ನೀಡಲು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧಿಕಾರ

86ಎ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲಗಳ ವಸೂಲಿ

87. ಅಡಮಾನಕಾರನ ಮುಂಚಿನ ಋಣಗಳನ್ನು ಸಂದಾಯಮಾಡಲು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧಿಕಾರ

87ಎ. ಏಕತ್ರ ಹಿಂದೂ ಕುಟುಂಬದ ವ್ಯವಸ್ಥಾಪಕರು ಬರೆದುಕೊಟ್ಟ ಅಡಮಾನಗಳು

87ಬಿ. ಗುತ್ತಿಗೆಯ ಮೇಲಣ ನಿರ್ಬಂಧಗಳು

88. ಜಪ್ತಿ - ಯಾವಾಗ ಮಾಡುವುದು

89. ಮಾರಾಟದ ಅಧಿಕಾರವನ್ನು ಯಾವಾಗ ಚಲಾಯಿಸುವುದು

89ಎ. ಮಾರಾಟದ ಸ್ಥಿರೀಕರಣ

89ಬಿ. ಮಾರಾಟದ ಉತ್ಪತ್ತಿಯ ವಿಲೆ

89ಸಿ. ಖರೀದಿಸುವುದು, ಸ್ವತ್ತನ್ನು ಒಪ್ಪಿಸುವುದು ಮತ್ತು ಖರೀದಿದಾರನ

	ಹಕ್ಕಿಗೆ ಸಂಬಂಧಿಸಿದ ಪ್ರಮಾಣಪತ್ರ
89ಡಿ.	ರಿಜಿಸ್ಟ್ರಾರನು ಕೊಟ್ಟ ಪ್ರಮಾಣಪತ್ರದ ಮೇಲೆ ಸಾಲಗಳ ವಸೂಲಿ
89ಇ.	ಕೆಲವೊಂದು ಅವಧಿಯಲ್ಲಿ ಡೆಪ್ಯುಟಿ ಕಮಿಷನರನು ವಸೂಲಿ ಮಾಡುವುದು
89ಎಫ್.	ಬ್ಯಾಂಕಿನ ಅಧಿಕಾರಿಗಳು ಮಾರಾಟಗಳಲ್ಲಿ ಸವಾಲು ಮಾಡಲಾಗದು
89ಜಿ.	ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಪರ ಆದ ಪರಭಾರೆಗೆ 1947ರ ಮುಂಬಯಿ 28ನೆಯ ಅಧಿನಿಯಮದ 40ನೆಯ ಪ್ರಕರಣವು ಅನ್ವಯಿಸತಕ್ಕುದಲ್ಲ.
89ಎಚ್.	ಕೆಲವೊಂದು ನಷ್ಟಗಳನ್ನು ತುಂಬಲು ಆಶ್ವಾಸನಾ ನಿಧಿಗಳ ಏರ್ಪಾಡು
90.	ಅಡಮಾನದ ಸ್ವತ್ತು ನಾಶವಾದಾಗ ಅಥವಾ ಭದ್ರತೆಯು ಸಾಕಾಗದಷ್ಟು ಆದಾಗ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧಿಕಾರಗಳು
91.	ಸ್ವತ್ತಿನ ಜಫ್ತಿ ಮತ್ತು ಮಾರಾಟ ಮೊದಲಾದುವುಗಳನ್ನು ಮಾಡಲು ಮಂಡಲಿಯ ಅಥವಾ ನ್ಯಾಸಧಾರಿಯ ಅಧಿಕಾರ
92.	ಅಕ್ರಮ, ಮೊದಲಾದವುಗಳ ಕಾರಣದ ಮೇಲೆ ಖರೀದಿದಾರನ ಹಕ್ಕನ್ನು ಪ್ರಶ್ನಿಸತಕ್ಕುದಲ್ಲ.
93.	ಅಡಮಾನದಾರನ ದಿವಾಳಿಯಿಂದಾಗಿ ಅಡಮಾನವು ಪ್ರಶ್ನಿಸತಕ್ಕುದಲ್ಲ.
94.	ರಿಸೀವರನ ನಿಯುಕ್ತಿ ಮತ್ತು ಅಧಿಕಾರಗಳು
95.	ಗುತ್ತಿಗೆಗೆ ಕೊಡಲು ಅಡಮಾನದಾರನ ಅಧಿಕಾರಗಳು
96.	ಮಂಡಲಿಯು ಕೆಲವೊಂದು ಅಧಿಕಾರಗಳನ್ನು ಪ್ರತ್ಯಾಯೋಜಿಸುವುದು
97.	ಸ್ವತ್ತು ವರ್ಗಾವಣೆ ಅಧಿನಿಯಮ, 1882ರ 102,103 ಮತ್ತು 104ನೇ ಪ್ರಕರಣಗಳು ಈ ಅಧ್ಯಾಯದ ಮೇರೆಗಿನ ನೋಟೀಸುಗಳಿಗೆ ಅನ್ವಯವಾಗುವುದು

97ಎ. ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ನೌಕರರಿಗಾಗಿ ಸಾಮಾನ್ಯ ವೃಂದದ ರಚನೆ

98. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಮೇಲ್ವಿಚಾರಣೆ ಮಾಡಲು ಮತ್ತು ವಿನಿಯಮಗಳನ್ನು ರಚಿಸಲು ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಮಂಡಲಿಗೆ ಅಧಿಕಾರ

ಅಧ್ಯಾಯ-XII

ಐತೀರ್ಪುಗಳು, ಡಿಕ್ರಿಗಳು, ಆದೇಶಗಳು ಮತ್ತು ತೀರ್ಮಾನಗಳ ಅಮಲ್ಜಾರಿ

99. ಭಾರದ ಅಮಲ್ಜಾರಿ

100. ಸಂಘಗಳಿಗೆ ಬಾಕಿ ಇರುವ ಹಣಗಳ ವಸೂಲಿ

101. ಆದೇಶ, ಮುಂತಾದವುಗಳ ಜಾರಿ

101ಎ. ಪ್ರಮಾಣಪತ್ರ ಕೊಟ್ಟ ತರುವಾಯ ಮಾಡಲಾದ ಸ್ವತ್ತಿನ ವರ್ಗಾವಣೆಯು ಸಹಕಾರ ಸಂಘದ ವಿರುದ್ಧ ಶೂನ್ಯವಾಗಿರುವುದು

101ಬಿ. ಮಾರಾಟ ಮಾಡಲಾಗದ ಸ್ವತ್ತಿನ ವರ್ಗಾವಣೆ

101ಸಿ. [ಬಿಟ್ಟು ಬಿಡಲಾಗಿದೆ]

102. ರಿಜಿಸ್ಟ್ರಾರನು ಅಥವಾ ಅವನಿಂದ ಶಕ್ತಗೊಳಿಸಲಾದ ವ್ಯಕ್ತಿಯು ಕೆಲವು ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವಾಗಿರುವುದು

103. ಐತೀರ್ಪಿಗೆ ಅಥವಾ ಆದೇಶಕ್ಕೆ ಮುಂಚೆ ಸ್ವತ್ತಿನ ಜಪ್ತಿ

104. ಸರ್ಕಾರಕ್ಕೆ ಸಲ್ಲಬೇಕಾದ ಮೊಬಲಗುಗಳ ವಸೂಲಿ

104ಎ. ಬೇರೆ ರಾಜ್ಯಗಳಲ್ಲಿರುವ ಸಹಕಾರ ಸಂಘಗಳಿಗೆ ಈ ಅಧ್ಯಾಯದ ಅನ್ವಯ

ಅಧ್ಯಾಯ-XIII

ಅಪೀಲುಗಳು, ಪುನರೀಕ್ಷಣೆ ಮತ್ತು ಪುನರವಲೋಕನ

105. ನ್ಯಾಯಾಧಿಕರಣಕ್ಕೆ ಅಪೀಲುಗಳು

105ಎ. ಸಂಘಗಳಿಗೆ ಸದಸ್ಯರ ಪ್ರವೇಶಕ್ಕೆ ಸಂಬಂಧಿಸಿದ ಅಪೀಲುಗಳು

106. ಇತರ ಪ್ರಾಧಿಕಾರಿಗಳಿಗೆ ಅಪೀಲುಗಳು

107. ನ್ಯಾಯಾಧಿಕರಣದಿಂದ ಪುನರೀಕ್ಷಣೆ

108. ರಾಜ್ಯ ಸರ್ಕಾರದ ಪುನರೀಕ್ಷಣೆಯ ಅಧಿಕಾರಗಳು

108ಎ. ಕೆಲವು ಪ್ರಕರಣಗಳಲ್ಲಿ ಯಾವುದೇ ಅಪೀಲಿಗೆ ಅಥವಾ ಪುನರೀಕ್ಷಣೆಗೆ ಅವಕಾಶವಿಲ್ಲದಿರುವುದು

ಅಧ್ಯಾಯ-XIV

ಅಪರಾಧಗಳು ಮತ್ತು ದಂಡನೆಗಳು

109. ಅಪರಾಧಗಳು

110. ಕಂಪನಿಗಳಿಂದ ಅಪರಾಧಗಳು

110ಎ. ಅಪರಾಧಗಳ ರಾಜಿಗೆ ಅಧಿಕಾರ

111. ಅಪರಾಧಗಳ ಸಂಜ್ಞಾನ

ಅಧ್ಯಾಯ- XV

ಸಂಕೀರ್ಣ

111ಎ. [ಬಿಟ್ಟು ಬಿಡಲಾಗಿದೆ]

111ಬಿ. ದಾಖಲೆಗಳ ಸಂರಕ್ಷಣೆ

112. ``ಸಹಕಾರ" ಪದದ ಉಪಯೋಗದ ವಿರುದ್ಧ ಪ್ರತಿಷೇಧ

113. ಸಹಕಾರ ಸಂಘದ ವಿಳಾಸ

114. ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಪ್ರತಿಯು ಪರಿಶೀಲನೆಗೆ ಮುಕ್ತವಾಗಿರುವುದು

115. [ಬಿಟ್ಟು ಬಿಡಲಾಗಿದೆ]

116. ಆದೇಶಗಳ ಉಚ್ಚರಿಸುವಿಕೆ

117. ವಿವಾದಗಳ ಇತ್ಯರ್ಥದ ಸಲುವಾಗಿ ಪ್ರಕ್ರಿಯೆ ಮತ್ತು 70ನೇ ಪ್ರಕರಣದ ಮೇರೆಗೆ ವಿವಾದವನ್ನು ತೀರ್ಮಾನಕ್ಕಾಗಿ ಯಾರಿಗೆ ಉಲ್ಲೇಖಿಸಲಾಯಿತೋ ಆ ರಿಜಿಸ್ಟ್ರಾರನ ಅಥವಾ ಯಾರೇ ಇತರ ವ್ಯಕ್ತಿಯ ಅಧಿಕಾರ

118. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ

119. ಕಾಲಪರಿಮಿತಿ ಅಧಿನಿಯಮದ ಅನ್ವಯ

120. ನೋಂದಣಿಯ ಷರತ್ತುಗಳಿಂದ ಸಂಘಗಳನ್ನು ವಿನಾಯಿತಿಗೊಳಿಸುವ ಅಧಿಕಾರ

121. ಸಂಘಗಳಿಗೆ ವಿನಾಯಿತಿ ನೀಡುವ ಅಧಿಕಾರ

122. ಸದಸ್ಯರ ರಿಜಿಸ್ಟರು

123. ಸಹಕಾರ ಸಂಘಗಳ ಪುಸ್ತಕಗಳಲ್ಲಿರುವ ನಮೂದುಗಳ ರುಜುವಾತು

124. ಈ ಅಧಿನಿಯಮದ ಮೇರೆಗೆ ನೋಟೀಸಿನ ಜಾರಿ

125. ದಾವೆಗಳಲ್ಲಿ ನೋಟೀಸು ಅವಶ್ಯವಾಗಿರುವುದು

126. ಸಹಕಾರ ಸಂಘಗಳ ಕಾರ್ಯಗಳು ಕೆಲವೊಂದು ದೋಷಗಳಿಂದಾಗಿ ಅವಿಧಿಮಾನ್ಯವಾಗದಿರುವುದು

126ಎ. [ಬಿಟ್ಟು ಬಿಡಲಾಗಿದೆ]

127. ನಷ್ಟಭರ್ತಿ

127ಎ. ಸಹಕಾರ ಸಂಘಗಳ ಪದಾಧಿಕಾರಿಗಳು, ಸದಸ್ಯರು ಮತ್ತು ನೌಕರರು ಸರ್ಕಾರಿ ನೌಕರರಾಗಿರುವುದು

128. ಕಂಪನಿಗಳ ಅಧಿನಿಯಮ, 1956 ಅನ್ವಯವಾಗದಿರುವುದು

128ಎ. ಸಾಮಾನ್ಯ ವೃಂದದ ರಚನೆ

128ಬಿ. ಪೊಲೀಸ್ ಅಧಿಕಾರಿಯ ಕರ್ತವ್ಯಗಳು

129. ನಿಯಮಗಳನ್ನು ರಚಿಸುವ ಅಧಿಕಾರಗಳು

129ಎ. ಮಾದರಿ ಉಪವಿಧಿಗಳು

130. ನಿಯಮಗಳನ್ನು ಮತ್ತು ಆದೇಶಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡುವುದು

131. ನಿರಸನ ಮತ್ತು ಉಳಿಸುವಿಕೆಗಳು

132. ತೊಂದರೆಗಳನ್ನು ನಿವಾರಿಸುವ ಅಧಿಕಾರ

ಅಧಿಸೂಚನೆಗಳು

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

1959ರ ಅಧಿನಿಯಮ 11.- ಭಾರತದ ರಿಜರ್ವ್ ಬ್ಯಾಂಕಿನಿಂದ ನೇಮಕವಾಗಿದ್ದ ಅಖಿಲ ಭಾರತ ಗ್ರಾಮೀಣ ಪತ್ತು ಸಮೀಕ್ಷಾ ನಿರ್ದೇಶಕರ ಸಮಿತಿಯ ವರದಿಯನ್ನು ಡಿಸೆಂಬರ್, 1954 ರಲ್ಲಿ ಪ್ರಕಟಿಸಲಾಯಿತು. 1955ರ ಏಪ್ರಿಲ್‌ನಲ್ಲಿ ನವದೆಹಲಿಯಲ್ಲಿ ನಡೆದ ರಾಜ್ಯಗಳ ಸಹಕಾರ ಸಚಿವರ ಪ್ರಥಮ ಸಮಾವೇಶದಲ್ಲಿ, ಗ್ರಾಮೀಣ ಪತ್ತು ಸಮೀಕ್ಷಾ ವರದಿಯಲ್ಲಿ ಒಳಗೊಂಡ ಶಿಫಾರಸುಗಳನ್ನು ಜಾರಿಗೆ ತರುವುದಕ್ಕಾಗಿ ಎರಡನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಸಹಕಾರ ಸಂಘಗಳ ಅಭಿವೃದ್ಧಿ ಪರಿಯೋಜನೆಗಳನ್ನು ರೂಪಿಸಬೇಕೆಂದು ತೀರ್ಮಾನಿಸಲಾಯಿತು. ವರದಿಯು, ಇತರ ವಿಷಯಗಳ ಜೊತೆಯಲ್ಲಿ ಸಹಕಾರ ಸಂಘಗಳಲ್ಲಿ ಹೆಚ್ಚುವರಿಯಾಗಿ ರಾಜ್ಯದ ಪಾಲುದಾರಿಕೆ ಇರಬೇಕೆಂದು ಮತ್ತು ಅವುಗಳ ನಿರ್ವಹಣೆಯಲ್ಲಿ ರಾಜ್ಯದ ಸಹಭಾಗಿತ್ವ ಇರಬೇಕೆಂದು ಶಿಫಾರಸು ಮಾಡಿದೆ. ಗ್ರಾಮೀಣ ಪತ್ತು ಸಮೀಕ್ಷಾ ವರದಿಯ ಶಿಫಾರಸುಗಳನ್ನು ಜಾರಿಗೆ ತರಲು ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಸಹಕಾರಿ ಅಭಿವೃದ್ಧಿ ಪರಿಯೋಜನೆಗಳ ಅನುಷ್ಠಾನಕ್ಕೆ ಅವಕಾಶ ಕಲ್ಪಿಸಲು ಮತ್ತು ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಈಗಿನ ಕಾನೂನುಗಳನ್ನು ಸರಳಗೊಳಿಸಲು, ಸುವ್ಯವಸ್ಥೆಗೊಳಿಸಲು ಮತ್ತು ಆಧುನಿಕಗೊಳಿಸಲು, ಭಾರತ ಸರ್ಕಾರವು ಸಹಕಾರಿ ಕಾನೂನು ಕುರಿತಂತೆ ಒಂದು ಸಮಿತಿಯನ್ನು ನೇಮಕ ಮಾಡಿತು. ಸಮಿತಿಯು, ಗ್ರಾಮೀಣ ಪತ್ತಿನ ಸಮೀಕ್ಷಾ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಸಹಕಾರಿ ಅಭಿವೃದ್ಧಿ ಪರಿಯೋಜನೆಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರಾಜ್ಯಗಳಲ್ಲಿನ ಸಹಕಾರ ಸಂಘಗಳ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪುನರವಲೋಕಿಸುವುದು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿತು. ಅಲ್ಲದೆ, ರಾಜ್ಯಗಳ ಪುನರ್‌ವಿಂಗಡಣೆಯು, ಬೇರೆ ಬೇರೆ ಅಧಿನಿಯಮಗಳು ಮತ್ತು ನಿಯಮಗಳು ಜಾರಿಯಲ್ಲಿರುವ ಕ್ಷೇತ್ರಗಳನ್ನು ಒಟ್ಟುಗೂಡಿಸಿವೆ. ಇಂಥ ಸಂದರ್ಭಗಳಲ್ಲಿ, ಇಡೀ ದೇಶದಲ್ಲಿ ಸಹಕಾರ ಸಂಘಗಳಿಗೆ ಸಂಬಂಧಿಸಿದ ಶಾಸನದಲ್ಲಿ ಸಾಧ್ಯವಾದಷ್ಟು ಪ್ರಮಾಣದಲ್ಲಿ ಏಕರೂಪತೆ ತರುವ ದೃಷ್ಟಿಯಿಂದ, ಬೇರೆ ಬೇರೆ ರಾಜ್ಯಗಳಲ್ಲಿ ಜಾರಿಯಲ್ಲಿರುವ ಸಹಕಾರ ಸಂಘಗಳ ಅಧಿನಿಯಮವನ್ನು ಪರಿಷ್ಕರಿಸುವುದಕ್ಕೆ ಇದು ಸಕಾಲವಾಗಿದೆ ಎಂದು ಸಮಿತಿಯು ಅಭಿಪ್ರಾಯಪಟ್ಟಿದೆ. ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಮಿತಿಯು, ಮಾದರಿ ಸಹಕಾರ ಸಂಘಗಳ ವಿಧೇಯಕ ಮತ್ತು ಮಾದರಿ ನಿಯಮಗಳನ್ನು ಸಿದ್ಧಪಡಿಸಿ, ಅವುಗಳನ್ನು ಅಧಿನಿಯಮಿತಿಗೊಳಿಸಲು ಮತ್ತು ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ಶಿಫಾರಸು ಮಾಡಿದೆ. ಪ್ರಸ್ತುತ, ಐದು ವಿವಿಧ ಸಹಕಾರ ಸಂಘಗಳ ಅಧಿನಿಯಮಗಳು ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಜಾರಿಯಲ್ಲಿದ್ದು, ಇದು ಆಡಳಿತಾತ್ಮಕ ಅನಾನುಕೂಲತೆಗೆ

ಕಾರಣವಾಗಿದೆ. ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಏಕರೂಪದ ಸಹಕಾರ ಸಂಘಗಳ ಕಾನೂನನ್ನು ರಚಿಸುವುದು ಅವಶ್ಯಕವಾಗಿದೆ.

ಆದ್ದರಿಂದ, ಸರ್ಕಾರವು ಪ್ರಸ್ತುತ ವಿಧೇಯಕವನ್ನು ಮಂಡಿಸಲು ನಿರ್ಧರಿಸಿದೆ. ಭಾರತ ಸರ್ಕಾರವು ನೇಮಕ ಮಾಡಿದ್ದ ಸಹಕಾರಿ ಕಾನೂನು ಕುರಿತ ಸಮಿತಿಯು ಶಿಫಾರಸು ಮಾಡಿದ ಮಾದರಿ ಸಹಕಾರ ಸಂಘಗಳ ವಿಧೇಯಕವನ್ನು ಗಣನೆಗೆ ತೆಗೆದುಕೊಂಡು ವಿಧೇಯಕವನ್ನು ಸಿದ್ಧಪಡಿಸಲಾಗಿದೆ.

ಸಹಕಾರ ಸಂಘಗಳಲ್ಲಿ ರಾಜ್ಯದ ಪಾಲುಗಾರಿಕೆ ಇರಬೇಕೆಂಬ ಮತ್ತು ಅವುಗಳ ನಿರ್ವಹಣೆಯಲ್ಲಿ ರಾಜ್ಯದ ಸಹಭಾಗಿತ್ವ ಇರಬೇಕೆಂಬ ತತ್ವವನ್ನು ಒಪ್ಪಿಕೊಳ್ಳಲಾಗಿದೆ ಮತ್ತು ಅದನ್ನು ಈ ವಿಧೇಯಕದ ಸಂಬಂಧಪಟ್ಟ ಉಪಬಂಧಗಳಲ್ಲಿ ಸೇರಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ: 10ನೇ ಏಪ್ರಿಲ್, 1958ರ ಪುಟ 1 ರಲ್ಲಿ ಸಂಖ್ಯೆ 21 ಎಂದು ಪ್ರಕಟಿಸಲಾಗಿದೆ.)

II

1964ರ ತಿದ್ದುಪಡಿ ಮಾಡುವ ಅಧಿನಿಯಮ 40.- 1960ರ ಜುಲೈ ಒಂದರಿಂದ ಜಾರಿಗೆ ತರಲಾಗಿದ್ದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಇದರ ಕಾರ್ಯನಿರ್ವಹಣಾ ಅವಧಿಯಲ್ಲಿ, ಅಧಿನಿಯಮದ ತ್ವರಿತ ಅನುಷ್ಠಾನಕ್ಕಾಗಿ ಕೆಲವೊಂದು ತಿದ್ದುಪಡಿಗಳನ್ನು ತರುವುದು ಅಗತ್ಯವಿದೆಯೆಂದು ಕಂಡುಬಂದಿದೆ. ತಕಾವಿ ಸಾಲಗಳ ಅಡಿಯಲ್ಲಿ ಮಾಡಿದ ಹಣದ ಏರ್ಪಾಟಿನಿಂದ ಅಥವಾ ಭಾರತದ ಕೃಷಿ ಪುನರ್‌ಧನ ನಿಗಮದಿಂದ ಸಾಲ ಪಡೆದ ನಿಧಿಗಳಿಂದ ಅಥವಾ ಬ್ಯಾಂಕು ಸ್ವತಃ ಸಾಲಪಡೆದ ಡಿಬೆಂಚರುಗಳಿಂದ ನಿಧಿಗಳನ್ನು ದೊರಕಿಸಿಕೊಳ್ಳಬಹುದಾದ ಅಭಿವೃದ್ಧಿ ಚಟುವಟಿಕೆಗಳನ್ನು ಬ್ಯಾಂಕು ಶೀಘ್ರವಾಗಿ ಕೈಗೊಳ್ಳಲು ಸಾಧ್ಯವಾಗುವಂತೆ ಕರ್ನಾಟಕ ಕೇಂದ್ರ ಭೂ ಅಡಮಾನ ಬ್ಯಾಂಕ್ ನಿಗಮಿತಕ್ಕೆ ಸಂಬಂಧಪಟ್ಟ ಅಧ್ಯಾಯವನ್ನು ತಿದ್ದುಪಡಿ ಮಾಡುವುದು ಸಹ ಅವಶ್ಯವಾಗಿದೆ. ಆದ್ದರಿಂದ ಈ ತಿದ್ದುಪಡಿ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ: 18ನೇ ಜೂನ್, 1964ರ ಪುಟ 55 ರಲ್ಲಿ ಸಂಖ್ಯೆ:152 ಎಂದು ಪ್ರಕಟಿಸಲಾಗಿದೆ.)

III

1966ರ ತಿದ್ದುಪಡಿ ಮಾಡುವ ಅಧಿನಿಯಮ 27.- ಟಿಪ್ಪಣಿ:- ಈ ಅಧಿನಿಯಮದ ಮೂಲಕ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ವಿನಿಯಮನ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27) ಅನ್ನು ಅಧಿನಿಯಮಿತಿಗೊಳಿಸಿದೆ. ಅದರಲ್ಲಿನ ಈ ಅಧಿನಿಯಮಕ್ಕೆ ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ.

IV

1967ರ ತಿದ್ದುಪಡಿ ಮಾಡುವ ಅಧಿನಿಯಮ 16.- ಸ್ಥಳೀಯ ಮಾರಾಟ ತೆರಿಗೆ ಕಾನೂನು ಅಡಿಯಲ್ಲಿ ಘೋಷಿತ ಸರಕಿಗೆ ಅನ್ವಯವಾಗುವ ತೆರಿಗೆ ದರಗಳ ಹೆಚ್ಚಳಕ್ಕೆ ಉಪಬಂಧ ಕಲ್ಪಿಸಲು ಸಂಸತ್ತು ಕೇಂದ್ರ ಮಾರಾಟ ತೆರಿಗೆ ಅಧಿನಿಯಮಕ್ಕೆ ತಿದ್ದುಪಡಿ ಮಾಡಿದ್ದರ ಪರಿಣಾಮವಾಗಿ, ಘೋಷಿತ ಸರಕುಗಳು ಮತ್ತು ಅವುಗಳಿಗೆ ಅನ್ವಯವಾಗುವ ತೆರಿಗೆ ದರಗಳನ್ನು ನಿರ್ದಿಷ್ಟಪಡಿಸುವ Iಪಿನೇ ಅನುಸೂಚಿಯನ್ನು ತಿದ್ದುಪಡಿ ಮಾಡುವುದು ಅವಶ್ಯಕವೆನಿಸಿದೆ. ಅದರಲ್ಲಿ ನಿರ್ದಿಷ್ಟಪಡಿಸಿದ ಘೋಷಿತ ಸರಕುಗಳಿಗೆ ಅನ್ವಯವಾಗುವ ತೆರಿಗೆ ದರಗಳನ್ನು ಅದಕ್ಕನುಸಾರವಾಗಿ ಈಗ ಹೆಚ್ಚಿಸಲಾಗುತ್ತದೆ.

ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಉತ್ತೇಜಿಸುವ ದೃಷ್ಟಿಯಿಂದ ಹೊಸ ಕೈಗಾರಿಕೆಗಳಿಗೆ ಕೆಲವು ರಿಯಾಯಿತಿಗಳನ್ನು ನೀಡುವ ಪ್ರಶ್ನೆಯು ಸರ್ಕಾರದ ಪರಿಶೀಲನೆಯಲ್ಲಿತ್ತು. ಹೊಸ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಅವುಗಳಿಗೆ ಆರಂಭದ ಎರಡು ವರ್ಷಗಳ ಕಾಲ ಮಾರಾಟ ತೆರಿಗೆ ಸಂದಾಯದಿಂದ ವಿನಾಯಿತಿ ನೀಡಲು ಸರ್ಕಾರವು ಇತ್ತೀಚೆಗೆ ತೀರ್ಮಾನ ಕೈಗೊಂಡಿತು. ವಿನಾಯಿತಿಯನ್ನು ಯಾವ ರೀತಿಯಲ್ಲಿ ನೀಡಬೇಕೆಂಬುದನ್ನು ಪರಿಶೀಲಿಸಲಾಯಿತು ಮತ್ತು ಇದಕ್ಕೆ ಉತ್ತಮ ಮಾರ್ಗವೆಂದರೆ ಸಂದರ್ಭವು ಬಂದಾಗಲೆಲ್ಲಾ, ಕಾಲಕಾಲಕ್ಕೆ ಅಧಿಸೂಚನೆಗಳನ್ನು ಹೊರಡಿಸುವ ಮೂಲಕ ಇದನ್ನು ಉತ್ತಮ ರೀತಿಯಲ್ಲಿ ಸಾಧಿಸಬಹುದೆಂದು ಯೋಚಿಸಲಾಯಿತು. ಅಂಥ ಅಧಿಸೂಚನೆಗಳನ್ನು ಹೊರಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ ಒಂದು ಉಪಬಂಧವು ಈ ಅಧಿನಿಯಮದಲ್ಲಿ ಇಲ್ಲದಿದ್ದುದರಿಂದ, ವಿನಾಯಿತಿಗಳನ್ನು ಮತ್ತು ತೆರಿಗೆ ದರಗಳ ಕಡಿತಗಳನ್ನು ಅಧಿಸೂಚಿಸಲು ಸರ್ಕಾರಕ್ಕೆ ಅಧಿಕಾರ ನೀಡುವ ಒಂದು ಉಪಬಂಧವನ್ನು ಸೇರಿಸಲು ಈಗ ಉದ್ದೇಶಿಸಲಾಗಿದೆ. ಅಂಥ ಒಂದು ಉಪಬಂಧವು ನೆರೆ ರಾಜ್ಯಗಳ ಮಾರಾಟ ತೆರಿಗೆ ಕಾನೂನುಗಳಲ್ಲಿಯೂ ಅಸ್ತಿತ್ವದಲ್ಲಿದೆ.

ಕಾರ್ಯವಿಧಾನ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಶಾವಿಗೆಗೆ ತೆರಿಗೆ ರಿಯಾಯಿತಿ ದರವನ್ನು ನೀಡುವುದಕ್ಕೆ ಮತ್ತು ಕಬ್ಬಿನ ಮೇಲಿನ ತೆರಿಗೆ ದರಗಳನ್ನು ಕಡಿತಗೊಳಿಸುವುದಕ್ಕೆ ಹಾಗೂ ಅಂಬರ್ ಚರಕಗಳು, ಹಾಸುಗಂಬಳಿಗಳು, ಡ್ಯೂರೀಜ್‌ಗಳು ಮತ್ತು ನೆಲಹಾಸುಗಳಿಗೆ ವಿನಾಯಿತಿ ನೀಡುವುದಕ್ಕೆ ಉಪಬಂಧ ಕಲ್ಪಿಸುವ ಸಲುವಾಗಿ ಕೆಲವು ಸಣ್ಣ ತಿದ್ದುಪಡಿಗಳನ್ನು ಮಾಡಲೂ ಸಹ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಲಾಗಿದೆ. ಗಿನೇ ಅನುಸೂಚಿಯ 28ನೇ ಬಾಬಿನ ಅಡಿಯಲ್ಲಿ ವಾಸ್ತವಿಕ ಉತ್ಪಾದಕರಿಗೆ ನೀಡುವ ವಿನಾಯಿತಿಯ ಪ್ರಯೋಜನವನ್ನು ವಿಶೇಷವಾಗಿ ಗ್ರಾಮೀಣ ಕೈಗಾರಿಕೆಯ ಅಡಿಯಲ್ಲಿ ಸರಕುಗಳನ್ನು ಉತ್ಪಾದಿಸುವಂಥ ವ್ಯಕ್ತಿಗಳಿಗೆ ಮಾತ್ರವೇ ಸೀಮಿತಗೊಳಿಸಲು ಉದ್ದೇಶಿಸಲಾಗಿದೆ.

ಟಿಪ್ಪಣಿ.- ಈ ಅಧಿನಿಯಮದ ಮೂಲಕ 1959ರ ಅಧಿನಿಯಮ 11ಕ್ಕೆ ಕೆಲವೊಂದು ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ.

(1967ರ ವಿ.ಸ. ವಿಧೇಯಕ ಸಂಖ್ಯೆ: 35ರ ಪುಟ ಸಂಖ್ಯೆ 9 ಮತ್ತು 10 ರಿಂದ ಪಡೆಯಲಾಗಿದೆ.)

V

1972ರ ತಿದ್ದುಪಡಿ ಮಾಡುವ ಅಧಿನಿಯಮ 1.- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 101ನೇ ಪ್ರಕರಣದ (ಸಿ) ಖಂಡದ ಅನುಸಾರವಾಗಿ, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಒಂದು ಆದೇಶ, ನಿರ್ಣಯ ಮತ್ತು ಐತೀರ್ಪನ್ನು, ಯಾವ ವ್ಯಕ್ತಿಯ ವಿರುದ್ಧವಾಗಿ ಪಡೆಯಲಾಗಿದೆಯೋ ಅಥವಾ ಮಾಡಲಾಗಿದೆಯೋ ಆ ವ್ಯಕ್ತಿಯ ಅಥವಾ ಸಹಕಾರ ಸಂಘದ ಯಾವುದೇ ಸ್ವತ್ತನ್ನು ರಿಜಿಸ್ಟ್ರಾರ್ ಅಥವಾ ಅವನಿಗೆ ಅಧೀನನಾದ ಯಾರೇ ಇತರ ವ್ಯಕ್ತಿಯು ಜಪ್ತಿ ಮೂಲಕ ಅಥವಾ ಮಾರಾಟದ ಮೂಲಕ, ಆ ಆದೇಶ, ನಿರ್ಣಯ ಅಥವಾ ಐತೀರ್ಪನ್ನು ಜಾರಿಗೊಳಿಸಬಹುದು. ಈ ಉಪಬಂಧವನ್ನು ಜಾರಿಗೆ ತರುವ ಉದ್ದೇಶದಿಂದ ಅವಶ್ಯಕ ನಿಯಮಗಳನ್ನು ಮಾಡಲಾಗಿದೆ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ 41ನೇ ನಿಯಮವು ಅಮಲ್ಜಾರಿಯಲ್ಲಿ ಜಪ್ತಿ ಮಾಡಲಾದ ಸ್ವತ್ತಿನ ಕ್ಲೇಮುಗಳ ಬಗ್ಗೆ ತನಿಖೆ ಮಾಡಲು ಮಾರಾಟ ಅಧಿಕಾರಿಗೆ ಅಧಿಕಾರ ನೀಡುತ್ತದೆ. ಈ ಉಪಬಂಧಕ್ಕೆ ಅನುಸಾರವಾಗಿ ಅಂಥ ಕ್ಲೇಮುಗಳನ್ನು ಮಾರಾಟ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ.

ಜ್ಯೋತಿಬಾ ಎಲ್ಲಪ್ಪಾ ವಿರುದ್ಧ ಹುಬ್ಬಳ್ಳಿ ಸಹಕಾರಿ ಹತ್ತಿ ಮಾರಾಟ ಸಂಘ, ನಿಯಮಿತದಲ್ಲಿ (1970 (2) ಮೈ.ಲಾ.ಜ. 344) ಮೈಸೂರು ಉಚ್ಚ ನ್ಯಾಯಾಲಯವು, ಸಹಕಾರ ಸಂಘಗಳ ನಿಯಮಗಳ 41ನೆಯ ನಿಯಮದ ಅಡಿಯಲ್ಲಿನ ಕಾರ್ಯವಿಧಾನವು ಅಧಿನಿಯಮದ 70ನೇ ಪ್ರಕರಣದ ಅಡಿಯಲ್ಲಿ ಮೂಲ ವ್ಯಾಜ್ಯದಲ್ಲಿ ಯುಕ್ತವಾಗಿ ಪಕ್ಷಕಾರರನ್ನಾಗಿ ಮಾಡಬಹುದಾದ ವ್ಯಕ್ತಿಗಳಿಗೆ ಅದರ ಕಾರ್ಯಾಚರಣೆಯಲ್ಲಿ ಸೀಮಿತವಾಗಿರುವುದೆಂದು ಮತ್ತು ಆ ಕಾರಣಕ್ಕಾಗಿ ಅದು ಐತೀರ್ಪಿನ ಅಮಲ್ಜಾರಿಯಲ್ಲಿ ಜಪ್ತಿ ಮತ್ತು ಮಾರಾಟಕ್ಕೆ ಪ್ರತಿಯಾಗಿ ಸದಸ್ಯರಲ್ಲದವರು ಮಾಡಿದ ಒಂದು ಕ್ಲೇಮಿನ ಬಗ್ಗೆ ನಿಯಮ 41ರ ಅಡಿಯಲ್ಲಿ ನ್ಯಾಯ ನಿರ್ಣಯ ಮಾಡಲಾಗದೆಂದು ನಿರ್ಣಯಿಸಿತು.

ಈ ನಿರ್ಣಯದ ದೃಷ್ಟಿಯಿಂದ, ಜಪ್ತಿ ಮಾಡಿದ ಸ್ವತ್ತಿನ ಬಗ್ಗೆ ಸದಸ್ಯರಲ್ಲದವರು ಕ್ಲೇಮುಗಳನ್ನು ಮಾಡಿದ್ದ ಆದೇಶಗಳು, ನಿರ್ಣಯಗಳು ಮತ್ತು ಐತೀರ್ಪುಗಳ ಅಮಲ್ಜಾರಿಯು ಅಸಿಂಧುವಾಗುತ್ತದೆ ಮತ್ತು ಪರಿಣಾಮರಹಿತವಾಗುತ್ತದೆ.

ಈ ನಿರ್ಣಯವು, ಆದೇಶಗಳ ಜಾರಿ, ನಿರ್ಣಯಗಳು ಮತ್ತು ಐತೀರ್ಪುಗಳ ದೃಷ್ಟಿಯಿಂದ ಜಪ್ತಿ ಮಾಡಿದ ಸ್ವತ್ತಿನ ಕ್ಲೇಮುಗಳನ್ನು ಸದಸ್ಯರಲ್ಲದವರು ಮಾಡಿದ್ದರೆ, ಅವು ಸಿಂಧುವಾಗುವುದಿಲ್ಲ ಮತ್ತು ಪರಿಣಾಮಕಾರಿಯಾಗುವುದಿಲ್ಲ. ಅಲ್ಲದೆ, ಜಪ್ತಿ ಮತ್ತು ಮಾರಾಟಕ್ಕೆ ಬದ್ಧವಾದ ಸ್ವತ್ತುಗಳಲ್ಲಿ ಸಂಘದ ಸದಸ್ಯರು ಹಿತಾಸಕ್ತಿ ಹೊಂದಿರುವ ಸಂದರ್ಭಗಳಲ್ಲಿ ಹೊರತು, ಆದೇಶಗಳು,

ನಿರ್ಣಯಗಳು ಮತ್ತು ಐತೀರ್ಪುಗಳ ಅಮಲ್ಜಾರಿಯನ್ನು ಮುಂದುವರಿಸಲಾಗಲಿಲ್ಲ. ತತ್ಪರಿಣಾಮವಾಗಿ, ಸಹಕಾರ ಸಂಘಗಳು, ಸಹಕಾರ ಸಂಘಗಳ ನಿಯಮಗಳ ಅಡಿಯಲ್ಲಿ ವಸೂಲಾತಿಗಾಗಿ ಕ್ಷಿಪ್ರ ಕಾರ್ಯವಿಧಾನವನ್ನು ಅನುಸರಿಸಲಾಗಲಿಲ್ಲ.

ಆದ್ದರಿಂದ, ಆದೇಶಗಳು, ನಿರ್ಣಯಗಳು ಮತ್ತು ಐತೀರ್ಪುಗಳ ಅಮಲ್ಜಾರಿಯಲ್ಲಿ, ಜಪ್ತಿ ಮಾಡಿದ ಸ್ವತ್ತಿನ ಕ್ಲೇಮುಗಳ ಬಗ್ಗೆ ತನಿಖೆ ಮಾಡುವ ಅಧಿಕಾರಗಳನ್ನು ಚಲಾಯಿಸಲು ರಿಜಿಸ್ಟ್ರಾರ್ ಮತ್ತು ಅವನ ಅಧೀನನಿಗೆ ಅಧಿಕಾರ ನೀಡುವುದು ಅವಶ್ಯಕವಾಯಿತು.

ವಿಧಾನ ಮಂಡಲದ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ಮತ್ತು ವಿಷಯವು ತುರ್ತಿನದಾಗಿದ್ದುದರಿಂದ, ಅಧಿನಿಯಮದ 101ನೇ ಪ್ರಕರಣವನ್ನು ತಿದ್ದುಪಡಿ ಮಾಡಿ ಮತ್ತು ಈಗಾಗಲೇ ಕೈಗೊಂಡ ಕ್ರಮವನ್ನು ಸಿಂಧುಗೊಳಿಸಿ ಒಂದು ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು. ರಾಜ್ಯ ವಿಧಾನ ಮಂಡಲದ ಅಧಿನಿಯಮದ ಮೂಲಕ ಅಧ್ಯಾದೇಶವನ್ನು ಪ್ರತಿಸ್ಥಾಪಿಸುವುದಕ್ಕೆ ಮೊದಲು, ಸಂವಿಧಾನದ 356ನೇ ಅನುಚ್ಛೇದದ ಅಡಿಯಲ್ಲಿ ದಿನಾಂಕ 1971ರ ಮಾರ್ಚ್ 27ರ ರಾಷ್ಟ್ರಪತಿಯ ಉದ್ಘೋಷಣೆಯ ಮೂಲಕ ರಾಜ್ಯ ವಿಧಾನ ಮಂಡಲವನ್ನು ಅಮಾನತ್ತಿನಲ್ಲಿಡಲಾಯಿತು. ಕರ್ನಾಟಕ ರಾಜ್ಯ ವಿಧಾನಮಂಡಲ (ಅಧಿಕಾರಗಳ ಪ್ರತ್ಯಾಯೋಜನೆ) ಅಧಿನಿಯಮ, 1971ರ ಅಡಿಯಲ್ಲಿ ಈ ವಿಧೇಯಕದ ಮೂಲಕ ಅಧ್ಯಾದೇಶವನ್ನು ಪ್ರತಿಸ್ಥಾಪಿಸಲು ಮತ್ತು ಅಧಿನಿಯಮಿತಗೊಳಿಸಲು ಉದ್ದೇಶಿಸಲಾಗಿದೆ.

ಕರ್ನಾಟಕಕ್ಕೆ ಸಂಬಂಧಿಸಿದ ರಾಜ್ಯ ವಿಧಾನ ಮಂಡಲದ ಸಮಾಲೋಚನಾ ಸಮಿತಿಯು 1971ರ ಡಿಸೆಂಬರ್ 7ರ ತನ್ನ ಎರಡನೇ ಸಭೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 1972ನ್ನು ಪರಿಗಣಿಸಿತು ಮತ್ತು ತನ್ನ ಅನುಮೋದನೆಯನ್ನು ನೀಡಿತು.

(1972ರ ರಾಷ್ಟ್ರಪತಿಯವರ ಅಧಿನಿಯಮ ಸಂಖ್ಯೆ 1 ರಿಂದ ಪಡೆಯಲಾಗಿದೆ.)

VI

1973ರ ತಿದ್ದುಪಡಿ ಮಾಡುವ ಅಧಿನಿಯಮ 14.- ರಾಜ್ಯದಲ್ಲಿ ಸಕ್ಕರೆ ಕೈಗಾರಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ವ್ಯಾಪಕವಾದ ಮತ್ತು ಸಮನ್ವಯಕಾರಿ ವಿಧಾನದ ಮೂಲಕ ವ್ಯವಹರಿಸುವ ಸಲುವಾಗಿ ಒಂದು ಪ್ರತ್ಯೇಕ ಏಜೆನ್ಸಿಯ ಅಗತ್ಯವನ್ನು ಪೂರೈಸಲು ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಸೃಜಿಸಲಾಗಿದೆ. ಈಗಾಗಲೇ ಸಹಕಾರಿ ವಲಯದಲ್ಲಿ ಸಾಕಷ್ಟು ಸಂಖ್ಯೆಯ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವುದರಿಂದ ಮತ್ತು ಭವಿಷ್ಯದಲ್ಲಿ ಹೆಚ್ಚಿನ ಕಾರ್ಖಾನೆಗಳನ್ನು ಸ್ಥಾಪಿಸುವ ಸಂಭವವಿರುವುದರಿಂದ, ಸಹಕಾರಿ ವಲಯದಲ್ಲಿನ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಸಕ್ಕರೆ ನಿರ್ದೇಶಕರನ್ನು ಸಹಕಾರ ಸಂಘಗಳ ಅಧಿಕ ರಿಜಿಸ್ಟ್ರಾರ್ ಆಗಿ ಹೆಸರಿಸುವುದು ಅವಶ್ಯಕವಾಗಿತ್ತು. ಪ್ರಸ್ತುತ, ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದ ಎಲ್ಲಾ

ವಿಷಯಗಳನ್ನು ಸಹಕಾರ ಸಂಘಗಳ ರಿಜಿಸ್ಟ್ರಾರನು ವ್ಯವಹರಿಸುತ್ತಿದ್ದಾನೆ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಸಕ್ಕರೆ ನಿರ್ದೇಶಕನು ಅವನಿಗೆ ನೆರವು ನೀಡಬೇಕೆಂದು ಅಭಿಪ್ರಾಯಪಡಲಾಯಿತು. ಅಧಿಕ ಮುಖ್ಯ ಮಾರುಕಟ್ಟೆ ಅಧಿಕಾರಿಯನ್ನು ಸಹಕಾರ ಸಂಘಗಳ ಪದನಿಮಿತ್ತ ಅಧಿಕ ರಿಜಿಸ್ಟ್ರಾರನೆಂದು ಹೆಸರಿಸಲಾಗಿದೆ.

2. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 2-ಎ ಪ್ರಕರಣವು, ಸಹಕಾರ ಸಂಘಗಳ ಅಧಿಕ ರಿಜಿಸ್ಟ್ರಾರನನ್ನು ನೇಮಕಮಾಡುವ ಅವಕಾಶ ಕಲ್ಪಿಸುತ್ತದೆ. ಕ್ರಮವಾಗಿ, ಅಧಿಕ ಮುಖ್ಯ ಮಾರುಕಟ್ಟೆ ಅಧಿಕಾರಿಗೆ ಮತ್ತು ಸಹಕಾರ ಸಂಘಗಳ ಅಧಿಕ ರಿಜಿಸ್ಟ್ರಾರನೆಂದು ಗೊತ್ತುಮಾಡಲಾದ ಸಕ್ಕರೆ ನಿರ್ದೇಶಕನಿಗೆ ಅಧಿಕಾರ ಕೊಡುವುದು ಮತ್ತು ರಿಜಿಸ್ಟ್ರಾರನಿಗೆ ನೆರವು ನೀಡುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಯುಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಅಧಿಕ ರಿಜಿಸ್ಟ್ರಾರ್‌ಗಳಿಗೆ ಅಧಿಕಾರ ಕೊಡುವ ಭಾವೀ ಆಕಸ್ಮಿಕ ಸಂದರ್ಭಗಳಲ್ಲಿ ಉಪಬಂಧವನ್ನು ತಿದ್ದುಪಡಿಮಾಡುವುದು ಅವಶ್ಯವೆಂದು ಪರಿಗಣಿಸಿದೆ.

(ಕರ್ನಾಟಕ ರಾಜ್ಯಪತ್ರ, (ವಿಶೇಷ ಸಂಚಿಕೆ) ಭಾಗ IVS2ಎ, ದಿನಾಂಕ: ಮೇ 2, 1973ರ ಪುಟ 3 ರಲ್ಲಿ ಸಂಖ್ಯೆ:433 ಎಂದು ಪ್ರಕಟಿಸಲಾಗಿದೆ.)

VII

1975ರ ತಿದ್ದುಪಡಿ ಮಾಡುವ ಅಧಿನಿಯಮ 2.- ಟಿಪ್ಪಣಿ.- ಈ ಅಧಿನಿಯಮದ ಮೂಲಕ, ಕರ್ನಾಟಕ ಕೃಷಿ ಪತ್ತಿನ ಪ್ರವರ್ತನೆಗಳು ಮತ್ತು ಸಂಕೀರ್ಣ ಉಪಬಂಧ ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 2) ಅಧಿನಿಯಮಿತಗೊಳಿಸಲಾಗಿದೆ. ಇದರಲ್ಲಿ 1959ರ ಅಧಿನಿಯಮ 11ಕ್ಕೆ ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ.

VIII

1975ರ ತಿದ್ದುಪಡಿ ಮಾಡುವ ಅಧಿನಿಯಮ 39.- ಠೇವಣಿ ವಿಮಾ ನಿಗಮ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 47) ಅಡಿಯಲ್ಲಿ ಠೇವಣಿ ವಿಮಾ ಯೋಜನೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ಸಹಕಾರಿ ಬ್ಯಾಂಕುಗಳಿಗೆ ವಿಸ್ತರಿಸುವ ದೃಷ್ಟಿಯಿಂದ, ಭಾರತ ಸರ್ಕಾರ, ಆಹಾರ, ಕೃಷಿ, ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಮಂತ್ರಾಲಯಗಳು ಮತ್ತು ಭಾರತದ ರಿಸರ್ವ್ ಬ್ಯಾಂಕು, ಸಹಕಾರ ಬ್ಯಾಂಕುಗಳನ್ನು ರದ್ದುಮಾಡಲು, ಪುನರ್‌ರಚಿಸಲು ಮತ್ತು ಸಮಾಪನಗೊಳಿಸಲು ರಾಜ್ಯ ಸರ್ಕಾರವನ್ನು ಮತ್ತು ಭಾರತದ ರಿಸರ್ವ್ ಬ್ಯಾಂಕನ್ನು ಸಮರ್ಥಗೊಳಿಸುವ ಸಲುವಾಗಿ ರಾಜ್ಯ ಅಧಿನಿಯಮದಲ್ಲಿ ಅವಶ್ಯಕ ತಿದ್ದುಪಡಿಗಳನ್ನು ಮಾಡಲು ರಾಜ್ಯ ಸರ್ಕಾರಕ್ಕೆ ಸೂಚಿಸಿವೆ.

ಸರ್ಕಾರದ ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನು ದೃಷ್ಟಿಯಲ್ಲಿರಿಸಿಕೊಂಡು ರಾಜ್ಯ ಅಧಿನಿಯಮದಲ್ಲಿ ಮಾಡಬೇಕಾದ ತಿದ್ದುಪಡಿಗಳನ್ನು ಪರ್ಯಾಲೋಚಿಸುವುದಕ್ಕಾಗಿ ಕೆಲವು ಪ್ರಮುಖ ಸಹಕಾರ ಸಂಸ್ಥೆಗಳ ಸರ್ಕಾರೇತರ ಅಧ್ಯಕ್ಷಾಧಿಕಾರಿಗಳು ಮತ್ತು ಸರ್ಕಾರದ ಅಧಿಕಾರಿಗಳಿಂದ ಕೂಡಿದ ಹಾಗೂ ಸಹಕಾರ ಇಲಾಖೆಯ ಆಗಿನ ಉಪಸಚಿವರು ಅಧ್ಯಕ್ಷರಾಗಿದ್ದಂಥ, ಸರ್ಕಾರದಿಂದ ರಚಿತವಾದ ಸಮಿತಿಯು, ಇತರ ವಿಷಯಗಳೊಂದಿಗೆ ಭಾರತ ಸರ್ಕಾರ ಮತ್ತು ರಿಜರ್ವ್ ಬ್ಯಾಂಕು ಸೂಚಿಸಿದಂತೆ ಸಹಕಾರ ಸಂಘಗಳ ಅಧಿನಿಯಮದಲ್ಲಿ ಎಲ್ಲ ಅಗತ್ಯ ಉಪಬಂಧಗಳನ್ನು ಕಲ್ಪಿಸುವಂತೆ ಶಿಫಾರಸು ಮಾಡಿತು. ಈ ಉದ್ದೇಶಕ್ಕಾಗಿ ಒಂದು ವಿಧೇಯಕವನ್ನು 1970ರ ಮಾರ್ಚ್ ತಿಂಗಳಲ್ಲಿ ವಿಧಾನ ಸಭೆಯಲ್ಲಿ ಮಂಡಿಸಲಾಯಿತು. ವಿಧಾನಸಭೆಯು ಈ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಿಲ್ಲ. ಈ ವಿಧೇಯಕದ ಕಾಲ ಗತಿಸಿತು. ಕೆಲವು ಜರೂರಿನ ಮತ್ತು ಪ್ರಮುಖವಾದ ಬಾಬುಗಳ ಬಗ್ಗೆ ಉಪಬಂಧಿಸಲು ಸರ್ಕಾರವು ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಿತು:

(1) ಠೇವಣಿ ವಿಮಾ ಯೋಜನೆಗಳನ್ನು ಸಹಕಾರಿ ಬ್ಯಾಂಕುಗಳಿಗೆ ವಿಸ್ತರಿಸುವುದು.

(2) ಸಹಕಾರಿ ಬ್ಯಾಂಕುಗಳನ್ನು ಸಮ್ಮಿಲನಗೊಳಿಸುವುದು.

(3) ಸಂಘದ ಸದಸ್ಯನು ತನ್ನ ಕೃಷಿ ಕಾರ್ಯಾಚರಣೆಗೆ ಹಣಕಾಸು ಪಡೆಯಲು ಸಾಧ್ಯವಾಗುವಂತೆ ಮಾಡಲು ಅವನ ಜಮೀನಿನ ಮೇಲೆ ಎರಡನೆಯ ಚಾರ್ಜನ್ನು ಸೃಜಿಸುವುದು.

(4) ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ಸಮಿತಿಯ ಸದಸ್ಯರನ್ನು ನಾಮನಿರ್ದೇಶನ ಮಾಡುವುದು.

(5) ಸಹಕಾರಿ ಬ್ಯಾಂಕುಗಳನ್ನು ಪರಿಸಮಾಪ್ತಿಗೊಳಿಸುವುದು.

ತದನುಸಾರವಾಗಿ ಒಂದು ತಿದ್ದುಪಡಿ ವಿಧೇಯಕವನ್ನು ಸಿದ್ಧಪಡಿಸಲಾಯಿತು ಮತ್ತು ಅದನ್ನು ರಾಷ್ಟ್ರಪತಿಯವರ ಅಧಿನಿಯಮವೆಂದು ಅಧಿನಿಯಮಿತಿಗೊಳಿಸಲು ಭಾರತ ಸರ್ಕಾರಕ್ಕೆ ಕಳುಹಿಸಲಾಯಿತು. ಭಾರತ ಸರ್ಕಾರವು ಈ ವಿಧೇಯಕದಲ್ಲಿ ಕೆಲವೊಂದು ಬದಲಾವಣೆಗಳನ್ನು ಸೂಚಿಸಿತು. ರಾಜ್ಯ ಶಾಸನ ಸಭೆಗೆ ಚುನಾವಣೆಗಳು ನಡೆಯಬೇಕಾದ್ದರಿಂದ ವಿಧೇಯಕವು ರಾಷ್ಟ್ರಪತಿಯವರ ಅಧಿನಿಯಮವೆಂದು ಅಧಿನಿಯಮಿತವಾಗಲಿಲ್ಲ.

ಠೇವಣಿ ವಿಮಾ ಯೋಜನೆಯನ್ನು ಸಹಕಾರಿ ಬ್ಯಾಂಕುಗಳಿಗೆ ವಿಸ್ತರಿಸಲು ಅನುಕೂಲ ಮಾಡಿಕೊಡುವುದಕ್ಕಾಗಿ, ವಾಣಿಜ್ಯ ಬ್ಯಾಂಕುಗಳಿಗೆ ಸಹಕಾರ ಸಂಘಗಳ ನಾಮ ಮಾತ್ರ ಸದಸ್ಯರಾಗಿ ಪ್ರವೇಶ ಪಡೆಯಲು ಅನುಮತಿಸುವುದಕ್ಕಾಗಿ ಮಾಡಿದ ಸಾಲಗಳನ್ನು ಆಂಶಿಕವಾಗಿ ತೀರಿಸಿದಾಗ ಭೂಮಿಯ ಮೇಲಿನ ಚಾರ್ಜನ್ನು ಪ್ರಮಾಣಾನುಸಾರ ಬಿಡುಗಡೆ ಪಡೆಯಲು ಸಾಲಗಳನ್ನು

ಪಡೆದವರಿಗೆ ಸಹಕಾರ ಸಂಘದಿಂದ ಪರಿಹಾರ ಒದಗಿಸುವುದಕ್ಕಾಗಿ ಮತ್ತು ನಿಬಿಡ ಪ್ರದೇಶದಲ್ಲಿ ಪ್ರದೇಶ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವಲ್ಲಿ, ಯೋಜನೆಗೆ ಹಣಕಾಸು ಒದಗಿಸುವ ಸರ್ಕಾರದ ಅಥವಾ ಭೂ ಅಭಿವೃದ್ಧಿ ಬ್ಯಾಂಕಿನ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಯಾವುದೇ ಸಹಕಾರ ಸಂಘದಲ್ಲಿ ಸರ್ಕಾರವು ಸಹಕಾರ ಸಂಘದ ಷೇರು ಬಂಡವಾಳದ ಶೇಕಡ 50 ಕ್ಕಿಂತ ಕಡಿಮೆ ಇಲ್ಲದಿರುವಷ್ಟು ಮೌಲ್ಯದ ಷೇರು ಬಂಡವಾಳವನ್ನು ಹೊಂದಿದ್ದರೆ ಆ ಯಾವುದೇ ಸಹಕಾರ ಸಂಘದ ನಿರ್ದೇಶಕ ಮಂಡಲಿಯಲ್ಲಿನ ನಿರ್ದೇಶಕರ ಒಟ್ಟು ಸಂಖ್ಯೆಯ ಮೂರನೆಯ ಎರಡರಷ್ಟನ್ನು ನಾಮನಿರ್ದೇಶನ ಮಾಡಲು ಈ ಅಧಿನಿಯಮದಲ್ಲಿ ಯುಕ್ತ ಉಪಬಂಧ ಕಲ್ಪಿಸುವುದಕ್ಕಾಗಿ, ಸಹಕಾರ ಸಂಘಗಳ ಸದಸ್ಯರಿಗೆ ಪ್ರಯಾಣ ಭತ್ಯೆಯ ನಿಯಮಗಳನ್ನು ರೂಪಿಸಲು ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ, ಕೇಂದ್ರೀಯ ಬ್ಯಾಂಕುಗಳು ಪ್ರಾಥಮಿಕ ಸಹಕಾರ ಸಂಘಗಳ ಕೆಲವು ಸದಸ್ಯರ ಮೇಲಿನ ಮಧ್ಯಸ್ಥಿಕೆಯ ವ್ಯವಹಾರಗಳನ್ನು ಪ್ರಾರಂಭಿಸುವುದಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ, ಬಾಕಿದಾರರನ್ನು ವ್ಯವಸ್ಥಾಪನಾ ಸಮಿತಿಯ ಸದಸ್ಯತ್ವದಿಂದ ಅನರ್ಹಗೊಳಿಸುವುದಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ, ಸದಸ್ಯರ ಪದಾವಧಿಯ ಪ್ರಾರಂಭದ ಸಂಬಂಧದಲ್ಲಿ, ಸಮಿತಿಯ ಸದಸ್ಯರ ರಾಜೀನಾಮೆಯ ಬಗ್ಗೆ ಮತ್ತು ಅನುಕ್ರಮವಾಗಿ ಆರಕ್ಕಿಂತ ಹೆಚ್ಚು ವರ್ಷಗಳಿಗೆ ಸಹಕಾರ ಸಂಘದ ಸದಸ್ಯನಾಗಿ ನೇಮಕವಾಗುವುದನ್ನು ಅಥವಾ ಅಧ್ಯಕ್ಷ, ಉಪಾಧ್ಯಕ್ಷ ಮುಂತಾದವರಾಗಿ ಮುಂದುವರಿಯುವುದನ್ನು ಅನರ್ಹಗೊಳಿಸುವ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ, ಕರ್ನಾಟಕ ಸಹಕಾರಿ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷರು ಇಬ್ಬರು ಸದಸ್ಯರನ್ನೊಳಗೊಂಡ ನ್ಯಾಯಪೀಠವನ್ನು ರಚಿಸುವುದಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ ಮತ್ತು ಸಹಕಾರ ಸಂಘಗಳ ನೌಕರರ ನೇಮಕಾತಿ, ತರಬೇತಿ, ಮುಂತಾದವುಗಳಿಗಾಗಿ ಪ್ರಾಧಿಕಾರ/ ಪ್ರಾಧಿಕಾರಗಳನ್ನು ರಚಿಸಲು ಸರ್ಕಾರಕ್ಕೆ ಸಾಧ್ಯವಾಗುವಂತೆ ಮಾಡಲು ಉಪಬಂಧ ಕಲ್ಪಿಸುವುದಕ್ಕಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಈಗ ಪರಿಗಣಿಸಲಾಗಿದೆ.

ರಾಷ್ಟ್ರಪತಿ ಆಳ್ವಿಕೆಯ ಅವಧಿಯಲ್ಲಿ, 1972ರ ರಾಷ್ಟ್ರಪತಿಯವರ ಅಧಿನಿಯಮ, 1ರ ಮೂಲಕ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 101ನೇ ಪ್ರಕರಣವನ್ನು ತಿದ್ದುಪಡಿ ಮಾಡಲಾಯಿತು. ಸದಸ್ಯರಲ್ಲದವರ ವಿರುದ್ಧದ ಡಿಕ್ರಿಯ ಅಮಲ್ಜಾರಿಯ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ನೀಡಿದ ನಿರ್ಣಯದಿಂದ ಉದ್ಭವಿಸಿದ ತೊಂದರೆಯನ್ನು ನಿವಾರಿಸುವ ಸಲುವಾಗಿ ಇದನ್ನು ಮಾಡಲಾಯಿತು. ರಾಷ್ಟ್ರಪತಿಯವರ ಅಧಿನಿಯಮದ ಕಾರ್ಯವ್ಯಾಪ್ತಿಯು 1973ರ ಮಾರ್ಚ್ ತಿಂಗಳವರೆಗೆ ಇರುವುದರಿಂದ ಹಾಗೂ ಅದರಲ್ಲಿ ಮಾಡಿದ ಉಪಬಂಧಗಳನ್ನು ಮುಂದುವರಿಸುವುದು ಅವಶ್ಯಕವಾಗಿರುವುದರಿಂದ ಈ ಉಪಬಂಧಗಳನ್ನು ಅಧಿನಿಯಮಿತಗೊಳಿಸಬೇಕಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVŠ2ಎ, ದಿನಾಂಕ: 1973ರ ಫೆಬ್ರುವರಿ 26ರ ಪುಟ 22-24 ರಲ್ಲಿ ಸಂಖ್ಯೆ:179 ಎಂದು ಪ್ರಕಟಿಸಲಾಗಿದೆ.)

IX

1976ರ ತಿದ್ದುಪಡಿ ಮಾಡುವ ಅಧಿನಿಯಮ 19.- ಸಂಘಗಳನ್ನು ಹೆಚ್ಚು ಸಮರ್ಥವಾಗಿಸಿ ಆ ಮೂಲಕ ವಿಶೇಷವಾಗಿ ದುರ್ಬಲ ವರ್ಗಗಳ ಹಿತಾಸಕ್ತಿಯನ್ನು ರಕ್ಷಿಸುವ ಮತ್ತು ಸಂಘಗಳ ಮೇಲೆ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತವನ್ನು ಸಡಿಲಗೊಳಿಸುವ ದೃಷ್ಟಿಯಿಂದ, ಸಹಕಾರ ಸಂಘಗಳ ಪುನರ್ ಸಂಘಟನೆಗೆ ಉಪಬಂಧಿಸುವ ಸಲುವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮವನ್ನು 1976ರ ಮಾರ್ಚ್ 10 ರಂದು ತಿದ್ದುಪಡಿ ಮಾಡಲಾಯಿತು. ಆದರೆ, ಈ ಅಧಿನಿಯಮವನ್ನು ತಿದ್ದುಪಡಿ ಮಾಡಿದ ತರುವಾಯವೂ, ಈ ಅಧಿನಿಯಮದ ಉಪಬಂಧಗಳನ್ನು ಸಕಾಲಿಕವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಕೆಲವು ತೊಂದರೆಗಳು ಇದ್ದುದಾಗಿ ಕಂಡುಬಂದಿತು. ಸಹಕಾರ ಸಂಸ್ಥೆಗಳ ಯುಕ್ತ ವ್ಯವಸ್ಥಾಪನೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಹಾಗೂ ತಪ್ಪುಮಾಡುವ ಸಹಕಾರ ಸಂಘಗಳ ವಿರುದ್ಧ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಕಾನೂನು ಕ್ರಮಗಳನ್ನು ಉಪಬಂಧಿಸುವುದು ಕೂಡ ಅವಶ್ಯಕವೆಂದು ಪರಿಗಣಿಸಲಾಗಿದೆ. ತದನುಸಾರವಾಗಿ ಈ ಮುಂಚಿನ ವಿಷಯಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಅನುಕ್ರಮವಾಗಿ 1976ರ ಅಧ್ಯಾದೇಶ ಸಂಖ್ಯೆಗಳು 15 ಮತ್ತು 19ನ್ನು ಪ್ರಖ್ಯಾಪಿಸುವ ಮೂಲಕ, 1976ರ ಜುಲೈ 19 ರಂದು ಮತ್ತು 1976ರ ಆಗಸ್ಟ್ 7 ರಂದು ಯುಕ್ತ ತಿದ್ದುಪಡಿ ಮಾಡಲಾಗಿದೆ:

(1) ಸಹಕಾರ ಸಂಘಗಳ ಪುನರ್ ಸಂಘಟನೆ.

(2) ಸಹಕಾರ ಸಂಘಗಳಿಗೆ ವಿಶೇಷಾಧಿಕಾರಿಗಳ ನೇಮಕಾತಿ.

(3) ಸಹಕಾರ ಸಂಘಗಳಿಗೆ ನಿರ್ದೇಶನ ನೀಡುವ ಅಧಿಕಾರ.

(4) ಅಧಿನಿಯಮದ ಅಡಿಯಲ್ಲಿ ಆನುಷಂಗಿಕ ಕ್ರಮವಾಗಿ ಅಪೀಲು ಉಪಬಂಧಗಳು.

(5) ವ್ಯವಸ್ಥಾಪನಾ ಸಮಿತಿಯ ಸದಸ್ಯರನ್ನು ತೆಗೆದುಹಾಕುವುದು ಮತ್ತು ಅನರ್ಹಗೊಳಿಸುವುದು.

(6) ಅಧಿನಿಯಮದ ಅಡಿಯಲ್ಲಿ ನೇಮಕ ಮಾಡಿದ ಹೊಸ ವ್ಯವಸ್ಥಾಪನಾ ಸಮಿತಿಗೆ ಮತ್ತು ಆಡಳಿತಗಾರರಿಗೆ ಹಾಗೂ ವಿಶೇಷ ಅಧಿಕಾರಿಗಳಿಗೆ ನಷ್ಟಭರ್ತಿ ಉಪಬಂಧವನ್ನು ವಿಸ್ತರಿಸುವುದು.

ಸಹಕಾರ ಸಂಘಗಳ ಪುನರ್ ಸಂಘಟನೆಯು ಜರೂರು ಸ್ವರೂಪದ್ದಾಗಿತ್ತು. ಭಾರತದ ರಿಸರ್ವ್ ಬ್ಯಾಂಕು ಮತ್ತು ಭಾರತ ಸರ್ಕಾರವು, 20 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಸಹಕಾರ ಸಂಘಗಳ ಪುನರ್ ಸಂಘಟನೆಯನ್ನು ಕೂಡಲೇ ಪೂರ್ಣಗೊಳಿಸುವಂತೆ ಎಲ್ಲಾ ರಾಜ್ಯ ಸರ್ಕಾರಗಳನ್ನು ಒತ್ತಾಯಿಸುತ್ತಿದ್ದವು.

ಕೆಲವು ಸಂದರ್ಭಗಳಲ್ಲಿ, ಸಹಕಾರ ಸಂಘಗಳ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದಕ್ಕಾಗಿ ತುರ್ತುಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ, ಹೊಸ ಪ್ರಕರಣ 30(ಎ)ನ್ನು ಸೇರಿಸಲಾಗಿದೆ. ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ ಸಹಕಾರ ಸಂಘಗಳಿಗೆ ನಿರ್ದೇಶನಗಳನ್ನು ನೀಡುವ ಕಾನೂನು ಅಧಿಕಾರವನ್ನು ಹೊಂದಿರಬೇಕೆಂದು ಕೂಡ ಅಭಿಪ್ರಾಯಪಡಿಸಲಾಗಿದೆ. ಸಮಿತಿಗಳ ಸದಸ್ಯರನ್ನು ತೆಗೆದುಹಾಕುವ ಉಪಬಂಧ ಈಗಾಗಲೇ ನಿಯಮಗಳಲ್ಲಿ ಇತ್ತು. ಅಧಿನಿಯಮದ ಅಡಿಯಲ್ಲಿ ಈ ಉಪಬಂಧ ಕಲ್ಪಿಸುವುದು ಅವಶ್ಯಕವಾಗಿತ್ತು.

ಸದ್ಭಾವನೆಯಿಂದ ಕಾರ್ಯನಿರ್ವಹಿಸಿದ್ದ ಅಧಿಕಾರಿಗಳಿಗೆ ನಷ್ಟಭರ್ತಿ ಮಾಡುವುದಕ್ಕೆ ಸಂಬಂಧಿಸಿದ ಉಪಬಂಧವನ್ನು ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಹೊಸ ವ್ಯವಸ್ಥಾಪನಾ ಸಮಿತಿಗಳಿಗೆ ಹಾಗೂ ಆಡಳಿತಗಾರರಿಗೆ ಮತ್ತು ವಿಶೇಷಾಧಿಕಾರಿಗಳಿಗೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಸಹಕಾರಿ ಚಳುವಳಿಯನ್ನು ಸರಿಯಾದ ಮಾರ್ಗದಲ್ಲಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಈ ಎಲ್ಲಾ ತಿದ್ದುಪಡಿಗಳನ್ನು ಜರೂರಾಗಿ ಮಾಡಬೇಕಾಗಿತ್ತು ಮತ್ತು ವಿಧಾನಸಭೆಯು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ಅಧ್ಯಾದೇಶವನ್ನು ಪ್ರಖ್ಯಾಪಿಸುವ ಮಾರ್ಗವನ್ನು ಅವಲಂಬಿಸಬೇಕಾಯಿತು.

ಈ ತಿದ್ದುಪಡಿಗಳಿಂದಾಗಿ ಸರ್ಕಾರಕ್ಕೆ ಅಧಿಕ ವೆಚ್ಚ ಉಂಟಾಗುವುದಿಲ್ಲ.

ಸದರಿ ಅಧ್ಯಾದೇಶಗಳ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVš2ಎ, ದಿನಾಂಕ: 1976ರ ನವೆಂಬರ್ 8 ರಂದು ಪುಟ 7 ಮತ್ತು 8 ರಲ್ಲಿ ಸಂಖ್ಯೆ 4430 ಎಂದು ಪ್ರಕಟಿಸಲಾಗಿದೆ.)

X

1976ರ ತಿದ್ದುಪಡಿ ಮಾಡುವ ಅಧಿನಿಯಮ 70.- ಸಂಘಗಳನ್ನು ಹೆಚ್ಚು ಸಮರ್ಥವಾಗಿಸಿ ಆ ಮೂಲಕ ವಿಶೇಷವಾಗಿ ದುರ್ಬಲ ವರ್ಗಗಳ ಹಿತಾಸಕ್ತಿಯನ್ನು ರಕ್ಷಿಸುವ ಮತ್ತು ಸಂಘಗಳ ಮೇಲೆ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತವನ್ನು ಸಡಿಲಗೊಳಿಸುವ ದೃಷ್ಟಿಯಿಂದ, ಸಹಕಾರ ಸಂಘಗಳ ಪುನರ್ ಸಂಘಟನೆಗೆ ಉಪಬಂಧಿಸುವ ಸಲುವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮವನ್ನು 1976ರ ಮಾರ್ಚ್ 10 ರಂದು ತಿದ್ದುಪಡಿ ಮಾಡಲಾಯಿತು. ಆದರೆ, ಈ

ಅಧಿನಿಯಮವನ್ನು ತಿದ್ದುಪಡಿ ಮಾಡಿದ ತರುವಾಯವೂ, ಈ ಅಧಿನಿಯಮದ ಉಪಬಂಧಗಳನ್ನು ಸಕಾಲಿಕವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಕೆಲವು ತೊಂದರೆಗಳು ಇದ್ದುದಾಗಿ ಕಂಡುಬಂದಿತು. ಸಹಕಾರ ಸಂಸ್ಥೆಗಳ ಯುಕ್ತ ವ್ಯವಸ್ಥಾಪನೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಹಾಗೂ ತಪ್ಪುಮಾಡುವ ಸಹಕಾರ ಸಂಘಗಳ ವಿರುದ್ಧ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಕಾನೂನು ಕ್ರಮಗಳನ್ನು ಉಪಬಂಧಿಸುವುದು ಕೂಡ ಅವಶ್ಯಕವೆಂದು ಪರಿಗಣಿಸಲಾಗಿದೆ. ತದನುಸಾರವಾಗಿ ಈ ಮುಂಚಿನ ವಿಷಯಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಅನುಕ್ರಮವಾಗಿ 1976ರ ಅಧ್ಯಾದೇಶ ಸಂಖ್ಯೆಗಳು 15 ಮತ್ತು 19ನ್ನು ಪ್ರಖ್ಯಾಪಿಸುವ ಮೂಲಕ, 1976ರ ಜುಲೈ 19 ರಂದು ಮತ್ತು 1976ರ ಆಗಸ್ಟ್ 7 ರಂದು ಯುಕ್ತ ತಿದ್ದುಪಡಿ ಮಾಡಲಾಗಿದೆ:

(1) ಸಹಕಾರ ಸಂಘಗಳ ಪುನರ್ ಸಂಘಟನೆ.

(2) ಸಹಕಾರ ಸಂಘಗಳಿಗೆ ವಿಶೇಷಾಧಿಕಾರಿಗಳ ನೇಮಕಾತಿ.

(3) ಸಹಕಾರ ಸಂಘಗಳಿಗೆ ನಿರ್ದೇಶನ ನೀಡುವ ಅಧಿಕಾರ.

(4) ಅಧಿನಿಯಮದ ಅಡಿಯಲ್ಲಿ ಆನುಷಂಗಿಕ ಕ್ರಮವಾಗಿ ಅಪೀಲು ಉಪಬಂಧಗಳು.

(5) ವ್ಯವಸ್ಥಾಪನಾ ಸಮಿತಿಯ ಸದಸ್ಯರನ್ನು ತೆಗೆದುಹಾಕುವುದು ಮತ್ತು ಅನರ್ಹಗೊಳಿಸುವುದು.

(6) ಅಧಿನಿಯಮದ ಅಡಿಯಲ್ಲಿ ನೇಮಕ ಮಾಡಿದ ಹೊಸ ವ್ಯವಸ್ಥಾಪನಾ ಸಮಿತಿಗೆ ಮತ್ತು ಆಡಳಿತಗಾರರಿಗೆ ಹಾಗೂ ವಿಶೇಷ ಅಧಿಕಾರಿಗಳಿಗೆ ನಷ್ಟಭರ್ತಿ ಉಪಬಂಧವನ್ನು ವಿಸ್ತರಿಸುವುದು.

ಸಹಕಾರ ಸಂಘಗಳ ಪುನರ್ ಸಂಘಟನೆಯು ಜರೂರು ಸ್ವರೂಪದ್ದಾಗಿತ್ತು. ಭಾರತದ ರಿಸರ್ವ್ ಬ್ಯಾಂಕು ಮತ್ತು ಭಾರತ ಸರ್ಕಾರವು, 20 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಸಹಕಾರ ಸಂಘಗಳ ಪುನರ್ ಸಂಘಟನೆಯನ್ನು ಕೂಡಲೇ ಪೂರ್ಣಗೊಳಿಸುವಂತೆ ಎಲ್ಲಾ ರಾಜ್ಯ ಸರ್ಕಾರಗಳನ್ನು ಒತ್ತಾಯಿಸುತ್ತಿದ್ದವು.

ಕೆಲವು ಸಂದರ್ಭಗಳಲ್ಲಿ, ಸಹಕಾರ ಸಂಘಗಳ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದಕ್ಕಾಗಿ ತುರ್ತು ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ, ಹೊಸ ಪ್ರಕರಣ 30(ಎ)ನ್ನು ಸೇರಿಸಲಾಗಿದೆ. ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ ಸಹಕಾರ ಸಂಘಗಳಿಗೆ ನಿರ್ದೇಶನಗಳನ್ನು ನೀಡುವ ಕಾನೂನು ಅಧಿಕಾರವನ್ನು ಹೊಂದಿರಬೇಕೆಂದು ಕೂಡ ಅಭಿಪ್ರಾಯಪಡಲಾಗಿದೆ. ಸಮಿತಿಗಳ ಸದಸ್ಯರನ್ನು ತೆಗೆದುಹಾಕುವ ಉಪಬಂಧ ಈಗಾಗಲೇ

ನಿಯಮಗಳಲ್ಲಿ ಇತ್ತು. ಅಧಿನಿಯಮದ ಅಡಿಯಲ್ಲಿ ಈ ಉಪಬಂಧ ಕಲ್ಪಿಸುವುದು ಅವಶ್ಯಕವಾಗಿತ್ತು.

ಸದ್ಭಾವನೆಯಿಂದ ಕಾರ್ಯನಿರ್ವಹಿಸಿದ್ದ ಅಧಿಕಾರಿಗಳಿಗೆ ನಷ್ಟಭರ್ತಿ ಮಾಡುವುದಕ್ಕೆ ಸಂಬಂಧಿಸಿದ ಉಪಬಂಧವನ್ನು ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಹೊಸ ವ್ಯವಸ್ಥಾಪನಾ ಸಮಿತಿಗಳಿಗೆ ಹಾಗೂ ಆಡಳಿತಗಾರರಿಗೆ ಮತ್ತು ವಿಶೇಷಾಧಿಕಾರಿಗಳಿಗೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಸಹಕಾರಿ ಚಳುವಳಿಯನ್ನು ಸರಿಯಾದ ಮಾರ್ಗದಲ್ಲಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಈ ಎಲ್ಲಾ ತಿದ್ದುಪಡಿಗಳನ್ನು ಜರೂರಾಗಿ ಮಾಡಬೇಕಾಗಿತ್ತು ಮತ್ತು ವಿಧಾನಸಭೆಯು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ಅಧ್ಯಾದೇಶವನ್ನು ಪ್ರಖ್ಯಾಪಿಸುವ ಮಾರ್ಗವನ್ನು ಅವಲಂಬಿಸಬೇಕಾಯಿತು.

ಈ ತಿದ್ದುಪಡಿಗಳಿಂದಾಗಿ ಸರ್ಕಾರಕ್ಕೆ ಅಧಿಕ ವೆಚ್ಚ ಉಂಟಾಗುವುದಿಲ್ಲ.

ಸದರಿ ಅಧ್ಯಾದೇಶಗಳ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(1976ರ ವಿ.ಸ. ವಿಧೇಯಕ ಸಂಖ್ಯೆ 45 ರಿಂದ ಪಡೆಯಲಾಗಿದೆ.)

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVಽ2ಎ, ದಿನಾಂಕ: 08.12.1976ರ ಸಂಖ್ಯೆ 4430 ಎಂದು ಪ್ರಕಟಿಸಲಾಗಿದೆ.)

XI

1976ರ ತಿದ್ದುಪಡಿ ಮಾಡುವ ಅಧಿನಿಯಮ 71.- ಸಹಕಾರಿಗಳ ಕೆಲಸಕಾರ್ಯಗಳನ್ನು ಏಕರೂಪಗೊಳಿಸುವ ದೃಷ್ಟಿಯಿಂದ ಮತ್ತು ಸರ್ಕಾರದ ಆರ್ಥಿಕ ಕಾರ್ಯನೀತಿಯನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಒಂದು ಪರಿಣಾಮಕಾರಿ ಪಾತ್ರ ವಹಿಸುವಲ್ಲಿ ಅವುಗಳನ್ನು ಸಮರ್ಥಗೊಳಿಸುವ ದೃಷ್ಟಿಯಿಂದ, ಈ ಮುಂದಿನವುಗಳಿಗಾಗಿ ಸಹಕಾರ ಸಂಘಗಳ ಅಧಿನಿಯಮಕ್ಕೆ ಕೆಲವು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

(i) ವಿಶೇಷವಾಗಿ ನಗರ ಬ್ಯಾಂಕುಗಳು ವ್ಯಾಪಾರ ಸಂಸ್ಥೆ, ಮುಂತಾದ ಸಂಸ್ಥೆಗಳ ಸದಸ್ಯರಾಗಿ ಸೇರಿಸಿಕೊಳ್ಳಲು ಸಾಧ್ಯವಾಗಿಸುವುದು;

(ii) ಸಹಕಾರ ಸಂಘವು ನಡೆಸುವಂಥದೇ ಬಗೆಯ ವ್ಯವಹಾರಗಳನ್ನು ನಡೆಸುವ ವ್ಯಕ್ತಿಗಳನ್ನು ಸದಸ್ಯರಾಗುವುದರಿಂದ ಪ್ರತಿಷೇಧಿಸುವುದು;

(iii) ಚುನಾವಣಾ ಸಮಯದಲ್ಲಿ ಮಾತ್ರ ಕ್ರಿಯಾಶೀಲವಾಗಿರುವ ನಾಮಮಾತ್ರ ಸಂಘಗಳಿಗೆ ಮತದಾನದ ಹಕ್ಕುಗಳನ್ನು ನಿರಾಕರಿಸುವುದು ಮತ್ತು ಜಾಮೀನುದಾರರು ಬಾಕಿದಾರನಷ್ಟೇ ಜವಾಬ್ದಾರಿಯನ್ನು ಹೊಂದಿರುವ ಕಾರಣದಿಂದಾಗಿ,

ಬಾಕಿದಾರರಂತೆಯೇ ಜಾಮೀನುದಾರರಿಗೂ ಮತದಾನದ ಹಕ್ಕುಗಳನ್ನು ನಿರಾಕರಿಸುವುದು;

(iv) ಗುಪ್ತ ಉದ್ದೇಶಗಳಿಗಾಗಿ ತಮ್ಮ ಸಭೆಯನ್ನು ಅನುಕೂಲಕರವಾದ ಸ್ಥಳಗಳಲ್ಲಿ ನಡೆಸುವ ಸಹಕಾರ ಸಂಘಗಳ ಪ್ರವೃತ್ತಿಯನ್ನು ತಡೆಯುವುದು, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳು ಹೈನುಗಾರಿಕೆ ಅಭಿವೃದ್ಧಿಯನ್ನೂ ಒಳಗೊಂಡಂತೆ ಬೇರೆ ಉದ್ದೇಶಗಳಿಗೆ ಹಣಕಾಸನ್ನು ನೀಡುವ ದೃಷ್ಟಿಯಿಂದ, ಭದ್ರತೆಗಳನ್ನು ಅಡಮಾನ ಮಾಡದೆಯೇ ಡಿಬೆಂಚರುಗಳನ್ನು ಹೊರಡಿಸಲು ಅವುಗಳನ್ನು ಸಮರ್ಥಗೊಳಿಸುವುದು;

(v) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಅಪರಾಧಗಳಿಗೆ ದಂಡಗಳನ್ನು ಇನ್ನಷ್ಟು ಕಠಿಣಗೊಳಿಸುವುದು.

- ಈ ಎಲ್ಲಾ ತಿದ್ದುಪಡಿಗಳು ಸಹಕಾರ ಸಂಘಗಳ ಪದಾಧಿಕಾರಿಗಳು, ಸಾಲಗಾರರು, ಜಾಮೀನುದಾರರು ಮುಂತಾದವರಲ್ಲಿ ಜವಾಬ್ದಾರಿ ಭಾವನೆಯನ್ನು ಉಂಟುಮಾಡಿ, ಅವುಗಳ ಕೆಲಸಕಾರ್ಯಗಳಲ್ಲಿ ಏಕರೂಪತೆ ತರಲು ಸಹಾಯಕವಾಗುತ್ತವೆ.

ಆದ್ದರಿಂದ ಈ ವಿಧೇಯಕ.

(1976ರ ವಿ.ಸ. ವಿಧೇಯಕ ಸಂಖ್ಯೆ 65 ರಿಂದ ಪಡೆಯಲಾಗಿದೆ.)

XII

1978ರ ತಿದ್ದುಪಡಿ ಮಾಡುವ ಅಧಿನಿಯಮ 14.- ಸಹಕಾರ ಸಂಘಗಳು ದುರ್ಬಲ ವರ್ಗಗಳಿಗೆ ನೆರವಾಗುವಲ್ಲಿ ಮತ್ತು ಕೃಷಿ ಉತ್ಪನ್ನ ಕ್ಷೇತ್ರಕ್ಕೆ ಅಧಿಕ ಮಟ್ಟದ ಹಣಕಾಸು ನಿರ್ವಹಣೆ ಮಾಡುವಲ್ಲಿ ಅವುಗಳನ್ನು ಪರಿಣಾಮಕಾರಿ ಸಾಧನಗಳಾಗಿ ಮಾಡುವ ದೃಷ್ಟಿಯಿಂದ ಸಹಕಾರ ಸಂಘಗಳನ್ನು ಸಶಕ್ತ ಘಟಕಗಳಾಗಿ ಪುನರ್ ಸಂಘಟಿಸುವುದು ಅವಶ್ಯಕವೆಂದು ಪರಿಗಣಿಸಲಾಯಿತು. ದುರ್ಬಲ ವರ್ಗಗಳ ಋಣಗಳನ್ನು ಪರಿಹರಿಸುವುದೇ ಅಲ್ಲದೆ ಲಭ್ಯವಿರುವ ಹಣಕಾಸುಗಳ ಸಾಂಪ್ರದಾಯಿಕ ಮೂಲಗಳು ಹೆಚ್ಚುಕಡಿಮೆ ಬತ್ತಿಹೋಗಲು ಕಾರಣವಾದ ಋಣಪರಿಹಾರ ಕ್ರಮದ ಪರಿಣಾಮವಾಗಿ ಸಾಲದ ಅಂತರವನ್ನು ತುಂಬುವ ಅಗತ್ಯತೆಯ ದೃಷ್ಟಿಯಿಂದ ತುರ್ತಾಗಿ ಈ ಸಂಘಗಳನ್ನು ಜೀವ ಸಾಮರ್ಥ್ಯವಿರುವ ಘಟಕಗಳನ್ನಾಗಿ ಪುನಃ ಸಂಘಟಿಸಬೇಕಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 14ಎ ಪ್ರಕರಣದ ಉಪಬಂಧಗಳನ್ನು ಹಾಗೂ ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರು ಹೊರಡಿಸಿದ ಆದೇಶಗಳ ಸಿಂಧುತ್ವವನ್ನು ಪ್ರಶ್ನಿಸಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು / ವ್ಯಕ್ತಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸಿದವು.

ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಗಳನ್ನು ವಿಲೆ ಮಾಡುವಾಗ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 14ಎ ಪ್ರಕರಣದ ಸಂವಿಧಾನಿಕ ಸಿಂಧುತ್ವವನ್ನು

ಎತ್ತಿಹಿಡಿದಿದೆ. ಆದರೆ, ಅಧಿನಿಯಮದ 14ಎ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರಿಗಳು ಹೊರಡಿಸಿದ ಆದೇಶಗಳನ್ನು, ಪ್ರತಿಪಕ್ಷವನ್ನು ವಿಚಾರಿಸತಕ್ಕದ್ದು ಎಂಬ ತತ್ವದ ಅನ್ವಯವನ್ನು ಮಾಡದಿರುವ ಆಧಾರದ ಮೇಲೆ ತಳ್ಳಿಹಾಕಲಾಗಿದೆ.

ಸಂಘಗಳನ್ನು ಸಮ್ಮಿಲನಗೊಳಿಸುವ ಮತ್ತು ಪುನರ್ ಸಂಘಟಿಸುವ ಕಾರ್ಯ ಈಗಾಗಲೇ ನಡೆದಿದ್ದುದರಿಂದ ಮತ್ತು ಸದರಿ ಸಂಘಗಳು ಸಾಕಷ್ಟು ಕಾಲದಿಂದ ಕಾರ್ಯನಿರ್ವಹಿಸುತ್ತಿರುವುದರಿಂದ ಅವುಗಳನ್ನು ಪೂರ್ವಸ್ಥಿತಿಗೆ ತರಲು ಕಾರ್ಯಸಾಧ್ಯವಾಗಿರಲಿಲ್ಲ. ಆದ್ದರಿಂದ 14ಎ ಪ್ರಕರಣದ ಅಡಿಯಲ್ಲಿ ಕ್ರಮವನ್ನು ಕೈಗೊಳ್ಳುವ ಮುಂಚೆ ಪೂರ್ವಾನ್ವಯ ಪರಿಣಾಮದೊಂದಿಗೆ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ತರುವ ಮೂಲಕ ಸಹಜ ನ್ಯಾಯತತ್ವದ ಅನ್ವಯವನ್ನು ನಿರ್ದಿಷ್ಟವಾಗಿ ಹೊರತುಪಡಿಸಿ, ಈ ಮೊದಲು ತೆಗೆದುಕೊಂಡ ಕ್ರಮವನ್ನು ಮಾನ್ಯಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಒಂದು ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು. ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVŠ2ಎ, ದಿನಾಂಕ: 1978ರ ಜೂನ್, 30ರ 4ನೇ ಪುಟದಲ್ಲಿ ಸಂಖ್ಯೆ 1005 ಎಂದು ಪ್ರಕಟಿಸಲಾಗಿದೆ.)

XIII

1979ರ ತಿದ್ದುಪಡಿ ಮಾಡುವ ಅಧಿನಿಯಮ 16.- ಸರ್ಕಾರದ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಹಾಗೂ ಅಸ್ತಿತ್ವದಲ್ಲಿರುವ ಅಧಿನಿಯಮದ ವಿವಿಧ ಉಪಬಂಧಗಳನ್ನು ಅನುಷ್ಠಾನಗೊಳಿಸುವಲ್ಲಿ, ಸಹಕಾರ ಇಲಾಖೆಯು ಪಡೆದ ಅನುಭವದ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಕ್ಕೆ ತಂದ ವಿವಿಧ ತಿದ್ದುಪಡಿಗಳ ಬಗ್ಗೆ ಪರಿಗಣಿಸುವ ಉದ್ದೇಶಕ್ಕಾಗಿ ಸರ್ಕಾರವು, 1968ರ ಡಿಸೆಂಬರ್ ತಿಂಗಳಲ್ಲಿ ಸಹಕಾರ ಇಲಾಖೆಯ ಉಪಸಚಿವರು ಅಧ್ಯಕ್ಷರಾಗಿರುವ ಮತ್ತು ಕೆಲವು ಪ್ರಮುಖ ಸಹಕಾರಿ ಸಂಸ್ಥೆಗಳ ಸರ್ಕಾರೇತರ ಅಧ್ಯಕ್ಷಾಧಿಕಾರಿಗಳು ಮತ್ತು ಸರ್ಕಾರದ ಅಧಿಕಾರಿಗಳು ಸದಸ್ಯರಾಗಿರುವ ಒಂದು ಸಮಿತಿಯನ್ನು ರಚಿಸಿತು. ಸಮಿತಿಯು, ಸಹಕಾರ ಸಂಘಗಳ ವಿವಿಧ ವರ್ಗಗಳ ಕೆಲಸ ಕಾರ್ಯಗಳನ್ನು ಸವಿಸ್ತಾರವಾಗಿ ಪರ್ಯಾಲೋಚಿಸಿದ ತರುವಾಯ, ಅಧಿನಿಯಮಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ತನ್ನ ಶಿಫಾರಸ್ಸುಗಳನ್ನೂ ಸಲ್ಲಿಸಿತು.

ಕೆಲವು ಮಾರ್ಪಾಟುಗಳಿಗೊಳಪಟ್ಟು ಸಮಿತಿಯು ಶಿಫಾರಸ್ಸು ಮಾಡಿದಂತೆ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVಽ2ಎ, ದಿನಾಂಕ: 1970ರ ಮಾರ್ಚ್ 16ರ 58ನೇ ಪುಟದಲ್ಲಿ ಸಂಖ್ಯೆ 94 ಎಂದು ಪ್ರಕಟಿಸಲಾಗಿದೆ.)

XIV

1980ರ ತಿದ್ದುಪಡಿ ಮಾಡುವ ಅಧಿನಿಯಮ 3.- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಸ್ತಿತ್ವದಲ್ಲಿರುವ ಉಪಬಂಧಗಳ ಅಡಿಯಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರನು, ತಾನು ಪ್ರಾಧಿಕೃತ ವ್ಯಕ್ತಿಯಿಂದ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸಲು ಅಧಿಕಾರ ಹೊಂದಿರುವನು.

ಸ್ವತಂತ್ರ ವ್ಯಕ್ತಿಗಳು ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧಿಸುವುದನ್ನು ಖಚಿತಪಡಿಸುವ ದೃಷ್ಟಿಯಿಂದ, ರಾಜ್ಯ ಸರ್ಕಾರವು ಪ್ರತ್ಯೇಕ ಲೆಕ್ಕ ಪರಿಶೋಧನಾ ವಿಭಾಗವೊಂದನ್ನು ಸೃಜಿಸಿದ್ದು, ಮುಖ್ಯ ಲೆಕ್ಕ ಪರಿಶೋಧಕನು ಅದರ ಮುಖ್ಯಸ್ಥನಾಗಿರುವನು. ಈ ವಿಭಾಗವು ಎರಡು ವರ್ಷಗಳಿಂದಲೂ ಹೆಚ್ಚುಕಾಲ ಕಾರ್ಯನಿರ್ವಹಿಸುತ್ತಿದೆ.

ಮುಖ್ಯ ಲೆಕ್ಕ ಪರಿಶೋಧಕನಿಗೆ ಮತ್ತು ಅವನ ಅಧೀನಾಧಿಕಾರಿಗಳಿಗೆ ಶಾಸನಬದ್ಧ ಮಾನ್ಯತೆ ನೀಡುವ ದೃಷ್ಟಿಯಿಂದ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಇದಕ್ಕೆ ಸೂಕ್ತ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು. ವಿಷಯವು ಬಹಳ ತುರ್ತಿನದ್ದಾಗಿದ್ದರಿಂದ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧ್ಯಾದೇಶ, 1979ನ್ನು (1979ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 20) ಹೊರಡಿಸಲಾಯಿತು.

ಆದ್ದರಿಂದ ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVಽ2ಎ, ದಿನಾಂಕ: 1980ರ ಫೆಬ್ರುವರಿ 27ರ, ಪುಟ 6 ರಲ್ಲಿ ಸಂಖ್ಯೆ 139 ಎಂದು ಪ್ರಕಟಿಸಲಾಗಿದೆ.)

XV

1980ರ ತಿದ್ದುಪಡಿ ಮಾಡುವ ಅಧಿನಿಯಮ 4.- ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ಅಧಿನಿಯಮ, 1975ರ ಮೂಲಕ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮವನ್ನು ತಿದ್ದುಪಡಿ ಮಾಡಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 14ಎ ಪ್ರಕರಣವನ್ನು ಮೊದಲ ಬಾರಿಗೆ ಸೇರಿಸಲಾಯಿತು. 14ಎ ಪ್ರಕರಣದ (1)ನೇ ಉಪಪ್ರಕರಣವು, ಸಹಕಾರ ಸಂಘಗಳ ಸಮ್ಮಿಲನ, ವಿಭಜನೆ, ಪುನರ್ ಸಂಘಟನೆಯ ಸಂದರ್ಭದಲ್ಲಿ ಭಾರತದ ರಿಸರ್ವ್ ಬ್ಯಾಂಕು ಲಿಖಿತದಲ್ಲಿ ಪೂರ್ವ ಮಂಜೂರಾತಿ ನೀಡಿರಬೇಕೆಂದು ಉಪಬಂಧಿಸಿದ ಒಂದು ಪರಂತುಕವನ್ನು ಒಳಗೊಂಡಿತ್ತು. 1976ರ ಕರ್ನಾಟಕ ಅಧಿನಿಯಮ 19ರ ಮೂಲಕ ಮತ್ತಷ್ಟು ತಿದ್ದುಪಡಿ ಮಾಡಿದಾಗ ಈ ಪರಂತುಕವನ್ನು ಉಳಿಸಿಕೊಳ್ಳಲಾಯಿತು. ಸಹಕಾರ ಸಂಘಗಳ ಅಧಿನಿಯಮಕ್ಕೆ ಮತ್ತಷ್ಟು ತಿದ್ದುಪಡಿಗಳನ್ನು

ಮಾಡುವ ಉದ್ದೇಶವನ್ನು ಹೊಂದಿದ್ದ 1976ರ ಕರ್ನಾಟಕ ಅಧಿನಿಯಮ 70ನ್ನು ಪ್ರಕಟಿಸಿದಾಗ, 1976ರ ಕರ್ನಾಟಕ ಅಧಿನಿಯಮ 70 ರಲ್ಲಿ 14ಎ ಪ್ರಕರಣದ (1)ನೇ ಉಪಪ್ರಕರಣವು ಇಲ್ಲದಿದ್ದುದು ಕಂಡುಬಂದಿತು. ಈ ತಿದ್ದುಪಡಿಯಲ್ಲಿ 14ಎ ಪ್ರಕರಣದ (1)ನೇ ಉಪಪ್ರಕರಣವನ್ನು ಹೊಸ ಉಪಬಂಧದ ಮೂಲಕ ಪ್ರತಿಯೋಜಿಸಲಾಯಿತು ಮತ್ತು ಪರಂತುಕವನ್ನು ಬಿಟ್ಟುಬಿಡಲಾಯಿತು.

ಆದ್ದರಿಂದ, 1976ರ ಕರ್ನಾಟಕ ಅಧಿನಿಯಮ 70 ರಲ್ಲಿ ಮತ್ತಷ್ಟು ತಿದ್ದುಪಡಿ ಮಾಡಿದಾಗ ಬಿಟ್ಟುಬಿಡಲಾದ ಪರಂತುಕವನ್ನು ಸೇರಿಸುವುದಕ್ಕಾಗಿ 14ಎ ಪ್ರಕರಣಕ್ಕೆ ಒಂದು ತಿದ್ದುಪಡಿ ಮಾಡುವುದು ಅಗತ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVŠ2ಎ, ದಿನಾಂಕ: 1980ರ ಫೆಬ್ರುವರಿ 29, 3ನೇ ಪುಟದಲ್ಲಿ ಸಂಖ್ಯೆ 151 ಎಂದು ಪ್ರಕಟಿಸಲಾಗಿದೆ.)

XVI

1984ರ ತಿದ್ದುಪಡಿ ಮಾಡುವ ಅಧಿನಿಯಮ 5.- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ನಿರ್ವಹಣಾ ಅವಧಿಯಲ್ಲಿ, ಅದರ ಕ್ಷಿಪ್ರ ಅನುಷ್ಠಾನಕ್ಕಾಗಿ ಕೆ.ಹೆಚ್. ಪಾಟೀಲ್ ಸಮಿತಿಯು ಮಾಡಿದ ಕೆಲವು ಶಿಫಾರಸು ಅನುಸಾರ ಕೆಲವು ತಿದ್ದುಪಡಿ ಮಾಡುವುದು ಅಗತ್ಯವಿದೆಯೆಂದು ಕಂಡುಬಂದಿತು. ಸರ್ಕಾರವು, ರಾಜ್ಯದಲ್ಲಿನ ಸಹಕಾರಿ ಹಾಲು ಸಂಘಗಳ ಮತ್ತು ಸಹಕಾರಿ ಹಾಲು ಒಕ್ಕೂಟಗಳ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಗೆ ಒಂದು ಲೆಕ್ಕ ಪರಿಶೋಧನಾ ಮಂಡಳಿಯನ್ನು ರಚಿಸುವುದಕ್ಕಾಗಿ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂಥ ಉಪಬಂಧಗಳನ್ನು ತಿದ್ದುಪಡಿ ಮಾಡುವುದು ಅಗತ್ಯವಾಗಿದೆ. ಚರಸ್ವತ್ತನ್ನು ಅಡವು ಇಡುವ ಆಧಾರದ ಮೇಲೆ ಅಭಿವೃದ್ಧಿ ಕಾರ್ಯಗಳಿಗೆ ನಿಧಿಗಳು ಲಭ್ಯವಾಗುವಂತೆ ಮಾಡುವುದಕ್ಕಾಗಿ ಬ್ಯಾಂಕು, ಆ ಅಭಿವೃದ್ಧಿ ಕಾರ್ಯಗಳನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲು ಸಾಧ್ಯವಾಗುವಂತೆ ``ಭೂ ಅಭಿವೃದ್ಧಿ ಬ್ಯಾಂಕಿಗೆ" ಗೆ ಸಂಬಂಧಿಸಿದ ಅಧ್ಯಾಯವನ್ನು ಕೂಡ ತಿದ್ದುಪಡಿ ಮಾಡುವುದು ಅಗತ್ಯವಾಗಿದೆ. ಅಧಿನಿಯಮದ ಅಡಿಯಲ್ಲಿ ಅಪರಾಧಗಳನ್ನು ಮಾಡುವ ವ್ಯಕ್ತಿಗಳ ಮೇಲೆ ಹಾಗೆ ಮಾಡಲು ಹಿಂಜರಿಯುವ ಪರಿಣಾಮವನ್ನು ಸೃಷ್ಟಿಸುವ ಸಲುವಾಗಿ ಜುಲ್ಮಾನೆ, ಕಾರಾವಾಸ ಶಿಕ್ಷೆಯ ಮೂಲಕ, ಈ ಅಧಿನಿಯಮದ ಅಡಿಯಲ್ಲಿನ ದಂಡಗಳನ್ನು ಹೆಚ್ಚಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVŠ2ಎ, ದಿನಾಂಕ: 1984ರ ಫೆಬ್ರುವರಿ 29ರ, ಪುಟ 16 ರಲ್ಲಿ ಸಂಖ್ಯೆ 139 ಎಂದು ಪ್ರಕಟಿಸಲಾಗಿದೆ.)

XVII

1985ರ ತಿದ್ದುಪಡಿ ಮಾಡುವ ಅಧಿನಿಯಮ 34.- ಕರ್ನಾಟಕ ರಾಜ್ಯದಲ್ಲಿರುವ ವಿವಿಧ ಸಹಕಾರ ಸಂಸ್ಥೆಗಳ ಸದಸ್ಯರುಗಳಿಂದ ಬರಬೇಕಾಗಿರುವ ದೊಡ್ಡ ಪ್ರಮಾಣದ ಬಾಕಿ ಮೊತ್ತದ ಶೀಘ್ರ ವಸೂಲಿಗಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಉದ್ದೇಶಿತ ತಿದ್ದುಪಡಿಯು ಸಾರ್ವಜನಿಕ ಹರಾಜಿನಲ್ಲಿ ಸರ್ಕಾರಿ ಸವಾಲಿನ ಮೂಲಕ ಬಾಕಿದಾರರ ಸ್ವತ್ತುಗಳನ್ನು ಖರೀದಿಸುವ ಸಲುವಾಗಿ ಮತ್ತು ಅಂಥ ಸ್ವತ್ತುಗಳನ್ನು, ಸರ್ಕಾರವು ಯುಕ್ತವೆಂದು ಭಾವಿಸಬಹುದಾದಂಥ ವಿಧಾನದಲ್ಲಿ ವಿಲೆ ಮಾಡಲು ರಾಜ್ಯ ಸರ್ಕಾರವನ್ನು ಸಮರ್ಥಗೊಳಿಸುತ್ತದೆ.

2. ವಿಷಯವು ಬಹಳ ತುರ್ತಿನದಾಗಿದ್ದರಿಂದ ಮತ್ತು ವಿಧಾನ ಸಭೆಯು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧ್ಯಾದೇಶ, 1985ನ್ನು (1985ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 15) ಹೊರಡಿಸಲಾಯಿತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVŠ2ಎ, ದಿನಾಂಕ: 1985ರ ಜುಲೈ 29ರ ಪುಟ 3 ರಲ್ಲಿ ಸಂಖ್ಯೆ 405 ಎಂದು ಪ್ರಕಟಿಸಲಾಗಿದೆ.)

XVIII

1991ರ ತಿದ್ದುಪಡಿ ಮಾಡುವ ಅಧಿನಿಯಮ 34.- ಸಹಕಾರಿ ಬಾಕಿಗಳನ್ನು ವಸೂಲು ಮಾಡುವುದಕ್ಕೆ ಸಂಬಂಧಿಸಿದಂತೆ ಇರುವ ಇತರ ಉಪಬಂಧಗಳು ಪರ್ಯಾಪ್ತವೆಂದು ಕಂಡುಬಂದಿರುವುದರಿಂದ ಮತ್ತು ರಾಜ್ಯ ಸರ್ಕಾರವು ಹರಾಜಿನಲ್ಲಿ ಸ್ಥಿರ ಸ್ವತ್ತನ್ನು ಖರೀದಿಸುವುದು ರೈತರಿಗೆ ಅನಾವಶ್ಯಕ ಆತಂಕಕ್ಕೆ ಮತ್ತು ತೊಂದರೆಗೆ ಕಾರಣವಾಗಿರುವುದರಿಂದ, 101-ಸಿ ಪ್ರಕರಣವನ್ನು ಬಿಟ್ಟುಬಿಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IVŠ2ಎ, ದಿನಾಂಕ: 1991ರ ಸೆಪ್ಟೆಂಬರ್ 30ರ ಪುಟ 254 ರಲ್ಲಿ ಸಂಖ್ಯೆ 622 ಎಂದು ಪ್ರಕಟಿಸಲಾಗಿದೆ.)

XIX

1998ರ ತಿದ್ದುಪಡಿ ಮಾಡುವ ಅಧಿನಿಯಮ 25.- ಶ್ರೀ ಕೆ.ಹೆಚ್. ಪಾಟೀಲರು ಅಧ್ಯಕ್ಷರಾಗಿದ್ದ ಸಮಿತಿ ಮತ್ತು ಇತರ ಎರಡು ಸಮಿತಿಗಳಿಂದ ಮಾಡಿದ ಶಿಫಾರಸ್ಸುಗಳನ್ನು ಮತ್ತು ಪ್ರಮುಖ ಸಹಕಾರಿಗಳ ಮತ್ತು ಸಹಕಾರಿ ಇಲಾಖೆಯ ಅಧಿಕಾರಿಗಳು ಮಾಡಿದ ಸಲಹೆಗಳನ್ನು ದೃಷ್ಟಿಯಲ್ಲಿ

ಇಟ್ಟುಕೊಂಡು, ಈ ಮುಂದಿನವುಗಳಿಗಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಯಿತು,-

(i) ಪ್ರಾಥಮಿಕ ಸಂಘಗಳು, ಮಾಧ್ಯಮಿಕ ಸಂಘಗಳು, ಒಕ್ಕೂಟ ಸಂಘಗಳು ಮತ್ತು ಅಪೆಕ್ಸ್ ಸಂಘಗಳನ್ನು ಪರಿಭಾಷಿಸುವುದು;

(ii) ಒಂದೇ ಕುಟುಂಬದ ಸದಸ್ಯರು ಸಹಕಾರ ಸಂಘದ ನೋಂದಣಿಗಾಗಿ ಅರ್ಜಿ ಸಲ್ಲಿಸುವುದನ್ನು ನಿಷೇಧಿಸುವುದು;

(iii) ಭಾವಿತ ಸಹಕಾರಿ ಸಂಘದ ನೋಂದಣಿ ಮಾಡಲು ಮತ್ತು ಪ್ರಸ್ತಾವವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಉಪಬಂಧಿಸುವುದು;

(iv) ಈ ಅಧಿನಿಯಮ, ನಿಯಮ ಮತ್ತು ಉಪವಿಧಿಗಳ ಅಡಿಯಲ್ಲಿ ಸತತ ಮೂರು ವರ್ಷದ ಅವಧಿಗಾಗಿ ಸದಸ್ಯನಾಗಿ ತನ್ನ ಹೊಣೆಗಾರಿಕೆಗಳನ್ನು ಈಡೇರಿಸಲು ವಿಫಲನಾದ ವ್ಯಕ್ತಿಯ ಸದಸ್ಯತ್ವವನ್ನು ಸಮಾಪ್ತಿಗೊಳಿಸಲು ಉಪಬಂಧಿಸುವುದು;

(v) ಸಹಕಾರ ಸಂಘಗಳನ್ನು ಸಮ್ಮಿಲನಗೊಳಿಸಲು, ವಿಭಜಿಸಲು ಮತ್ತು ಪುನರ್ ಸಂಘಟನೆ ಮಾಡಲು ನಿರ್ದೇಶಿಸುವ ರಿಜಿಸ್ಟ್ರಾರನ ಅಧಿಕಾರಗಳನ್ನು ತೆಗೆದುಹಾಕುವುದು;

(vi) ಒಬ್ಬ ತಪ್ಪಿತಸ್ಥ ಸದಸ್ಯನನ್ನು ಸಹಕಾರ ಸಂಘದ ಸಭೆಯಲ್ಲಿ ತನ್ನ ಮತದಾನದ ಹಕ್ಕನ್ನು ಚಲಾಯಿಸುವುದರಿಂದ ನಿಷೇಧಿಸುವುದು;

(vii) ಸಹಕಾರ ಸಂಘಗಳ ಸದಸ್ಯರು ಷೇರುಗಳನ್ನು ಹೊಂದಿರುವುದರ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದು;

(viii) ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ, ಹೆಚ್ಚು ವ್ಯಾಪಕ ಅವಕಾಶ ಹೊಂದಿರುವಂತೆ 27ನೇ ಪ್ರಕರಣವನ್ನು ಪುತಿಯೋಜಿಸುವುದು;

(ix) ಮುಂದಿನ ಸಮಿತಿಯ ಸದಸ್ಯತ್ವದ ಚುನಾವಣೆಗಾಗಿ ಏರ್ಪಾಟು ಮಾಡುವಂತೆ ಒಂದು ಸಮಿತಿಯನ್ನು ಅಗತ್ಯಪಡಿಸಲು ಮತ್ತು ಅಂಥ ಏರ್ಪಾಟುಗಳನ್ನು ಮಾಡಲು ತಪ್ಪಿದ್ದಕ್ಕೆ ಪರಿಣಾಮಗಳನ್ನು ಉಪಬಂಧಿಸುವುದು;

(x) ಸಹಾಯಕ ಸಂಘಗಳ ಸಮಿತಿಯಲ್ಲಿ ಕೇವಲ ಮೂರು ವ್ಯಕ್ತಿಗಳನ್ನು ನಾಮನಿರ್ದೇಶನಕ್ಕಾಗಿ ಉಪಬಂಧಿಸುವುದು;

(xi) 30ಎ ಮತ್ತು 30ಬಿ ಪ್ರಕರಣಗಳ ಅಡಿಯಲ್ಲಿ ವಿಶೇಷ ಅಧಿಕಾರಿಯನ್ನು ನೇಮಕ ಮಾಡುವ ಸರ್ಕಾರದ ಅಧಿಕಾರಗಳನ್ನು ತೆಗೆದುಹಾಕುವುದು;

(xii) 53ಎ ಪ್ರಕರಣದ ಅಡಿಯಲ್ಲಿ ಸರ್ಕಾರವು ಸಮಿತಿಯ ಒಟ್ಟು ಸಂಖ್ಯೆಯ ಮೂರನೆಯ ಒಂದರಷ್ಟು ನಾಮನಿರ್ದೇಶನ ಮಾಡುವುದನ್ನು ಬಿಟ್ಟುಬಿಡುವುದು;

(xiii) ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಪದಾಧಿಕಾರಿಗಳ ಚುನಾವಣೆಯಲ್ಲಿ ಅಂಥ ನಾಮನಿರ್ದೇಶಿತ ಸದಸ್ಯರು ಸ್ಪರ್ಧಿಸುವುದನ್ನು ನಿಷೇಧಿಸುವುದು;

(xiv) ಎರಡು ಅವಧಿಗಳ ತರುವಾಯವೂ ಪದಾಧಿಕಾರಗಳು ಮುಂದುವರಿಯಲು ಉಪಬಂಧಿಸುವುದು;

(xv) ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಮತ್ತು ಹಾಗೆ ಸಮಿತಿಯ ಸದಸ್ಯರ ಪದದಲ್ಲಿನ ಆಕಸ್ಮಿಕ ಖಾಲಿಸ್ಥಾನಗಳನ್ನು ತುಂಬುವುದಕ್ಕೆ ಸವಿಸ್ತರವಾದ ಉಪಬಂಧಗಳನ್ನು ಮಾಡುವುದು;

(xvi) ಸಹಕಾರ ಸಂಘದ ಕಾರ್ಯನಿರ್ವಾಹಕನನ್ನು ನೇಮಕ ಮಾಡುವುದಕ್ಕಾಗಿ ಉಪಬಂಧಿಸುವುದು ಮತ್ತು ಅವನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಕೂಡ ನಿರ್ದಿಷ್ಟಪಡಿಸುವುದು;

(xvii) ಸಮಿತಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯವಾದ ಸಂಖ್ಯೆಗಿಂತ ಕಡಿಮೆ ಇರುವ ಕಾರಣದಿಂದ ಸಂಘವು ಕಾರ್ಯನಿರ್ವಹಿಸದಿರುವ ಸಂದರ್ಭದಲ್ಲಿ ವಿಶೇಷ ಅಧಿಕಾರಿಯನ್ನು ನೇಮಕ ಮಾಡುವುದಕ್ಕಾಗಿ ಉಪಬಂಧಿಸುವುದು;

(xviii) ಹೊಸ ಅಧ್ಯಾಯ ೧ಎ ಯನ್ನು ಮತ್ತು 39ಎ ಯಿಂದ 39ಕೆ ವರೆಗಿನ ಪ್ರಕರಣಗಳನ್ನು ಸಮಿತಿಯ ಸದಸ್ಯರ ಚುನಾವಣೆಗೆ ಸಂಬಂಧಿಸಿದಂತೆ ವ್ಯಾಪಕ ಉಪಬಂಧಗಳನ್ನು ಹೊಂದಿರುವಂತೆ ಸೇರಿಸುವುದು;

(xix) 121ನೇ ಪ್ರಕರಣದ ಉಪಬಂಧವನ್ನು ಬಿಟ್ಟುಬಿಡುವ ಮೂಲಕ ಅದರ ಅಡಿಯಲ್ಲಿ ಸರ್ಕಾರದ ಅಧಿಕಾರಗಳನ್ನು ತೆಗೆದುಹಾಕುವುದು;

(xx) ಮಾದರಿ ಉಪವಿಧಿಗಳನ್ನು ಸೂಚಿಸಲು ಅಧಿಕಾರ ಕೊಡುವುದು.

ಹಾಗೆ ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಕೂಡ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(ಸಂವ್ಯಶಾಇ 16 ಶಾಸನ 97ರ ಕಡತದಿಂದ ಪಡೆಯಲಾಗಿದೆ.)

XX

2000ದ ತಿದ್ದುಪಡಿ ಮಾಡುವ ಅಧಿನಿಯಮ 2.- ವಿವಿಧ ಸಮಿತಿಗಳು ಮಾಡಿದ ಶಿಫಾರಸ್ಸುಗಳು ಮತ್ತು ಪ್ರಮುಖ ಸಹಕಾರಿಗಳು ನೀಡಿದ ಸಲಹೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಮುಂದಿನವುಗಳಿಗಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ,-

(i) ಸಂಘದ ಮತ್ತು ಅದರ ಸದಸ್ಯರ ಹಿತದೃಷ್ಟಿಯಿಂದ ಸಹಕಾರಿ ಸಂಸ್ಥೆಗಳನ್ನು ಆರ್ಥಿಕವಾಗಿ ಸಬಲಗೊಳಿಸುವುದು;

(ii) ಸಹಕಾರ ಸಂಘಗಳ ಅಧಿನಿಯಮದ ಅಡಿಯಲ್ಲಿ ಉದ್ಭವಿಸಿದ ಕೈಗಾರಿಕಾ ವ್ಯಾಜ್ಯದ ಸ್ವರೂಪದ ವ್ಯಾಜ್ಯಗಳನ್ನು ಕೈಗಾರಿಕಾ ನ್ಯಾಯಾಧಿಕರಣಗಳು ಪುರಸ್ಕರಿಸುವುದನ್ನು, ನ್ಯಾಯಾಧಿಕರಣಗಳ ಬಾಹುಳ್ಯವನ್ನು ತಡೆಯುವ ದೃಷ್ಟಿಯಿಂದ ಮತ್ತು ಕೆಲವು ಇತರ ಉದ್ದೇಶಗಳಿಗಾಗಿ ಪ್ರತಿಷೇಧಿಸುವುದು.

ಆದ್ದರಿಂದ ಈ ವಿಧೇಯಕ.

(ವಿ.ಸ. ವಿಧೇಯಕ ಸಂಖ್ಯೆ 1997ರ 20 ರಿಂದ ಪಡೆಯಲಾಗಿದೆ.)

XXI

2000ದ ತಿದ್ದುಪಡಿ ಮಾಡುವ ಅಧಿನಿಯಮ 13.- ತಿದ್ದುಪಡಿಗಳನ್ನು ಒಳಗೊಂಡ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1997ರ ಮೂಲಕ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ಕ್ಕೆ ಈ ಮುಂದಿನವುಗಳೂ ಸೇರಿದಂತೆ ಹಲವಾರು ತಿದ್ದುಪಡಿಗಳನ್ನು ಮಾಡಲಾಗಿದೆ,-

(i) ಸಹಕಾರ ಸಂಘದ ಪದಾಧಿಕಾರಿಗಳ ಮತ್ತು ಅಧ್ಯಕ್ಷ, ಅಧ್ಯಕ್ಷಾಧಿಕಾರಿ, ಉಪಾಧ್ಯಕ್ಷ ಮತ್ತು ಉಪ ಅಧ್ಯಕ್ಷಾಧಿಕಾರಿಗಳ ಚುನಾವಣೆಯಲ್ಲಿ ನಾಮನಿರ್ದೇಶಿತ ಸದಸ್ಯರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು;

(ii) ಸಾರ್ವಜನಿಕ ಹಿತಾಸಕ್ತಿಯಲ್ಲಿ ನಿರ್ದೇಶನ ನೀಡುವ ಅಧಿಕಾರವನ್ನು ಉಪಬಂಧಿಸುವ 30ಬಿ ಪ್ರಕರಣವನ್ನು ಬಿಟ್ಟುಬಿಡುವುದು;

(iii) ಕೆಲವು ಪ್ರಕರಣಗಳಲ್ಲಿ ರಾಜ್ಯ ಸರ್ಕಾರವು ಸಮಿತಿಗೆ ಸದಸ್ಯರನ್ನು ನಾಮನಿರ್ದೇಶಿಸುವುದನ್ನು ಉಪಬಂಧಿಸುವ 53ಎ ಪ್ರಕರಣವನ್ನು ಬಿಟ್ಟುಬಿಡುವುದು.

ತಿದ್ದುಪಡಿ ಮಾಡಿದ ಉಪಬಂಧಗಳನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರಕ್ಕೆ ಹಲವಾರು ಅಡಚಣೆಗಳು ಕಂಡುಬಂದಿವೆ. ಸರ್ಕಾರವು ವಿವಿಧ ಸಹಕಾರ ಸಂಘಗಳಲ್ಲಿ ಷೇರು ಬಂಡವಾಳದ ರೂಪದಲ್ಲಿ, ಸಾಲದ ರೂಪದಲ್ಲಿ ಮತ್ತು ಸಹಾಯಧನದ ರೂಪದಲ್ಲಿ ಭಾರೀ ಮೊತ್ತದ ಹಣವನ್ನು

ಹೂಡಿದೆ. ಅಲ್ಲದೆ, ಸರ್ಕಾರವು ವಿವಿಧ ಸಹಕಾರ ಸಂಸ್ಥೆಗಳಿಂದ ಬರಬೇಕಾಗಿರುವ ಸಾಲ ಮತ್ತು ಬಡ್ಡಿಯ ಮರುಸಂದಾಯಕ್ಕಾಗಿ ಅವುಗಳಿಗೆ ಖಾತರಿ ನೀಡಿದೆ. ಆದ್ದರಿಂದ ಅದು, ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸಲು ಮತ್ತು ಸಹಕಾರ ಸಂಘಗಳ ಷೇರು ಹೂಡಿಕೆದಾರರ ಹಿತಾಸಕ್ತಿಯನ್ನು ರಕ್ಷಿಸಲು ಸರ್ಕಾರವು ಮಧ್ಯಪ್ರವೇಶಿಸುವುದನ್ನು ಸಾಧ್ಯವಾಗಿಸುವ ಒಂದು ಉಪಬಂಧವಿರತಕ್ಕದ್ದೆಂದು ಅಭಿಪ್ರಾಯಪಟ್ಟಿದೆ.

ಆದ್ದರಿಂದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ,-

(i) ನಾಮನಿರ್ದೇಶಿತ ಸದಸ್ಯರು ಸಹಕಾರ ಸಂಘದ ವ್ಯವಸ್ಥಾಪನೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವ ಉದ್ದೇಶಕ್ಕಾಗಿ ಸಮಿತಿಯ ಪದಾಧಿಕಾರಿಗಳು, ಅಧ್ಯಕ್ಷಾಧಿಕಾರಿಗಳು, ಉಪ ಅಧ್ಯಕ್ಷಾಧಿಕಾರಿಗಳು, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಪ್ರದಾನ ಮಾಡುವುದು;

(ii) ಸಾರ್ವಜನಿಕ ಹಿತಾಸಕ್ತಿಯಲ್ಲಿ ನಿರ್ದೇಶನ ನೀಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ 30ಎ ಉಪಬಂಧವನ್ನು ಪುನಃ ಸೇರಿಸುವುದು;

(iii) ರಾಜ್ಯ ಸರ್ಕಾರವು ಗಮನಾರ್ಹ ಹಣಕಾಸು ನೆರವನ್ನು ನೀಡಿರುವ ಸಂದರ್ಭಗಳಲ್ಲಿ ರಾಜ್ಯಸರ್ಕಾರವು ಸಹಕಾರ ಸಂಘದ ಸಮಿತಿಯ ಸದಸ್ಯರ ನಾಮನಿರ್ದೇಶನ ಮಾಡುವುದನ್ನು ಉಪಬಂಧಿಸುವ 52ಎ ಪ್ರಕರಣವನ್ನು ಪುನಃ ಸೇರಿಸುವುದು.

ವಿಷಯವು ತುರ್ತಿನದಾದ್ದರಿಂದ ಮತ್ತು ಕರ್ನಾಟಕ ವಿಧಾನ ಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧ್ಯಾದೇಶ, 2000ನ್ನು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ವಿ.ಸ. ವಿಧೇಯಕ ಸಂಖ್ಯೆ: 2000ರ 13 ರಿಂದ ಪಡೆಯಲಾಗಿದೆ.)

XXII

2001ರ ತಿದ್ದುಪಡಿ ಮಾಡುವ ಅಧಿನಿಯಮ 6.- ಬಜೆಟ್ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೆ ತರುವುದಕ್ಕಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2001ರ ವಿ.ಸ. ವಿಧೇಯಕ ಸಂಖ್ಯೆ 6 ಕಡತ ಸಂಖ್ಯೆ ಸಂವ್ಯಶಾಇ 10 ಶಾಸನ 2001ನ್ನು ನೋಡಿ.)

XXIII

2001ರ ತಿದ್ದುಪಡಿ ಮಾಡುವ ಅಧಿನಿಯಮ 24.- ಸಹಕಾರ ಕ್ಷೇತ್ರದಲ್ಲಿ ಇನ್ನೂ ಉತ್ತಮ ಫಲಿತಾಂಶಗಳನ್ನು ಸಾಧಿಸುವುದಕ್ಕಾಗಿ ಮತ್ತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ, ಈಗ ಇರುವ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಕಂಡುಬಂದ ಕೆಲವು ತೊಂದರೆಗಳನ್ನು ನಿವಾರಿಸುವುದಕ್ಕಾಗಿ, ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ಅಧಿನಿಯಮಕ್ಕೆ ತಿದ್ದುಪಡಿ ತರುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ.-

(1) ``ನೆರವು ಪಡೆದ ಸಂಘ''ದ ಪರಿಭಾಷೆಯನ್ನು, ಸಾಲದ ಅಥವಾ ಅನುದಾನದ ಅಥವಾ ಸಾಲ ಅಥವಾ ಬಡ್ಡಿಯ ಮರುಪಾವತಿಗಾಗಿ ಖಾತರಿಯ ರೂಪದಲ್ಲಿ ನೆರವನ್ನು ಪಡೆಯುವ ಸಂಘಗಳೂ ಒಳಗೊಳ್ಳುವಂತೆ ವಿಸ್ತರಿಸುವುದು.

(2) ಸಹಕಾರ ಲೆಕ್ಕ ಪರಿಶೋಧನೆಯ ನಿರ್ದೇಶಕನಾಗಿ ಒಬ್ಬ ವ್ಯಕ್ತಿಯ ನೇಮಕಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ, ಮೊದಲು ಇದ್ದ ಉಪಬಂಧವನ್ನು ಪುನಃ ಕಲ್ಪಿಸುವುದು.

(3) ಕರ್ನಾಟಕ ಅಪೀಲು ನ್ಯಾಯ ಮಂಡಲಿ ಅಧಿನಿಯಮ, 1976 ರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ದೃಷ್ಟಿಯಲ್ಲಿರಿಸಿಕೊಂಡು, 2ಬಿ ಪ್ರಕರಣವು ಅನಗತ್ಯವಾಗಿರುವುದರಿಂದ ಅದನ್ನು ಬಿಟ್ಟುಬಿಡುವುದು.

(4) ಸಹಕಾರ ಸಂಘಗಳ ಉಪವಿಧಿಗಳ ತಿದ್ದುಪಡಿಯ ಸಂಬಂಧದಲ್ಲಿ ಶುಲ್ಕ ವಿಧಿಸಲು ಉಪಬಂಧ ಕಲ್ಪಿಸುವುದು.

(5) ಸ್ವಸಹಾಯ ಗುಂಪುಗಳಿಗೆ ಸಂಘದ ನಾಮಮಾತ್ರ ಸದಸ್ಯರಾಗಿ ಪ್ರವೇಶ ನೀಡುವುದಕ್ಕೆ ಉಪಬಂಧ ಕಲ್ಪಿಸುವುದು.

(6) ಒಬ್ಬ ವ್ಯಕ್ತಿಯು ಒಂದು ಸಹಕಾರ ಸಂಘದ ಸದಸ್ಯನಾಗಿರುವುದು ಯಾವಾಗ ನಿಂತುಹೋಗತಕ್ಕದ್ದೆಂದು ಸೂಚಿಸುವ ಒಂದು ನಿರ್ದಿಷ್ಟ ಉಪಬಂಧವನ್ನು ಹೊಂದುವುದು.

(7) ಸಂಘದ ಸರ್ವಸದಸ್ಯರ ವಾರ್ಷಿಕ ಸಭೆ ನಡೆಸುವುದನ್ನು ರಿಜಿಸ್ಟ್ರಾರರು ಆರು ತಿಂಗಳಿಗೆ ಮೀರದ ಅವಧಿಯವರೆಗೆ ವಿಸ್ತರಿಸುವುದಕ್ಕಾಗಿ ಅವಕಾಶ ಕಲ್ಪಿಸುವ ಮೊದಲಿದ್ದ ಉಪಬಂಧವನ್ನು ಪುನಃ ಕಲ್ಪಿಸುವುದು.

(8) ಅಪೆಕ್ಸ್ ಸಂಘದ ಒಟ್ಟು ಸದಸ್ಯರ ಸಂಖ್ಯೆಯನ್ನು ಈಗಿರುವ 25 ರಿಂದ 32ಕ್ಕೆ ಹೆಚ್ಚಿಸುವುದಕ್ಕಾಗಿ ಮತ್ತು ಒಂದು ಜಿಲ್ಲೆಯ ವ್ಯಾಪ್ತಿಯನ್ನೂ ಮೀರಿ ಕಾರ್ಯಾಚರಣೆ ಪ್ರದೇಶವನ್ನು ಹೊಂದಿರುವ ನಗರ ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ ಸದಸ್ಯರ ಸಂಖ್ಯೆಯನ್ನು 15ಕ್ಕೆ ಹೆಚ್ಚಿಸುವುದು.

(9) ಸಮಿತಿಯ ಸದಸ್ಯರ ಪದಾವಧಿಯನ್ನು ಈಗ ಇರುವ ಐದು ಸಹಕಾರ ವರ್ಷಗಳಿಂದ ಮೂರು ಸಹಕಾರ ವರ್ಷಗಳಿಗೆ ಇಳಿಸುವುದು.

(10) ನಾಮನಿರ್ದೇಶಿತ ಸದಸ್ಯರು, ಒಂದು ಪ್ರಾಥಮಿಕ ಸಹಕಾರ ಸಂಘದ ಮತ್ತು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ಇತರ ವರ್ಗದ ಅಥವಾ ವರ್ಗಗಳ ಪದಾಧಿಕಾರಿಗಳಾಗುವುದಕ್ಕೆ ಅಧಿಕಾರ ಹೊಂದಿರತಕ್ಕದ್ದಲ್ಲವೆಂಬ ಬಗ್ಗೆ ಮತ್ತು ಹಾಗೆ ನಾಮನಿರ್ದೇಶಿತರಾದ ಸದಸ್ಯರು ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದೆಂಬ ಬಗ್ಗೆ ಉಪಬಂಧ ಕಲ್ಪಿಸುವುದು.

(11) ಜಿಲ್ಲಾ ಕೇಂದ್ರೀಯ ಸಂಘದ ಅಥವಾ ಒಂದು ಸಂಯುಕ್ತ ಸಂಘದ ಅಥವಾ ಒಂದು ಅಪೆಕ್ಸ್ ಸಂಘದ ಸಮಿತಿಯಲ್ಲಿ ಒಂದು ಸಹಕಾರ ಸಂಘವನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿಯು ಯಾವ ಕೆಲವು ಸಂದರ್ಭಗಳಲ್ಲಿ ಅನರ್ಹತೆಗೊಳಗಾಗುವನೆಂಬ ಬಗ್ಗೆ ಉಪಬಂಧ ಕಲ್ಪಿಸುವುದು.

(12) ಪದಾಧಿಕಾರಿಗಳ ಪದಾವಧಿಯನ್ನು ಈಗ ಇರುವ ಎರಡೂವರೆ ವರ್ಷಗಳಿಂದ ಒಂದು ವರ್ಷಕ್ಕೆ ಇಳಿಸುವುದು.

(13) ಸರ್ಕಾರವು ಅಥವಾ ರಿಜಿಸ್ಟ್ರಾರ್‌ನು ನೆರವುಪಡೆದ ಸಂಘದ ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡುವುದಕ್ಕಾಗಿ ಮತ್ತು ತೆಗೆದುಹಾಕುವುದಕ್ಕಾಗಿ ಉಪಬಂಧ ಕಲ್ಪಿಸುವುದು.

(14) 30ಬಿ ಪ್ರಕರಣದ ಅಡಿಯಲ್ಲಿ ನೀಡಲಾದ ಯಾವುದೇ ನಿರ್ದೇಶನದ ಉಲಂಘನೆಯ ಸಂದರ್ಭದಲ್ಲಿ ಸಹ ಒಂದು ಸಮಿತಿಯ ರದ್ದಿಯಾತಿಗಾಗಿ ಉಪಬಂಧ ಕಲ್ಪಿಸುವುದು ಮತ್ತು ಆಡಳಿತಗಾರನ ನೇಮಕಾತಿಯ ಅವಧಿಯನ್ನು ಒಟ್ಟಾರೆ ಒಂದು ವರ್ಷದವರೆಗೆ ಮತ್ತಷ್ಟು ವಿಸ್ತರಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು.

(15) ರಿಜಿಸ್ಟ್ರಾರನು ಸಲ್ಲಿಸಿದ ಒಂದು ವರದಿಯ ಮೇಲೆ ರಾಜ್ಯ ಸರ್ಕಾರವು ಒಂದು ಸಂಘಕ್ಕೆ ಒಬ್ಬ ವಿಶೇಷಾಧಿಕಾರಿಯನ್ನು ನೇಮಕ ಮಾಡುವುದಕ್ಕಾಗಿ ಹಿಂದೆ ಇದ್ದ ಉಪಬಂಧವನ್ನು ಪುನಃ ಕಲ್ಪಿಸುವುದು.

(16) 31ನೇ ಪ್ರಕರಣದ ಅಡಿಯಲ್ಲಿ ಒಬ್ಬ ವಿಶೇಷಾಧಿಕಾರಿಯ ನೇಮಕದ ಅವಧಿಯನ್ನು ಒಟ್ಟಾರೆ ಒಂದು ವರ್ಷದ ಅವಧಿಯವರೆಗೆ ಮತ್ತಷ್ಟು ವಿಸ್ತರಿಸಲು ರಿಜಿಸ್ಟ್ರಾರನಿಗೆ ಅಧಿಕಾರ ನೀಡುವುದು.

(17) ನೈಸರ್ಗಿಕ ವಿಕೋಪಗಳು, ಮುಂತಾದವುಗಳ ಸಂದರ್ಭದಲ್ಲಿ ಸಹಕಾರ ಸಂಘಗಳ ಚುನಾವಣೆಯನ್ನು ಮುಂದೂಡುವುದಕ್ಕೆ ಉಪಬಂಧ ಕಲ್ಪಿಸುವುದು.

(18) ಸಹಕಾರ ಲೆಕ್ಕ ಪರಿಶೋಧನೆಯ ನಿರ್ದೇಶಕರು ಎಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಯ ವ್ಯವಸ್ಥೆ ಮಾಡಬೇಕೆಂಬುದಾಗಿ ಹಿಂದೆ ಇದ್ದ ಉಪಬಂಧವನ್ನು ಪುನಃ ಕಲ್ಪಿಸುವುದು.

(19) ಸರ್ಕಾರದ ನಾಮನಿರ್ದೇಶಿತರ ಮತ್ತು ಪದನಿಮಿತ್ತ ಸದಸ್ಯರ ಸಂಬಂಧದಲ್ಲಿ ಅಧಿಭಾರ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕಾಗಿ ಸ್ಪಷ್ಟ ಉಪಬಂಧ ಕಲ್ಪಿಸುವುದು.

(20) ಅಧಿನಿಯಮದ ಉಪಬಂಧಗಳು 30ಎ ಪ್ರಕರಣಕ್ಕೆ ಅನ್ವಯವಾಗತಕ್ಕದ್ದಲ್ಲವೆಂಬ ಮಾರ್ಪಾಟಿಗೆ ಒಳಪಟ್ಟು ಅವುಗಳ ಅನ್ವಯಿಕೆಯಿಂದ ಸಂಘಗಳಿಗೆ ವಿನಾಯಿತಿ ನೀಡುವ ಬಗ್ಗೆ ಈ ಹಿಂದೆ ಇದ್ದ ಉಪಬಂಧವನ್ನು ಪುನಃ ಕಲ್ಪಿಸುವುದು.

(21) ಮುಖ್ಯ ಕಾರ್ಯನಿರ್ವಾಹಕನು ನಿರ್ಣಯ ಅಥವಾ ಆದೇಶದ ಪ್ರತಿಗಳನ್ನು ರಿಜಿಸ್ಟ್ರಾರನಿಗೆ ಸಲ್ಲಿಸುವುದಕ್ಕಾಗಿ ಮತ್ತು ಕೆಲವು ಸಂದರ್ಭಗಳಲ್ಲಿ ನಿರ್ಣಯ ಅಥವಾ ಆದೇಶವನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಅಥವಾ ರದ್ದು ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವುದು.

ಕೆಲವು ಆನುಷಂಗಿಕ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ದ ವಿ.ಸ. ವಿಧೇಯಕ ಸಂಖ್ಯೆ 32, ಕಡತ ಸಂಖ್ಯೆ: ಸಂವ್ಯಶಾಇ 37 ಶಾಸನ 2000 ವನ್ನು ನೋಡಿ.)

XXIV

2004ರ ತಿದ್ದುಪಡಿ ಮಾಡುವ ಅಧಿನಿಯಮ 13.- ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:-

i) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಡಿಯಲ್ಲಿ ಸಹಕಾರಿಯನ್ನು ಸಹಕಾರ ಸಂಘವಾಗಿ ಪರಿವರ್ತಿಸುವುದು;

ii) ವ್ಯಕ್ತಿಗಳಿಗೆ ಇರುವಂತೆಯೇ ಸಹಕಾರಿ ಸಂಘಗಳಿಗೂ ಅವು ಪ್ರವೇಶ ಪಡೆದ 12 ತಿಂಗಳುಗಳ ನಂತರ ಮತ ಚಲಾಯಿಸುವ ಅಧಿಕಾರ ನೀಡುವುದು;

iii) 26ಎ ಮತ್ತು 26ಬಿ ಪ್ರಕರಣದ ಅಡಿಯಲ್ಲಿ, ಸಹಕಾರ ಬ್ಯಾಂಕಿನ ಸಂಬಂಧದಲ್ಲಿ Š ಭಾರತದ ರಿಸರ್ವ್ ಬ್ಯಾಂಕಿನ ಪೂರ್ವ ಮಂಜೂರಾತಿಯನ್ನು ಪಡೆಯುವುದು;

iv) ಸಮಿತಿಯು ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ನಡೆಸಲು ವಿಫಲವಾದಲ್ಲಿ ರಿಜಿಸ್ಟ್ರಾರನು ಮಹಾಸಭೆಯನ್ನು ನಡೆಸುವುದು;

v) ಒಂದುಗೂಡಿದ ಅಥವಾ ಮಾನ್ಯತೆ ಪಡೆದ ಅಥವಾ ವಿಭಾಗದ ನಂತರ ರಚನೆಯಾದ ಸಹಕಾರ ಸಂಘದ ಅಥವಾ ಸಹಕಾರಿಗಳ ನೋಂದಣಿಯ ದಿನಾಂಕದಿಂದ ಮೂರು ತಿಂಗಳುಗಳ ಒಳಗಾಗಿ ಚುನಾವಣೆಯನ್ನು ನಡೆಸತಕ್ಕದೆಂದು ಮತ್ತು ಸದರಿ ಮೂರು ತಿಂಗಳುಗಳ ಅವಧಿಗಾಗಿ ಆಡಳಿತಾಧಿಕಾರಿಯನ್ನು ನೇಮಿಸತಕ್ಕದ್ದೆಂದು ಉಪಬಂಧಿಸುವುದು;

vi) 30, 31, 59 ಮತ್ತು 64ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ರಿಜಿಸ್ಟ್ರಾರನಲ್ಲಿ ನಿಹಿತಗೊಳಿಸುವುದು;

vii) 12, 17, 31ನೇ ಪ್ರಕರಣಗಳ ಅಡಿಯಲ್ಲಿಯ ರಿಜಿಸ್ಟ್ರಾರನ ಆದೇಶಗಳ ವಿರುದ್ಧ ಅಪೀಲುಗಳಿಗೆ ಉಪಬಂಧ ಕಲ್ಪಿಸುವುದು;

viii) ಲೆಕ್ಕ ಪರಿಶೋಧನೆಗೆ ಸಂಬಂಧಿಸಿದ ಅಪರಾಧಗಳ ಬಗ್ಗೆ ರಾಜಿ ಮಾಡಿಕೊಳ್ಳಲು ಅಧಿಕಾರವನ್ನು ಸಹಕಾರಿ ಲೆಕ್ಕ ಪರಿಶೋಧನಾ ನಿರ್ದೇಶಕರಲ್ಲಿ ನಿಹಿತಗೊಳಿಸುವುದು.

ಮತ್ತು ಸನ್ಮಾನ್ಯ ಉಚ್ಚ ನ್ಯಾಯಾಲಯವು ರಿ.ಅ. ಸಂಖ್ಯೆ: 1899-1912/2001 ರಲ್ಲಿ ಮತ್ತು ರಿಟ್ ಅರ್ಜಿ ಸಂಖ್ಯೆ: 21461/1999 ರಲ್ಲಿ ನೀಡಿದ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2004ರ ವಿಧಾನಸಭೆಯ ವಿಧೇಯಕ 1 ರಿಂದ ಪಡೆಯಲಾಗಿದೆ).

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ ನಮೂದು 32)

XXV

2010ರ ತಿದ್ದುಪಡಿ ಮಾಡುವ ಅಧಿನಿಯಮ 06.- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರಲ್ಲಿಯ ನಿರ್ಬಂಧಕ ಉಪಬಂಧಗಳನ್ನು ತೆಗೆದುಹಾಕಿ, ಸಹಕಾರ ಸಂಘಗಳು ಪಾರದರ್ಶಕ, ಜವಾಬ್ದಾರಿಯುತ, ಸಂಪ್ರದಿಸುವ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಈ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ಸಲಹೆ ಮಾಡಲು ಕರ್ನಾಟಕ ಸರ್ಕಾರವು 27.05.2005ರಂದು, ಈ ಮುಂದಿನ ಮೂರು ಸದಸ್ಯರನ್ನೊಳಗೊಂಡ ಸಮಿತಿಯನ್ನು ನೇಮಿಸಿತು.

1) ಶ್ರೀ ಬಿ.ಎಸ್. ವಿಶ್ವನಾಥನ್, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು ಲಿಮಿಟೆಡ್, ಬೆಂಗಳೂರು - ಇದರ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು;

2) ಶ್ರೀ ಎಂ.ಸಿ. ನಾಣಯ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಾಜಿ ಸಚಿವರು;

3) ಶ್ರೀ ಶಿವಾನಂದ ಪಾಟೀಲ್, ಸಮಿತಿಯ ಕಾರ್ಯದರ್ಶಿಯಾಗಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ದೊಂದಿಗೆ ಅಧ್ಯಕ್ಷರು, ಡಿ.ಸಿ.ಸಿ. ಬ್ಯಾಂಕ್ ಲಿಮಿಟೆಡ್, ಬಿಜಾಪುರ. ಸದರಿ ಸಮಿತಿಯು ರಾಜ್ಯದಾದ್ಯಂತ ಪ್ರವಾಸ ಮಾಡಿ ಸಹಕಾರಿ ಸಂಘಗಳೊಡನೆ ಮತ್ತು ಸಹಕಾರಿಗಳೊಂದಿಗೆ ಸಂವಾದ ಸಮಲೋಚನೆ ನಡೆಸಿತು. ಸಮಿತಿಯು ಕೆಲವು ರಾಜ್ಯಗಳನ್ನು ಸಹಾ ಸಂದರ್ಶಿಸಿತು. ಸಮಿತಿಯು 2006ರ ಫೆಬ್ರುವರಿಯಲ್ಲಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆ.

ಭಾರತ ಸರ್ಕಾರವು, ದೇಶದಲ್ಲಿ, ಅಲ್ಪಾವಧಿ ಸಹಕಾರಿ ಪತ್ತಿನ ವ್ಯವಸ್ಥೆಯ (ರಚನೆಯ) ಪುನಶ್ಚೇತನ ಕ್ರಮಗಳನ್ನು ಸಲಹೆ ಮಾಡುವುದಕ್ಕಾಗಿ ಪ್ರೊ. ಎ. ವೈದ್ಯನಾಥನ್ ರವರ ಅಧ್ಯಕ್ಷತೆಯಲ್ಲಿ 05.08.2004ರಂದು ಕಾರ್ಯಪಡೆಯನ್ನು ಸಹಾ ನೇಮಿಸಿತು. ಸದರಿ ಕಾರ್ಯಪಡೆಯು, ರಾಷ್ಟ್ರಾದ್ಯಂತ ಪ್ರವಾಸ ಕೈಗೊಂಡು, ಸಹಕಾರಿ ಸಂಘಗಳು ಮತ್ತು ಸಹಕಾರಿಗಳೊಡನೆ ಸಂವಾದ ಸಮಾಲೋಚನೆ ನಡೆಸಿ ರಾಷ್ಟ್ರದಲ್ಲಿ ಅಲ್ಪಾವಧಿ ಸಹಕಾರಿ ಪತ್ತಿನ ವ್ಯವಸ್ಥೆಯ ವಿಮರ್ಶಾತ್ಮಕ ಅಧ್ಯಯನ ಮಾಡಿ, 04.02.2005ರಂದು ಭಾರತ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ತರುವಾಯ ಭಾರತ ಸರ್ಕಾರವು, ರಾಜ್ಯ ಸರ್ಕಾರಗಳ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿ ಪ್ರೊ. ಎ. ವೈದ್ಯನಾಥನ್ ಶಿಫಾರಸ್ಸುಗಳ ಆಧಾರದ ಮೇಲೆ ಹಾಗೂ ರಾಜ್ಯ ಸರ್ಕಾರಗಳ ಅಭಿಪ್ರಾಯಗಳನ್ನು ಪರಿಗಣಿಸಿ ಅಲ್ಪಾವಧಿ ಪತ್ತಿನ ಸಹಕಾರಿ ವ್ಯವಸ್ಥೆಗೆ ನವಚೇತನ ತುಂಬುವಂಥ ಪುನಶ್ಚೇತನ ಪ್ಯಾಕೆಜನ್ನು ರೂಪಿಸಿ 2006ರ ಜನವರಿಯಲ್ಲಿ ರಾಜ್ಯಗಳಿಗೆ ಈ ಪ್ಯಾಕೇಜಿನ ಬಗ್ಗೆ ತಿಳಿಸಿತು.

ಕರ್ನಾಟಕ ಸರ್ಕಾರವು, ಪುನಶ್ಚೇತನ ಪ್ಯಾಕೇಜನ್ನು ಒಪ್ಪಿಕೊಂಡು 25.03.2008ರಂದು ಭಾರತ ಸರ್ಕಾರ ಮತ್ತು ನಬಾರ್ಡ್‌ನೊಂದಿಗೆ ತ್ರಿಪಕ್ಷೀಯ ಒಪ್ಪಂದ ಪತ್ರಕ್ಕೆ ಸಹಿ ಹಾಕಿತು. ಸದರಿ ಒಪ್ಪಂದ ಪತ್ರವು, ಸಹಕಾರ ಸಂಘಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಿ ಆರ್‌ಬಿಐ/ನಬಾರ್ಡ್‌ಗೆ ಕೆಲವು ಅಧಿಕಾರಗಳನ್ನು ನಿಹಿತಗೊಳಿಸಿರುವುದನ್ನು ಸ್ಪಷ್ಟಪಡಿಸಿತು. ಪ್ಯಾಕೇಜಿನಡಿಯಲ್ಲಿ ನಬಾರ್ಡ್ ಮೂಲಕವಾಗಿ ಭಾರತ ಸರ್ಕಾರವು ಹಣಕಾಸಿನ ನೆರವನ್ನು ಬಿಡುಗಡೆಗೊಳಿಸುವ ಮುಂಚೆ ತದನುಸಾರವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ಕ್ಕೆ ತಿದ್ದುಪಡಿ ಮಾಡಬೇಕೆಂಬುದು ಒಪ್ಪಂದ ಪತ್ರದಲ್ಲಿಯ ಪೂರ್ವಷರತ್ತಾಗಿದೆ.

ಶ್ರೀ ಬಿ.ಎಸ್. ವಿಶ್ವನಾಥನ್ ಸಮಿತಿಯ ವರದಿ ಶಿಫಾರಸ್ಸುಗಳ ಮತ್ತು 25.03.2008ರಂದು ಭಾರತ ಸರ್ಕಾರದೊಂದಿಗೆ ಸಹಿಮಾಡಲಾದ ಒಪ್ಪಂದ ಪತ್ರದ ಹಾಗೂ ಆಡಳಿತಾತ್ಮಕ ಅಗತ್ಯತೆಗಳ

ಹಿನ್ನಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ಈ ಮುಂದಿನಂತೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

1) 2ನೇ ಪ್ರಕರಣ.- 'ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್', 'ಹಿಂದುಳಿದ ವರ್ಗ', 'ಸಹಕಾರ ಪತ್ತಿನ ವ್ಯವಸ್ಥೆ', 'ಕೇಂದ್ರ ಸಹಕಾರ ಬ್ಯಾಂಕ್', 'ಚಾರ್ಟರ್ಡ್ ಅಕೌಟೆಂಟ್', 'ವಿವಿಧೋದ್ದೇಶ ಸಹಕಾರ ಸಂಘ', 'ರಾಷ್ಟ್ರೀಯ ಬ್ಯಾಂಕ್', 'ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ', 'ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್' ಹಾಗೂ 'ರಾಜ್ಯ ಸಹಕಾರ ಬ್ಯಾಂಕ್' ಇವುಗಳ ಪರಿಭಾಷೆಗಳನ್ನು ಸೇರಿಸಲು ಪ್ರಸ್ತಾವಿಸಲಾಗಿದೆ. 'ಸಹಾಯ ಪಡೆದ ಸಂಘ' ಎಂಬ ಪರಿಭಾಷೆಯಲ್ಲಿ 'ಸರ್ಕಾರದ' ಎಂಬ ಪದಕ್ಕೆ 'ಸರ್ಕಾರದ ಅಥವಾ ರಾಜ್ಯದ' ಎಂಬ ಪದಗಳನ್ನು ಪ್ರತಿಯೋಜಿಸಲು ಪ್ರಸ್ತಾವಿಸಲಾಗಿದೆ.

2) 12ನೇ ಪ್ರಕರಣ.- 'ಅಂಥ ಸಹಕಾರ ಸಂಘದ ಹಿತಾದೃಷ್ಟಿಯಲ್ಲಿ ಅಥವಾ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಜಾರಿಗೊಳಿಸಲು' ಎಂಬ ಪದಗಳನ್ನು 'ಸಹಕಾರ ಸಂಘದ ಹಿತದೃಷ್ಟಿಯಲ್ಲಿ' ಎಂಬ ಪದಗಳ ತರುವಾಯ ಸೇರಿಸುವ ಮೂಲಕ ಸ್ಪಷ್ಟಪಡಿಸಲು 12ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

3) 16ನೇ ಪ್ರಕರಣ.-, ಸಹಕಾರ ಸಂಘದ ಪುನಶ್ಚೇತನ ಪ್ಯಾಕೇಜನ್ನು ಹಿನ್ನಲೆಯಲ್ಲಿ 'ಠೇವಣಿದಾರ ಅಥವಾ ಸ್ವಸಹಾಯ ಗುಂಪು' ಇವರುಗಳನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಸಾಧ್ಯವಾಗುವಂತೆ ಮಾಡಲು 16ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

4) 20ನೇ ಪ್ರಕರಣ.- 'ವ್ಯವಹಾರಗಳು' ಎಂಬುದನ್ನು 'ಮಹಾಸಭೆಯಲ್ಲಿ ಅಥವಾ ಸಮಿತಿಯ ಸದಸ್ಯರ ಚುನಾವಣೆಯಲ್ಲಿ' ಎಂಬುದಾಗಿ ಸ್ಪಷ್ಟೀಕರಿಸಲು 20ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

5) 21ನೇ ಪ್ರಕರಣ.- 'ಮಹಾಸಭೆಯಲ್ಲಿ ಅಥವಾ ಸಮಿತಿಯ ಸದಸ್ಯರ ಚುನಾವಣೆಯಲ್ಲಿ' ಎಂಬ ಪದಗಳನ್ನು ಸೇರಿಸುವ ಮೂಲಕ ಮತ್ತು 'ಒಂದು ಫರ್ಮು' ಎಂಬ ಪದಗಳ ತರುವಾಯ, ಅಥವಾ ಒಂದು 'ಸ್ವಸಹಾಯ ಗುಂಪು' ಎಂಬ ಪದಗಳನ್ನು ಸೇರಿಸುವ ಮೂಲಕ 'ಸ್ವಸಹಾಯ ಗುಂಪು' ತನ್ನ ಪ್ರತಿನಿಧಿಯನ್ನು ಕಳುಹಿಸಲು ಅನುವು ಮಾಡಿಕೊಡಲು 21ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

6) 28ಎ ಪ್ರಕರಣ.- ಆಡಳಿತಾಧಿಕಾರಿಯನ್ನು ಯಾವಾಗ ನೇಮಕ ಮಾಡಬೇಕು ಎಂಬುದನ್ನು ಸ್ಪಷ್ಟೀಕರಿಸಲು 28ಎ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

7) 28ಬಿ ಪ್ರಕರಣ.- 'ಸಹಕಾರ ಪತ್ತಿನ ರಚನೆಯಲ್ಲಿಯ ಸಂಘದ ಸಂಬಂಧದಲ್ಲಿ' ನೇಮಕಗೊಂಡ ಆಡಳಿತಗಾರನ ಅವಧಿಯು ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯನ್ನು ಮೀರತಕ್ಕದ್ದಲ್ಲ ಎಂಬುದನ್ನು ನಿರ್ದಿಷ್ಟಪಡಿಸಲು 28ಬಿ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

8) 29ನೇ ಪ್ರಕರಣ.- ಸರ್ಕಾರದ ನಾಮನಿರ್ದೇಶಿತನ ಕರ್ತವ್ಯಗಳನ್ನು ಹೇಳಲು 29ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

9) 29ಎ ಪ್ರಕರಣ.- 'ಚುನಾಯಿತ' ಎಂಬ ಪದಗಳನ್ನು ಬಿಟ್ಟುಬಿಡುವ ಮೂಲಕ ಸಮಿತಿಯ ಸದಸ್ಯರ ಪದಾವಧಿಯನ್ನು ಸ್ಪಷ್ಟಪಡಿಸಲು 29ಎ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

10) 29ಸಿ ಪ್ರಕರಣ.- ಈ ಖಂಡದಲ್ಲಿ ನಮೂದಿಸಲಾದ ಅನರ್ಹತೆಗಳನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅನ್ವಯವಾಗತಕ್ಕದ್ದಲ್ಲವೆಂದು 29ಸಿ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

11) 29ಎಫ್ ಪ್ರಕರಣ.- ಪದಾಧಿಕಾರಿಗಳ ಚುನಾವಣೆಯ ಉದ್ದೇಶಕ್ಕಾಗಿ ನಡೆಸಿದ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಮತ ಚಲಾಯಿಸಲು ಹಕ್ಕನ್ನು ಹೊಂದಿರತಕ್ಕದ್ದಲ್ಲ ಎಂಬುದನ್ನು ಗೊತ್ತುಪಡಿಸಲು 29ಎಫ್ ಪ್ರಕರಣವನ್ನು ಪ್ರಸ್ತಾವಿಸಲಾಗಿದೆ.

12) 29ಜಿ ಪ್ರಕರಣ.- ಪುನಶ್ಚೇತನ ಪ್ಯಾಕೇಜಿನ ಹಿನ್ನೆಲೆಯಲ್ಲಿ, ಸಹಕಾರ ಪತ್ತಿನ ರಚನೆಯಲ್ಲಿನ ಸಂಘವು ತನ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಕ ಮಾಡಿಕೊಳ್ಳಲು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಸಮಿತಿಯ ಸದಸ್ಯನಾಗಲು ಅನುವಾಗುವಂತೆ 29ಜಿ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

13) 30ನೇ ಪ್ರಕರಣ.- ಪುನಶ್ಚೇತನ ಪ್ಯಾಕೇಜಿನ ಹಿನ್ನಲೆಯಲ್ಲಿ 30ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

14) 31ನೇ ಪ್ರಕರಣ.- 'ಅಥವಾ ಯಾವುದೇ ಇತರ ಕಾರಣದಿಂದ' ಎಂಬ ಪದಗಳನ್ನು ಬಿಟ್ಟುಬಿಡುವ ಮೂಲಕ ಕೋರಂ ಇಲ್ಲದ ಸನ್ನಿವೇಶದಲ್ಲಿ ವಿಶೇಷಾಧಿಕಾರಿಯ ನೇಮಕ ಮಾಡುವ ಅಧಿಕಾರವನ್ನು ಸೀಮಿತಗೊಳಿಸುವಂತೆ ಮಾಡಲು ಹಾಗೂ ಸಹಕಾರಿ ಪತ್ತಿನ ರಚನೆಯಲ್ಲಿಯ ಸಂಘದ ಸಂಬಂಧದಲ್ಲಿ ವಿಶೇಷಾಧಿಕಾರಿಯ ಪದಾವಧಿಯು ಮೂರು ತಿಂಗಳುಗಳಿಗೆ ಮೀರದಂತೆ ಗೊತ್ತುಪಡಿಸಲು 31ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

15) 39ಎ ಪ್ರಕರಣ.- ಸಹಕಾರ ಪತ್ತಿನ ರಚನೆಯಲ್ಲಿಯ ಸಂಘದ ಚುನಾವಣೆಗಳನ್ನು ರಾಜ್ಯ ಸರ್ಕಾರವು ಮೂರು ತಿಂಗಳುಗಳನ್ನು ಮೀರುವ ಅವಧಿಯವರೆಗೆ ಮುಂದೂಡತಕ್ಕದ್ದಲ್ಲ ಎಂಬುದನ್ನು ಗೊತ್ತುಪಡಿಸಲು 39ಎ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

16) 54ನೇ ಪ್ರಕರಣ.- ಒಪ್ಪಂದದ ಪತ್ರದ ಹಿನ್ನೆಲೆಯಲ್ಲಿ 54ನೇ ಪ್ರಕರಣವನ್ನು ಬಿಟ್ಟುಬಿಡಲು ಪ್ರಸ್ತಾವಿಸಲಾಗಿದೆ.

17) 56ನೇ ಪ್ರಕರಣ.- ಸಹಕಾರ ಸಂಘದ ನಿಧಿಗಳನ್ನು ಸಂಗ್ರಹಿಸುವ ವಿಧಾನವನ್ನು ತಿಳಿಸಲು ಮತ್ತು ಸಮಿತಿಯ ಸದಸ್ಯರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಇತರ ಭತ್ಯೆಗಳನ್ನು ಸಂದಾಯ ಮಾಡಲು ಉಪವಿಧಿಯಲ್ಲಿ ನಿರ್ದಿಷ್ಟಪಡಿಸಲು 56ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

18) 58ನೇ ಪ್ರಕರಣ.- ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಅನುಸಾರವಾಗಿ, ರಿಸರ್ವ್ ಬ್ಯಾಂಕಿನ ನಿಯಂತ್ರಣದಲ್ಲಿರುವ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಹಣಕಾಸು ಸಂಸ್ಥೆಯಲ್ಲಿ ಸಹಕಾರ ಬ್ಯಾಂಕು ತನ್ನ ನಿಧಿಗಳನ್ನು ಹೂಡಲು ಸಾಧ್ಯವಾಗುವಂತೆ 58ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

19) 59ನೇ ಪ್ರಕರಣ.- ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಸಹಕಾರ ಸಂಘವು ಪಡೆದುಕೊಳ್ಳಬೇಕಾದ ಠೇವಣಿಗಳ ಮತ್ತು ಸಾಲಗಳ ಮಿತಿ ಸಂಬಂಧದಲ್ಲಿ ಉಪಬಂಧ ಕಲ್ಪಿಸಲು 59ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

20) 60ನೇ ಪ್ರಕರಣ.- ರಿಜಿಸ್ಟ್ರಾರರ ಮಂಜೂರಾತಿಯಿಲ್ಲದೆ ಸಹಕಾರ ಸಂಘವು, ಇನ್ನೊಂದು ಸಹಕಾರ ಸಂಘಕ್ಕೆ ಸಾಲಗಳನ್ನು ಒದಗಿಸಲು ಸಾಧ್ಯವಾಗುವಂತೆ ಮಾಡಲು 60ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

21) 63ನೇ ಪ್ರಕರಣ.- ಪ್ರತಿಯೊಂದು ಸಹಕಾರ ಸಂಘವು ತನ್ನ ಲೆಕ್ಕಪತ್ರಗಳನ್ನು ಪ್ರತಿವರ್ಷದಲ್ಲಿ ಲೆಕ್ಕ ಪರಿಶೋಧನೆಯನ್ನು ಮಾಡಿಸುವುದನ್ನು ಕಡ್ಡಾಯಗೊಳಿಸುವುದಕ್ಕಾಗಿ ಮತ್ತು ಲೆಕ್ಕ ಪರಿಶೋಧನೆಯ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಾಗಿ 63ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

22) 64ನೇ ಪ್ರಕರಣ.- ಸಹಕಾರ ಸಂಘಕ್ಕೆ ವಿಚಾರಣಾ ವರದಿಯ ಪ್ರತಿಯು ದೊರಕುವಂತೆ ಮಾಡಲು ಮತ್ತು ಸಂಘವು ಮೂರು ತಿಂಗಳೊಳಗಾಗಿ ಅದರ ಮೇಲೆ ಕೈಗೊಂಡ ಕ್ರಮವನ್ನು ರಿಜಿಸ್ಟ್ರಾರನಿಗೆ ತಿಳಿಸಲು ಸಾಧ್ಯವಾಗುವಂತೆ 64ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

23) 65ನೇ ಪ್ರಕರಣ.- ಸಹಕಾರ ಸಂಘವು ಪರಿಶೀಲನಾ ವರದಿಯ ಪ್ರತಿಯನ್ನು ಪಡೆಯಲು ಮತ್ತು ಸಂಘವು ಮೂರು ತಿಂಗಳೊಳಗಾಗಿ ಅದರ ಮೇಲೆ ಕೈಗೊಂಡ ಕ್ರಮವನ್ನು ರಿಜಿಸ್ಟ್ರಾರನಿಗೆ ತಿಳಿಸಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ 65ನೇ ಪ್ರಕರಣವನ್ನು , ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

24) 69ನೇ ಪ್ರಕರಣ.- ಅರ್ಜಿಯನ್ನು ಆರು ತಿಂಗಳು ಆದರೆ ಹನ್ನೆರಡು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯೊಳಗೆ, ತೀರ್ಮಾನಿಸತಕ್ಕದೆಂದು ಗೊತ್ತುಪಡಿಸಲು 69ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

25) 70ನೇ ಪ್ರಕರಣ.- 'ಕಾರ್ಯದರ್ಶಿ, ಖಜಾಂಚಿ' ಇವರು ಸವೇತನಾ ನೌಕರರಾಗಿರುವುದರಿಂದ 'ಕಾರ್ಯದರ್ಶಿ, ಖಜಾಂಚಿ' ಎಂಬ ಪದಗಳಿಗೆ 'ಅಥವಾ ಇತರ ಯಾವೊಬ್ಬ ಪದಾಧಿಕಾರಿ' ಎಂಬ ಪದಗಳನ್ನು ಪ್ರತಿಯೋಜಿಸಲು 70ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

26) 70ಎ ಪ್ರಕರಣ.- ಒಬ್ಬ ನೌಕರನ ವಿರುದ್ಧ ಶಿಸ್ತು ಕ್ರಮಕ್ಕೆ ಅಥವಾ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ವಿವಾದವನ್ನು ವ್ಯಾಜ್ಯ ಕಾರಣದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ದಾಖಲು ಮಾಡುವುದಕ್ಕಾಗಿ ಗೊತ್ತುಪಡಿಸಲು 70ಎ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

27) 71ನೇ ಪ್ರಕರಣ.- ವಿವಾದಗಳನ್ನು ಆರು ತಿಂಗಳೊಳಗೆ ಆದರೆ ಹನ್ನೆರಡು ತಿಂಗಳುವರೆಗೆ ವಿಸ್ತರಿಸಬಹುದಾದಂಥ ಅವಧಿಯೊಳಗೆ ತೀರ್ಮಾನಿಸತಕ್ಕದ್ದೆಂದು ಗೊತ್ತುಪಡಿಸಲು 71ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

28) 76ನೇ ಪ್ರಕರಣ.- (ಬಿ) ಮತ್ತು (ಸಿ) ಖಂಡಗಳನ್ನು 2ನೇ ಪ್ರಕರಣದಲ್ಲಿ ಸೇರಿಸಿರುವುದರಿಂದ, ಅವುಗಳನ್ನು ಬಿಟ್ಟುಬಿಡಲು 76ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

29) 98ಎ ದಿಂದ 98ವೈ ವರೆಗಿನ ಪ್ರಕರಣಗಳು.- ಸಹಕಾರ ಪತ್ತಿನ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವುದಕ್ಕಾಗಿ, ಭಾರತ ಸರ್ಕಾರ ಮತ್ತು ನಬಾರ್ಡ್‌ನೊಡನೆ ಸಹಿ ಮಾಡಲಾದ ಒಪ್ಪಂದ ಪತ್ರದಲ್ಲಿ ತಿಳಿಸಲಾಗಿರುವಂತೆ ಸಹಕಾರ ಪತ್ತಿನ ವ್ಯವಸ್ಥೆಯಲ್ಲಿಯ ಸಂಘಗಳಿಗೆ ಅನ್ವಯವಾಗುವ ವಿಶೇಷ ಉಪಬಂಧಗಳಿಗಾಗಿ ಒಂದು ಪ್ರತ್ಯೇಕ ಅಧ್ಯಾಯವನ್ನು ಸೇರಿಸಲು ಪ್ರಸ್ತಾವಿಸಲಾಗಿದೆ.

30) 100ನೇ ಪ್ರಕರಣ.- ಪುನಶ್ಚೇತನ ಪ್ಯಾಕೇಜಿನ ಹಿನ್ನೆಲೆಯಲ್ಲಿ, ರಿಜಿಸ್ಟ್ರಾರನ ಅನುಮೋದನೆಯನ್ನು ಬಿಟ್ಟುಬಿಡಲು 100ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

31) 105ನೇ ಪ್ರಕರಣ.- ಬಾಕಿ ಇರುವ ಮೊಬಲಗಿನ ಶೇಕಡಾ ಐವತ್ತರಷ್ಟನ್ನು, ಅಪೀಲನ್ನು ಸಲ್ಲಿಸುವ ಮೊದಲು ಠೇವಣಿ ಇಡುವಂತೆ ಗೊತ್ತುಪಡಿಸಲು 105ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

32) 106ನೇ ಪ್ರಕರಣ.- 28ಎ (5), 99, 111 ಹಾಗೂ 105ಎ ಪ್ರಕರಣಗಳ ಅಡಿಯಲ್ಲಿ ಮಾಡಿದ ಆದೇಶಗಳ ವಿರುದ್ಧ ಅಪೀಲುಗಳಿಗಾಗಿ ಅವಕಾಶವನ್ನು ಕಲ್ಪಿಸುವುದು ಮತ್ತು 68ನೇ ಪ್ರಕರಣದ ಅಡಿಯಲ್ಲಿಯ ಆದೇಶದ ವಿರುದ್ಧ ಅಪೀಲನ್ನು ತೆಗೆದುಹಾಕಲು ಮತ್ತು ವಿಶೇಷವಾಗಿ ಅಪೀಲು ಪ್ರಾಧಿಕಾರಗಳನ್ನು ಗೊತ್ತುಪಡಿಸಲು 106ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ. ಬಾಕಿ ಇರುವ ಮೊಬಲಗಿನ ಶೇಕಡಾ ಐವತ್ತರಷ್ಟನ್ನು, ಅಪೀಲನ್ನು ಸಲ್ಲಿಸುವ ಮೊದಲು ಠೇವಣಿ ಇಡುವಂತೆ ಗೊತ್ತುಪಡಿಸಲು ಮತ್ತು ಅಪೀಲನ್ನು ಆರು ತಿಂಗಳೊಳಗೆ ಆದರೆ ಹನ್ನೆರಡು ತಿಂಗಳುವರೆಗೆ ವಿಸ್ತರಿಸಬಹುದಾದಂಥ ಅವಧಿಯೊಳಗೆ ತೀರ್ಮಾನಿಸತಕ್ಕದ್ದೆಂದು ಗೊತ್ತುಪಡಿಸಲು ಪ್ರಸ್ತಾವಿಸಲಾಗಿದೆ.

33) 111ನೇ ಪ್ರಕರಣ.- ಒಪಂಪ್ಪದ ಪತ್ರವನ್ನು ಗಮನದಲ್ಲಿಟ್ಟುಕೊಂಡು ಸಹಕಾರ ಪತ್ತಿನ ರಚನೆಯಲ್ಲಿಯ ಸಂಘಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಸಂಬಂಧದಲ್ಲಿ, ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವುದಕ್ಕಾಗಿ ರಿಜಿಸ್ಟ್ರಾರನ ಮಂಜೂರಾತಿ ಸಂಬಂಧದಲ್ಲಿ ಉಪಬಂಧ ಕಲ್ಪಿಸಲು 111ನೇ ಪ್ರಕರಣವನ್ನು ತಿದ್ದುಪಡಿ ಮಾಡಲು

ಪ್ರಸ್ತಾವಿಸಲಾಗಿದೆ. ಹಣದ ದುರ್ವಿನಿಯೋಗಕ್ಕಾಗಿ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ದೂರುಗಳನ್ನು ದಾಖಲು ಮಾಡುವುದಕ್ಕಾಗಿ ರಿಜಿಸ್ಟ್ರಾರ್ ಅಥವಾ ಸಹಕಾರಿ ಲೆಕ್ಕಪರಿಶೋಧಕರ ಮಂಜೂರಾತಿ ಅಗತ್ಯವಿಲ್ಲವೆಂಬ ಬಗ್ಗೆ ಉಪಬಂಧ ಕಲ್ಪಸಲು ಸಹಾ ಪ್ರಸ್ತಾವಿಸಲಾಗಿದೆ

34) 128ಎ ಪ್ರಕರಣ.- ಕೆಲವು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸುವ ಉದ್ದೇಶದಿಂದ ಮತ್ತು ಕಾಯುತ್ತಿರುವ ನೌಕರರಿಗೆ ಸ್ಥಳ ನಿಯುಕ್ತಿ ಮಾಡುವುದಕ್ಕಾಗಿ ಹಾಗೂ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ನೌಕರರ ಅಂಥ ಇತರ ಸೇವಾ ಷರತ್ತುಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ 128ಎ ಪ್ರಕರಣವನ್ನು ಆರು ತಿಂಗಳವರೆಗೆ ಉಳಿಸಿಕೊಳ್ಳಲು ಪ್ರಸ್ತಾವಿಸಲಾಗಿದೆ.

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ)

ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 8) ದಿನಾಂಕ 30.10.2009ರಂದು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

[2010ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 01, ಕಡತ ಸಂಖ್ಯೆ: ಸಂವ್ಯಶಾಇ 50 ಶಾಸನ 2009]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ ನಮೂದು 32]

XXVI

2011ರ ತಿದ್ದುಪಡಿ ಮಾಡುವ ಅಧಿನಿಯಮ 04.- ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ದೀರ್ಘಾವಧಿ ಸಾಲದ ಪುನರುಜ್ಜೀವನ ಪ್ಯಾಕೇಜು (ಪ್ರೊ. ಎ. ವೈದ್ಯನಾಥನ್ ಸಮಿತಿಯಡಿಯಲ್ಲಿ) ಅನುಷ್ಠಾನವಾಗಿರುವುದಿಲ್ಲ. ದೀರ್ಘಾವಧಿ ಸಾಲದ ರಚನೆಗಾಗಿ ಪ್ರೊ. ಎ. ವೈದ್ಯನಾಥನ್ ಪ್ಯಾಕೇಜ್‌ನ ಅನುಷ್ಠಾನದ ಬಗ್ಗೆ ಭಾರತ ಸರ್ಕಾರವು ಒಂದು ನಿರ್ಧಾರವನ್ನು ತೆಗೆದುಕೊಳ್ಳುವವರೆಗೆ ಅಸ್ತಿತ್ವದಲ್ಲಿರುವ ಪ್ಯಾಕೇಜು ಮುಂದುವರಿಯುವುದು ಅವಶ್ಯಕವಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಆದ್ದರಿಂದ, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕುಗಳ ಕಾರ್ಯನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮವುಂಟು ಮಾಡುವುದನ್ನು ತಡೆಗಟ್ಟುವುದಕ್ಕಾಗಿ ಸಾಮಾನ್ಯ ವೃಂದ ಸಮಿತಿಯನ್ನು ಮುಂದುವರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರಲ್ಲಿ 97ಎ ಹೊಸ ಪ್ರಕರಣವನ್ನು ಸೇರಿಸಲು ಪ್ರಸ್ತಾವಿಸಲಾಗಿದೆ.

ಸಹಕಾರಿ ಸಾಲ ರಚನೆ ಸಂಘಗಳ ಸಂಬಂಧದಲ್ಲಿ ಚುನಾವಣೆಗಳನ್ನು ನಾಲ್ಕು ಹಂತಗಳಲ್ಲಿ ಎಂದರೆ, ಪ್ರಾಥಮಿಕ, ಸೆಕೆಂಡರಿ, ಫೆಡರಲ್ ಮತ್ತು ಅಪೆಕ್ಸ್-ನಡೆಸಬೇಕಾದುದು ಕೂಡಾ ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ, 39ಎ(2)ನೇ ಪ್ರಕರಣದಂತೆಯೇ 98ಕ್ಯೂ ಪ್ರಕರಣವನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2011ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 05, ಕಡತ ಸಂಖ್ಯೆ: ಸಂವ್ಯಶಾಇ 45 ಶಾಸನ 2010]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ ನಮೂದು 32]

XXVII

2012ರ ತಿದ್ದುಪಡಿ ಮಾಡುವ ಅಧಿನಿಯಮ 28.- ಭಾರತ ಸರ್ಕಾರವು, ದೇಶದಲ್ಲಿ, ಅಲ್ಪಾವಧಿ ಸಹಕಾರಿ ಪತ್ತಿನ ವ್ಯವಸ್ಥೆಯ (ರಚನೆಯ) ಪುನಶ್ಚೇತನ ಕ್ರಮಗಳನ್ನು ಸಲಹೆ ಮಾಡುವುದಕ್ಕಾಗಿ ಪ್ರೊ. ಎ. ವೈದ್ಯನಾಥನ್ ರವರ ಅಧ್ಯಕ್ಷತೆಯಲ್ಲಿ 05.08.2004ರಂದು ಕಾರ್ಯಪಡೆಯನ್ನು ನೇಮಿಸಿತ್ತು. ಸದರಿ ಕಾರ್ಯಪಡೆಯು, ರಾಷ್ಟ್ರದ್ಯಂತ ಪ್ರವಾಸ ಕೈಗೊಂಡು, ಸಹಕಾರಿ ಸಂಘಗಳು ಮತ್ತು ಸಹಕಾರಿಗಳೊಡನೆ ಸಂವಾದ ಸಮಾಲೋಚನೆ ನಡೆಸಿ ರಾಷ್ಟ್ರದಲ್ಲಿ ಅಲ್ಪಾವಧಿ ಸಹಕಾರಿ ಪತ್ತಿನ ವ್ಯವಸ್ಥೆಯ ವಿಮರ್ಶಾತ್ಮಕ ಅಧ್ಯಯನ ಮಾಡಿ, 04.02.2005ರಂದು ಭಾರತ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ತರುವಾಯ ಭಾರತ ಸರ್ಕಾರವು, ರಾಜ್ಯ ಸರ್ಕಾರಗಳ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿ ಪ್ರೊ. ಎ. ವೈದ್ಯನಾಥನ್ ಶಿಫಾರಸ್ಸುಗಳ ಆಧಾರದ ಮೇಲೆ ಹಾಗೂ ರಾಜ್ಯ ಸರ್ಕಾರಗಳ ಅಭಿಪ್ರಾಯಗಳನ್ನು ಪರಿಗಣಿಸಿ ಅಲ್ಪಾವಧಿ ಪತ್ತಿನ ಸಹಕಾರಿ ವ್ಯವಸ್ಥೆಗೆ ನವಚೇತನ ತುಂಬುವಂಥ ಪುನಶ್ಚೇತನ ಪ್ಯಾಕೆಜನ್ನು ರೂಪಿಸಿ 2006ರ ಜನವರಿಯಲ್ಲಿ ರಾಜ್ಯಗಳಿಗೆ ಈ ಪ್ಯಾಕೇಜಿನ ಬಗ್ಗೆ ತಿಳಿಸಿತು.

ಕರ್ನಾಟಕ ಸರ್ಕಾರವು, ಪುನಶ್ಚೇತನ ಪ್ಯಾಕೇಜನ್ನು ಒಪ್ಪಿಕೊಂಡು 25.03.2008ರಂದು ಭಾರತ ಸರ್ಕಾರ ಮತ್ತು ನಬಾರ್ಡ್‌ನೊಂದಿಗೆ ತ್ರಿಪಕ್ಷೀಯ ಒಪ್ಪಂದ ಪತ್ರಕ್ಕೆ ಸಹಿ ಹಾಕಿತು. ಸದರಿ ಒಪ್ಪಂದ ಪತ್ರವು, ಸಹಕಾರ ಸಂಘಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಿ ಆರ್‌ಬಿಐ/ನಬಾರ್ಡ್‌ಗೆ ಕೆಲವು ಅಧಿಕಾರಗಳನ್ನು ನಿಹಿತಗೊಳಿಸಿರುವುದನ್ನು ಸ್ಪಷ್ಟಪಡಿಸಿತು. ಪ್ಯಾಕೇಜಿನಡಿಯಲ್ಲಿ ನಬಾರ್ಡ್ ಮೂಲಕವಾಗಿ ಭಾರತ ಸರ್ಕಾರವು ಹಣಕಾಸಿನ ನೆರವನ್ನು ಬಿಡುಗಡೆಗೊಳಿಸುವ ಮುಂಚೆ ತದನುಸಾರವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ಕ್ಕೆ ತಿದ್ದುಪಡಿ ಮಾಡಬೇಕೆಂಬುದು ಒಪ್ಪಂದ ಪತ್ರದಲ್ಲಿಯ ಪೂರ್ವಷರತ್ತಾಗಿದೆ.

ಸಹಕಾರ ಸಂಘಗಳನ್ನು ಕಡ್ಡಾಯವಾಗಿ ಸಮ್ಮಿಳನಗೊಳಿಸಲು ಅಥವಾ ವಿಭಜಿಸಲು ಅಥವಾ ಪುನರ್ ರಚಿಸಲು ಆದೇಶ ಮಾಡುವುದಕ್ಕಾಗಿ ರಿಜಿಸ್ಟ್ರಾರರಿಗೆ ಅಧಿಕಾರ ನೀಡುವ 14ಎ ಪ್ರಕರಣವನ್ನು ಸೇರ್ಪಡೆ ಮಾಡಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅವಶ್ಯವಾಗಿದೆ ಎಂದು ಪರಿಗಣಿಸಲಾಗಿದೆ. ರಾಜ್ಯದಲ್ಲಿ ಜಿಲ್ಲೆಗಳ ಪುನರ್ ರಚನೆ/ತಾಲ್ಲೂಕುಗಳ ಪ್ರಸ್ತಾಪಿತ ಪುನರ್ ರಚನೆಯ ಹಿನ್ನೆಲೆಯಲ್ಲಿ ಮತ್ತು ಅಲ್ಪಾವಧಿ ಸಹಕಾರ ಪತ್ತಿನ ವ್ಯವಸ್ಥೆಗೆ ಸಂಬಂಧಿಸಿದಂತೆ ಭಾರತ ಸರ್ಕಾರವು ರೂಪಿಸಿದ ಪುನಶ್ಚೇತನ ಪ್ಯಾಕೇಜನ್ನು ಅನುಷ್ಠಾನಗೊಳಿಸುವುದಕ್ಕಾಗಿ ಇದು ಅವಶ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

[2010ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 02, ಕಡತ ಸಂಖ್ಯೆ: ಸಂವ್ಯಶಾಇ 57 ಶಾಸನ 2009]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ ನಮೂದು 32]

XXVIII

2013ರ ತಿದ್ದುಪಡಿ ಮಾಡುವ ಅಧಿನಿಯಮ 03.- ಸಂವಿಧಾನ (97ನೇ ತಿದ್ದುಪಡಿ) ಅಧಿನಿಯಮ, 2011ರ ಉಪಬಂಧಗಳಿಗೆ ಅನುಸಾರವಾಗಿ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 ನ್ನು (1959ರ ಕರ್ನಾಟಕ ಅಧಿನಿಯಮ 11) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಇತರ ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡುವ ಅವಕಾಶವನ್ನು ತೆಗೆದುಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

[2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 43, ಕಡತ ಸಂಖ್ಯೆ: ಸಂವ್ಯಶಾಇ 71 ಶಾಸನ 2012]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ ನಮೂದು 32]

XXIX

2014ರ ತಿದ್ದುಪಡಿ ಮಾಡುವ ಅಧಿನಿಯಮ 35.- ಭಾರತ ಸಂವಿಧಾನದ 97ನೇ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡು ಈ ಮುಂದಿನವುಗಳಿಗಾಗಿ, ಉಪಬಂಧವನ್ನು ಕಲ್ಪಿಸುವುದಕ್ಕಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು (1959ರÀ ಕರ್ನಾಟಕ ಅಧಿನಿಯಮ ಸಂಖ್ಯೆ:11) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(1) ಮೀಸಲಾತಿಯನ್ನು ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಅನುಸರಿಸುವುದು;

(2) "ಆಯೋಗ" ಎಂಬ ಪದಕ್ಕೆ "ಪ್ರಾಧಿಕಾರ" ಎಂಬ ಪದವನ್ನು ಪ್ರತಿಯೋಜಿಸುವುದು;

(3) ಪ್ರತ್ಯಾಯೋಜನೆ ಮತ್ತು ನಾಮನಿರ್ದೇಶಿತ ಪದಗಳನ್ನು ಪರಿಭಾಷಿಸುವುದು;

(4) ಉಪವಿಧಿಗಳಿಗೆ ತಿದ್ದುಪಡಿಗಳನ್ನು ಮಾಡುವುದಕ್ಕೆ ರಿಜಿಸ್ಟ್ರಾರನಿಗೆ ಅಧಿಕಾರ ನೀಡುವುದು;

(5) ಸಹವರ್ತಿ ಸದಸ್ಯನಿಗೆ ಗರಿಷ್ಠ ಮಿತಿಯನ್ನು ನಿಯಮಿಸುವುದು;

(6) ಫೆಡರಲ್ ಮತ್ತು ಅಪೆಕ್ಸ್ ಸಂಘದ ನಿರ್ದೇಶತ್ವವನ್ನು ರದ್ದುಗೊಳಿಸುವುದು;

(7) ಮಹಾಸಭೆಯ ಕೋರಂ ಅನ್ನು ನಿಯಮಿಸುವುದು;

(8) ಭಾರತೀಯ ರಿಸರ್ವ್ ಬ್ಯಾಂಕಿನ ಶಿಫಾರಸ್ಸುಗಳ ಅನ್ವಯ ನಗರ ಬ್ಯಾಂಕುಗಳಲ್ಲಿನ ವೃತ್ತಿಪರ ನಿರ್ದೇಶಕರುಗಳ ವಿದ್ಯಾರ್ಹತೆಯನ್ನು ನಿಯಮಿಸುವುದು;

(9) ಸಹಕಾರ ಸಂಘಗಳ ಚುನಾವಣಾ ಪ್ರಕ್ರಿಯೆಗಳನ್ನು ಸರಳಗೊಳಿಸುವುದು;

(10) ಸಹಕಾರ ಸಂಘಗಳ ನಿರ್ದೇಶಕರು ಮತ್ತು ಪದಾಧಿಕಾರಿಗಳ ರಾಜೀನಾಮೆಗಾಗಿ ಉಪಬಂಧಗಳನ್ನು ಕಲ್ಪಿಸುವುದು;

(11) ನಗರ ಸಹಕಾರ ಬ್ಯಾಂಕುಗಳಿಂದ ಕರ್ನಾಟಕ ರಾಜ್ಯ ಸಹಕಾರ ನಗರ ಬ್ಯಾಂಕುಗಳ ಫೆಡರೇಷನ್‌ಗೆ ನಿವ್ವಳ ಲಾಭದ ಶೇಕಡ ಒಂದನ್ನು ಕೊಡುಗೆ ನೀಡುವುದು;

(12) ಸಹಕಾರ ಸಂಘಗಳಲ್ಲಿ ಮರು ಲೆಕ್ಕಪರಿಶೋಧನೆ ಮತ್ತು ಮರು ಸತ್ಯಾಪನೆಗಳಿಗೆ ಉಪಬಂಧ ಕಲ್ಪಿಸುವುದು;

(13) ಸಹಕಾರ ಸಂಘಗಳ ಚುನಾವಣಾ ವಿವಾಧಗಳನ್ನು ನ್ಯಾಯಿಕ ಸ್ವರೂಪದವುಗಳನ್ನಾಗಿ ಮಾಡುವುದು;

(14) ಕೃಷಿ ಕ್ರೆಡಿಟ್ ರಚನೆಯಲ್ಲಿ ಆಡಳಿತವನ್ನು ಸುಧಾರಣೆ ಮಾಡುವುದು;

(15) ಸಹಕಾರ ಸಂಘಗಳಲ್ಲಿ ಸದಸ್ಯತ್ವವನ್ನು ನಿರಾಕರಿಸಿದಾಗ ಅಪೀಲನ್ನು ಸಲ್ಲಿಸಲು ಉಪಬಂಧ ಕಲ್ಪಿಸುವುದು.

ಆದ್ದರಿಂದ ಈ ವಿಧೇಯಕ.

[2014ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 51, ಕಡತ ಸಂಖ್ಯೆ: ಸಂವ್ಯಶಾಇ 58 ಶಾಸನ 2013]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ ನಮೂದು 32]

XXX

2017ರ ತಿದ್ದುಪಡಿ ಮಾಡುವ ಅಧಿನಿಯಮ 07.- ಸಹಕಾರ ಶಿಕ್ಷಣ ನಿಧಿಯ ಖಾತೆಗೆ ಸಹಕಾರ ಸಂಘವು ನೀಡುವ ಒಟ್ಟು ವಂತಿಗೆಯಿಂದ ಪ್ರತಿ ವರ್ಷವು ನಾಲ್ಕನೇ ಒಂದು ಭಾಗದಷ್ಟನ್ನು ಸಹಕಾರ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದ ಮೂಲಕ ಪ್ರಾಯೋಜಿತವಾದ ಮತ್ತು ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿತವಾದ ಸಹಕಾರ ಅಕಾಡೆಮಿ (ನೋಂ.) ಮೈಸೂರು ಇದರ ಖಾತೆಗೆ ಸಂದಾಯ ಮಾಡಲು ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು (1959ರ ಕರ್ನಾಟಕ ಅಧಿನಿಯಮ 11) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

[2016ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 42, ಕಡತ ಸಂಖ್ಯೆ: ಸಂವ್ಯಶಾಇ 60 ಶಾಸನ 2016]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ ನಮೂದು 32]

1959ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 11

(1959ರ ಆಗಸ್ಟ್ ಇಪ್ಪತ್ತನೆಯ ದಿನದಂದು [1][ಕರ್ನಾಟಕ ರಾಜ್ಯಪತ್ರದಲ್ಲಿ][1] ಮೊದಲು ಪ್ರಕಟವಾಗಿದೆ)

[1][ಕರ್ನಾಟಕ ಸಹಕಾರ][1] ಸಂಘಗಳ ಅಧಿನಿಯಮ, 1959

(1959ರ ಆಗಸ್ಟ್ ಹನ್ನೊಂದನೆಯ ದಿನದಂದು ರಾಷ್ಟ್ರಪತಿಯ ಅನುಮತಿ ಪಡೆದಿದೆ)

(1964ರ 40, 1966ರ 27, 1967ರ 16, 1972ರ 1, 1973ರ 14, 1975ರ 2, 1975ರ 39, 1976ರ 19, 70 ಮತ್ತು 71, 1978ರ 14, 1979ರ 16, 1980ರ 3 ಮತ್ತು 4, 1984ರ 5, 1985ರ 34, 1991ರ 34, 1998ರ 25, 2000ರ 2, 2000ರ 13, 2001ರ 6, 2001ರ 24, 2004ರ 13, 2010ರ 6, 2011ರ 4, 2012ರ 28, 2013ರ 3, 2014ರ 35 ಮತ್ತು 2017ರ 7 ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯ][1] ದಲ್ಲಿ ಸಹಕಾರ ಸಂಘಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಡೀಕರಿಸುವ [2][ಮತ್ತು ಸಹಕಾರ ಸಂಘಗಳ ಸ್ವಯಂ ರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ವ್ಯವಸ್ಥಾಪನೆಯ ಸಂವರ್ಧನೆಗೆ ಪ್ರಯತ್ನಿಸುವ][2] ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ಸಹಕಾರ ಸಂಘಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಡೀಕರಿಸುವುದು [2][ಮತ್ತು ಸಹಕಾರ ಸಂಘಗಳ ಸ್ವಯಂ ರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ವ್ಯವಸ್ಥಾಪನೆಯ ಸಂವರ್ಧನೆಗೆ ಪ್ರಯತ್ನಿಸುವುದು][2] ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹತ್ತನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಅಧ್ಯಾಯ-I

ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು [1][ಕರ್ನಾಟಕ][1] ಸಹಕಾರ ಸಂಘಗಳ ಅಧಿನಿಯಮ, 1959 ಎಂದು ಕರೆಯತಕ್ಕುದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ [1][ದಿನಾಂಕ][1]ದಂದು ಜಾರಿಗೆ ಬರತಕ್ಕುದು.

1. ಈ ಅಧಿನಿಯಮವು 1.6.1960 ರಿಂದ ಅಧಿಸೂಚನೆಯ ಮೂಲಕ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

[1][(ಎ) `ಅಪೆಕ್ಸ್ ಸಂಘ ' ಎಂದರೆ ಇಡೀ ರಾಜ್ಯದಾದ್ಯಂತ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಿರುವ ಪೆಡರಲ್ ಸಂಘ;

[5][(ಎ-1) "ಕಾರ್ಯಾಚರಣೆಯ ಪ್ರದೇಶ' ಎಂದರೆ, ಯಾವ ಪ್ರದೇಶದಿಂದ ಸದಸ್ಯತ್ವವನ್ನು ಪಡೆಯಲಾಗಿದೆಯೋ ಆ ಪ್ರದೇಶ ಅಥವಾ ಸಂಘದ ಉಪ ವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾದಂಥ ಪ್ರದೇಶ][5]

[2][[4][(ಎ1-1)][4] `ಸಹಾಯ ಪಡೆದ ಸಂಘ ' ಎಂದರೆ [2][ಸಾಲದ ಅಥವಾ ಬಡ್ಡಿಯ ಮರುಪಾವತಿಗಾಗಿ ಸರ್ಕಾರದಿಂದ ಷೇರು ಬಂಡವಾಳದ ಅಥವಾ ಸಾಲದ ಅಥವಾ ಅನುದಾನದ ಅಥವಾ ಖಾತರಿಯ][2] ರೂಪದಲ್ಲಿ [3][ಸರ್ಕಾರದ ಅಥವಾ ರಾಜ್ಯದ][3] ನೆರವನ್ನು ಪಡೆದುಕೊಂಡಿರುವ ಸಹಕಾರ ಸಂಘ;"][2]][1]

1. 1998ರ ಕರ್ನಾಟಕ ಅಧಿನಿಯಮ ಸಂಖ್ಯೆ 25ರ ಮೂಲಕ 15-8-98 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03-11-2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.
5. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][[2][(ಎ1-2)][2] 'ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್' ಎಂದರೆ ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾದ ಅಥವಾ ನೋಂದಣಿಯಾಗಿದೆಯೆಂದು ಭಾವಿಸಲಾದ ಮತ್ತು ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸದಸ್ಯ ಬ್ಯಾಂಕೆಂದು ಸೇರಿಸಿಕೊಳ್ಳಲಾದ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಮತ್ತು ಇದರಲ್ಲಿ ರಿಜಿಸ್ಟ್ರಾರನು ಅಧಿಸೂಚಿಸಬಹುದಾದಂಥ ಮತ್ತು ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸದಸ್ಯರೆಂದು ಸೇರಿಸಿಕೊಳ್ಳಬಹುದಾದಂಥ ವರ್ಗದ ಅಥವಾ ವರ್ಗಗಳ ಸಹಕಾರ ಸಂಘಗಳು ಒಳಗೊಳ್ಳುತ್ತವೆ.][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03-11-2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

[1][(ಎ2)][1] ``ಉಪವಿಧಿಗಳು" ಎಂದರೆ ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗಿರುವ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾಗುವ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಉಪವಿಧಿಗಳು; ಮತ್ತು ಉಪವಿಧಿಗಳ ನೋಂದಾಯಿತ ತಿದ್ದುಪಡಿಯು ಇದರಲ್ಲಿ ಒಳಗೊಳ್ಳುತ್ತದೆ;

1. 1998ರ ಕರ್ನಾಟಕ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

[3][[2][[1][(ಎ2-1). ಹಿಂದುಳಿದ ವರ್ಗಗಳು ಎಂದರೆ ಸಹಕಾರ ಸಂಘಗಳ ಆಡಳಿತ ಮಂಡಲಿಯಲ್ಲಿ ಮೀಸಲಾತಿ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ "ಎ" ಮತ್ತು "ಬಿ" ಪ್ರವರ್ಗಗಳು ಎಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂಥ ವರ್ಗ ಅಥವಾ ವರ್ಗಗಳ ನಾಗರೀಕರು][1]][2]][3]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03-11-2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06-9-2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][(ಎ3) `ಮುಖ್ಯ ಕಾರ್ಯನಿರ್ವಾಹಕ' ಎಂದರೆ ಯಾವುದೇ ಪದನಾಮದಿಂದ ಕರೆಯಲಾಗುವ ಸಹಕಾರ ಸಂಘದ ಯಾರೇ ನೌಕರ ಮತ್ತು ಇದು, ಈ ಅಧಿನಿಯಮ, ನಿಯಮಗಳ ಅಥವಾ ಉಪ ವಿಧಿಗಳ ಮೇರೆಗೆ ಮುಖ್ಯ ಕಾರ್ಯನಿರ್ವಾಹಕನ ಪ್ರಕಾರ್ಯಗಳನ್ನು ನಿರ್ವಹಿಸುವ ರಾಜ್ಯ ಸರ್ಕಾರದ ನೌಕರ, ಯಾವುದೇ ಇತರ ಸಂಸ್ಥೆಯ ಅಥವಾ ಸಹಕಾರ ಸಂಘದ ನೌಕರನನ್ನು ಒಳಗೊಳ್ಳುತ್ತದೆ;][2]

2. 1998ರ ಕರ್ನಾಟಕ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[3][[1][ಎ4][1] `ನಿರ್ದೇಶಕರು ಸಹಕಾರಿ ಲೆಕ್ಕ ಪರಿಶೋಧನೆ' ಎಂದರೆ ಈ ಅಧಿನಿಯಮದ ಮೇರೆಗೆ ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರ ಪ್ರಕಾರ್ಯಗಳನ್ನು [2][ನಿರ್ವಹಿಸಲು ನೇಮಕಗೊಂಡ ಒಬ್ಬ ವ್ಯಕ್ತಿ][2] ಮತ್ತು ಇದು ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರು ತಮ್ಮ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸುವಲ್ಲಿ ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ನೆರವು ನೀಡಲು ನೇಮಕಗೊಂಡ ಸಹಕಾರ ಲೆಕ್ಕ ಪರಿಶೋಧನಾ ಅಡಿಷನಲ್ ನಿರ್ದೇಶಕರು, ಸಹಕಾರ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕ, ಸಹಕಾರ ಲೆಕ್ಕ ಪರಿಶೋಧನಾ ಉಪ ನಿರ್ದೇಶಕ ಮತ್ತು ಸಹಕಾರ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರನ್ನು ಒಳಗೊಳ್ಳುತ್ತದೆ;][3]

1. 1998ರ ಕರ್ನಾಟಕ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.

2. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1980ರ ಅಧಿನಿಯಮ 3ರ ಮೂಲಕ 11.08.1977 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಹಾಗೂ 1998ರ ಅಧಿನಿಯಮ 25ರ ಮೂಲಕ 15.08.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

[1][(ಬಿ) 'ಮಂಡಲಿ' ಎಂದರೆ, ಯಾವುದೇ ಹೆಸರಿನಿಂದ ಕರೆಯಲಾಗುವ ಯಾವ ನಿರ್ದೇಶಕರ ಮಂಡಲಿಗೆ ಅಥವಾ ಆಡಳಿತ ನಿಕಾಯಕ್ಕೆ ಸಂಘದ ವ್ಯವಹಾರಗಳನ್ನು ವ್ಯವಸ್ಥಾಪನೆಯ ನಿರ್ದೇಶನ

ಮತ್ತು ನಿಯಂತ್ರಣವನ್ನು ವಹಿಸಿಕೊಡಲಾಗಿದೆಯೋ ಆ ಸಹಕಾರ ಸಂಘದ ನಿರ್ದೇಶಕರ ಮಂಡಲಿ ಅಥವಾ ಆಡಳಿತ ನಿಕಾಯ)][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ-1) `ಸಹಕಾರ ಬ್ಯಾಂಕ್' ಎಂದರೆ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತಿರುವ ಸಹಕಾರಿ ಸಂಘ;

ವಿವರಣೆ.- ಈ ಖಂಡದ ಉದ್ದೇಶಕ್ಕಾಗಿ, ``ಬ್ಯಾಂಕಿಂಗ್'' ಎಂಬುದು ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (ಕೇಂದ್ರ ಅಧಿನಿಯಮ 1949ರ 10)ರ 5ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು;][1]

1. 1998ರ ಕರ್ನಾಟಕ ಅಧಿನಿಯಮ ಸಂಖ್ಯೆ 25ರ ಮೂಲಕ 15-8-98 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ2) 'ಸಹಕಾರ ಪತ್ತಿನ ವ್ಯವಸ್ಥೆ (ರಚನೆ)' ಎಂದರೆ, ಯಾವುದೇ ಹೆಸರಿನಿಂದ ಕರೆಯಲಾಗುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೇಂದ್ರ ಸಹಕಾರ ಬ್ಯಾಂಕು, ರಾಜ್ಯ ಸಹಕಾರ ಬ್ಯಾಂಕು, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಹಾಗೂ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು ಮತ್ತು ಇವುಗಳು ಒಳಗೊಳ್ಳುತ್ತದೆ;

(ಬಿ-3) `ಕೇಂದ್ರ ಸಹಕಾರ ಬ್ಯಾಂಕ್' ಎಂದರೆ, ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿರುವ ಫೆಡರಲ್ ಸಂಘ;

(ಬಿ-4) 'ಚಾರ್ಟರ್ಡ್ ಅಕೌಂಟೆಂಟ್' ಎಂದರೆ, ಚಾರ್ಟರ್ಡ್ ಅಕೌಂಟೆಂಟರ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ ಸಂಖ್ಯೆ 38) ಅರ್ಥ ವ್ಯಾಪ್ತಿಯೊಳಗೆ ಬರುವ ಭಾರತ ಚಾರ್ಟರ್ಡ್ ಅಕೌಂಟೆಂಟರುಗಳ ಸಂಸ್ಥೆಯ ಒಬ್ಬ ಸದಸ್ಯ.][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03-11-2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[2][[1][(ಬಿ-5) `ಸಹಕಾರಿ ಚುನಾವಣಾ ಪ್ರಾಧಿಕಾರ' ಎಂದರೆ, 39ಎಎ ಪ್ರಕರಣದ ಅಡಿಯಲ್ಲಿ ರಚಿಸಿರುವ ಸಹಕಾರಿ ಚುನಾವಣಾ ಪ್ರಾಧಿಕಾರ;][1]][2]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06-9-2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) `ಸಹಕಾರ ಸಂಘ' ಎಂದರೆ ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗಿರುವ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲ್ಪü಼ಡುವ ಸಂಘ;

(ಡಿ) `ನಿಯಮಿತ ಹೊಣೆಯ ಸಹಕಾರ ಸಂಘ' ಎಂದರೆ ಯಾವ ಸಂಘದ ಸಮಾಪನದ ಸಂದರ್ಭದಲ್ಲಿ ಸಂಘದ ಋಣದ ಬಗ್ಗೆ ಸದಸ್ಯರ ಹೊಣೆಯು ಅದರ ಉಪವಿಧಿಗಳಿಂದ-

(i) ಅವರು ಹೊಂದಿದ್ದ ಷೇರುಗಳ ಮೇಲೆ ಸಂದಾಯವಾಗದ ಯಾವುದೇ ಮೊಬಲಗು ಇದ್ದಲ್ಲಿ, ಅಷ್ಟಕ್ಕೆ; ಅಥವಾ

(ii) ಸಂಘದ ಆಸ್ತಿಗೆ ವಂತಿಗೆ ನೀಡಲು ಅವರು ಒಪ್ಪಿಕೊಂಡಿರುವ ಮೊಬಲಗಿನ ಮಟ್ಟಿಗೆ

- ಸೀಮಿತವಾಗಿರುವುದೋ ಆ ಸಹಕಾರಿ ಸಂಘ;

[1][ಡಿ1) `ಸಹಕಾರಿ ವರ್ಷ [2][xxx][2]' ಎಂದರೆ ಏಪ್ರಿಲ್ ಮೊದಲ ದಿನದಿಂದ ಆರಂಭವಾಗುವ ವರ್ಷ.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿ:01.09.1984ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1998ರ ಕರ್ನಾಟಕ ಅಧಿನಿಯಮ ಸಂಖ್ಯೆ 25ರ ಮೂಲಕ 15-8-98 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಡಿ-2) ``ಸಹಕಾರಿ" ಎಂದರೆ ಕರ್ನಾಟಕ ಸೌಹರ್ದ ಸಹಕಾರಿ ಅಧಿನಿಯಮ, 1997ರ (2000ದ ಕರ್ನಾಟಕ ಅಧಿನಿಯಮ 17) ಅಡಿಯಲ್ಲಿ ನೋಂದಾಯಿತವಾದ ಒಂದು ಸಹಕಾರಿ ಮತ್ತು ಇದು ಸಂಯುಕ್ತ ಸಹಕಾರಿ ಹಾಗೂ ಒಕ್ಕೂಟ ಸಹಕಾರಿ ಇವುಗಳನ್ನು ಒಳಗೊಳ್ಳುತ್ತದೆ.][1]

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 23-3-2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಇ) `ನಿಯಮಿತವಲ್ಲದ ಹೊಣೆಯ ಸಹಕಾರ ಸಂಘ' ಎಂದರೆ ಯಾವ ಸಂಘದ ಸಮಾಪನದ ಸಂದರ್ಭದಲ್ಲಿ ಅದರ ಎಲ್ಲ ಬಾಧ್ಯತೆಗಳ ಸಲುವಾಗಿ ಮತ್ತು ಸಂಬಂಧವಾಗಿ ಹಾಗೂ ಸಂಘದ ಆಸ್ತಿಯಲ್ಲಿದ್ದ ಯಾವುದಾದರೂ ಕೊರತೆಗಾಗಿ ಹಣ ನೀಡಲು ಅದರ ಸದಸ್ಯರು ಒಟ್ಟಾಗಿ ಮತ್ತು ಬಿಡಿಯಾಗಿ ಹೊಣೆಗಾರರಾಗಿರುವರೋ ಆ ಸಹಕಾರ ಸಂಘ;

[1][(ಇ-1) ``ಸಾಲ ನೀಡುವ ಏಜೆನ್ಸಿ" ಎಂದರೆ ಕರ್ನಾಟಕ ಕೃಷಿ ಸಾಲ ನೀಡಿಕೆ ಕಾರ್ಯಾಚರಣೆಗಳು ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1974ರಲ್ಲಿ ಪರಿಭಾಷಿಸಲಾದ ಸಾಲ ನೀಡುವ ಏಜೆನ್ಸಿ;][1] [2][ಮತ್ತು ಇದರಲ್ಲಿ ಸಹಕಾರ ಸಂಘಕ್ಕೆ ಹಣಕಾಸು ನೆರವು ನೀಡುವ ಮತ್ತು ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ಅಧಿಸೂಚಿಸುವ ಯಾವುದೇ ಇತರೆ ನಿಕಾಯ ಅಥವಾ ನಿಗಮ ಅಥವಾ ಹಣಕಾಸು ಸಂಸ್ಥೆ ಸೇರುತ್ತದೆ;][2]

1. 1975ರ ಅಧಿನಿಯಮ ಸಂಖ್ಯೆ 2ರ ಮೂಲಕ 17-7-1975ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ15-8-1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಇ-1-ಎ) `ಪ್ರತಿನಿಧಿ' ಎಂದರೆ, ಇತರ ಸಹಕಾರಿ ಸಂಘಗಳಲ್ಲಿ ಆ ಸಹಕಾರಿ ಸಂಘವನ್ನು ಪ್ರತಿನಿಧಿಸುವ ಮಂಡಳಿಯಿಂದ ನೇಮಿಸಲ್ಪಟ್ಟ ಸಹಕಾರಿ ಸಂಘದ ಮಂಡಳಿಯ ಒಬ್ಬ ಸದಸ್ಯ.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06-9-2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][[2][(ಇ-2)][2] `ಠೇವಣಿ ವಿಮಾ ನಿಗಮ' ಎಂದರೆ ಠೇವಣಿ ವಿಮಾ ನಿಗಮ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 47)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಠೇವಣಿ ವಿಮಾ ನಿಗಮ;

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

[1][(ಇ-2-1) 'ನಿರ್ದೇಶಕ' ಎಂದರೆ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ, ನಿಯಮಗಳು ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಯುಕ್ತವಾಗಿ ಆಯ್ಕೆಯಾದ ಅಥವಾ ನಾಮ ನಿರ್ದೇಶಿತನಾದ ಅಥವಾ ಸಹ-ಸದಸ್ಯನಾಗಿ ಸೇರಿಸಿಕೊಳ್ಳಲಾದ ಮಂಡಲಿಯ ಒಬ್ಬ ಸದಸ್ಯ][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಇ-3) `ನೌಕರ ' ಎಂದರೆ ಸಹಕಾರ ಸಂಘದ ಸಂಬಳ ತೆಗೆದುಕೊಳ್ಳುವ ನೌಕರ ಮತ್ತು ಇದು, ಸರ್ಕಾರಿ ಸಂಘದಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ರಾಜ್ಯ ಸರ್ಕಾರದ ಅಧಿಕಾರಿ ಅಥವಾ ಯಾವುದೇ ಇತರೆ ಸಂಸ್ಥೆಯ ಅಥವಾ ಸಹಕಾರ ಸಂಘದ ಯಾರೇ ನೌಕರನನ್ನು ಒಳಗೊಳ್ಳುತ್ತದೆ;

(ಇ-4) `ಫೆಡರಲ್ ಸಂಘ ' ಎಂದರೆ ಸದಸ್ಯತ್ವವು ವ್ಯಕ್ತಿಗಳಿಗೆ ಮುಕ್ತವಾಗಿರದ ಸಹಕಾರ ಸಂಘ:

ಪರಂತು, ಈ ಖಂಡದಲ್ಲಿರುವ ಯಾವುದೂ, ನಾಮಮಾತ್ರದ ಸದಸ್ಯರಾಗಿ ವ್ಯಕ್ತಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅನ್ವಯವಾಗತಕ್ಕದ್ದಲ್ಲ;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಇ-5)][1] ``ಹಣಕಾಸು ನೀಡಿಕೆ ಬ್ಯಾಂಕ್'' ಎಂದರೆ ಇತರ ಸಹಕಾರ ಸಂಘಗಳಿಗೆ ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಮುಂಗಡ ನೀಡಿಕೆಯನ್ನು ತನ್ನ ಮುಖ್ಯ ಉದ್ದೇಶವಾಗಿ ಹೊಂದಿರುವ ಒಂದು ಸಹಕಾರ ಸಂಘ;][1]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15Š8Š1998 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

[1][(ಇ-6) 'ಮಹಾ ನಿಕಾಯ (General body) ಎಂದರೆ,

(i) ಪ್ರಾಥಮಿಕ ಸಹಕಾರ ಸಂಘಕ್ಕೆ ಸಂಬಂಧಪಟ್ಟಂತೆ, ಆ ಸಹಕಾರ ಸಂಘದ ಎಲ್ಲ ಸದಸ್ಯರು;

(ii) ಪೂರಕ (Secondary) ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ, ಸದಸ್ಯ ಸಹಕಾರ ಸಂಘಗಳ ಎಲ್ಲ ಪತ್ರಿನಿಧಿಗಳು ಮತ್ತು ವ್ಯಕ್ತಿಗತ ಸದಸ್ಯರು; ಮತ್ತು

(iii) ಒಕ್ಕೂಟ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ, ಸದಸ್ಯ ಸಹಕಾರ ಸಂಘಗಳ ಸದಸ್ಯರ ಎಲ್ಲ ಪ್ರತಿನಿಧಿಗಳು.

(ಇ-7) 'ಮಹಾಸಭೆ' ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ಸಹಕಾರ ಸಂಘದ ಉಪವಿಧಿಗಳ ಉಪಬಂಧಗಳು ಅನುಸಾರವಾಗಿ ಕರೆಯಲಾದ ಮತ್ತು ನಡೆಸಲಾದ ಮಹಾಸಭೆ][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎಫ್) ``ಸದಸ್ಯ'' ಎಂದರೆ ಸಹಕಾರ ಸಂಘದ ನೋಂದಣಿ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ಸೇರಿದ ಮತ್ತು ಹಾಗೆ ನೋಂದಣಿಯಾದ ತರುವಾಯ ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಸದಸ್ಯತ್ವಕ್ಕೆ ಪ್ರವೇಶ ಪಡೆದ ವ್ಯಕ್ತಿ ಮತ್ತು ಅದರಲ್ಲಿ ನಾಮಮಾತ್ರದ ಹಾಗೂ ಸಹ ಸದಸ್ಯ ಇವರು ಸೇರಿರುತ್ತಾರೆ;

[1][(ಎಫ್-1) ‘ವಿವಿಧೋದ್ದೇಶ ಸಹಕಾರ ಸಂಘ’ ಎಂದರೆ, ತನ್ನ ಸದಸ್ಯರಿಗೆ ಸಾಲ, ವ್ಯವಹಾರ, ಕೈಗಾರಿಕೆ ಅಥವಾ ಗ್ರಾಹಕ ವಸ್ತುಗಳಿಗೆ ಸಂಬಂಧಪಟ್ಟ ಸೇವೆಗಳು ಒಳಗೊಂಡಂತೆ ವಿವಿಧ ಸೇವೆಗಳನ್ನು ಒದಗಿಸುವ ಉದ್ದೇಶ ಹೊಂದಿರುವ ಪ್ರಾಥಮಿಕ ಸಂಘ.

(ಎಫ್-2) ‘ರಾಷ್ಟ್ರೀಯ ಬ್ಯಾಂಕ್’ ಎಂದರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ ಅಧಿನಿಯಮ, 1981 ರ (1981ರ ಕೇಂದ್ರ ಅಧಿನಿಯಮ ಸಂಖ್ಯೆ 61) 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03-11-2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎಫ್-3) `ನಾಮನಿರ್ದೇಶಿತ' ಎಂದರೆ, ಇತರ ಸಹಕಾರಿ ಸಂಘಗಳಲ್ಲಿ ಆ ಸಹಕಾರಿ ಸಂಘವನ್ನು ಪ್ರತಿನಿಧಿಸುವ ಮಂಡಳಿಯಿಂದ ನೇಮಿಸಲ್ಪಟ್ಟ ಮಂಡಳಿಯ ಸದಸ್ಯ ಅಥವಾ ಸಹಕಾರಿ ಸಂಘದ ಸಿಬ್ಬಂದಿ;][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06-9-2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಜಿ) `ಪದಾಧಿಕಾರಿ' ಎಂದರೆ, ಚುನಾಯಿತ ಅಧ್ಯಕ್ಷ/ಉಪಾಧ್ಯಕ್ಷ/ ಸಭಾಧ್ಯಕ್ಷ/ ಉಪಸಭಾಧ್ಯಕ್ಷ/ಕಾರ್ಯದರ್ಶಿ ಅಥವಾ ಖಜಾಂಚಿ, ಸಮಾಪಕ, ಆಡಳಿತಾಧಿಕಾರಿ, ವಿಶೇಷಾಧಿಕಾರಿ ಮತ್ತು ಇದು ಸಹಕಾರಿ ಸಂಘದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಅಧಿಕಾರ ಹೊಂದಿರುವ ಮತ್ತು ಸಂಘದ ವ್ಯವಹಾರಗಳಿಗೆ ಪರಿಣಾಮವನ್ನು ಉಂಟುಮಾಡುವ ಕಾರ್ಯನೀತಿಗಳಿಗೆ ಸಂಬಂಧಿಸಿದಂತೆ ನಿರ್ದೇಶನ ನೀಡುವ ಮಂಡಳಿಯ ಒಬ್ಬ ಸದಸ್ಯನನ್ನು ಒಳಗೊಳ್ಳುತ್ತದೆ.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06-9-2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಹೆಚ್)``ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

[1][(ಹೆಚ್-1) `ಪ್ರಾಥಮಿಕ ಸಂಘ' ಎಂದರೆ ಬೇರೊಂದು ಸಹಕಾರ ಸಂಘಕ್ಕೆ ಸದಸ್ಯತ್ವದ ಅವಕಾಶವಿಲ್ಲದ ಸಹಕಾರ ಸಂಘ "][1]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಹೆಚ್-2) ‘ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ’ ಎಂದರೆ ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) 5ನೇ ಪ್ರಕರಣದ (CCIV) ಖಂಡದ ಅಡಿಯಲ್ಲಿ ಪರಿಭಾಷಿಸಲಾದ ಒಂದು ಸಹಕಾರ ಸಂಘ ಮತ್ತು ವಿವಿಧೋದ್ದೇಶ ಸಹಕಾರ ಸಂಘವೂ ಒಳಗೊಳ್ಳುತ್ತದೆ.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03-11-2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಐ) `ರಿಜಿಸ್ಟ್ರಾರ್' ಎಂದರೆ ಈ ಅಧಿನಿಯಮದ ಮೇರೆಗೆ ಸಹಕಾರ ಸಂಘಗಳ ರಿಜಿಸ್ಟ್ರಾರನ ಪ್ರಕಾರ್ಯಗಳನ್ನು ನೆರವೇರಿಸಲು ನಿಯುಕ್ತನಾದ ವ್ಯಕ್ತಿ; ಮತ್ತು ಅದರಲ್ಲಿ ರಿಜಿಸ್ಟ್ರಾರನ ಎಲ್ಲ ಅಧಿಕಾರಗಳನ್ನು ಅಥವಾ ಅವುಗಳಲ್ಲಿ ಯಾವೊಂದನ್ನು ಚಲಾಯಿಸುವಾಗ ಅವನಿಗೆ ನೆರವು ನೀಡಲು ನಿಯುಕ್ತನಾದ ಸಹಕಾರ ಸಂಘಗಳ ಅಧಿಕ ರಿಜಿಸ್ಟ್ರಾರ್, ಸಹಕಾರ ಸಂಘಗಳ ಜಂಟಿ ರಿಜಿಸ್ಟ್ರಾರ್, ಸಹಕಾರ ಸಂಘಗಳ ಉಪ ರಿಜಿಸ್ಟ್ರಾರ್ ಮತ್ತು ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ ಇವರು ಸೇರುತ್ತಾರೆ;][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಐ-1) `ರಿಸರ್ವ್ ಬ್ಯಾಂಕ್' ಎಂದರೆ ಭಾರತೀಯ ರಿಸರ್ವ್‌ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರಾಧಿನಿಯಮ 2) ಮೇರೆಗೆ ರಚಿತವಾದ ಭಾರತೀಯ ರಿಸರ್ವ್ ಬ್ಯಾಂಕ್;][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಐ-2) 'ಪ್ರತಿನಿಧಿ' ಎಂದರೆ ಪ್ರಾಥಮಿಕ ಸಹಕಾರ ಸಂಘದ ಅಥವಾ ಪೂರಕ ಸಹಕಾರ ಸಂಘದ ವ್ಯಕ್ತಿಗತ ಸದಸ್ಯರ ಒಂದು ಗುಂಪು ತಮ್ಮನ್ನು ಪ್ರತಿನಿಧಿಸಲು ಆಯ್ಕೆಮಾಡಿರುವ ಮತ್ತು ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಸಂಘದ ಪ್ರತಿನಿಧಿ ಮಹಾ ಸಭೆಯಲ್ಲಿ ಅವರ ಪರವಾಗಿ ಪಾಲ್ಗೊಳ್ಳುವ ಒಬ್ಬ ವ್ಯಕ್ತಿ.

(ಐ-3) 'ಪ್ರತಿನಿಧಿ ಮಹಾಸಭೆ' ಎಂದರೆ, ಪ್ರಾಥಮಿಕ ಸಹಕಾರ ಸಂಘದ ಅಥವಾ ಪೂರಕ ಸಹಕಾರ ಸಂಘದ ಎಲ್ಲ ಪ್ರತಿನಿಧಿಗಳು

(ಐ-4) 'ಪ್ರತಿನಿಧಿ ಮಹಾಸಭೆ' ಎಂದರೆ, ಈ ಅಧಿನಿಯಮ ಅಡಿಯಲ್ಲಿ ರಚಿಸಲಾದ ಈ ಅಧಿನಿಯಮದ ಉಪಬಂಧಗಳು, ನಿಯಮಗಳು ಮತ್ತು ಪ್ರಾಥಮಿಕ ಸಹಕಾರ ಸಂಘದ ಅಥವಾ ಪೂರಕ ಸಹಕಾರ ಸಂಘದ ಉಪವಿಧಿಗಳಿಗೆ ಅನುಸಾರವಾಗಿ ಕರೆಯಲಾದ ಮತ್ತು ನಡೆಸಲಾದ ಪ್ರತಿನಿಧಿಗಳ ಒಂದು ಸಭೆ][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಜೆ) `ನಿಯಮಗಳು' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು;

[1][(ಜೆ-1) `ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ' ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950 ಮತ್ತು (ಅನುಸೂಚಿತ ಪಂಗಡಗಳು) ಆದೇಶ, 1950ರಲ್ಲಿ ಕರ್ನಾಟಕ ರಾಜ್ಯದ ಸಂಬಂಧವಾಗಿ ನಿರ್ದಿಷ್ಟಪಡಿಸಿರುವ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು;

(ಜೆ-2) `ದ್ವಿತೀಯ ಸಂಸ್ಥೆ ' ಎಂದರೆ ಬೇರೊಂದು ಸಹಕಾರ ಸಂಘಕ್ಕೆ ಸದಸ್ಯತ್ವದ ಅವಕಾಶವಿರುವ ಸಹಕಾರ ಸಂಘ;

(ಜೆ-3) `ರಾಜ್ಯ ಪ್ರತಿನಿಧಿ' ಎಂದರೆ 2ಎ ಪ್ರಕರಣದ ಮೇರೆಗೆ ರಾಜ್ಯ ಪ್ರತಿನಿಧಿಯಾಗಿ ನೇಮಕಗೊಂಡ ಯಾರೇ ವ್ಯಕ್ತಿ;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಜೆ-4) 'ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್' ಎಂದರೆ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತ."

(ಜೆ-5) 'ರಾಜ್ಯ ಸಹಕಾರ ಬ್ಯಾಂಕ್' ಎಂದರೆ, ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುತ್ತಿರುವ ಒಂದು ಅಪೆಕ್ಸ್ ಸಂಘ.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03-11-2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಜೆ-6) 'ರಾಜ್ಯಮಟ್ಟದ ಸಹಕಾರ ಸಂಘ' ಎಂದರೆ, ಯಾವ ಸಹಕಾರ ಸಂಘದ ಕಾರ್ಯ ಪ್ರವರ್ತನೆಯ ಪ್ರದೇಶವು ಇಡೀ ರಾಜ್ಯಕ್ಕೆ ವ್ಯಾಪ್ತವಾಗುವುದೋ ಆ ಸಹಕಾರ ಸಂಘ][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಕೆ) `ನ್ಯಾಯಾಧಿಕರಣ' ಎಂದರೆ [2][ಕರ್ನಾಟಕ ಅಪೀಲು ನ್ಯಾಯಾಧೀಕರಣ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 10) ಮೇರೆಗೆ][2] ರಚಿಸಲಾದ ನ್ಯಾಯಾಧಿಕರಣ;][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 2001ರ ಅಧಿನಿಯಮ ಸಂಖ್ಯೆ 24ರ ಮೂಲಕ ಪ್ರತಿಯೋಜಿಸಲಾಗಿದೆ.

(ಎಲ್) [1][ಕರ್ನಾಟಕ ರಾಜ್ಯ][1]ದ ಯಾವುದಾದರೂ ಒಂದು ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿ ಅಥವಾ ಕಾನೂನಿನ ಉಪಬಂಧದ ಉಲ್ಲೇಖಗಳು ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಅಧಿನಿಯಮಿತಿ ಅಥವಾ ಕಾನೂನಿನ ಉಪಬಂಧ ಯಾವುದಾದರೂ ಇದ್ದರೆ ಅದಕ್ಕೆ ಸಂಬಂಧಿಸಿದಂತೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][ಅಧ್ಯಾಯ-I-ಎ

ಪ್ರಾಧಿಕಾರಿಗಳು ಮತ್ತು ಅಪೀಲು ನ್ಯಾಯಾಧಿಕರಣ

2ಎ. **ರಿಜಿಸ್ಟ್ರಾರ್, ಅಡಿಷನಲ್ ರಿಜಿಸ್ಟ್ರಾರರು, ಸಹ ರಿಜಿಸ್ಟ್ರಾರರು, ಉಪ-ರಿಜಿಸ್ಟ್ರಾರರು, [2][ರಾಜ್ಯ ಪ್ರತಿನಿಧಿಗಳು][2] ಮತ್ತು ಸಹಾಯಕ ರಿಜಿಸ್ಟ್ರಾರರು.-** (1) ರಾಜ್ಯ ಸರ್ಕಾರವು, ರಾಜ್ಯದ ಸಲುವಾಗಿ ಒಬ್ಬ ವ್ಯಕ್ತಿಯನ್ನು ಸಹಕಾರ ಸಂಘಗಳ ರಿಜಿಸ್ಟ್ರಾರನಾಗಿ ನೇಮಿಸಬಹುದು.

1. 1964ರ ಅಧಿನಿಯಮ ಸಂಖ್ಯೆ 4ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ರಾಜ್ಯಸರ್ಕಾರವು, ರಿಜಿಸ್ಟ್ರಾರನಿಗೆ ನೆರವಾಗಲು [1][ಸಹಕಾರ ಸಂಘಗಳ ಒಬ್ಬ ಅಡಿಷನಲ್ ರಿಜಿಸ್ಟ್ರಾರನನ್ನು ಮತ್ತು ತನಗೆ ಉಚಿತವೆಂದು ಕಂಡುಬರುವಷ್ಟು][1] ಜನ ಸಹಕಾರ ಸಂಘಗಳ ಉಪ-

ರಿಜಿಸ್ಟ್ರಾರರನ್ನು ಮತ್ತು [2][ರಾಜ್ಯ ಪ್ರತಿನಿಧಿಗಳನ್ನು ಮತ್ತು ಅಫಿಷಿಯೇಟಿಂಗ್ ಆಗಿ ಅಥವಾ ಅನ್ಯಥಾ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರರನ್ನು][2] ನೇಮಿಸಬಹುದು.

1. 1973ರ ಅಧಿನಿಯಮ ಸಂಖ್ಯೆ 14ರ ಮೂಲಕ 14.6.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ರಾಜ್ಯ ಸರ್ಕಾರವು, ರಿಜಿಸ್ಟ್ರಾರನಿಗೆ ನೆರವಾಗಲು ತಾನು ಉಚಿತವೆಂದು ಭಾವಿಸುವಂಥ ಪದನಾಮಗಳಿರುವ ಬೇರೆ ಅಧಿಕಾರಿಗಳನ್ನು ನೇಮಿಸಬಹುದು.

(4) [1][ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಹೊರತುಪಡಿಸಿ,][1] ಈ ಅಧಿನಿಯಮದ ಆಡಳಿತದಲ್ಲಿ ನಿಯೋಜಿಸಲಾದ ಎಲ್ಲ ಅಧಿಕಾರಿಗಳು ಮತ್ತು ವ್ಯಕ್ತಿಗಳು, ರಾಜ್ಯಸರ್ಕಾರದ ಮತ್ತು ರಿಜಿಸ್ಟ್ರಾರನ ಅಧೀಕ್ಷಣೆಗೆ, ನಿರ್ದೇಶನಕ್ಕೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು, ಮತ್ತು ಈ ಅಧಿನಿಯಮದ ಮೇರೆಗೆ ನೇಮಿಸಲಾದ ಪ್ರತಿಯೊಬ್ಬ ಅಧಿಕಾರಿಯು ಯಾವ ಅಧಿಕಾರಿಗೆ ಅಥವಾ ಅಧಿಕಾರಿಗಳಿಗೆ ಅಧೀನನಾಗಿರತಕ್ಕುದೆಂಬುದನ್ನು ರಾಜ್ಯಸರ್ಕಾರವು ನಿರ್ಧರಿಸತಕ್ಕುದು:

1. 1980ರ ಅಧಿನಿಯಮ ಸಂಖ್ಯೆ 3ರ ಮೂಲಕ 11.8.1977 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪರಂತು, ಈ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಲ್ಲಿ ಮತ್ತು ರಿಜಿಸ್ಟ್ರಾರನಲ್ಲಿ ನಿಹಿತವಾದ ಅಧಿಕಾರವನ್ನು ಯಾವುದೇ ನ್ಯಾಯಿಕ ಸದೃಶ ಪ್ರಕಾರ್ಯಗಳ ಚಲಾವಣೆಯಲ್ಲಿ ಮೂಲ ಪ್ರಾಧಿಕಾರದಂತೆ ಆಗಲಿ ಅಥವಾ ಅಪೀಲು ಪ್ರಾಧಿಕಾರದಂತೆ ಆಗಲಿ ಚಲಾಯಿಸುವ ಯಾರೇ ಪ್ರಾಧಿಕಾರಿಯ ವಿವೇಚನೆಯಲ್ಲಿ ಮಧ್ಯಪ್ರವೇಶ ಮಾಡುವಂತೆ ಚಲಾಯಿಸತಕ್ಕುದಲ್ಲ.

(5) ರಾಜ್ಯಸರ್ಕಾರವು, ಸಹಕಾರ ಸಂಘಗಳ ಅಡಿಷನಲ್ ರಿಜಿಸ್ಟ್ರಾರನಾಗಿ, ಸಹಕಾರ ಸಂಘಗಳ ಸಹ ರಿಜಿಸ್ಟ್ರಾರನಾಗಿ, ಸಹಕಾರ ಸಂಘಗಳ ಉಪ ರಿಜಿಸ್ಟ್ರಾರನಾಗಿ ಅಥವಾ [1][ಅಫಿಷಿಯೇಟಿಂಗ್ ಆಗಿ ಅಥವಾ ಅನ್ಯಥಾ][1] ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರನಾಗಿ ನೇಮಕಗೊಂಡ ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಮೇರೆಗೆ ರಿಜಿಸ್ಟ್ರಾರನಿಗಿರುವ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಹಿಸಿಕೊಡಬಹುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಪ್ರತಿಯೊಂದು ಸಹಕಾರ ಸಂಘದ ಲೆಕ್ಕಗಳಿಗೆ ಸಂಬಂಧಿಸಿದ [1][xxx][1] ವಿಷಯಗಳು, ರಾಜ್ಯದ ಸಹಕಾರ ಸಂಘಗಳ ರಿಜಿಸ್ಟ್ರಾರನ ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.

1. 1980ರ ಅಧಿನಿಯಮ ಸಂಖ್ಯೆ 3ರ ಮೂಲಕ 11.8.1977 ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.

[1][(7) ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳಲ್ಲಿ, ರಾಜ್ಯ ಪ್ರತಿನಿಧಿಯು, ರಾಜ್ಯ ಸರ್ಕಾರದ ಪರವಾಗಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾರೇ ಅಧಿಕಾರಿಯ ಪರವಾಗಿ,-

(i) ಅರ್ಜಿಗಳನ್ನು, ಅಪೀಲುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಿದ್ಧಪಡಿಸಲು ಮತ್ತು ಸಹಿಮಾಡಲು;

(ii) ಹಾಜರಾಗಲು, ಪ್ರತಿನಿಧಿಸಲು, ಕ್ರಮಕೈಗೊಳ್ಳಲು ಮತ್ತು ವಾದಿಸಲು;

(iii) ನೋಟೀಸುಗಳನ್ನು ಮತ್ತು ಇತರೆ ಪ್ರೊಸೆಸ್‌ಗಳನ್ನು ಸ್ವೀಕರಿಸಲು; ಮತ್ತು

(iv) ಅಂಥ ವ್ಯವಹರಣೆಗಳಿಗೆ ಸಂಬಂಧಪಟ್ಟ ಇತರ ಎಲ್ಲ ಕೆಲಸಗಳನ್ನು ಮಾಡಲು ಸಕ್ಷಮನಾಗಿರತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][2ಎಎ. [2][ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕ,][2] [2][ಸಹಕಾರ ಲೆಕ್ಕ ಪರಿಶೋಧನಾ ಅಡಿಷನಲ್ ನಿರ್ದೇಶಕ,][2] [2][ಸಹಕಾರ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕ,][2] [2][ಸಹಕಾರ ಲೆಕ್ಕ ಪರಿಶೋಧನಾ ಉಪನಿರ್ದೇಶಕರು,][2] ಮತ್ತು [2][ಸಹಕಾರ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರು][2].- 3[(1) ರಾಜ್ಯಸರ್ಕಾರವು ಒಬ್ಬ ವ್ಯಕ್ತಿಯನ್ನು ರಾಜ್ಯ ಸಹಕಾರ ಸಂಘಗಳ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನನ್ನಾಗಿ ನೇಮಕ ಮಾಡಬಹುದು][3]

1. 1980ರ ಅಧಿನಿಯಮ ಸಂಖ್ಯೆ 3ರ ಮೂಲಕ 11.8.1977 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಹಾಗೂ ಮತ್ತೊಮ್ಮೆ 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ರಾಜ್ಯ ಸರ್ಕಾರವು [1][ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನಿಗೆ][1] ನೆರವಾಗಲು [1][ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಅಡಿಷನಲ್ ನಿರ್ದೇಶಕನನ್ನು][1] ಮತ್ತು ಸಹಕಾರ ಸಂಘಗಳಿಗಾಗಿ ತನಗೆ ಯುಕ್ತವೆಂದು ಕಂಡುಬರುವಷ್ಟು ಜನ [1][ಸಹಕಾರ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರನ್ನು][1] [1][ಸಹಕಾರ ಲೆಕ್ಕಪರಿಶೋಧನಾ ಉಪ ನಿರ್ದೇಶಕರನ್ನು][1] ಮತ್ತು [1][ಸಹಕಾರ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರನ್ನು][1] ನೇಮಿಸಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) [1][ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ][1] ನೆರವಾಗಲು ರಾಜ್ಯ ಸರ್ಕಾರವು ತಾನು ಯುಕ್ತವೆಂದು ಭಾವಿಸುವಂಥ ಪದನಾಮವುಳ್ಳ ಇತರ ಅಧಿಕಾರಿಗಳನ್ನು ನೇಮಿಸಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಈ ಅಧಿನಿಯಮವನ್ನು ಜಾರಿಗೆ ತರಲು ನಿಯೋಜಿತರಾದ ಎಲ್ಲ ಅಧಿಕಾರಿಗಳು ಮತ್ತು ವ್ಯಕ್ತಿಗಳು, ರಾಜ್ಯಸರ್ಕಾರದ ಮತ್ತು [1][ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನ][1] ಅಧೀಕ್ಷಣೆಗೆ, ನಿರ್ದೇಶನಕ್ಕೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು. ಮತ್ತು ಈ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿಯು ಯಾವ ಅಧಿಕಾರಿಗೆ ಅಥವಾ ಅಧಿಕಾರಿಗಳಿಗೆ ಅಧೀನರಾಗಿರತಕ್ಕುದೆಂಬುದನ್ನು ರಾಜ್ಯಸರ್ಕಾರವು ನಿರ್ಧರಿಸತಕ್ಕುದು:

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಈ ಉಪಪ್ರಕರಣದ ಮೇರೆಗೆ ರಾಜ್ಯಸರ್ಕಾರದಲ್ಲಿ ಮತ್ತು [1][ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರಲ್ಲಿ][1] ನಿಹಿತವಾದ ಅಧಿಕಾರವನ್ನು, ಯಾವುದೇ ಅರೆ ನ್ಯಾಯಿಕ ಪ್ರಕಾರ್ಯಗಳಲ್ಲಿ ಮೂಲ ಅಥವಾ ಅಪೀಲು ಪ್ರಾಧಿಕಾರದಂತೆ ಅಧಿಕಾರವನ್ನು ಚಲಾಯಿಸುವ ಯಾರೇ ಪ್ರಾಧಿಕಾರಿಯ ವಿವೇಚನೆಯಲ್ಲಿ ಮಧ್ಯ ಪ್ರವೇಶಮಾಡುವಂತೆ ಚಲಾಯಿಸತಕ್ಕುದಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ರಾಜ್ಯಸರ್ಕಾರವು, ಸಹಕಾರ ಸಂಘಗಳ [1][ಸಹಕಾರ ಲೆಕ್ಕಪರಿಶೋಧನಾ ಅಡಿಷನಲ್ ನಿರ್ದೇಶಕನಾಗಿ,][1] [1][ಸಹಕಾರ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕನಾಗಿ,][1] [1][ಸಹಕಾರ ಲೆಕ್ಕಪರಿಶೋಧನಾ ಉಪನಿರ್ದೇಶಕನಾಗಿ,][1] [1][ಸಹಕಾರ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕನಾಗಿ][1] ನೇಮಕಗೊಂಡ ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಮೇರೆಗೆ [1][ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕ]ನಿಗಿರುವ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಹಿಸಿಕೊಡಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(6) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಪ್ರತಿಯೊಂದು ಸಹಕಾರ ಸಂಘದ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ವಿಷಯಗಳು ರಾಜ್ಯದ [1][ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನ][1] ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][2ಬಿ.xxx][1]

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಅಧ್ಯಾಯ-II

ಸಹಕಾರ ಸಂಘಗಳ ನೋಂದಣಿ

[1][3. xxx][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][4. **ನೋಂದಾಯಿಸಬಹುದಾದ ಸಂಘಗಳು.-** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಸಹಕಾರ ತತ್ವಗಳಿಗನುಸಾರವಾಗಿ ತನ್ನ ಸದಸ್ಯರ ಅಥವಾ ಸಾರ್ವಜನಿಕರ ಆರ್ಥಿಕ ಹಿತಗಳು ಅಥವಾ ಸಾಮಾನ್ಯ ಕಲ್ಯಾಣ ಅಭಿವೃದ್ಧಿಯನ್ನು ತನ್ನ ಉದ್ದೇಶವಾಗಿ ಇಟ್ಟುಕೊಂಡಿರುವ ಸಹಕಾರ ಸಂಘವನ್ನು ಅಥವಾ ಅಂಥ ಸಂಘದ ಕಾರ್ಯಪ್ರವರ್ತನೆಗಳನ್ನು ಸುಗಮಗೊಳಿಸುವ ಉದ್ದೇಶದಿಂದ ಸ್ಥಾಪಿಸಲಾಗಿರುವ ಸಹಕಾರ ಸಂಘವನ್ನು, ಈ ಅಧಿನಿಯಮದ ಮೇರೆಗೆ ನೋಂದಾಯಿಸಬಹುದು:

ಪರಂತು, ಯಾವುದೇ ಸಹಕಾರ ಸಂಘವನ್ನು, ಆರ್ಥಿಕವಾಗಿ ಅಭದ್ರವಾಗುವ ಸಂಭವವಿದ್ದರೆ, ಅಥವಾ ಅದರ ನೋಂದಣಿಯಿಂದ ಸಹಕಾರ ಚಳುವಳಿಯ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮವುಂಟಾಗಬಹುದಾಗಿದ್ದರೆ, ಅದನ್ನು ನೋಂದಾಯಿಸತಕ್ಕುದಲ್ಲ.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

5. **ನಿಯಮಿತ ಅಥವಾ ಅನಿಯಮಿತ ಹೊಣೆಗಾರಿಕೆಯೊಂದಿಗೆ ನೋಂದಣಿ.-** (1) ಯಾವೊಂದು ಸಹಕಾರ ಸಂಘವನ್ನು, ನಿಯಮಿತ ಅಥವಾ ಅನಿಯಮಿತ ಹೊಣೆಗಾರಿಕೆಯೊಂದಿಗೆ ನೋಂದಾಯಿಸಬಹುದು:

ಪರಂತು, ಯಾವ ಸಹಕಾರ ಸಂಘಕ್ಕೆ ಬೇರೆ ಯಾವುದೇ ಸಹಕಾರ ಸಂಘವು ಸದಸ್ಯತ್ವವನ್ನು ಹೊಂದಿರುವುದೋ ಆ ಸಹಕಾರ ಸಂಘದ ಹೊಣೆಗಾರಿಕೆಯು ನಿಯಮಿತವಾಗಿರತಕ್ಕುದು.

(2) ``ನಿಯಮಿತ" ಎಂಬ ಅಥವಾ ಯಾವುದೇ ಭಾರತೀಯ ಭಾಷೆಯಲ್ಲಿ ಅದಕ್ಕೆ ಸಮಾನಾರ್ಥಕ ಶಬ್ದವನ್ನು, ಈ ಅಧಿನಿಯಮದ ಮೇರೆಗೆ ನಿಯಮಿತ ಹೊಣೆಗಾರಿಕೆಯೊಂದಿಗೆ ನೋಂದಾಯಿತವಾಗುವ ಸಹಕಾರ ಸಂಘದ ಹೆಸರಿನಲ್ಲಿ ಕೊನೆಯ ಪದವಾಗಿ ಇಟ್ಟುಕೊಳ್ಳತಕ್ಕುದು.

6. **ಸಹಕಾರ ಸಂಘಗಳ ನೋಂದಣಿಗಾಗಿ ಅರ್ಜಿ.-** (1) ಯಾವೊಂದು ಸಹಕಾರ ಸಂಘದ ನೋಂದಣಿಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ [1][ಮತ್ತು ಅಂಥ ವಿಧಿ ವಿಧಾನಗಳನ್ನು ಪಾಲಿಸಿದ ತರುವಾಯ][1] ರಿಜಿಸ್ಟ್ರಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕುದು; ಮತ್ತು ಅರ್ಜಿದಾರರು ಸಂಘದ ವಿಷಯದಲ್ಲಿ ಅವನು ಅಗತ್ಯಪಡಿಸಬಹುದಾದಂಥ ಎಲ್ಲ ಮಾಹಿತಿಯನ್ನು ಒದಗಿಸತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಅಂಥ ಪ್ರತಿಯೊಂದು ಅರ್ಜಿಯು, ಈ ಮುಂದಿನ ಅಗತ್ಯಗಳಿಗೆ ಅನುಗುಣವಾಗಿ ಇರತಕ್ಕುದು, ಎಂದರೆ:-

(ಎ) ಅರ್ಜಿಯ ಜೊತೆಯಲ್ಲಿ ಸಹಕಾರ ಸಂಘದ ಪ್ರಸ್ತಾವಿತ ಉಪವಿಧಿಗಳ [2][ಐದು][2] ಪ್ರತಿಗಳನ್ನು ಲಗತ್ತಿಸತಕ್ಕುದು;

(ಬಿ) ಎಲ್ಲ ಅರ್ಜಿದಾರರು ವ್ಯಕ್ತಿಗಳಾಗಿರುವಲ್ಲಿ, ಅರ್ಜಿದಾರರ ಸಂಖ್ಯೆಯು ಹತ್ತಕ್ಕಿಂತ ಕಡಿಮೆ ಇರತಕ್ಕುದಲ್ಲ;

(ಸಿ) ಅರ್ಜಿದಾರರಲ್ಲಿ ಪ್ರತಿಯೊಬ್ಬನು ಹದಿನೆಂಟು ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನ ವ್ಯಕ್ತಿಯಾಗಿರತಕ್ಕುದು. [1][ಮತ್ತು ಅರ್ಜಿದಾರರು ಅದೇ ಕುಟುಂಬ ದವರಾಗಿರತಕ್ಕುದಲ್ಲ;

ವಿವರಣೆ:- ಈ ಖಂಡದ ಉದ್ದೇಶಕ್ಕಾಗಿ, ವ್ಯಕ್ತಿಗೆ ಸಂಬಂಧಪಟ್ಟಂತೆ ಕುಟುಂಬ ಎಂದರೆ ವ್ಯಕ್ತಿ, ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ, ಮತ್ತು ಅವರನ್ನು ಅವಲಂಬಿಸಿರುವ ಮಕ್ಕಳು ಮತ್ತು ತಂದೆ ತಾಯಿಗಳು;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಸದಸ್ಯರಿಗೆ ಸಾಲ ಕೊಡಲು ನಿಧಿಗಳ ರಚನೆ ಸೇರಿದಂತೆ ಸಹಕಾರ ಸಂಘದ ಉದ್ದೇಶಗಳಲ್ಲಿ ಒಂದೇ ಆಗಿದ್ದರೆ ಮತ್ತು ಎಲ್ಲ ಅರ್ಜಿದಾರರು ವ್ಯಕ್ತಿಗಳಾಗಿದ್ದರೆ, ಅರ್ಜಿದಾರರು ಒಂದೇ ಗ್ರಾಮದಲ್ಲಿ ಅಥವಾ ಪಟ್ಟಣದಲ್ಲಿ ಅಥವಾ [1][ಸಹಕಾರ ಸಂಘದ ಕಾರ್ಯಾಚರಣೆಯ ಉದ್ದೇಶಿತ ಪ್ರದೇಶದಲ್ಲಿ][1] ವಾಸಮಾಡುವವರು ಅಥವಾ ಒಂದೇ ಜನವರ್ಗಕ್ಕೆ ಸಂಬಂಧಿಸಿದವರು ಅಥವಾ ಒಂದೇ ವೃತ್ತಿಯನ್ನು ಅನುಸರಿಸುವವರು ಆಗಿರತಕ್ಕುದು;

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಇ) ಅರ್ಜಿದಾರರಲ್ಲಿ ವ್ಯಕ್ತಿಯಾಗಿರುವ ಪ್ರತಿಯೊಬ್ಬರೂ ಮತ್ತು ಅರ್ಜಿದಾರನಾಗಿರುವ ಯಾವುದೇ ಸಹಕಾರ ಸಂಘದ ಪರವಾಗಿ ಯುಕ್ತವಾಗಿ ಅಧಿಕೃತ ವ್ಯಕ್ತಿಯು ಅರ್ಜಿಗೆ ಸಹಿ ಮಾಡತಕ್ಕುದು;

[1][(ಎಫ್) ಅರ್ಜಿಯೊಂದಿಗೆ ನಿಯಮಿಸಬಹುದಾದಂಥ ಶುಲ್ಕವನ್ನು ಸಲ್ಲಿಸಿರತಕ್ಕುದ್ದು ಮತ್ತು ಸಹಕಾರ ಸಂಘಗಳ ಬೇರೆ ಬೇರೆ ವರ್ಗಕ್ಕೆ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 27.10.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಜಿ) ಈ ಅಧಿನಿಯಮದ ಅಡಿಯಲ್ಲಿ ಸಹಕಾರ ಸಂಘವಾಗಿ ಪರಿವರ್ತನೆ ಹೊಂದುವ ಉದ್ದೇಶವನ್ನು ಹೊಂದಿರುವ ಸಹಕಾರಿಯ ಸಂದರ್ಭದಲ್ಲಿ, ಅಂಥ ಪರಿವರ್ತನೆಯನ್ನು ಅನುಮೋದಿಸುವ ಅಂಥ ಸಹಕಾರಿಯ ಸಾಮಾನ್ಯ ಸಭೆಯ ಗೊತ್ತುವಳಿಯು ಅರ್ಜಿಯ ಜೊತೆಯಲ್ಲಿ ಇರತಕ್ಕದ್ದು.][1]

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

7. **ನೋಂದಣಿ.-** (1) ರಿಜಿಸ್ಟ್ರಾರನಿಗೆ,-

(ಎ) ಅರ್ಜಿಯು ಈ ಅಧಿನಿಯಮದ, [1][ನಿಯಮಗಳ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ][1] ಉಪಬಂಧಗಳನ್ನು ಪಾಲಿಸಿದೆಯೆಂದು;

(ಬಿ) ಪ್ರಸ್ತಾವಿತ ಸಂಘದ ಉದ್ದೇಶಗಳು 4ನೇ ಪ್ರಕರಣಕ್ಕನುಸಾರವಾಗಿವೆಯೆಂದು;

(ಸಿ) ಪ್ರಸ್ತಾವಿತ ಸಂಘದ ಧ್ಯೇಯಗಳು ಸಾಮಾಜಿಕ ನ್ಯಾಯದ ತತ್ವಗಳಿಗೆ ಅಸಂಗತವಾಗಿಲ್ಲವೆಂದು;

(ಡಿ) ಪ್ರಸ್ತಾವಿತ ಉಪವಿಧಿಗಳು ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿಲ್ಲವೆಂದು; ಮತ್ತು

(ಇ) ಪ್ರಸ್ತಾವಿತ ಸಂಘವು ಸುಭದ್ರ ವ್ಯವಹಾರದ ಅಗತ್ಯತೆಗಳನ್ನು ಪಾಲಿಸುವುದೆಂದು, ಮತ್ತು ಅದು ಯಶಸ್ವಿಯಾಗುವ ಸಮಂಜಸ ಅವಕಾಶವಿದೆ ಎಂದು

- ಮನದಟ್ಟಾದರೆ, [1][ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ರಿಜಿಸ್ಟ್ರಾರನು][1] ಆ ಸಹಕಾರ ಸಂಘವನ್ನು ಮತ್ತು ಅದರ ಉಪವಿಧಿಗಳನ್ನು ನೋಂದಾಯಿಸಬಹುದು. [2][ಮತ್ತು ಅರ್ಜಿಯಲ್ಲಿ ನಮೂದಿಸಿದ ಮುಖ್ಯ ಪ್ರವರ್ತಕ ಅಥವಾ ಪರಿವರ್ತನೆಗೊಂಡ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಿಗೆ ನೋಂದಣಿ ಪ್ರಮಾಣ ಪತ್ರವನ್ನು ಮತ್ತು ನೋಂದಾಯಿತ ಉಪವಿಧಿಗಳ ಮೂಲ ಪ್ರತಿಯನ್ನು ದಿನಾಂಕ ಸಹಿತ ತನ್ನ ಸಹಿ ಹಾಗೂ ಮುದ್ರೆಯೊಡನೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು.][2]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಸೇರಿಸಲಾಗಿದೆ.

[1][[2][(2) ರಿಜಿಸ್ಟ್ರಾರನಿಗೆ, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಅರ್ಜಿಯನ್ನು ವಿಲೇವಾರಿ ಮಾಡಲು ಸಾಧ್ಯವಾಗದಿದ್ದರೆ, ಸಂಘವನ್ನು ಮತ್ತು ಉಪಕವಿಧಿಗಳನ್ನು ನೋಂದಣಿ ಮಾಡಲಾಗಿದೆಯೆಂದು ಭಾವಿಸತಕ್ಕುದು.][2]

(3) ಪ್ರಸ್ತಾವಿತ ಸಹಕಾರ ಸಂಘವನ್ನು ನೋಂದಾಯಿಸಲು ರಿಜಿಸ್ಟ್ರಾರನು ನಿರಾಕರಿಸಿದರೆ ಅವನು ತನ್ನ ನಿರ್ಣಯವನ್ನು ಅದರ ಕಾರಣ ಸಹಿತ ಅರ್ಜಿ ಸಲ್ಲಿಸಿದ ವ್ಯಕ್ತಿಗೆ ಮತ್ತು ಅರ್ಜಿ ಸಲ್ಲಿಸಿದವರು ಒಬ್ಬರಿಗಿಂತ ಹೆಚ್ಚಾಗಿರುವಲ್ಲಿ, ಅರ್ಜಿಯಲ್ಲಿ ಮೊದಲು ಸಹಿ ಮಾಡಿದ ವ್ಯಕ್ತಿಗೆ ಆ ಕೂಡಲೇ ತಿಳಿಸತಕ್ಕುದು.

(4) ರಿಜಿಸ್ಟ್ರಾರನು, ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಅಥವಾ ನೊಂದಾಯಿತವಾಗಿದೆಯೆಂದು ಭಾವಿಸಲಾದ ಎಲ್ಲ ಸಹಕಾರ ಸಂಘಗಳ ಒಂದು ರಿಜಿಸ್ಟರನ್ನು ಇಟ್ಟಿರತಕ್ಕುದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ (2),(3) ಮತ್ತು (4)ನೇ ಉಪಪ್ರಕರಣಗಳನ್ನು 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

8. ನೋಂದಣಿ ಪ್ರಮಾಣಪತ್ರ.- ಈ ಅಧಿನಿಯಮದ ಮೇರೆಗೆ ಒಂದು ಸಹಕಾರ ಸಂಘವು ನೋಂದಾಯಿತವಾಗಿದ್ದರೆ, [1][ಅಥವಾ ನೋಂದಣಿಯಾಗಿದೆಯೆಂದು ಭಾವಿಸಿದ್ದರೆ][1] ರಿಜಿಸ್ಟ್ರಾರನು, ತಾನು ಸಹಿ ಮಾಡಿದ ಒಂದು ನೋಂದಣಿ ಪ್ರಮಾಣಪತ್ರವನ್ನು ಕೊಡತಕ್ಕುದು ಮತ್ತು ಆ ಪ್ರಮಾಣಪತ್ರವು ಅದರಲ್ಲಿ ನಮೂದಿಸಲಾದ ಸಹಕಾರ ಸಂಘವು ಈ ಅಧಿನಿಯಮದ ಮೇರೆಗೆ ಯುಕ್ತವಾಗಿ ನೋಂದಾಯಿತವಾದ [1][ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಿದ][1] ಸಹಕಾರ ಸಂಘವಾಗಿದೆಯೆಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

9. ಸಹಕಾರ ಸಂಘಗಳು ನಿಗಮಿತ ನಿಕಾಯಗಳಾಗಿರುವುದು.- ಸಹಕಾರ ಸಂಘವು ನೋಂದಣಿ ಮೂಲಕ, ಅದನ್ನು ಯಾವ ಹೆಸರಿನಿಂದ ನೋಂದಾಯಿಸಲಾಗಿದೆಯೋ ಆ ಹೆಸರುಳ್ಳ ನಿಗಮಿತ ನಿಕಾಯವಾಗತಕ್ಕುದು. ಅದು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಒಂದು ಸಾಮಾನ್ಯ ಮೊಹರನ್ನು ಹೊಂದಿರತಕ್ಕುದು, ಮತ್ತು ಸ್ವತ್ತು ಧಾರಣ ಮಾಡುವ, ಕರಾರು ಮಾಡಿಕೊಳ್ಳುವ, ದಾವೆಗಳು ಹಾಗೂ ಇತರ ಕಾನೂನು ವ್ಯವಹರಣೆಗಳನ್ನು ಹೂಡುವ ಮತ್ತು ಪ್ರತಿವಾದಿಸುವ ಮತ್ತು ಅದನ್ನು ಯಾವ ಉದ್ದೇಶಗಳಿಗಾಗಿ ರಚಿಸಲಾಗಿದೆಯೋ ಆ ಉದ್ದೇಶಗಳಿಗಾಗಿ ಅವಶ್ಯವಾದ ಎಲ್ಲ ಕಾರ್ಯಗಳನ್ನು ಮಾಡಲು ಅಧಿಕಾರ ಹೊಂದಿರತಕ್ಕುದು.

10. ಸಹಕಾರ ಸಂಘದ ಹೆಸರಿನ ಬದಲಾವಣೆ.- (1) ಸಹಕಾರ ಸಂಘವು, ತನ್ನ ಉಪವಿಧಿಗಳನ್ನು ತಿದ್ದುಪಡಿ ಮಾಡುವ ಮೂಲಕ ತನ್ನ ಹೆಸರನ್ನು ಬದಲಾಯಿಸಿಕೊಳ್ಳಬಹುದು.

(2) ಸಹಕಾರ ಸಂಘವು ತನ್ನ ಹೆಸರನ್ನು ಬದಲಾಯಿಸಿದಾಗ, ರಿಜಿಸ್ಟ್ರಾರನು, ಸಹಕಾರ ಸಂಘಗಳ ರಿಜಿಸ್ಟರಿನಲ್ಲಿ ಅದರ ಹಿಂದಿನ ಹೆಸರಿನ ಸ್ಥಳದಲ್ಲಿ ಹೊಸ ಹೆಸರನ್ನು

ದಾಖಲುಮಾಡತಕ್ಕುದು, ಮತ್ತು ತದನುಸಾರವಾಗಿ ನೋಂದಣಿ ಪ್ರಮಾಣಪತ್ರದಲ್ಲಿ ತಿದ್ದುಪಡಿ ಮಾಡತಕ್ಕುದು.

(3) ಸಹಕಾರ ಸಂಘದ ಹೆಸರಿನ ಬದಲಾವಣೆಯಿಂದ ಆ ಸಹಕಾರ ಸಂಘದ ಯಾವುವೇ ಹಕ್ಕುಗಳಿಗೆ ಅಥವಾ ಬಾಧ್ಯತೆಗಳಿಗೆ ಬಾಧಕವಾಗತಕ್ಕುದಲ್ಲ ಅಥವಾ ಆ ಸಂಘವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಯಾವುದೇ ಕಾನೂನು ವ್ಯವಹರಣೆಗಳನ್ನು ದೋಷಯುಕ್ತಗೊಳಿಸತಕ್ಕುದಲ್ಲ ಮತ್ತು ಆ ಸಂಘದ ಹಿಂದಿನ ಹೆಸರಿನಲ್ಲಿ ಅದು ಅಥವಾ ಅದರ ವಿರುದ್ಧ ಮುಂದುವರಿಸಿರಬಹುದಾದ ಅಥವಾ ಪ್ರಾರಂಭಿಸಿರಬಹುದಾದ ಯಾವುವೇ ಕಾನೂನು ವ್ಯವಹರಣೆಗಳನ್ನು ಅದರ ಹೊಸ ಹೆಸರಿನಲ್ಲಿ ಮುಂದುವರಿಸಬಹುದು ಅಥವಾ ಪ್ರಾರಂಭಿಸಬಹುದು.

11. ದಾಯಿತ್ವದ ಬದಲಾವಣೆ.- (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟು, ಸಹಕಾರ ಸಂಘವು, ತನ್ನ ಉಪವಿಧಿಗಳನ್ನು ತಿದ್ದುಪಡಿಮಾಡುವ ಮೂಲಕ ತನ್ನ ದಾಯಿತ್ವದ ಸ್ವರೂಪ ಅಥವಾ ವ್ಯಾಪ್ತಿಯನ್ನು ಬದಲಾಯಿಸಬಹುದು.

(2) ಸಹಕಾರ ಸಂಘವು, ತನ್ನ ದಾಯಿತ್ವದ ಸ್ವರೂಪ ಅಥವಾ ವ್ಯಾಪ್ತಿಯನ್ನು ಬದಲಾಯಿಸಲು ನಿರ್ಣಯವನ್ನು ಪಾಸು ಮಾಡಿದಾಗ, ತನ್ನ ಎಲ್ಲ ಸದಸ್ಯರಿಗೆ ಮತ್ತು ಲೇಣೇದಾರರಿಗೆ ಆ ಬಗ್ಗೆ ಲಿಖಿತ ನೋಟೀಸನ್ನು ಕೊಡತಕ್ಕುದು, ಮತ್ತು ತದ್ವಿರುದ್ಧವಾದ ಯಾವುದೇ ಉಪವಿಧಿ ಅಥವಾ ಕರಾರು ಇದ್ದರೂ, ಯಾರೇ ಸದಸ್ಯನು ಅಥವಾ ಲೇಣೇದಾರನು ತನಗೆ ಆ ನೋಟೀಸು ಜಾರಿಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಸಂದರ್ಭಾನುಸಾರ, ತನ್ನ ಷೇರುಗಳನ್ನು, ಠೇವಣಿಗಳನ್ನು ಅಥವಾ ಸಾಲಗಳನ್ನು ಹಿಂತೆಗೆದುಕೊಳ್ಳುವ ಆಯ್ಕೆಯ ಅವಕಾಶ ಹೊಂದಿರತಕ್ಕುದು.

(3) (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ತನ್ನ ಆಯ್ಕೆಯ ಅವಕಾಶವನ್ನು ಚಲಾಯಿಸದ ಯಾರೇ ಸದಸ್ಯನು ಅಥವಾ ಲೇಣೇದಾರನು ಆ ಬದಲಾವಣೆಗೆ ಒಪ್ಪಿಕೊಂಡಿರುವುದಾಗಿ ಭಾವಿಸತಕ್ಕುದು.

(4) ಸಹಕಾರ ಸಂಘದ ದಾಯಿತ್ವದ ಸ್ವರೂಪ ಅಥವಾ ವ್ಯಾಪ್ತಿಯನ್ನು ಬದಲಾಯಿಸುವ ಉಪವಿಧಿಯ ತಿದ್ದುಪಡಿಯನ್ನು,

(ಎ) ಎಲ್ಲಾ ಸದಸ್ಯರ ಮತ್ತು ಲೇಣೇದಾರರ ಒಪ್ಪಿಗೆಯನ್ನು ಪಡೆಯುವವರೆಗೆ ಅಥವಾ ಪಡೆಯಲಾಗಿದೆ ಎಂದು ಭಾವಿಸುವವರೆಗೆ; ಅಥವಾ

(ಬಿ) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆಯ್ಕೆಯ ಅವಕಾಶವನ್ನು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಚಲಾಯಿಸುವ ಸದಸ್ಯರ ಮತ್ತು ಲೇಣೇದಾರರ ಎಲ್ಲ ಕ್ಲೇಮುಗಳನ್ನು ಸಂಪೂರ್ಣವಾಗಿ ಪೂರೈಸುವವರೆಗೆ

- ನೋಂದಾಯಿಸತಕ್ಕುದಲ್ಲ ಅಥವಾ ಅವು ಜಾರಿಯಾಗತಕ್ಕುದಲ್ಲ.

[1][**11ಎ- ಉಪವಿಧಿಗಳು.-** (1) ಪ್ರತಿಯೊಂದು ಸಹಕಾರ ಸಂಘವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿತವಾದ ನಿಯಮಗಳಿಗೆ ಅನುಸಾರವಾಗಿ ತನ್ನ ಉಪವಿಧಿಗಳನ್ನು ರಚಿಸತಕ್ಕದ್ದು.

(2) ಯಾವ ನಿರ್ದಿಷ್ಟ ವಿಷಯಗಳನ್ನು ಅಧಿನಿಯಮ ಅಥವಾ ನಿಯಮಗಳು ಉಪಬಂದಿಸುವುದಲ್ಲವೋ ಮತ್ತು ಉಪವಿಧಿಗಳು ಮತ್ತಷ್ಟು ವಿನಿಯಮಿಸಬಹುದಾಗಿದ್ದು, ಆದರೆ ಪ್ರತಿಯೊಂದು ಸಹಕಾರ ಸಂಘದ ಕಾರ್ಯನಿರ್ವಹಣೆಯನ್ನು ಉಲಂಘಿಸುವುದಿಲ್ಲವೋ ಆ ನಿರ್ಧಿಷ್ಟ ವಿಷಯಗಳನ್ನು ಅದರ ಉಪವಿಧಿಗಳ ಮೂಲಕ ವಿನಿಯಮಿಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 03ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

12. ಸಹಕಾರ ಸಂಘದ ಉಪವಿಧಿಗಳ ತಿದ್ದುಪಡಿ.- 1[(1) ಒಂದು ಸಹಕಾರ ಸಂಘವು, ಕಾಲಕಾಲಕ್ಕೆ, ಈ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ತನ್ನ ಉಪವಿಧಿಗಳನ್ನು ತಿದ್ದುಪಡಿ ಮಾಡಬಹುದು:

ಪರಂತು, ಪ್ರತಿಯೊಂದು ಸಹಕಾರ ಸಂಘವು, ಸದರಿ ತಿದ್ದುಪಡಿಗಳು ಜಾರಿಗೆ ಬರುವ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ಕಾಲಕಾಲಕ್ಕೆ ಈ ಅಧಿನಿಯಮ ಅಥವಾ ನಿಯಮಗಳಿಗೆ ಮಾಡಲಾದ ತಿದ್ದುಪಡಿಗಳಿಗೆ ಅನುಸಾರವಾಗಿ ತಿದ್ದುಪಡಿಗಳನ್ನು ಮಾಡತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 03ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(1ಎ.) ಅಂಥ ತಿದ್ದುಪಡಿಯ ಪ್ರತಿಯೊಂದು ಪ್ರಸ್ತಾವದ ಜೊತೆಗೆ ಗೊತ್ತುಪಡಿಸಬಹುದಾದಂಥ ಶುಲ್ಕವು ಇರತಕ್ಕುದು ಮತ್ತು ಸಹಕಾರ ಸಂಘಗಳ ಬೇರೆ ಬೇರೆ ವರ್ಗಕ್ಕೆ ಅಥವಾ ವರ್ಗಗಳಿಗೆ ಬೇರೆ ಬೇರೆ ಫೀಜನ್ನು ಗೊತ್ತುಪಡಿಸಬಹುದು.][1]

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಅಂಥ ತಿದ್ದುಪಡಿಯ ಪ್ರತಿಯೊಂದು ಪ್ರಸ್ತಾವವನ್ನು ರಿಜಿಸ್ಟ್ರಾರನಿಗೆ ಕಳಿಸತಕ್ಕುದು ಮತ್ತು ಆ ಪ್ರಸ್ತಾವಿತ ತಿದ್ದುಪಡಿಯು,-

(i) ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ತದ್ವಿರುದ್ಧವಾಗಿಲ್ಲವೆಂದು;

(ii) ಸಹಕಾರ ತತ್ವಗಳಿಗೆ ಪ್ರತಿಕೂಲವಾಗಿಲ್ಲವೆಂದು;

(iii) ಸುಭದ್ರ ವ್ಯವಹಾರದ ಅಗತ್ಯತೆಗಳನ್ನು ಈಡೇರಿಸುವುದೆಂದು;

(iv) ಸಂಘದ ಸದಸ್ಯರ ಆರ್ಥಿಕ ಹಿತಾಸಕ್ತಿಗಳನ್ನು ಸಂವರ್ಧಿಸುವುದೆಂದು; ಮತ್ತು

(v) ಸಾಮಾಜಿಕ ನ್ಯಾಯದ ತತ್ವಗಳಿಗೆ ಅಸಂಗತವಾಗಿಲ್ಲವೆಂದು

- ರಿಜಿಸ್ಟ್ರಾರನಿಗೆ ಮನದಟ್ಟಾದರೆ, [1][ಅವನು ಪ್ರಸ್ತಾವವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ತಿದ್ದುಪಡಿಯನ್ನು ನೋಂದಾಯಿಸತಕ್ಕುದು][1].

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2-ಎ) ರಿಜಿಸ್ಟ್ರಾರನು (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಅರ್ಜಿಯನ್ನು ವಿಲೇ ಮಾಡಲು ಸಾಧ್ಯವಾಗದಿದ್ದರೆ, ಉಪ-ವಿಧಿಗಳ ತಿದ್ದುಪಡಿಯನ್ನು ನೋಂದಣಿ ಮಾಡಲಾಗಿದೆಯೆಂದು ಭಾವಿಸತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(3) ರಿಜಿಸ್ಟ್ರಾರನು, ಸಂಘದ ಉಪ-ವಿಧಿಗಳ ತಿದ್ದುಪಡಿಯನ್ನು ನೋಂದಾಯಿಸಿದರೆ ಅಥವಾ ಅದು ನೋಂದಾಯಿತವಾಗಿದೆಯೆಂದು ಭಾವಿಸಿದರೆ ಅವನು ತಾನು ಪ್ರಮಾಣೀಕರಿಸಿದ ತಿದ್ದುಪಡಿಯ ಪ್ರತಿಯನ್ನು ಸಂಘಕ್ಕೆ ನೀಡತಕ್ಕುದು ಮತ್ತು ಅಂಥ ಪ್ರಮಾಣ ಪತ್ರವು, ಸಂದರ್ಭಾನುಸಾರ, ಉಪ-ವಿಧಿಗಳ ತಿದ್ದುಪಡಿಯನ್ನು ಕ್ರಮಬದ್ಧವಾಗಿ ನೋಂದಾಯಿಸಲಾಗಿದೆ ಅಥವಾ ಅದು ನೋಂದಾಯಿತವಾಗಿದೆಯೆಂದು ಭಾವಿಸಲಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ರಿಜಿಸ್ಟ್ರಾರನು ಸಹಕಾರ ಸಂಘದ ಉಪ-ವಿಧಿಗಳ ತಿದ್ದುಪಡಿಯನ್ನು ನೋಂದಾಯಿಸಲು ನಿರಾಕರಿಸುವಲ್ಲಿ, ಅವನು ನಿರಾಕರಣೆಯ ಆದೇಶವನ್ನು, ಅದರ ಕಾರಣಗಳ ಸಹಿತ ಸಂಘಕ್ಕೆ ಕಳುಹಿಸತಕ್ಕುದು.

[1][(5) ರಿಜಿಸ್ಟ್ರಾರನಿಗೆ, ಅಂಥ ಸಂಘದ ಹಿತದೃಷ್ಟಿಯಲ್ಲಿ ಅಥವಾ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಜಾರಿಗೊಳಿಸಲು ಸಂಘದ ಉಪವಿಧಿಗಳ ಯಾವುದೇ ತಿದ್ದುಪಡಿಯು ಅವಶ್ಯ ಅಥವಾ ಅಪೇಕ್ಷಣೀಯವೆಂದು ಕಂಡುಬಂದರೆ, ರಿಜಿಸ್ಟ್ರಾರನು, ಆದೇಶದ ಮೂಲಕ ನಿರ್ದಿಷ್ಟಪಡಿಸಿದ ಸಮಯದೊಳಗೆ ನಿಯಮಿಸಬಹುದಾದ ಅಂಥ ರೀತಿಯಲ್ಲಿ ತಾನು ಪ್ರಸ್ತಾವಿಸಿದ ತಿದ್ದುಪಡಿಯನ್ನು ಮಾಡುವಂತೆ ಆ ಸಹಕಾರ ಸಂಘಕ್ಕೆ ನಿರ್ದೇಶಿಸಬಹುದು.

(6) ಸಹಕಾರ ಸಂಘವು, ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಸಮಯದೊಳಗೆ ಅಂಥ ತಿದ್ದುಪಡಿಯನ್ನು ಮಾಡದಿದ್ದರೆ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ರಿಜಿಸ್ಟ್ರಾರನು, ಸಹಕಾರ

ಸಂಘಕ್ಕೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಸದರಿ ತಿದ್ದುಪಡಿಯನ್ನು ನೋಂದಾಯಿಸಬಹುದು ಮತ್ತು ಅದರ ಪ್ರತಿಯನ್ನು ತಾನು ಸಹಿ ಮಾಡಿದ ಒಂದು ಪ್ರಮಾಣಪತ್ರದೊಂದಿಗೆ ಸಹಕಾರ ಸಂಘಕ್ಕೆ ಕಳುಹಿಸಿಕೊಡಬಹುದು ಮತ್ತು ತಿದ್ದುಪಡಿಯು ಯುಕ್ತವಾಗಿ ನೋಂದಾಯಿತವಾಗಿದೆ ಎಂಬುದಕ್ಕೆ ಆ ಪ್ರಮಾಣಪತ್ರವು ನಿರ್ಣಾಯಕ ಸಾಕ್ಷ್ಯವಾಗತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

13. ಉಪವಿಧಿಗಳ ತಿದ್ದುಪಡಿಗಳು ಯಾವಾಗ ಜಾರಿಯಲ್ಲಿ ಬರುತ್ತವೆ.- 106ನೇ ಪ್ರಕರಣದ ಮೇರೆಗೆ ಯಾವುದೇ ಅಪೀಲು ಆದೇಶಕ್ಕೆ ಒಳಪಟ್ಟು, ಸಹಕಾರ ಸಂಘದ ಉಪವಿಧಿಗಳ ತಿದ್ದುಪಡಿಯು, ಒಂದು ನಿರ್ದಿಷ್ಟ ದಿನದಿಂದ ಜಾರಿಯಲ್ಲಿ ಬರತಕ್ಕುದೆಂದು ವ್ಯಕ್ತಪಡಿಸಿದ್ದ ಹೊರತು, ಅದು ನೋಂದಾಯಿತವಾದ ದಿನದಂದು ಜಾರಿಗೆ ಬರತಕ್ಕುದು.

14. ಸಹಕಾರ ಸಂಘಗಳ ಸಮ್ಮಿಳನ, ಆಸ್ತಿಗಳು ಮತ್ತು ದಾಯಿತ್ವಗಳ ವರ್ಗಾವಣೆ ಮತ್ತು ವಿಭಜನೆ.- (1) ಸಹಕಾರ ಸಂಘವು, ಸಂಘದ ಮಹಾ ಸಭೆಯಲ್ಲಿ ಹಾಜರಿದ್ದು ಮತನೀಡುವ ಸದಸ್ಯರ ಮೂರನೇ ಎರಡರಷ್ಟು ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ,-

(ಎ) ತನ್ನನ್ನು ಎರಡು ಅಥವಾ ಹೆಚ್ಚು ಸಹಕಾರ ಸಂಘಗಳಾಗಿ ವಿಭಾಗಿಸಿಕೊಳ್ಳಬಹುದು; ಅಥವಾ

(ಬಿ) ತನ್ನ ಎಲ್ಲ ಆಸ್ತಿಗಳು ಮತ್ತು ದಾಯಿತ್ವಗಳನ್ನು ಅಥವಾ ಅವುಗಳ ಭಾಗವನ್ನು ಅದೇ ಬಗೆಯ ನಿರ್ಣಯದ ಮೂಲಕ ಅಂಥ ವರ್ಗಾವಣೆಗೆ ಒಪ್ಪಿಕೊಂಡ ಯಾವುದೇ ಇತರ ಸಹಕಾರ ಸಂಘಕ್ಕೆ ವರ್ಗಾಯಿಸಬಹುದು.

(2) ಯಾವುವೇ ಎರಡು ಅಥವಾ ಹೆಚ್ಚು ಸಹಕಾರ ಸಂಘಗಳು, ಅಂಥ ಪ್ರತಿಯೊಂದು ಸಂಘದ ಮಹಾ ಸಭೆಯಲ್ಲಿ ಹಾಜರಿದ್ದು ಮತನೀಡುವ ಸದಸ್ಯರ ಮೂರನೇ ಎರಡರಷ್ಟು ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ಪರಸ್ಪರ ಸಮ್ಮಿಳನಗೊಂಡು, ಹೊಸ ಸಹಕಾರ ಸಂಘವನ್ನು ರೂಪಿಸಿಕೊಳ್ಳಬಹುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗಿನ ಸಹಕಾರ ಸಂಘದ ನಿರ್ಣಯದಲ್ಲಿ, ಸಂದರ್ಭಾನುಸಾರ, ವರ್ಗಾವಣೆ, ವಿಭಜನೆ ಅಥವಾ ಸಮ್ಮಿಳನದ ಎಲ್ಲ ವಿವರಗಳು ಇರತಕ್ಕುದು ಮತ್ತು ಅಂಥ ಯಾವುದೇ ನಿರ್ಣಯವು ರಿಜಿಸ್ಟ್ರಾರನು ಅನುಮೋದಿಸಿದ ಹೊರತು ಜಾರಿಗೆ ಬರತಕ್ಕುದಲ್ಲ:

[1][ಪರಂತು, ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ, ರಿಸರ್ವ್ ಬ್ಯಾಂಕಿನಿಂದ ಲಿಖಿತ ಪೂರ್ವ ಮಂಜೂರಾತಿಯಿಲ್ಲದೆ ರಿಜಿಸ್ಟ್ರಾರನು ಅಂಥ ನಿರ್ಣಯವನ್ನು ಅನುಮೋದಿಸತಕ್ಕುದಲ್ಲ.][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಸಹಕಾರ ಸಂಘವು, ಅಂಥ ಯಾವುದೇ ನಿರ್ಣಯವನ್ನು ಅಂಗೀಕರಿಸಿದಾಗ ಮತ್ತು ಅದನ್ನು ರಿಜಿಸ್ಟ್ರಾರನು ಅನುಮೋದಿಸಿದಾಗ, ಸಹಕಾರ ಸಂಘವು, ತನ್ನ ಎಲ್ಲ ಲೇಣೇದಾರರಿಗೆ ಮತ್ತು ಆ ನಿರ್ಣಯದ ಪರವಾಗಿ ಮತ ನೀಡದಿದ್ದ ಸಂಘದ ಸದಸ್ಯರಿಗೆ, ಆ ಬಗ್ಗೆ ಲಿಖಿತ ನೋಟೀಸು ಕೊಡತಕ್ಕುದು, ಮತ್ತು ತದ್ವಿರುದ್ಧವಾದ ಯಾವುವೇ ಉಪವಿಧಿಗಳು ಅಥವಾ ಕರಾರು ಇದ್ದರೂ, ಅಂಥ ನೋಟೀಸು ಕೊಡಲಾಗಿದ್ದ ಯಾರೇ ಲೇಣೇದಾರನಿಗೆ ಅಥವಾ ಸದಸ್ಯನಿಗೆ ಅವನಿಗೆ ನೋಟೀಸು ಜಾರಿಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಸಂದರ್ಭಾನುಸಾರ, ತನ್ನ ಷೇರುಗಳನ್ನು, ಠೇವಣಿಗಳನ್ನು ಅಥವಾ ಸಾಲಗಳನ್ನು ಹಿಂತೆಗೆದುಕೊಳ್ಳುವ ಆಯ್ಕೆಯ ಅವಕಾಶ ಇರತಕ್ಕುದು.

(5) (4)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ತನ್ನ ಆಯ್ಕೆಯ ಅವಕಾಶವನ್ನು ಚಲಾಯಿಸದಿರುವ ಯಾರೇ ಸದಸ್ಯನು ಅಥವಾ ಲೇಣೇದಾರನು ಮತ್ತು ನಿರ್ಣಯದ ಪರವಾಗಿ ಮತ ನೀಡಿದ ಪ್ರತಿಯೊಬ್ಬ ಸದಸ್ಯನು, ನಿರ್ಣಯದಲ್ಲಿ ಇರುವ ಪ್ರಸ್ತಾವಗಳಿಗೆ ಸಮ್ಮತಿ ನೀಡಿರುವುದಾಗಿ ಭಾವಿಸತಕ್ಕುದು.

(6) ಈ ಪ್ರಕರಣದ ಮೇರೆಗೆ ಸಹಕಾರ ಸಂಘವು ಅಂಗೀಕರಿಸಿದ ನಿರ್ಣಯವು,-

(ಎ) ಅದಕ್ಕೆ ಈ ಪ್ರಕರಣದ ಮೇರೆಗೆ ಎಲ್ಲ ಸದಸ್ಯರ ಮತ್ತು ಲೇಣೇದಾರರ ಸಮ್ಮತಿ ಪಡೆಯುವತನಕ ಅಥವಾ ಪಡೆಯಲಾಗಿದೆಯೆಂದು ಭಾವಿಸುವ ತನಕ; ಅಥವಾ

(ಬಿ) (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆಯ್ಕೆಯ ಅವಕಾಶವನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಚಲಾಯಿಸಿರುವ ಸದಸ್ಯರ ಮತ್ತು ಲೇಣೇದಾರರ ಎಲ್ಲ ಕ್ಲೇಮುಗಳನ್ನು ಸಂಪೂರ್ಣವಾಗಿ ಪೂರೈಸುವ ತನಕ

-ಜಾರಿಯಾಗತಕ್ಕುದಲ್ಲ.

(7) ಈ ಪ್ರಕರಣದ ಮೇರೆಗೆ ಸಹಕಾರ ಸಂಘವು ಅಂಗೀಕರಿಸಿದ ನಿರ್ಣಯವು ಯಾವುದೇ ಆಸ್ತಿಗಳು ಮತ್ತು ದಾಯಿತ್ವಗಳ ವರ್ಗಾವಣೆಯನ್ನು ಒಳಗೊಂಡಿರುವಲ್ಲಿ, ಆಗ ಆ ನಿರ್ಣಯವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ಮುಂದಿನ ಹಸ್ತಾಂತರಣವಿಲ್ಲದೆ ಆಸ್ತಿಗಳು ಮತ್ತು ದಾಯಿತ್ವಗಳು ವರ್ಗಾವಣೆ ಪಡೆದವನಲ್ಲಿ ನಿಹಿತವಾಗಲು ಪರ್ಯಾಪ್ತ ಹಸ್ತಾಂತರಣವಾಗತಕ್ಕುದು.

[4][[3][[2][[1][14ಎ.xxx][1]][2]][3]][4]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

3. 2012ರ ಅಧಿನಿಯಮ ಸಂಖ್ಯೆ 28ರ ಮೂಲಕ ಸೇರಿಸಲಾಗಿದೆ ಆದರೆ ಅ.ಟಿ ಸಂ: ಸಿಒ 19 ಎಸ್‌ಎಲ್‌ಎಂ 2019 ದಿನಾಂಕ: 20.12.2012ರ ಮೂಲಕ ಜಾರಿಗೆ ತರಲಾಗಿರುವುದಿಲ್ಲ (ಅಧಿನಿಯಮದ ಕೊನೆಯಲ್ಲಿ ಅ.ಟಿಯ ಪಠ್ಯವನ್ನು ನೋಡುವುದು.
4. 2013ರ ಅಧಿನಿಯಮ ಸಂಖ್ಯೆ 03ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

14ಬಿ. ಕೆಲವು ಪ್ರದೇಶಗಳಲ್ಲಿ ರಿಜಿಸ್ಟ್ರಾರನು ಸಹಕಾರ ಬ್ಯಾಂಕುಗಳ ಸಮ್ಮಿಳನಕ್ಕೆ ಯೋಜನೆಯನ್ನು ತಯಾರಿಸುವುದು.- (1) ಯಾವೊಂದು ಸಹಕಾರ ಬ್ಯಾಂಕಿನ ಸಂಬಂಧದಲ್ಲಿ ಕೇಂದ್ರಸರ್ಕಾರವು, ಬ್ಯಾಂಕು ವ್ಯವಹಾರ ವಿನಿಯಮನ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ10) 45ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸ್ಥಗಿತಗೊಳಿಸುವ ಆದೇಶವನ್ನು ಹೊರಡಿಸಿರುವಲ್ಲಿ ಸ್ಥಗಿತಗೊಳಿಸಿದ ಅವಧಿಯಲ್ಲಿ, ರಿಜಿಸ್ಟ್ರಾರನು,-

(i) ಸಹಕಾರ ಬ್ಯಾಂಕಿನ ಪುನಃ ಸಂಘಟನೆಗೆ; ಅಥವಾ

(ii) ಸಹಕಾರ ಬ್ಯಾಂಕನ್ನು ಯಾವುದೇ ಇತರ ಸಹಕಾರ ಬ್ಯಾಂಕಿನೊಂದಿಗೆ ಸಮ್ಮಿಳನಗೊಳಿಸುವ ಸಲುವಾಗಿ

- ಒಂದು ಯೋಜನೆಯನ್ನು ತಯಾರಿಸಬಹುದು.

(2) ಅಂಥ ಯಾವುದೇ ಯೋಜನೆಯನ್ನು ರಿಸರ್ವ್ ಬ್ಯಾಂಕು ಮಂಜೂರು ಮಾಡಿದ ಹೊರತು, ಅದನ್ನು ಜಾರಿಗೊಳಿಸತಕ್ಕುದಲ್ಲ.

14ಸಿ. ಠೇವಣಿ ವಿಮಾ ನಿಗಮಕ್ಕೆ ಸಹಕಾರ ಬ್ಯಾಂಕಿನ ದಾಯಿತ್ವ.- ಈ ಅಧಿನಿಯಮದ 14ನೇ ಪ್ರಕರಣದಲ್ಲಿ ಅಥವಾ ಇತರ ಉಪಬಂಧದಲ್ಲಿ ಏನೇ ಇದ್ದರೂ, ಠೇವಣಿ ವಿಮಾ ನಿಗಮ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 47) ಅರ್ಥದಲ್ಲಿ ವಿಮೆ ಪಡೆದ ಬ್ಯಾಂಕು ಆಗಿರುವ ಯಾವೊಂದು ಸಹಕಾರ ಬ್ಯಾಂಕು ಸಮ್ಮಿಳನಗೊಂಡಿರುವಲ್ಲಿ ಅಥವಾ ಅದರ ಪುನಃ ಸಂಘಟನೆಯಾಗಿರುವಲ್ಲಿ ಮತ್ತು ಠೇವಣಿ ವಿಮಾ ನಿಗಮವು ವಿಮೆ ಪಡೆದ ಬ್ಯಾಂಕಿನ ಠೇವಣಿದಾರರಿಗೆ, ಆ ಅಧಿನಿಯಮದ 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಲು ಹೊಣೆಯಾಗಿರುವಲ್ಲಿ, ಸಂದರ್ಭಾನುಸಾರ, ವಿಮೆ ಪಡೆದ ಆ ಬ್ಯಾಂಕು ಯಾವುದರೊಂದಿಗೆ ಸಮ್ಮಿಳನಗೊಂಡಿದೆಯೋ ಆ ಬ್ಯಾಂಕು ಅಥವಾ ಅಂಥ ಸಮ್ಮಿಳನವಾದ ಮೇಲೆ ರಚಿತವಾದ ಹೊಸ ಸಹಕಾರ ಬ್ಯಾಂಕು ಅಥವಾ ವಿಮೆ ಪಡೆದ ಬ್ಯಾಂಕು ಅಥವಾ ವರ್ಗಾವಣೆ ಪಡೆದ ಬ್ಯಾಂಕು ಅಂಥ ಸಂದರ್ಭಗಳಲ್ಲಿ ಠೇವಣಿ ವಿಮಾ ನಿಗಮ ಅಧಿನಿಯಮ, 1961ರ 21ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಮಾಣದಲ್ಲಿ ಮತ್ತು ರೀತಿಯಲ್ಲಿ ಠೇವಣಿ ವಿಮಾ ನಿಗಮಕ್ಕೆ ಮರುಸಂದಾಯ ಮಾಡಲು ಹೊಣೆಯಾಗತಕ್ಕುದು.][1]

15. ಕೆಲವು ಸಂದರ್ಭಗಳಲ್ಲಿ ಸಹಕಾರ ಸಂಘಗಳ ನೋಂದಣಿ ಪ್ರಮಾಣ ಪತ್ರಗಳ ರದ್ದಿಯಾತಿ.- (1) ಸಹಕಾರ ಸಂಘದ ಸಮಗ್ರ ಆಸ್ತಿಗಳನ್ನು ಮತ್ತು ದಾಯಿತ್ವಗಳನ್ನು

14ನೇ ಪ್ರಕರಣ [1][ಅಥವಾ 14ಎ ಪ್ರಕರಣದ][1] ಉಪಬಂಧಗಳಿಗನುಸಾರವಾಗಿ ಇನ್ನೊಂದು ಸಹಕಾರ ಸಂಘಕ್ಕೆ ವರ್ಗಾಯಿಸಿರುವಲ್ಲಿ, ಮೊದಲು ನಮೂದಿಸಿದ ಸಹಕಾರ ಸಂಘದ ನೋಂದಣಿಯು ರದ್ದಾಗತಕ್ಕುದು ಮತ್ತು ಆ ಸಂಘವು ವಿಘಟಿತವಾಗಿದೆಯೆಂದು ಭಾವಿಸತಕ್ಕುದು ಮತ್ತು ಅದು ನಿಗಮಿತ ನಿಕಾಯವಾಗಿರುವುದು ಮುಕ್ತಾಯವಾಗತಕ್ಕುದು.

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಎರಡು ಅಥವಾ ಹೆಚ್ಚು ಸಹಕಾರ ಸಂಘಗಳು 14ನೇ ಪ್ರಕರಣದ [1][ಅಥವಾ 14ಎ ಪ್ರಕರಣದ][1] ಉಪಬಂಧಗಳಿಗನುಸಾರವಾಗಿ ಹೊಸ ಸಹಕಾರ ಸಂಘವಾಗಿ ಸಮ್ಮಿಳನಗೊಂಡಿರುವಲ್ಲಿ, ಸಮ್ಮಿಳನಗೊಳ್ಳುವ ಪ್ರತಿಯೊಂದು ಸಂಘದ ನೋಂದಣಿಯು ಹೊಸ ಸಂಘವು ನೋಂದಣಿಯಾದ ಮೇಲೆ ರದ್ದಾಗತಕ್ಕುದು ಮತ್ತು ಅಂಥ ಪ್ರತಿಯೊಂದು ಸಂಘವು ವಿಘಟಿತವಾಗಿದೆ ಎಂದು ಭಾವಿಸತಕ್ಕುದು ಮತ್ತು ಅದು ನಿಗಮಿತ ನಿಕಾಯವಾಗಿರುವುದು ಮುಕ್ತಾಯವಾಗತಕ್ಕುದು.

(3) ಯಾವೊಂದು ಸಹಕಾರ ಸಂಘವು, 14ನೇ ಪ್ರಕರಣ [1][ಅಥವಾ 14ಎ ಪ್ರಕರಣದ][1] ಉಪಬಂಧಗಳಿಗನುಸಾರವಾಗಿ ಎರಡು ಅಥವಾ ಹೆಚ್ಚು ಸಹಕಾರ ಸಂಘಗಳಾಗಿ [2][ವಿಭಜನೆಯಾಗಿರುವಲ್ಲಿ][2] ಆ ಸಂಘದ ನೋಂದಣಿಯು ಹೊಸ ಸಂಘಗಳು ನೋಂದಣಿಯಾದ ಮೇಲೆ ರದ್ದಾಗತಕ್ಕುದು ಮತ್ತು ಆ ಸಂಘವು ವಿಘಟಿತವಾಗಿದೆ ಎಂದು ಭಾವಿಸತಕ್ಕುದು ಮತ್ತು ಅದು ನಿಗಮಿತ ನಿಕಾಯವಾಗಿ ಅಸ್ತಿತ್ವದಲ್ಲಿರುವುದು ಮುಕ್ತಾಯವಾಗತಕ್ಕುದು.

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಅಧ್ಯಾಯ-III

ಸಹಕಾರ ಸಂಘದ ಸದಸ್ಯರು ಮತ್ತು ಅವರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು

16. ಸದಸ್ಯರಾಗಬಹುದಾದ ವ್ಯಕ್ತಿಗಳು.- [1][(1) 17ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಈ ಮುಂದಿನವನ್ನು ಹೊರತುಪಡಿಸಿ ಯಾರೇ ವ್ಯಕ್ತಿಗೆ ಸಹಕಾರ ಸಂಘದ ಸದಸ್ಯರನ್ನಾಗಿ ಪ್ರವೇಶ ನೀಡತಕ್ಕುದಲ್ಲ, ಎಂದರೆ:-

[1][(ಎ) ಅಂಥ ಸಹಕಾರ ಸಂಘದ ಸೇವೆಗಳ ಅಗತ್ಯವಿರುವ [2][ಮತ್ತು ಸಂಘದ ಕಾರ್ಯ ಪ್ರವರ್ತನೆಯ ಪ್ರದೇಶದಲ್ಲಿ ವಾಸವಾಗಿರುವ][2] ಮತ್ತು ಕರಾರು ಅಧಿನಿಯಮ, 1872ರ (1872ರ ಕೇಂದ್ರ ಅಧಿನಿಯಮ IX) ಅಡಿಯಲ್ಲಿ ಕರಾರು ಮಾಡಿಕೊಳ್ಳಲು ಸಕ್ಷಮವಾಗಿರುವ ಒಬ್ಬ ವ್ಯಕ್ತಿ][1];

1. 2010ರ ಅಧಿನಿಯಮ ಸಂಖ್ಯೆ 06ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 03ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎ-1) ಒಬ್ಬ ಠೇವಣಿದಾರ][1]

1. 2010ರ ಅಧಿನಿಯಮ ಸಂಖ್ಯೆ 06ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

(ಬಿ) ಯಾವುದೇ ಇತರ ಸಹಕಾರ ಸಂಘ;

(ಸಿ) ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ;

(ಡಿ) ಭಾರತೀಯ ಜೀವ ವಿಮಾ ನಿಗಮ, ರಾಜ್ಯ ಉಗ್ರಾಣ ನಿಗಮ ಮತ್ತು ರಾಜ್ಯ ಸರ್ಕಾರ ಅನುಮೋದಿಸಬಹುದಾದ ಅಂಥ ಇತರ ಸಂಸ್ಥೆಗಳು;

(ಇ) ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ 17)ರ ಮೇರೆಗೆ ನೋಂದಾಯಿತವಾಗಿರುವ ಸಂಘವನ್ನು ಒಳಗೊಂಡಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಫರ್ಮು, ಕಂಪನಿ ಅಥವಾ ಯಾವುದೇ ಇತರ ನಿಗಮಿತ ನಿಕಾಯ;

(ಎಫ್) ಕರ್ನಾಟಕ ಕೃಷಿ ಉತ್ಪಾದನಾ ಮಾರುಕಟ್ಟೆ (ವಿನಿಯಮ) ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ 27) ರ ಮೇರೆಗೆ ಸ್ಥಾಪಿಸಿದ ಮಾರುಕಟ್ಟೆ ಸಮಿತಿ;

(ಜಿ) ಸ್ಥಳೀಯ ಪ್ರಾಧಿಕಾರ.

ವಿವರಣೆ.- ಈ ಖಂಡದ ಉದ್ದೇಶಕ್ಕಾಗಿ, ಸ್ಥಳೀಯ ಪ್ರಾಧಿಕಾರ ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಿರುವ ಮುನಸಿಪಲ್ ಕಾರ್ಪೊರೇಷನ್, ಮುನಸಿಪಲ್ ಕೌನ್ಸಿಲ್, ಪಟ್ಟಣ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ಯಾವುದೇ ಸಹಕಾರ ಸಂಘವು, ಈ [2][ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ][2] ಉಪ ಬಂಧಗಳ ಮೇರೆಗೆ ಸದಸ್ಯತ್ವಕ್ಕೆ ಯುಕ್ತವಾದ ಅರ್ಹತೆಯಿರುವ ಯಾರೇ ವ್ಯಕ್ತಿಗೆ ಸಾಕಷ್ಟು ಕಾರಣವಿಲ್ಲದೆ ಸದಸ್ಯತ್ವಕ್ಕೆ ಪ್ರವೇಶವನ್ನು ನಿರಾಕರಿಸತಕ್ಕುದಲ್ಲ.

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ (2) ರಿಂದ (4)ರ ವರೆಗಿನ ಉಪಪ್ರಕರಣಗಳನ್ನು 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

(3) ಯಾವುದೇ ಸಹಕಾರ ಸಂಘದ ಸದಸ್ಯನಾಗಬಯಸುವ ಯಾರೇ ವ್ಯಕ್ತಿಯು, ಅಂಥ ಸಂಘದ ಸದಸ್ಯನಾಗುವುದಕ್ಕೆ ಪ್ರವೇಶ ಕೋರಿ ಲಿಖಿತ ಅರ್ಜಿಯನ್ನು ಸಲ್ಲಿಸತಕ್ಕುದು.

(4) ಪ್ರತಿಯೊಂದು ಸಹಕಾರ ಸಂಘವು, ಅಂಥ ಸಂಘಕ್ಕೆ ಪ್ರವೇಶ ಕೋರುವ ಅರ್ಜಿಯು ತಲುಪಿದ ದಿನಾಂಕದಿಂದ [2][ಎರಡು ತಿಂಗಳಗಳೊಳಗಾಗಿ][2] ಅಂಥ ವ್ಯಕ್ತಿಯನ್ನು ಸದಸ್ಯನಾಗಿ ಸೇರಿಸಿಕೊಳ್ಳತಕ್ಕುದು ಅಥವಾ ಸೇರಿಸಿಕೊಳ್ಳಲು ನಿರಾಕರಿಸತಕ್ಕುದು ಮತ್ತು ಅಂಥ ಯುಕ್ತ

ಅವಧಿಯೊಳಗಾಗಿ ಪ್ರವೇಶ ನೀಡಿದ ಬಗ್ಗೆ ಅಥವಾ ನಿರಾಕರಣೆಯ ಬಗ್ಗೆ ಅರ್ಜಿದಾರನಿಗೆ ಲಿಖಿತ ಪತ್ರವನ್ನು ಕಳಿಸತಕ್ಕುದು. ಸದಸ್ಯನಾಗಲು ಪ್ರವೇಶದ ಬಗ್ಗೆ ಅಂಥ ಯುಕ್ತ ಅವಧಿಯೊಳಗಾಗಿ ಅರ್ಜಿದಾರನಿಗೆ ಯಾವ ಸೂಚನೆಯೂ ತಲುಪದಿದ್ದರೆ, ಅವನ ಪ್ರವೇಶ ಕೋರುವ ಅರ್ಜಿಯನ್ನು 105ಎ ಪ್ರಕರಣದ ಉದ್ದೇಶಗಳಿಗಾಗಿ ಯುಕ್ತ ಅವಧಿಯ ಕೊನೆಯ ದಿನದಂದು ಆ ಸಹಕಾರ ಸಂಘವು [3][ಅಂಗೀಕರಿಸಿತ್ತೆಂದು ಭಾವಿಸತಕ್ಕದ್ದು][3]][1]

2. 2013ರ ಅಧಿನಿಯಮ ಸಂಖ್ಯೆ 03ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][[1][(5) xxx

(6) xxx

(7) xxx][1]][2]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ (5) ರಿಂದ (7)ರ ವರೆಗಿನ ಉಪಪ್ರಕರಣಗಳನ್ನು 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 03ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(8) ಈ ಪ್ರಕರಣ ಹಾಗೂ 17ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯಸರ್ಕಾರವು ಅಂಥ ಸಹಕಾರ ಸಂಘದ ಷೇರು ಬಂಡವಾಳಕ್ಕೆ ವಂತಿಗೆ ನೀಡಿದ ದಿನದಿಂದ ಆ ಸಹಕಾರ ಸಂಘದ ಸದಸ್ಯನಾಗಿ ಪ್ರವೇಶ ಪಡೆದಿದೆ ಎಂದು ಭಾವಿಸತಕ್ಕುದು.][1]

1. 1979ರ ಅಧಿನಿಯಮ ಸಂಖ್ಯೆ 16ರ ಮೂಲಕ 1.6.1960 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

17. ಸದಸ್ಯತ್ವಕ್ಕೆ ಅನರ್ಹತೆ.- (1) ಯಾರೇ ವ್ಯಕ್ತಿಯು,-

(ಎ) ತಾನು ದಿವಾಳಿಯೆಂದು ನ್ಯಾಯನಿರ್ಣಯ ಪಡೆಯಲು ಅರ್ಜಿ ಹಾಕಿಕೊಂಡಿದ್ದರೆ ಅಥವಾ ಅನನ್ಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಬಿ) ರಾಜಕೀಯ ಸ್ವರೂಪದ ಅಪರಾಧವಾಗಿರದ ಅಥವಾ ನೈತಿಕ ಅಧಃಪತನದ ಅಪರಾಧಕ್ಕಾಗಿ ಶಿಕ್ಷೆ ವಿಧಿಸಲ್ಪಟ್ಟು, ಅಂಥ ಶಿಕ್ಷೆಯ ತೀರ್ಪು ವಿಪರ್ಯಯವಾಗಿರದಿದ್ದರೆ ಅಥವಾ ಅಂಥ ಅಪರಾಧವು ಕ್ಷಮಿಸಲ್ಪಡದಿದ್ದರೆ, ಮತ್ತು ಅಂಥ ಶಿಕ್ಷೆ ಮುಗಿದ ತಾರೀಖಿನಿಂದ ಐದು ವರ್ಷಗಳ ಅವಧಿ ಗತಿಸಿರದಿದ್ದರೆ;

[1][(ಸಿ) ಅಂಥ ಸಹಕಾರ ಸಂಘವು ನಡೆಸುವಂಥ ಬಗೆಯ ವ್ಯವಹಾರವನ್ನು ನಡೆಸುತ್ತಿದ್ದರೆ [2][xxxx][2];

[2][**ವಿವರಣೆ**.- xxx][2]

(ಡಿ) ಅದೇ ಬಗೆಯ ವ್ಯವಹಾರವನ್ನು ನಡೆಸುತ್ತಿರುವ ಸಹಕಾರ ಸಂಘಕ್ಕೆ ಅದಾಗಲೇ ಸದಸ್ಯನಾಗಿದ್ದರೆ

- ಅವನು ಸದಸ್ಯನಾಗಿ ಪ್ರವೇಶ ಪಡೆಯಲು ಅರ್ಹನಾಗತಕ್ಕುದಲ್ಲ.][1]

1. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಇ) 16ನೇ ಪ್ರಕರಣದ ಅಡಿಯಲ್ಲಿ ಸದಸ್ಯತ್ವ ಪಡೆಯಲು ಅರ್ಹನಾಗಿಲ್ಲದಿದ್ದರೆ;

(ಎಫ್) ಸಂಘದ ಅಥವಾ ಅದಕ್ಕೆ ಹಣಕಾಸು ಒದಗಿಸುವ ಬ್ಯಾಂಕಿನಿಂದ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ; ಅಥವಾ

(ಜಿ) [2][xxx][2]][1]

- ಅವನು ಸದಸ್ಯನಾಗಿ ಪ್ರವೇಶ ಪಡೆಯಲು ಅರ್ಹನಾಗತಕ್ಕುದಲ್ಲ.

1. 2013ರ ಅಧಿನಿಯಮ ಸಂಖ್ಯೆ 03ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಸದಸ್ಯನು, [1][(1)ನೇ ಉಪಪ್ರಕರಣದ [2][xxx][2]][1] ರಲ್ಲಿ ನಿರ್ದಿಷ್ಟಪಡಿಸುವ ಅನರ್ಹತೆಗಳಲ್ಲಿ ಯಾವುದಾದರೊಂದಕ್ಕೆ ಒಳಪಟ್ಟಿದ್ದರೆ, ಅನರ್ಹನಾದ ದಿನಾಂಕದಿಂದ ಅವನು ಸದಸ್ಯನಾಗಿರುವುದು ಕೊನೆಗೊಂಡಿತೆಂದು ಭಾವಿಸತಕ್ಕುದು.

1. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(2ಎ) ಸದಸ್ಯನು ಅಧಿನಿಯಮ, ನಿಯಮಗಳ ಅಥವಾ ಉಪ ವಿಧಿಗಳ ಮೇರೆಗೆ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಸತತವಾಗಿ ಮೂರು ವರ್ಷಗಳ ಕಾಲ ವಿಫಲನಾದರೆ, ಅವನು ಅಂಥ ಅವಧಿ ಮುಗಿದಾಗ ಸದಸ್ಯನಾಗಿರುವುದು ನಿಂತುಹೋಗತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(3) ಸದಸ್ಯನು, (2)ನೇ ಅಥವಾ (2ಎ) ಉಪ-ಪ್ರಕರಣದ ಮೇರೆಗೆ ಸದಸ್ಯನಾಗಿರುವುದು ನಿಂತುಹೋಗಿದೆಯೆಂದು ಭಾವಿಸಬೇಕಾಗಿದೆಯೇ ಅಥವಾ ಸದಸ್ಯನಾಗಿರುವುದು ನಿಂತು ಹೋಗಿದೆಯೇ ಎಂಬ ಪ್ರಶ್ನೆ ಉದ್ಭವಿಸಿದಾಗ, ರಿಜಿಸ್ಟ್ರಾರನು ಸ್ವತಃ ತಾನೇ ಅಥವಾ ಅವನಿಗೆ ಸಲ್ಲಿಸಿದ ವರದಿಯ ಮೇಲೆ ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ನಂತರ ವಿಷಯವನ್ನು ಬಗೆಹರಿಸಬಹುದು."][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

18. ನಾಮಮಾತ್ರದ ಅಥವಾ ಸಹವರ್ತಿ ಸದಸ್ಯರು.- [1][(1) 16ನೆಯ ಪ್ರಕರಣದಲ್ಲಿ ಏನೇ ಇದ್ದರೂ ಸಹಕಾರ ಸಂಘವು,-

(ಎ) ಯಾರೇ ವ್ಯಕ್ತಿಯನ್ನು ನಾಮಮಾತ್ರದ ಅಥವಾ ಸಹವರ್ತಿ ಸದಸ್ಯನಾಗಿ;

(ಬಿ) ಯಾವುದೇ ಬ್ಯಾಂಕಿಂಗ್ ಕಂಪನಿಯನ್ನು ನಾಮಮಾತ್ರ ಸದಸ್ಯನಾಗಿ;

[2][(ಸಿ) ಯಾವುದೇ ಫರ್ಮ್, ಕಂಪನಿ, ಸಹಕಾರ ಸಂಘ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಯಾವುದೇ ನಿಕಾಯ ಅಥವಾ ನಿಗಮವನ್ನು ನಾಮಮಾತ್ರದ ಅಥವಾ ಸಹವರ್ತಿ ಸದಸ್ಯನಾಗಿ;][2]

[3][(ಡಿ) ಸ್ವಸಹಾಯ ತಂಡವನ್ನು ನಾಮಮಾತ್ರ ಸದಸ್ಯರಾಗಿ][3]

- ಸೇರಿಸಿಕೊಳ್ಳಬಹುದು.

[4][ಪರಂತು, ಯಾವುದೇ ಸಹಕಾರ ಸಂಘದಲ್ಲಿನ, (ಎ) ಖಂಡದ ಅಡಿಯಲ್ಲಿನ ಸಹವರ್ತಿ ಸದಸ್ಯರ ಸಂಖ್ಯೆಯು, ಸಂಘದ ಒಟ್ಟು ಸದಸ್ಯತ್ವದ ಶೇಕಡಾ ಹದಿನೈದರಷ್ಟನ್ನು ಮೀರತಕ್ಕದ್ದಲ್ಲ. ಆದಾಗ್ಯೂ ತಮ್ಮ ಒಟ್ಟು ಸದಸ್ಯತ್ವದ ಸಂಖ್ಯೆಯ ಶೇಕಡಾ ಹದಿನೈದಕ್ಕಿಂತ ಹೆಚ್ಚು ಸಹವರ್ತಿ ಸದಸ್ಯರನ್ನು ಈಗಾಗಲೇ ಹೊಂದಿರುವ ಸಹಕಾರ ಸಂಘಗಳ ಸಂದರ್ಭದಲ್ಲಿ, ಹೆಚ್ಚಿನ ಸಹವರ್ತಿ ಸದಸ್ಯರನ್ನು, 16ನೇ ಪ್ರಕರಣದ ಅಡಿಯಲ್ಲಿ

ಆತನು ಅರ್ಹನಾಗಿದ್ದಲ್ಲಿ, ಆತನನ್ನು ಸದಸ್ಯನನ್ನಾಗಿ ಮಾಡತಕ್ಕದ್ದು ಅಥವಾ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2014ರ ಪ್ರಾರಂಭದ ದಿನಾಂಕದಿಂದ ಆರು ತಿಂಗಳೊಳಗೆ ಸಹವರ್ತಿ ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು.][4]

ವಿವರಣೆ.- ಈ ಉಪಪ್ರಕರಣದಲ್ಲಿ ``ಬ್ಯಾಂಕಿಂಗ್ ಕಂಪನಿ" ಎಂಬುದು ಠೇವಣಿ ವಿಮಾ ನಿಗಮ ಅಧಿನಿಯಮ, 1961 ರಲ್ಲಿ (1961ರ ಕೇಂದ್ರಾಧಿನಿಯಮ 47) ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕುದು;

1. 1975ರ ಅದಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ನಾಮಮಾತ್ರ ಸದಸ್ಯನು ಸಂಘದ ಆಸ್ತಿಗಳು ಅಥವಾ ಲಾಭಗಳಲ್ಲಿ ಯಾವುದೇ ರೂಪದಲ್ಲಿ ಯಾವುದೇ ಪಾಲಿಗೆ ಹಕ್ಕುಹೊಂದಿರತಕ್ಕುದಲ್ಲ ಮತ್ತು ಒಬ್ಬ ವ್ಯಕ್ತಿಯಾಗಿರುವ ನಾಮಮಾತ್ರ ಸದಸ್ಯನು ಸಂಘದ [1][ಪದಾಧಿಕಾರಿ][1] ಯಾಗಲು ಹಕ್ಕು ಹೊಂದಿರತಕ್ಕುದಲ್ಲ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಸಹವರ್ತಿ ಸದಸ್ಯನು ಷೇರುಗಳನ್ನು ಹೊಂದಿರಬಹುದು, ಆದರೆ ಸಂಘದ [1][ಪದಾಧಿಕಾರಿ][1] ಯಾಗಲು ಹಕ್ಕು ಹೊಂದಿರತಕ್ಕುದಲ್ಲ.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಈ ಪ್ರಕರಣದಲ್ಲಿ ಉಪಬಂಧಿಸಿದುದನ್ನುಳಿದು, ನಾಮಮಾತ್ರ ಅಥವಾ ಸಹವರ್ತಿ ಸದಸ್ಯನು, ಸಂಘದ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸದಸ್ಯನ

ವಿಶೇಷಾಧಿಕಾರಗಳನ್ನು ಮತ್ತು ಹಕ್ಕುಗಳನ್ನು ಹೊಂದಿರತಕ್ಕುದು ಮತ್ತು ಅಂಥ ಸದಸ್ಯನ ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕುದು.

1[**18ಎ. ಸದಸ್ಯತ್ವದ ಸಮಾಪ್ತಿ.-** ಒಬ್ಬ ವ್ಯಕ್ತಿಯು ಒಂದು ಸಹಕಾರ ಸಂಘದ ಸದಸ್ಯನಾಗಿರುವುದು,-

(ಎ) ಒಬ್ಬ ವ್ಯಕ್ತಿಯಾಗಿದ್ದಲ್ಲಿ ಆತನು ಅಥವಾ ಆಕೆಯು,-

(i) ಮರಣ ಹೊಂದಿದಾಗ;

(ii) ರಾಜೀನಾಮೆ ನೀಡಿದಾಗ;

[2][(iii) ಅನರ್ಹತೆ ಮತ್ತು ಸಮಾಪ್ತಿ][2]; ಅಥವಾ

(iv) ಸಹಕಾರ ಸಂಘದಲ್ಲಿಯ ಆತನ ಅಥವಾ ಆಕೆಯ ಇಡೀ ಷೇರು ಅಥವಾ ಬಡ್ಡಿಯು ಇತರ ಸದಸ್ಯನಿಗೆ ವರ್ಗಾವಣೆಯಾದಾಗ;

(ಬಿ) ಫರ್ಮ್, ಕಂಪನಿ, ಸಹಕಾರ ಸಂಘ ಅಥವಾ ನಿಗಮಿತ ನಿಕಾಯವಾಗಿದ್ದಲ್ಲಿ,Š

(i) ಫರ್ಮ್ ಅಥವಾ ನಿಗಮಿತ ನಿಕಾಯವು ವಿಸರ್ಜನೆಗೊಂಡಾಗ

(ii) ಒಂದು ಕಂಪನಿ ಅಥವಾ ಒಂದು ಸಹಕಾರ ಸಂಘವು ಪರಿಸಮಾಪನೆಗೊಂಡಾಗ

-ಸಮಾಪ್ತಿಯಾಗತಕ್ಕುದು.][1]

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**18ಬಿ. ನಿರ್ದೇಶಕತ್ವದ ಸಮಾಪ್ತಿ.-** ಮತ್ತೊಂದು ಸಹಕಾರ ಸಂಘದ ಪ್ರತಿನಿಧಿಯಾಗಿರುವ ದ್ವಿತೀಯ ಸಹಕಾರ ಸಂಘ ಅಥವಾ ಸಂಯುಕ್ತ ಸಂಘ ಅಥವಾ ಅಪೆಕ್ಸ್ ಸಂಘದ ಒಬ್ಬ ನಿರ್ದೇಶಕನು,-

(i) ಆತನು ಪ್ರತಿನಿಧಿಸುವ ಪ್ರಾಥಮಿಕ ಅಥವಾ ದ್ವಿತೀಯ ಸಹಕಾರ ಸಂಘದ ನಿರ್ದೇಶಕನಾಗಿರುವುದು ನಿಂತುಹೋಗಿದ್ದರೆ; ಅಥವಾ

(ii) ಆತನನ್ನು ಪ್ರತಿನಿಧಿಯಾಗಿ ನಾಮನಿರ್ದೇಶಿಸಿರುವ ಸಹಕಾರ ಸಂಘವು ಆತನ ನಾಮನಿರ್ದೇಶನವನ್ನು ಹಿಂಪಡೆದಿದ್ದರೆ; ಅಥವಾ

(iii) ಆತನು, ಸದಸ್ಯನಾಗಿರುವ ಆ ಸಹಕಾರ ಸಂಘದ ಮಂಡಳಿಯು ಆತನನ್ನು 30ನೇ ಪ್ರಕರಣದ ಅಡಿಯಲ್ಲಿ ತೆಗೆದುಹಾಕಿದ್ದರೆ, ಅಥವಾ 31ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ವಿಶೇಷ ಅಧಿಕಾರಿಯಾಗಿದ್ದರೆ; ಮತ್ತು

(iv) ಆತನು ಪ್ರತಿನಿಧಿಯಾಗಿರುವ ಸಹಕಾರ ಸಂಘವು ಸಮಾಪನಗೊಂಡಿದ್ದರೆ,

-ಅಂಥ ಸಹಕಾರ ಸಂಘದ ನಿರ್ದೇಶಕನಾಗಿರುವುದು ಕೂಡಲೇ ನಿಂತು ಹೋಗತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 6-9-2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

19. ಬಾಕಿ ಸಂದಾಯ ಮಾಡುವವರೆಗೆ ಸದಸ್ಯನು ಹಕ್ಕುಗಳನ್ನು ಚಲಾಯಿಸತಕ್ಕುದಲ್ಲ.- [1][16ನೆಯ ಪ್ರಕರಣದ(8)ನೆಯ ಉಪಪ್ರಕರಣದಲ್ಲಿ ಅನ್ಯಥಾ ಹೇಳಿರುವುದನ್ನುಳಿದು ಸಹಕಾರ ಸಂಘದ ಯಾರೇ ಸದಸ್ಯನು][1] ಉಪವಿಧಿಗಳಲ್ಲಿ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಬಹುದಾದಂಥ ಸಂದಾಯವನ್ನು ಸಂಘಕ್ಕೆ ಮಾಡಿದ ಹೊರತು ಅಥವಾ ಅಂಥ ಹಿತಾಸಕ್ತಿಯನ್ನು ಸಂಘದಲ್ಲಿ ಪಡೆದ ಹೊರತು ಸದಸ್ಯನ ಹಕ್ಕುಗಳನ್ನು ಚಲಾಯಿಸತಕ್ಕುದಲ್ಲ.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][19ಎ. ಮಾಹಿತಿಯನ್ನು ನೋಡಲು ಅವಕಾಶ:- ಸಹಕಾರ ಸಂಘದ ಪ್ರತಿಯೊಬ್ಬ ಸದಸ್ಯನು, ಅಂಥ ಸದಸ್ಯನೊಂದಿಗಿನ ತನ್ನ ವ್ಯವಹಾರದ ನಿಯಮ ನಿರ್ವಹಣೆಯ ಸಂಬಂರ್ಧದಲ್ಲಿ ಸಹಕಾರ ಸಂಘದ ಪುಸ್ತಕಗಳು, ಮಾಹಿತಿ ಮತ್ತು ಲೆಕ್ಕಪತ್ರಗಳನ್ನು ನೋಡಲು ಅವಕಾಶ ಹೊಂದಿರತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11-2-2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][20. ಸದಸ್ಯರ ಮತಗಳು.- (1) ಸಹಕಾರ ಸಂಘದ ಯಾರೇ ಸದಸ್ಯನು, [4][ಯಾವನೇ ಪ್ರತಿ ನಿಧಿಯು ಅಥವಾ ಯಾವನೇ ನಿಯೋಗಿಯು][4] ಸಂಘದ [3][ಮಹಾಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ][3] ಒಂದಕ್ಕಿಂತ ಹೆಚ್ಚು ಮತವನ್ನು ಹೊಂದಿರತಕ್ಕುದಲ್ಲ:

[5][[2][xxx][2]][5]

1. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1979ರ ಅಧಿನಿಯಮ ಸಂಖ್ಯೆ 16ರ ಮೂಲಕ 18.12.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ .ಪ್ರತಿಯೋಜಿಸಲಾಗಿದೆ.
5. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಈ ಕೆಳಕಂಡ ವ್ಯಕ್ತಿಗಳು, ತಾವು ಸದಸ್ಯರಾಗಿರುವ ಸಹಕಾರ ಸಂಘದ [3][ಮಹಾಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ][3] ಮತಚಲಾಯಿಸಲು ಹಕ್ಕನ್ನು ಹೊಂದಿರತಕ್ಕುದಲ್ಲ, ಎಂದರೆ:Š

[1][(ಎ) ನಾಮ ಮಾತ್ರ ಸದಸ್ಯ ಅಥವಾ ಸಹವರ್ತಿ ಸದಸ್ಯ;

(ಎ-i) ಬಾಕಿದಾರನಾದ ಒಬ್ಬ ಸದಸ್ಯ;

(ಎ-ii) [2][16ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ), (ಇ), (ಎಫ್), ಮತ್ತು (ಜಿ) ಖಂಡಗಳ][2] ಮೇರೆಗೆ ಸೇರಿಸಿಕೊಂಡ ಬಾಕಿದಾರರಾಗಿರುವ ಸದಸ್ಯರು;][1]

1.1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಎ-iii) ಅಂಥ ಸಭೆಯ ದಿನಾಂಕಕ್ಕೆ [5][ಅಥವಾ ಚುನಾವಣೆಗೆ][5] ಮುಂಚಿತವಾಗಿ [3][ಹನ್ನೆರಡು ತಿಂಗಳ]3 ಒಳಗೆ ಸಂಘದ ಸದಸ್ಯನಾದ [2][ಒಬ್ಬ ವ್ಯಕ್ತಿ][2];

ಪರಂತು, ಈ ಖಂಡದಲ್ಲಿರುವುದು ಯಾವುದೂ, ಅದರ ನೋಂದಣಿಯಾದ ತರುವಾಯ ತಕ್ಷಣವೇ ನಡೆದ ಅಂಥ ಸಂಘದ ಮೊದಲ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸುವ ಸಂಘದ [2][ಸದಸ್ಯನಿಗೆ][2] ಅನ್ವಯವಾಗತಕ್ಕುದಲ್ಲ.][1]

[4][(ಎ-iv) ಕಳೆದ ಐದು ಮಹಾಸಭೆಗಳ ಪೈಕಿ ಮೂರು ಮಹಾಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ನಿಯೋಗಿ.

(ಎ-v) ಮೂರು ನಿರಂತರ ಸಹಕಾರ ವರ್ಷಗಳವರೆಗೆ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಿಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯ ಅಥವಾ ಪ್ರತಿನಿಧಿ.][4]

[6][ಪರಂತು, (ಎ-iv) ಹಾಗೂ (ಎ-v)ನೇ ಉಪಖಂಡಗಳಲ್ಲಿರುವ ಸದಸ್ಯರುಗಳ ಸಂದರ್ಭದಲ್ಲಿ, ಅಂಥ ಸದಸ್ಯರು ಮೂರು ವರ್ಷಗಳ ಅವಧಿಗೆ ಸರ್ವಸದಸ್ಯರ ಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.][6]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

5. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 6-9-2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

6. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 6-9-2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) (i) ಯಾವ ಸಹಕಾರ ಸಂಘದ ಸಮಿತಿಯು ರದ್ದಾಗಿದೆಯೋ ಅಥವಾ ಯಾವುದಕ್ಕೆ ಈ ಅಧಿನಿಯಮದ [1][31ನೇ ಪ್ರಕರಣದ][1] ಮೇರೆಗೆ ವಿಶೇಷ ಅಧಿಕಾರಿಯನ್ನು ನೇಮಿಸಲಾಗಿದೆಯೋ;

(ii) ಯಾವ ಸಹಕಾರ ಸಂಘವು 12ನೇ ಪ್ರಕರಣದ ಮೇರೆಗೆ [1][ವಿಘಟಿತವಾಗಬೇಕೆಂದು ಆದೇಶಿಸಲಾಗಿದೆಯೋ][1];

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ಯಾವ ಸಹಕಾರ ಸಂಘವು ತನ್ನ ಕಾರ್ಯವನ್ನು ಪ್ರಾರಂಭಿಸಿಲ್ಲವೋ ಅಥವಾ ತನ್ನ ಕಾರ್ಯವನ್ನು ನಿಲ್ಲಿಸಿದೆಯೋ;

[1][(iv) ಯಾವ ಸಂಘದ ಪ್ರಧಾನ ಉದ್ದೇಶವು ಸಾಲ ಮತ್ತು ಮುಂಗಡವನ್ನು ನೀಡುವ ಉದ್ದೇಶವನ್ನು ಹೊಂದಿದೆಯೋ,-

(ಎ) ಅಂಥ ಸಂಘದಲ್ಲಿ ನಿಕಟಪೂರ್ವ ಸಹಕಾರಿ ವರ್ಷದ ಚುನಾವಣೆ/ಸಾಮಾನ್ಯ ಸಭೆಯ ಸಂದರ್ಭದಲ್ಲಿ ಸಂಘದ ತಗಾದೆಯ ಮೇಲೆ ಶೇಕಡ ಐವತ್ತಕ್ಕಿಂತ ಕಡಿಮೆ ವಸೂಲಾತಿ ಇದ್ದಲ್ಲಿ ಅಥವಾ

(ಬಿ) ಹಣಕಾಸು ನೀಡುವ ಬ್ಯಾಂಕು, ಕ್ರೆಡಿಟ್ ಏಜೆನ್ಸಿ ಪ್ರಕರಣಕ್ಕನುಗುಣವಾಗಿ ಹದಿನೈದು ದಿನಗಳ ಮುಂಚಿತವಾಗಿ ಆಯಾ ಸಂಸ್ಥೆಯ ತಗಾದೆಯ ಮೇಲೆ ಶೇಕಡ ಐವತ್ತರ ಭಾಗದ ವಸೂಲಿ ಅಥವಾ ವಸೂಲಿಯಾದ ಪೂರ್ತಿ ಮೊತ್ತವನ್ನು ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು ಪಾವತಿಸಲು ವಿಫಲವಾದಲ್ಲಿ ಅಂಥ ಸಂಘಕ್ಕೆ ಸಾಮಾನ್ಯ ಸಭೆ/ ಚುನಾವಣೆಯ ಕನಿಷ್ಟ ಮೂವತ್ತು ದಿನಗಳ ಪೂರ್ವದಲ್ಲಿ ನೋಟೀಸ್ ನೀಡತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 6-9-2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(v) ivನೇ ಉಪಖಂಡದಲ್ಲಿ ಉಲ್ಲೇಖಿಸಿದ ಸಂಘವಲ್ಲದ ಇತರ ಬಾಕಿದಾರ ಸಂಘವಾಗಿದೆಯೋ

- ಆ ಯಾವುದೇ ಸಹಕಾರ ಸಂಘ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಸಿ) xxx][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ವಿವರಣೆ.- ಸಂಘದ ಸದಸ್ಯನನ್ನು [2][ಸಾಲಗಾರನಾಗಿ][2] ಅವನು, ಅವನಿಗೆ ಹದಿನೈದು ದಿನಗಳಿಗೆ ಕಡಿಮೆಯಿಲ್ಲದ ಸಭೆಗೆ ಸಂಬಂಧಿಸಿದ ನೋಟೀಸನ್ನು ಕೊಟ್ಟ ತರುವಾಯ [3][ಮಹಾಸಭೆಯ ಅಥವಾ ಸಮಿತಿಯ ಸದಸ್ಯರ ಚುನಾವಣೆಯ][3] ದಿನಾಂಕಕ್ಕೆ ಕನಿಷ್ಠ [3][ಮೂವತ್ತು ದಿನಗಳಿಗೆ]3 ಮುಂಚೆ [1][ಸಂಘಕ್ಕೆ ತನ್ನಿಂದ ಬಾಕಿಯಿರುವ ಯಾವುದೇ ಬಗೆಯ ಬಾಕಿಗಳನ್ನು ಸಂದಾಯ ಮಾಡಲು ತಪ್ಪಿದರೆ][1] ಆ ಬಾಕಿದಾರನೆಂದು ಭಾವಿಸತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸದಸ್ಯ ಆಗಿರುವ, ಆದರೆ ತನ್ನ ಸದಸ್ಯರಿಗೆ ಹಣಕಾಸು ನೆರವು ನೀಡಲು ಇತರ ಹಣಕಾಸು ಏಜೆನ್ಸಿಗಳಿಂದ ಸಾಲ ಎತ್ತಲು ರಿಜಿಸ್ಟ್ರಾರನು ಅನುಮತಿ ನೀಡಿರುವ ಕೃಷಿ ಸಾಲ ನೀಡಿಕೆ ಸಂಘವು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹೊಂದಿರತಕ್ಕುದಲ್ಲ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

21. ಮತ ಚಲಾಯಿಸುವ ರೀತಿ.- [1][(1) [2][ಮಹಾಸಭೆಯಲ್ಲಿ ಅಥವಾ ಸಹಕಾರ ಸಂಘದ ಸಮಿತಿಯ ಸದಸ್ಯರ ಚುನಾವಣೆಯಲ್ಲಿ]2 ಪ್ರತಿಯೊಬ್ಬ ಸದಸ್ಯನು, [3][ಪ್ರತಿಯೊಬ್ಬ ಪ್ರತಿನಿಧಿ][3], ಪ್ರತಿಯೊಬ್ಬ ನಿಯೋಗಿ ಮತ್ತು ಪ್ರತಿಯೊಬ್ಬ ನಾಮನಿರ್ದೇಶಿತನು ತನ್ನ ಮತವನ್ನು ಖುದ್ದಾಗಿ ಚಲಾಯಿಸತಕ್ಕುದು, ಆದರೆ ಪರೋಕ್ಷವಾಗಿ ಅಲ್ಲ.][1]

[3][**ವಿವರಣೆ:-** ಈ ಪ್ರಕರಣದ ಮತ್ತು 20ನೇ ಪ್ರಕರಣದ ಉದ್ದೇಶಗಳಿಗಾಗಿ, "ನಿಯೋಗಿ" ಎಂಬ ಪದವು ಬರುವೆಡೆಯಲ್ಲೆಲ್ಲಾ ಆ ಪದಕ್ಕೆ, ಇತರ ಸಹಕಾರ ಸಂಘಗಳಲ್ಲಿ ಆ ಸಂಘವನ್ನು ಪ್ರತಿನಿಧಿಸುವ ಸಹಕಾರ ಸಂಘದ ಒಬ್ಬ ಸದಸ್ಯ ಎಂದು ಅರ್ಥ][3]

1.1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.(1)ನೆಯ ಉಪಪ್ರಕರಣದಲ್ಲಿ ಏನೇ ಇದ್ದರೂ,-

[1][(ಎ) ಬೇರೊಂದು ಸಹಕಾರ ಸಂಘದ ಸದಸ್ಯ ಸಂಸ್ಥೆಯಾಗಿರುವ ಒಂದು ಸಹಕಾರ ಸಂಘದ ಸಮಿತಿಯು, ಆ ಬೇರೊಂದು ಸಂಘದ ಕಾರ್ಯಕಲಾಪಗಳಲ್ಲಿ ತನ್ನ ಪರವಾಗಿ ಮತ ಚಲಾಯಿಸಲು ಸಮಿತಿಯ ಸದಸ್ಯರೊಬ್ಬರನ್ನು ನೇಮಿಸಬಹುದು;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಹಾಗೂ ಮತ್ತೊಮ್ಮೆ 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು ಒಂದು ಸಹಕಾರ ಸಂಘಕ್ಕೆ ಹೊಸ ಸಮಿತಿಯು ಆಯ್ಕೆಯಾದಲ್ಲಿ ಹಾಗೆ ಹೊಸದಾಗಿ ಆಯ್ಕೆಯಾದ ಸಮಿತಿಯು, ಅದು ಸದಸ್ಯ ಆಗಿರುವ ಯಾವುದೇ ಇತರ ಸಹಕಾರಿ ಸಂಘಕ್ಕೆ ಪ್ರತಿನಿಧಿಗಳನ್ನು ಅಥವಾ ನಾಮನಿರ್ದೇಶಕರನ್ನು ಕಳುಹಿಸತಕ್ಕದ್ದು.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಬಿ) ಭಾರತೀಯ ಜೀವ ವಿಮಾ ನಿಗಮವು, ರಾಜ್ಯ ಉಗ್ರಾಣ ನಿಗಮವು ಅಥವಾ ರಾಜ್ಯ ಸರ್ಕಾರ ಅನುಮೋದಿಸಿದ ಅಂಥ ಇತರ ಸಂಸ್ಥೆಗಳು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಮಾರುಕಟ್ಟೆ ಸಮಿತಿಯು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಒಂದು ಫರ್ಮು [2][ಅಥವಾ ಒಂದು ಸ್ವಸಹಾಯ ಗುಂಪು (ಸಮೂಹ)][2], ಕಂಪನಿಯು ಅಥವಾ ಯಾವುದೇ ಇತರ ನಿಗಮಿತ ನಿಕಾಯವು, ಸಹಕಾರ ಸಂಘದ ಸದಸ್ಯ ಆಗಿದ್ದರೆ, ಅಂಥ ಸಂಸ್ಥೆಯು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ

ಮೇರೆಗೆ ರಚಿಸಲಾದ ಮಾರುಕಟ್ಟೆ ಸಮಿತಿಯು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಫರ್ಮು [2][ಅಥವಾ ಒಂದು ಸ್ವಸಹಾಯ ಗುಂಪು (ಸಮೂಹ)]2, ಕಂಪನಿಯು ಅಥವಾ ಯಾವುದೇ ಇತರ ನಿಗಮಿತ ನಿಕಾಯವು ನಾಮನಿರ್ದೇಶನ ಮಾಡಿದ ವ್ಯಕ್ತಿಯು ಸಂಘದ [3][ಮಹಾ ಸಭೆಯಲ್ಲಿ ಅಥವಾ ಸಮಿತಿಯ ಸದಸ್ಯರ ಚುನಾವಣೆಯಲ್ಲಿ][3] ಅದರ ಪರವಾಗಿ ಮತ ಚಲಾಯಿಸಬಹುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) ಯಾವುದೇ ಇತರ ಸಹಕಾರ ಸಂಘದ ಯಾವುದೇ ಸಭೆಯಲ್ಲಿ ತನ್ನ ಪರವಾಗಿ ಮತ ಚಲಾಯಿಸಲು (2)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿ ಸಹಕಾರ ಸಂಘದ ಮಂಡಳಿಯಿಂದ ಒಮ್ಮೆ ನಾಮನಿರ್ದೇಶಿಸಲ್ಪಟ್ಟ ಒಬ್ಬ ಸದಸ್ಯನನ್ನು, ಮಂಡಳಿಯ ಸಭೆಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಮೂರನೇ ಎರಡರ (two third) ಬಹುಮತದಿಂದ, ಗಣನೀಯ ಕಾರಣಗಳೊಂದಿಗೆ, ಅಂಗೀಕರಿಸಿದ ಠರಾವಿನ ಹೊರತು ಬದಲಾಯಿಸತಕ್ಕದ್ದಲ್ಲ. ಆದಾಗ್ಯೂ ಸಹಕಾರ ಸಂಘವು ತನ್ನ ಪರವಾಗಿ ಎರಡಕ್ಕಿಂತ ಹೆಚ್ಚಿನ ಸಹಕಾರ ಸಂಘಗಳಲ್ಲಿ ಮತ ಚಲಾಯಿಸಲು ಮಂಡಳಿಯ ಯಾವೊಬ್ಬ ಸದಸ್ಯನನ್ನು ನಾಮನಿರ್ದೇಶಿಸತಕ್ಕದ್ದಲ್ಲ ಅಥವಾ ನೇಮಿಸತಕ್ಕದ್ದಲ್ಲ.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][22. xxx][1]

23. ಷೇರುಗಳ ಅಥವಾ ಹಿತಾಸಕ್ತಿಗಳ ವರ್ಗಾವಣೆಗಳ ಮೇಲೆ ನಿರ್ಬಂಧಗಳು.- [1][(1) xxx][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಸದಸ್ಯನು ಸಹಕಾರ ಸಂಘದಲ್ಲಿರುವ ತನ್ನ ಷೇರಿನ ಅಥವಾ ಹಿತಾಸಕ್ತಿಯ ಬಗ್ಗೆ ಮಾಡಿದ ವರ್ಗಾವಣೆಯು,-

(ಎ) ಅಂಥ ಷೇರು ಅಥವಾ ಹಿತಾಸಕ್ತಿಯನ್ನು ಆ ಸದಸ್ಯನು ಒಂದು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಧಾರಣ ಮಾಡಿದ ಹೊರತು;

(ಬಿ) ಆ ವರ್ಗಾವಣೆಯನ್ನು ಸಂಘದ ಸದಸ್ಯನಿಗೆ ಮಾಡಿದ್ದ ಹೊರತು; ಮತ್ತು

(ಸಿ) ವರ್ಗಾವಣೆಯನ್ನು ಸಂಘದ ಸಮಿತಿಯು ಅನುಮೋದಿಸಿದ ಹೊರತು

- ಕಾನೂನು ಸಮ್ಮತವಾಗಿರತಕ್ಕುದಲ್ಲ.

[1][23ಎ. ಷೇರು ಮೌಲ್ಯದ ಮರುಪಾವತಿ.- (1) ಕೃಷಿ ಸಾಲ ನೀಡಿಕೆಯೇ ಪ್ರಧಾನ ಉದ್ದೇಶವಾಗಿರುವ ಸಹಕಾರ ಸಂಘದ ಒಬ್ಬ ಸದಸ್ಯನು, ಅಂಥ ಸಂಘಕ್ಕೆ ಋಣಿಯಾಗಿರದಿದ್ದರೆ, ಆಗ ಅವನು ಹೊಂದಿರುವ ಷೇರುಗಳಲ್ಲಿ ಒಂದನ್ನು ಬಿಟ್ಟು ಎಲ್ಲಾ ಷೇರುಗಳ ಮೌಲ್ಯವನ್ನು, ಅವನು ಅರ್ಜಿ ಸಲ್ಲಿಸಿದಲ್ಲಿ ಅವನಿಗೆ ಮರು ಪಾವತಿ ಮಾಡತಕ್ಕುದು.

(2) ಸಹಕಾರ ಸಂಘಕ್ಕೆ ಅಂಥ ಸದಸ್ಯನಿಂದ ಬಾಕಿ ಇರುವ ಋಣದ ಮೊಬಲಗು, ಅವನು ಅಂಥ ಸಂಘದಲ್ಲಿ ಹೊಂದಿರುವ ಷೇರುಗಳಲ್ಲಿ ಒಂದನ್ನು ಬಿಟ್ಟು ಎಲ್ಲಾ ಷೇರುಗಳ ಮೌಲ್ಯಕ್ಕೆ

ಸಮನಾಗಿದ್ದರೆ ಅಥವಾ ಅದಕ್ಕೆ ಕಡಿಮೆಯಾಗಿದ್ದರೆ, ಆಗ ಆ ಸದಸ್ಯನು ಅರ್ಜಿಯನ್ನು ಸಲ್ಲಿಸಿದ ತರುವಾಯ ಋಣದ ಮೊಬಲಗನ್ನು ತೀರಿಸಲು ಅಗತ್ಯವಾದಷ್ಟು ಸಂಖ್ಯೆಯ ಷೇರುಗಳ ಮೌಲ್ಯವನ್ನು ಅಂಥ ಋಣದ ಪೂರ್ಣ ತೀರಿಕೆಯಾಗಿ ಹೊಂದಾಣಿಕೆ ಮಾಡಿಕೊಳ್ಳತಕ್ಕುದು ಮತ್ತು ಒಂದನ್ನು ಬಿಟ್ಟು ಉಳಿದವುಗಳ ಮೌಲ್ಯವನ್ನು ಅವನಿಗೆ ಮರು ಪಾವತಿ ಮಾಡತಕ್ಕುದು. ಆ ತರುವಾಯ ಅದಕ್ಕೆ ಸಂಬಂಧಿಸಿದ ಷೇರು ಪ್ರಮಾಣ ಪತ್ರಗಳನ್ನು ರದ್ದುಗೊಳಿಸತಕ್ಕುದು.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

24. ಸದಸ್ಯನ ಮರಣಾನಂತರ ಹಿತಾಸಕ್ತಿಯ ವರ್ಗಾವಣೆ.- (1) ಸಹಕಾರ ಸಂಘದ ಸದಸ್ಯನ ಮರಣಾನಂತರ, ಸಹಕಾರ ಸಂಘವು ಮರಣ ಹೊಂದಿದ ಸದಸ್ಯನ ಷೇರು ಅಥವಾ ಹಿತಾಸಕ್ತಿಯನ್ನು,-

(ಎ) ನಿಯಮಗಳಿಗನುಸಾರವಾಗಿ, ನಾಮನಿರ್ದೇಶಿತ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಆ ನಾಮನಿರ್ದೇಶನವು ಜಾರಿಯಲ್ಲಿದ್ದರೆ, ವರ್ಗಾಯಿಸತಕ್ಕುದು; ಅಥವಾ

(ಬಿ) ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿರದಿದ್ದರೆ ಅಥವಾ ನಾಮನಿರ್ದೇಶನವು ಜಾರಿಯಲ್ಲಿರದಿದ್ದರೆ;

(i) ಮೃತ ಸದಸ್ಯನ ಷೇರು ಅಥವಾ ಹಿತಾಸಕ್ತಿಯು [1][ಒಂದು ಲಕ್ಷ ರೂಪಾಯಿ][1] ಮೀರದಿರುವಲ್ಲಿ ಮೃತ ಸದಸ್ಯನ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳೆಂದು ಸಮಿತಿಗೆ ಕಂಡುಬರಬಹುದಾದ ವ್ಯಕ್ತಿಗಳಿಗೆ ಅಂಥ ವ್ಯಕ್ತಿಗಳು ನಷ್ಟ ಭರ್ತಿ

ಬಂಧಪತ್ರವನ್ನು ಸಮಿತಿಯು ಅಗತ್ಯಪಡಿಸಬಹುದಾದ ಜಾಮಿನುಗಳೊಂದಿಗೆ ಬರೆದುಕೊಟ್ಟ ಮೇಲೆ;

(ii) ಮೃತ ಸದಸ್ಯನ ಷೇರು ಅಥವಾ ಹಿತಾಸಕ್ತಿಯು [1][ಒಂದು ಲಕ್ಷ ರೂಪಾಯಿ][1] ಮಿರಿರುವಲ್ಲಿ, ಸಕ್ಷಮ ನ್ಯಾಯಾಲಯವು ನೀಡಿದ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಅಥವಾ ಇತರ ಕಾನೂನು ಸಮ್ಮತ ಅಧಿಕಾರ ಪತ್ರವನ್ನು ಹಾಜರುಪಡಿಸುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ

-ವರ್ಗಾಯಿಸತಕ್ಕುದು:

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಸಂದರ್ಭಾನುಸಾರ ಅಂಥ ನಾಮನಿರ್ದೇಶಿತವನ್ನು, ವಾರಸುದಾರನನ್ನು ಅಥವಾ ಕಾನೂನು ಸಮ್ಮತ ಪ್ರತಿನಿಧಿಯನ್ನು ಸಹಕಾರ ಸಂಘದ ಸದಸ್ಯನನ್ನಾಗಿ ಸೇರಿಸಿಕೊಂಡಿರಬೇಕು:

ಮತ್ತೂ ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಸಹಕಾರ ಸಂಘದಲ್ಲಿ ಮೃತ ಸದಸ್ಯನು ಹೊಂದಿದ್ದ ಷೇರು ಅಥವಾ ಹಿತಾಸಕ್ತಿಯನ್ನು ವಾರಸಿನ ಮೂಲಕ ಅಥವಾ ಅನ್ಯಥಾ

ಪಡೆಯಲು ಅಪ್ರಾಪ್ತ ವಯಸ್ಕನನ್ನು ಅಥವಾ ಅಸ್ವಸ್ಥಚಿತ್ತನಾಗಿರುವ ವ್ಯಕ್ತಿಯನ್ನು ಪ್ರತಿಬಂಧಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಸಂದರ್ಭಾನುಸಾರ, ಅಂಥ ಯಾರೇ ನಾಮನಿರ್ದೇಶಿತನು, ವಾರಸುದಾರನು ಅಥವಾ ಕಾನೂನು ಸಮ್ಮತ ಪ್ರತಿನಿಧಿಯು, ನಿಯಮಗಳಿಗನುಸಾರವಾಗಿ ನಿಶ್ಚಿತಪಡಿಸಲಾದ ಮೃತ ಸದಸ್ಯನ ಷೇರು ಅಥವಾ ಹಿತಾಸಕ್ತಿಯ ಮೌಲ್ಯವನ್ನು ತನಗೆ ಸಂದಾಯ ಮಾಡುವಂತೆ ಆ ಸಂಘವನ್ನು ಅಗತ್ಯಪಡಿಸಬಹುದು.

(3) ಸಹಕಾರ ಸಂಘವು, ಮೃತ ಸದಸ್ಯನಿಗೆ ಸಂಘದಿಂದ ಸಲ್ಲಬೇಕಾಗಿದ್ದ ಇತರ ಎಲ್ಲ ಹಣಗಳನ್ನು, ಸಂದರ್ಭಾನುಸಾರ, ಅಂಥ ನಾಮನಿರ್ದೇಶಿತನಿಗೆ, ವಾರಸುದಾರನಿಗೆ ಅಥವಾ ಕಾನೂನು ಸಮ್ಮತ ಪ್ರತಿನಿಧಿಗೆ ಸಂದಾಯ ಮಾಡಬಹುದು.

(4) ಸಹಕಾರ ಸಂಘದಿಂದ ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮಾಡಲಾದ ಎಲ್ಲ ವರ್ಗಾವಣೆಗಳು ಮತ್ತು ಸಂದಾಯಗಳು, ಇತರ ಯಾರೇ ವ್ಯಕ್ತಿಯಿಂದ ಸಂಘದ ಮೇಲೆ ಮಾಡಲಾದ ಯಾವುದೇ ತಗಾದೆಯ ವಿರುದ್ಧವಾಗಿ ಕಾನೂನು ಮಾನ್ಯವಾಗಿರತಕ್ಕುದು ಮತ್ತು ಪರಿಣಾಮಕಾರಿಯಾಗಿರತಕ್ಕುದು.

25. ಹಿಂದಿನ ಸದಸ್ಯನ ಹೊಣೆ ಮತ್ತು ಮೃತ ಸದಸ್ಯನ ಆಸ್ತಿಪಾಸ್ತಿ.-(1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು,-

(ಎ) ಹಿಂದಿನ ಸದಸ್ಯನ ಸಂದರ್ಭದಲ್ಲಿ, ಅವನ ಸದಸ್ಯತ್ವವು ಕೊನೆಗೊಂಡ ದಿನಾಂಕದಂದು; ಮತ್ತು

(ಬಿ) ಮೃತ ಸದಸ್ಯನ ಸಂದರ್ಭದಲ್ಲಿ, ಅವನ ಮರಣದ ದಿನಾಂಕದಂದು

- ಇದಂಥ ಸಹಕಾರ ಸಂಘದ ಋಣಗಳ ಬಗ್ಗೆ ಹಿಂದಿನ ಸದಸ್ಯನ ಹೊಣೆ ಅಥವಾ ಮೃತ ಸದಸ್ಯನ ಆಸ್ತಿಪಾಸ್ತಿಯ ಹೊಣೆಯು ಅಂಥ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಮುಂದುವರಿಯತಕ್ಕುದು.

(2) 72ನೇ ಪ್ರಕರಣದ ಮೇರೆಗೆ ಸಹಕಾರ ಸಂಘದ ಸಮಾಪನ ಮಾಡಲು ಆದೇಶವಾಗಿರುವಲ್ಲಿ, ಸಮಾಪನದ ಆದೇಶದ ದಿನಾಂಕಕ್ಕೆ ನಿಕಟಪೂರ್ವದ ಎರಡು ವರ್ಷಗಳ ಒಳಗೆ ಸದಸ್ಯತ್ವವು ಮುಕ್ತಾಯವಾದಂಥ ಹಿಂದಿನ ಸದಸ್ಯನ ಅಥವಾ ಮೃತ ಸದಸ್ಯನ ಆಸ್ತಿಪಾಸ್ತಿಯ ಹೊಣೆಯು, ಸಂಘದ ಸಮಾಪನದ ಎಲ್ಲ ವ್ಯವಹರಣೆಗಳು ಪೂರ್ಣಗೊಳ್ಳುವವರೆಗೆ ಮುಂದುವರಿಯತಕ್ಕುದು, ಆದರೆ ಅಂಥ ಹೊಣೆಯು, ಸಂದರ್ಭಾನುಸಾರ, ಸದಸ್ಯತ್ವವು ಕೊನೆಗೊಂಡ ಅಥವಾ ಮರಣದ ದಿನಾಂಕದಂದು ಇದ್ದ ಸಂಘದ ಋಣಗಳಿಗೆ ಮಾತ್ರ ವ್ಯಾಪ್ತವಾಗತಕ್ಕುದು.

ಅಧ್ಯಾಯ- IV

ಸಹಕಾರ ಸಂಘಗಳ ವ್ಯವಸ್ಥಾಪನೆ

[1][**26. ಸಹಕಾರ ಸಂಘದಲ್ಲಿ ಅಂತಿಮ ಅಧಿಕಾರ.-** ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು, ಸಹಕಾರ ಸಂಘದ ಅಂತಿಮ ಅಧಿಕಾರವು ಸರ್ವ ಸದಸ್ಯರಲ್ಲಿ ನಿಹಿತವಾಗಿರತಕ್ಕುದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಈ ಅಧಿನಿಯಮ ಅಥವಾ ನಿಯಮಗಳು ಅಥವಾ ಉಪವಿಧಿಗಳಿಂದ ಯಾವೊಂದು ಸಮಿತಿಗೆ, ಅಥವಾ ಯಾವೊಬ್ಬ [2][ಪದಾಧಿಕಾರಿಗೆ][2] ಪ್ರದತ್ತವಾದ ಯಾವುದೇ ಅಧಿಕಾರವನ್ನು, ಅಂಥ ಸಮಿತಿಯು ಅಥವಾ ನೋಂದಾಯಿತ ಸಹಕಾರ ಸಂಘದ ಯಾರೇ [2][ಪದಾಧಿಕಾರಿಯು][2] ಚಲಾಯಿಸುವುದಕ್ಕೆ ಬಾಧಕವಾಗತಕ್ಕುದಲ್ಲ.

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ,-

(ಎ) ಒಂದು ಸಹಕಾರ ಸಂಘದ ಕಾರ್ಯ ಕ್ಷೇತ್ರವು ನಿಯಮಿಸಬಹುದಾದ ಕ್ಷೇತ್ರಕ್ಕಿಂತ ಕಡಿಮೆಯಾಗಿಲ್ಲದಿರುವಲ್ಲಿ; ಅಥವಾ

(ಬಿ) ಸಹಕಾರ ಸಂಘವು ನಿಯಮಿಸಬಹುದಾದ ಸಂಖ್ಯೆಗಿಂತ ಕಡಿಮೆಯಿಲ್ಲದ ಸಂಖ್ಯೆಯ ಸದಸ್ಯರನ್ನು ಹೊಂದಿರುವಲ್ಲಿ

- ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸರ್ವಸದಸ್ಯರ ಎಲ್ಲಾ ಅಧಿಕಾರಗಳನ್ನು ಅಥವಾ ಅವುಗಳ ಪೈಕಿ ಯಾವುದನ್ನಾದರೂ ಚಲಾಯಿಸಲು ನಿಯಮಗಳಿಗನುಸಾರವಾಗಿ ನಿಯಮಿಸಬಹುದಾದಂತೆ ಆಯ್ಕೆ ಮಾಡಲಾದ ಸಹಕಾರ ಸಂಘದ ಅಷ್ಟು ಸದಸ್ಯರನ್ನೊಳಗೊಂಡ (ಇಲ್ಲಿ ಇನ್ನು ಮುಂದೆ ಪ್ರಾತಿನಿಧಿಕ ಸರ್ವಸದಸ್ಯರ ನಿಕಾಯ ಎಂದು ಕರೆಯಲಾಗುವ) ಒಂದು ಚಿಕ್ಕ ನಿಕಾಯವನ್ನು ರಚಿಸಲು ಉಪಬಂಧಿಸಿ, [1][ಸಹಕಾರ ಸಂಘದ ಮಹಾಸಭೆಯು ಅದರ ಉಪವಿಧಿಗಳನ್ನು ತಿದ್ದುಪಡಿ ಮಾಡಬಹುದು][1] ಮತ್ತು ಈ ಅಧಿನಿಯಮದಲ್ಲಿ ಸರ್ವಸದಸ್ಯರ ನಿಕಾಯ ಅಥವಾ ಅದರ ಸಭೆಯನ್ನು ಯಾವುದೇ ರೂಪದಲ್ಲಿ ಅಥವಾ ಪದಗಳಲ್ಲಿ ಮಾಡಲಾದ ಯಾವುದೇ ಉಲ್ಲೇಖವು, ಅಂಥ ಉಲ್ಲೇಖವು, ಸಂದರ್ಭಾನುಸಾರ, ಪ್ರಾತಿನಿಧಿಕ ಸರ್ವಸದಸ್ಯರ ನಿಕಾಯ ಅಥವಾ ಅದರ ಸಭೆಗೆ ಮಾಡಿದ ಉಲ್ಲೇಖವಾಗಿದ್ದರೆ ಹೇಗೋ ಹಾಗೆ ಜಾರಿಯಾಗತಕ್ಕುದು.

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಉಪ ವಿಧಿಗಳ ತಿದ್ದುಪಡಿಗಳನ್ನು (12)ನೇ ಪ್ರಕರಣದ ಅಡಿಯಲ್ಲಿ ಅನುಮೋದನೆಗಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**26ಎ. ಸಹಕಾರ ಸಂಘಗಳ ಪಾಲುಗಾರಿಕೆ:-** (1) ಯಾವುದೇ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸಹಕಾರ ಸಂಘಗಳು ಅಂಥ ಪ್ರತಿಯೊಂದು ಸಹಕಾರ ಸಂಘದ ಮಹಾಸಭೆಯಲ್ಲಿ ಹಾಜರಿದ್ದು ಮತದಾನದ ತರುವಾಯ ಸದಸ್ಯರ ನಾಲ್ಕನೇ ಮೂರರಷ್ಟು ಸದಸ್ಯರ ಬಹುಮತದಿಂದ ಅಂಗೀಕರಿಸಲಾದ ನಿರ್ಣಯದ ಮೂಲಕ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚು ನಿರ್ದಿಷ್ಟ ವ್ಯವಹಾರಗಳನ್ನು ನಿರ್ವಹಿಸುವ ಸಲುವಾಗಿ ಪಾಲುಗಾರಿಕೆಯಲ್ಲಿ ಸೇರಿಕೊಳ್ಳಬಹುದು. [2][xxxx][2] ಮಹಾಸಭೆಯ ದಿನಾಂಕವನ್ನು ಸೂಚಿಸುವ ಬರಹದಲ್ಲಿರುವ ನೋಟೀಸನ್ನು ಅಂಥ ಸಭೆಯನ್ನು ಕರೆಯುವುದಕ್ಕೆ ಹತ್ತು ಪೂರ್ಣ ದಿನಗಳಿಗೆ ಮೊದಲು ಸದಸ್ಯನಿಗೆ ನೀಡತಕ್ಕುದು.

[3][ಪರಂತು, ನೆರವು ಪಡೆದ ಸಂಘವಾಗಿದ್ದಲ್ಲಿ ರಿಜಿಸ್ಟ್ರಾರ್ ರವರಿಂದ ಮತ್ತು ಸಹಕಾರಿ ಬ್ಯಾಂಕ್ ಆಗಿದ್ದಲ್ಲಿ ಭಾರತೀಯ ರಿಜರ್ವ್ ಬ್ಯಾಂಕ್‌ನಿಂದ ಮೊದಲೇ ಅನುಮೋದನೆಯನ್ನು ಪಡೆಯದೆ ಅಂಥ ಸಹೋದ್ಯಮದಲ್ಲಿ ಸೇರಿಕೊಳ್ಳತಕ್ಕದ್ದಲ್ಲ.][3]

1. 2000ರ ಅಧಿನಿಯಮ ಸಂಖ್ಯೆ 2ರ ಮೂಲಕ ಸೇರಿಸಲಾಗಿದೆ

2. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

3. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಭಾರತೀಯ ಪಾಲುಗಾರಿಕೆ ಅಧಿನಿಯಮ, 1932ರಲ್ಲಿರುವುದು (1932ರ ಕೇಂದ್ರಾಧಿನಿಯಮ ಸಂಖ್ಯೆ 9) ಯಾವುದೂ ಅಂಥ ಪಾಲುಗಾರಿಕೆಗೆ ಅನ್ವಯವಾಗತಕ್ಕುದಲ್ಲ.

26ಬಿ. ಸಹಕಾರ ಸಂಘಗಳಿಂದ ಸಹೋದ್ಯಮ.- (1) ಯಾವುದೇ ಸಹಕಾರ ಸಂಘ ಅಥವಾ ಸಹಕಾರ ಸಂಘಗಳು, ಕೈಗಾರಿಕಾ ಬಂಡವಾಳ ಹೂಡಿಕೆ, ಹಣಕಾಸು ನೆರವು ಅಥವಾ ಮಾರಾಟ ಮತ್ತು ಆಡಳಿತ ನಿರ್ವಹಣೆಯಲ್ಲಿ ಪ್ರಾವೀಣ್ಯತೆಯೂ ಸೇರಿದಂತೆ ಅಂಥ ಸಂಘ ಅಥವಾ ಸಂಘಗಳ ಉಪ-ವಿಧಿಗಳಲ್ಲಿ ಅವಕಾಶ ಕಲ್ಪಿಸಿರುವ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚಿನ ನಿರ್ದಿಷ್ಟಪಡಿಸಿರುವ ವ್ಯವಹಾರಗಳನ್ನು ನಿರ್ವಹಿಸಲು ಸರ್ಕಾರದ ಯಾವುದೇ ಉದ್ಯಮದೊಡನೆ ಅಥವಾ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದ ಯಾವುದೇ ಇತರ ಉದ್ಯಮದೊಡನೆ ಸಹೋದ್ಯಮ ನಡೆಸಬಹುದು. [1][xxxx][1]

[2][ಪರಂತು, ನೆರವು ಪಡೆದ ಸಂಘವಾಗಿದ್ದಲ್ಲಿ ರಿಜಿಸ್ಟ್ರಾರ್ ರವರಿಂದ ಮತ್ತು ಒಂದು ಸಹಕಾರಿ ಬ್ಯಾಂಕ್ ಆಗಿದ್ದಲ್ಲಿ ಭಾರತೀಯ ರಿಜರ್ವ್ ಬ್ಯಾಂಕ್‌ನಿಂದ ಮೊದಲೇ ಅನುಮೋದನೆಯನ್ನು ಪಡೆಯದೆ ಅಂಥ ಸಹೋದ್ಯಮದಲ್ಲಿ ಸೇರಿಕೊಳ್ಳತಕ್ಕದ್ದಲ್ಲ.][2]

(2) (1)ನೇ ಉಪ-ಪ್ರಕರಣದಡಿ ಸಹೋದ್ಯಮದ ಅಂಥ ಯೋಜನೆಗಳಿಗೆ ಅನುಮೋದನೆ ನೀಡುವುದಕ್ಕೆ ಮೊದಲು, ರಿಜಿಸ್ಟ್ರಾರರು [1][ಅಥವಾ ಸಂದರ್ಭಾನುಸಾರ ಭಾರತೀಯ ರಿಜರ್ವ್ ಬ್ಯಾಂಕ್][1] ಈ ಕೆಳಕಂಡ ವಿಷಯಗಳ ಬಗ್ಗೆ ಸೂಕ್ತ ಗಮನವನ್ನು ನೀಡತಕ್ಕುದು, ಎಂದರೆ:-

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಎ) ಈ ಯೋಜನೆಯನ್ನು ಆರ್ಥಿಕವಾಗಿ ಸಮರ್ಥವಾಗಿ ನಡೆಸಿಕೊಂಡು ಹೋಗುವ ಕಾರ್ಯಸಾಧ್ಯತೆ;

(ಬಿ) ಸಹಕಾರ ಸಂಘ ಅಥವಾ ಸಹಕಾರ ಸಂಘಗಳ ಸಹಕಾರ ಸ್ವರೂಪವನ್ನು ಯಾವ ರೀತಿಯಲ್ಲೂ ಬದಲಾಯಿಸದೆ ಇದನ್ನು ಕಾರ್ಯರೂಪಕ್ಕೆ ತರಬಹುದು;

(ಸಿ) ಈ ಯೋಜನೆಯು ಸಹಕಾರ ಸಂಘದ ಅಥವಾ ಸಹಕಾರ ಸಂಘಗಳ ಸದಸ್ಯರ ಹಿತಾಸಕ್ತಿಗಳಿಗೆ ಅನುಗುಣವಾಗಿ ಅಥವಾ ಸಾರ್ವಜನಿಕ ಹಿತಾಸಕ್ತಿ ಅಥವಾ ಸಾಮಾನ್ಯವಾಗಿ, ಸಹಕಾರ ಆಂದೋಲನದ ಹಿತಾಸಕ್ತಿಗನುಗುಣವಾಗಿದೆ.][1]

[1][(ಡಿ) ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಯೋಜನೆಯು ಠೇವಣಿದಾರರ ಹಿತಾಸಕ್ತಿಗೆ ಅಥವಾ ಬ್ಯಾಂಕಿಂಗ್ ನೀತಿಗೆ ಹಾನಿಕರವಾಗಿಲ್ಲದಿದ್ದರೆ.][1]

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

1[27. ವಾರ್ಷಿಕ ಮಹಾ ಸಭೆ.- (1) ಪ್ರತಿಯೊಂದು ಸಹಕಾರ ಸಂಘವು,-

(ಎ) ಸಮಿತಿಯು ಮಂಡಿಸಿದ ವಾರ್ಷಿಕ ವರದಿಯ ಪರಿಶೀಲನೆಯ;

(ಬಿ) ಲಭ್ಯವಿರುವ ಇತ್ತೀಚಿನ ಲೆಕ್ಕ ಪರಿಶೋಧನಾ ವರದಿ ಮತ್ತು ಅದರ ಮೇಲಿನ ಸಮಿತಿಯ ವರದಿಯ ಪರಿಶೀಲನೆಯ;

(ಸಿ) ವಿಚಾರಣಾ ವರದಿ ಯಾವುದಾದರೂ ಇದ್ದರೆ, ಅದರ ಪರಿಶೀಲನೆಯ;

(ಡಿ) ನಿವ್ವಳ ಲಾಭಗಳ ವಿಲೆಯ;

(ಇ) ಕಾರ್ಯಾಚರಣೆಯಲ್ಲಿ ಕೊರತೆ ಏನಾದರೂ ಇದ್ದರೆ ಅದರ ಪುನರವಲೋಕನ ಮತ್ತು ಅಂಥ ಕೊರತೆಯನ್ನು ಕಡಿಮೆ ಮಾಡಲು ಕಾರ್ಯಕ್ರಮದ;

(ಎಫ್) ಮುಂಬರುವ ವರ್ಷಕ್ಕಾಗಿ ಸಮಿತಿಯು ತಯಾರಿಸಿದ ಸಂಘದ ಚಟುವಟಿಕೆಗಳ ಕಾರ್ಯಕ್ರಮದ ಅನುಮೋದನೆಯ;

(ಜಿ) ವಾರ್ಷಿಕ ಬಜೆಟ್‌ನ ಅನುಮೋದನೆಯ;

(ಎಚ್) ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆಯ;

(ಐ) ಇತರ ಸಹಕಾರ ಸಂಘಗಳಲ್ಲಿ ಸಹಕಾರ ಸಂಘದ ಸದಸ್ಯತ್ವದ ಅನುಮೋದನೆಯ;

(ಜೆ) ಯಾವುದೇ ಪೂರಕ ಸಂಘದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು ಯಾವುದಾದರೂ ಇದ್ದರೆ ಅವುಗಳ ಪುನರವಲೋಕನದ;

(ಕೆ) ಸಮಿತಿಯ ಸದಸ್ಯರ ಅಥವಾ ಮುಖ್ಯ ಕಾರ್ಯನಿರ್ವಾಹಕರ ಬಂಧುಗಳಾಗಿದ್ದು ನೇಮಕ ಹೊಂದಿದ ನೌಕರರ ಪಟ್ಟಿಯ ಪರಿಶೀಲನೆಯ;

(ಎಲ್) ಉಪ ವಿಧಿಗಳ ತಿದ್ದುಪಡಿಯ;

(ಎಮ್) ಸಹಕಾರಿ ಸಂಘದ ಸಮಿತಿಯ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರಿಗಾಗಿ ವರ್ತನ ಸಂಹಿತೆಯ ರಚನೆಯ;

(ಎನ್) ಸದಸ್ಯರ ಪ್ರವೇಶ ಮತ್ತು ಅವರನ್ನು ತೆಗೆದುಹಾಕುವ ಮೇಲಿನ ಸೂಚನೆಯ; [4][xxx][4]

[5][(ಎನ್-1) ಸಂಘದ ಸದಸ್ಯರು ಮತ್ತು ನಿರ್ದೇಶಕರಿಂದ ಸಂಘದ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ;

(ಎನ್-2) ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ನೀಡಲಾದ ಸಾಲಗಳು ಮತ್ತು ಮುಂಗಡಗಳ ಸುಸ್ತಿದಾರರು, ಯಾವುದಾದರೂ ಇದ್ದರೆ, ಅವುಗಳ ವಸೂಲಿಗಾಗಿ ಕೈಕೊಂಡ ಕ್ರಮದ ಪರಿಶೀಲನೆ;

(ಎನ್-3) ವಿಚಾರಣಾ ಮತ್ತು ತಪಾಸಣಾ ವರದಿಗಳು, ಯಾವುದಾದರೂ ಇದ್ದರೆ ಅವುಗಳ, ಮತ್ತು ಸದರಿ ವರದಿಗಳಲ್ಲಿ, ಎತ್ತಿ ತೋರಿಸಲಾದ ದೋಷಗಳನ್ನು ಸರಿಪಡಿಸುವ ಮತ್ತು ಅಕ್ರಮಗಳನ್ನು ಪರಿಹರಿಸುವ ಸಂಬಂಧದಲ್ಲಿ ಕೈಕೊಂಡ ಕ್ರಮದ ಬಗ್ಗೆ ಮಂಡಲಿಯ ಅನುಸರಣಾ ವರದಿಯ ಪರಿಶೀಲನೆ;

(ಎನ್-4) ಲೆಕ್ಕಪರಿಶೋದಕರ ನೇಮಕಾತಿ;

(ಎನ್-5) ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸ್ವಯಿಚ್ಛಾ ಸಂಯೋಜನೆ, ವಿಭಜನೆ, ವರ್ಗಾವಣೆ;

(ಎನ್-6) [1][ವಸೂಲಿಯಾಗದವನೆಂದು ವಸೂಲಾಗದ ಸಾಲಗಳಿಗೆ ಸಂಬಂಧಪಟ್ಟಂತೆ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಕೃಷಿ ಪತ್ತಿನ ರಚನಾ ವ್ಯವಸ್ಥೆಯ ಸಹಕಾರ ಸಂಘಗಳಿಗೆ ನಬಾರ್ಡ್ ಅಥವಾ ಅಂಥ ಮಾರ್ಗಸೂಚಿಗಳಿಲ್ಲದಿದ್ದಲ್ಲಿ ನಿಬಂಧಕರು ನೀಡುವ ಮಾರ್ಗಸೂಚಿಗಳಿಗನುಗುಣವಾಗಿ ವಸೂಲಿಯಾಗದವೆಂದು][1] ಪರಿಗಣಿಸಲಾದ ವಸೂಲಾಗದ ಋಣಗಳ ಬಗ್ಗೆ ತೀರ್ಮಾನ;

1.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎನ್-7) ಪದಾಧಿಕಾರಿಗಳೂ ಸೇರಿದಂತೆ ನಿರ್ದೇಶಕರಿಗೆ, ಅವರ ಆ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಪಟ್ಟ ಸಭೆಗಳಲ್ಲಿ ಅವರು ಹಾಜರಾದುದಕ್ಕೆ ಸಂಬಂಧಪಟ್ಟಂತೆ ಅವರಿಗೆ ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಇತರ ಭತ್ಯಗಳ ಪರಿಶೀಲನೆ;

(ಎನ್-8) ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪರಿಶೀಲನೆ;

(ಎನ್-9) ಸಹಕಾರ ಸಂಘಗಳ ಸಮಾಪನೆ; ಮತ್ತು]5

(ಒ) ಉಪವಿಧಿಗಳಿಗನುಸಾರವಾಗಿ ಮಂಡಿಸಬಹುದಾದ ಯಾವುದೇ ಇತರ ವಿಷಯದ ಪರಿಶೀಲನೆಯ

- ಉದ್ದೇಶಗಳಿಗಾಗಿ ಸದಸ್ಯರ ಮಹಾ ಸಭೆಯನ್ನು 3[ಸೆಪ್ಟೆಂಬರ್ ಇಪ್ಪತ್ತೈದನೇ]3 ದಿನಾಂಕದೊಳಗೆ ವರ್ಷದಲ್ಲಿ ಒಮ್ಮೆ ನಡೆಸತಕ್ಕುದು:

4[2[xxx]2]4

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15-8-1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

5. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಅನುಸಾರರಾಗಿ, ಮಹಾ ಸಭೆಯನ್ನು ಕರೆಯಲು ತಪ್ಪಿದರೆ, ರಿಜಿಸ್ಟ್ರಾರನು, ಆದೇಶದ ಮೂಲಕ,-

(ಎ) ಅಂಥ ಸಭೆಯನ್ನು ಕರೆಯುವುದು ಯಾರ ಕರ್ತವ್ಯವಾಗಿತ್ತೋ ಮತ್ತು ಯಾರು ಅಂಥ ಸಭೆಯನ್ನು ಕರೆಯಲು ಸೂಕ್ತ ಕಾರಣವಿಲ್ಲದೆ ತಪ್ಪಿರುವರೋ ಆ ಯಾರೇ ಪದಾಧಿಕಾರಿಯನ್ನು ಅಥವಾ ಸಮಿತಿಯ ಸದಸ್ಯನನ್ನು ಐದು ವರ್ಷಗಳಿಗೆ ಮೀರದ ಅವಧಿಯವರೆಗೆ, ಸಮಿತಿಯ ಪದಾಧಿಕಾರಿಯಾಗಿರಲು ಅಥವಾ ಸದಸ್ಯನಾಗಿರಲು ಅಥವಾ ಹಾಗೆ ಆಯ್ಕೆಯಾಗಲು ಅನರ್ಹನೆಂದು ಘೋಷಿಸಬಹುದು.

(ಬಿ) 2[xxx]2

ಪರಂತು, ಯಾವ ವ್ಯಕ್ತಿಯ ವಿರುದ್ಧ ಆದೇಶ ಮಾಡಬೇಕಾಗಿದೆಯೋ ಅವನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಹೊರತು, ಈ ಉಪಕ್ಷಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.]1

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

1[(3) (1)ನೇ ಉಪ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮಹಾಸಭೆಯನ್ನು ಕರೆಯಲು ತಪ್ಪಿದಲ್ಲಿ, ರಿಜಿಸ್ಟ್ರಾರ್ ಅಥವಾ ಈ ಸಂಬಂಧದಲ್ಲಿ ಆತನಿಂದ ಅಧಿಕೃತನಾದ ಯಾವೊಬ್ಬ ಇತರ ವ್ಯಕ್ತಿಯು, (2)ನೇ ಉಪ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, (1)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಮಹಾಸಭೆಯನ್ನು ಕರೆಯತಕ್ಕದ್ದು.]1

1.2004ರ ಅಧಿನಿಯಮ ಸಂಖ್ಯೆ 13ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][[2][(4) ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸದ ಸಂಘಗಳಲ್ಲಿ ಸಾಮಾನ್ಯ ಸಭೆಯ ಸಭಾವಶ್ಯಕ ಸಂಖ್ಯೆ ಆಯಾ ಸಂಘದ ಉಪವಿಧಿಗಳಿಗನುಗುಣವಾಗಿರತಕ್ಕದ್ದು ಆದರೆ ಅರ್ಹ ಮತದಾರ ಸದಸ್ಯರ ಶೇಕಡ ಹತ್ತು ಅಥವಾ ಒಂದು ಸಾವಿರ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಸಂಖ್ಯೆಯು ಕೋರಂ ಆಗಿರತಕ್ಕದ್ದು:][2]

ಪರಂತು, ಪ್ರತಿನಿಧಿ ಮಹಾಸಭೆಗಾಗಿನ ಕೋರಂ, ಸಭೆಯಲ್ಲಿ ಮತ ನೀಡಲು ಅರ್ಹತೆಹೊಂದಿರುವ ಪ್ರತಿನಿಧಿಗಳ ಶೇಕಡಾ ಅರವತ್ತಕ್ಕಿಂತ ಕಡಿಮೆ ಇರತಕ್ಕದಲ್ಲ.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1]**[27ಎ. ವ್ಯವಸ್ಥಾಪನೆಯಲ್ಲಿ ಸದಸ್ಯರು ಪಾಲ್ಗೊಳ್ಳುವುದು.-** ಸಹಕಾರ ಸಂಘದ ಪ್ರತಿಯೊಬ್ಬ ಸದಸ್ಯನು,-

(ಎ) ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಮೂರು ಮಹಾಸಭೆಗಳಿಗೆ ಹಾಜರಾಗುವ ಮೂಲಕ;

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಸಂಘವು ನೀಡುವಂಥ ಕನಿಷ್ಠ ಸೇವೆಗಳು, ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಿಸಿಕೊಳ್ಳುವ ಮೂಲಕ,

- ಸಂಘದ ವ್ಯವಸ್ಥಾಪನೆಯಲ್ಲಿ ಪಾಲ್ಗೊಳ್ಳತಕ್ಕದ್ದು:

ಪರಂತು ಒಬ್ಬ ಸದಸ್ಯನು ಕನಿಷ್ಠ ಸೇವೆಗಳನ್ನು ಒಳಸಿಕೊಳ್ಳುಲು ತಪ್ಪಿದರೆ ಅಥವಾ ಕನಿಷ್ಠ ಸಂಖ್ಯೆಯ ಸಭೆಗಳಿಗೆ ಹಾಜರಾಗಲು ತಪ್ಪಿದರೆ, ಅವನು, ಮೂರು ವರ್ಷಗಳ ಅವಧಿಯವರೆಗೆ ಮತ ನೀಡುವ ತನ್ನ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.

27 ಬಿ. ರಿಜಿಸ್ಟ್ರಾರನಲ್ಲಿ ವಿವರ ಪಟ್ಟಿಕೆಗಳನ್ನು ಸಲ್ಲಿಸುವುದು.- ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ಈ ಕೆಳಕಂಡ ವಿವರ ಪಟ್ಟಿಕೆಗಳನ್ನು ರಿಜಿಸ್ಟ್ರಾರನಿಗೆ, ಪ್ರತಿಯೊಂದು ಸಹಕಾರ ವರ್ಷದ ಮುಕ್ತಾಯದ ಆರು ತಿಂಗಳೊಳಗಾಗಿ,

(ಎ) ಸಂಘದ ಚಟುವಟಿಕೆಗಳ ವಾರ್ಷಿಕ ವರದಿಯನ್ನು;

(ಬಿ) ಲೆಕ್ಕಪತ್ರಗಳ ಪರಿಶೋಧಿತ ವಿವರ ಪತ್ರಗಳನ್ನು;

(ಸಿ) ಮಹಾಸಭೆಯು ಅನುಮೋದಿಸದಂಥ ಹೆಚ್ಚುವರಿ ಆದಾಯದ ವಿಲೇವಾರಿಗಾಗಿ ಯೋಜನೆಯನ್ನು;

(ಡಿ) ಸಹಕಾರ ಸಂಘದ ಮಹಾಸಭೆಯು ಅನುಮೋದಿಸಿರುವಂಥ, ಉಪವಿಧಿಯ ತಿದ್ದುಪಡಿಗಳ

ಪಟ್ಟಿಯನ್ನು;

(ಇ) ಮಹಾಸಭೆಯನ್ನು ನಡೆಸುವ ದಿನಾಂಕದ ಬಗ್ಗೆ ಮತ್ತು ಚುನಾವಣೆಗಳು ಬಾಕಿ ಇದ್ದಲ್ಲಿ ಅವುಗಳನ್ನು ನಡೆಸುವ ಬಗ್ಗೆ ಘೋಷಣೆಯನ್ನು;

(ಎಫ್) ಹಣದ ದುರುಪಯೋಗ ಅಥವಾ ದುರ್ವಿನಿಯೋಗ, ಯಾವುದಾದರೂ ಇದ್ದರೆ, ಅದು ಮತ್ತು ಸಿವಿಲ್, ಕ್ರಿಮಿನಲ್ ಮತ್ತು ಶಿಸ್ತು ಕ್ರಮಗಳು ಸೇರಿದಂತೆ ಆ ಸಂಬಂಧದಲ್ಲಿ ಜವಾಬ್ದಾರರಾಗಿರುವ ವ್ಯಕ್ತಿಗಳ ವಿರುದ್ಧ ಕೈಗೊಂಡ ಕ್ರಮವನ್ನು ಮತ್ತು;

(ಜಿ) ಅಧಿನಿಯಮದ ಯಾವುದೇ ಉಪಬಂಧಗಳಿಗೆ ಅನುಸಾರವಾಗಿ ರಿಜಿಸ್ಟ್ರಾರನು ಅಗತ್ಯಪಡಿಸಿದ ಯಾವುದೇ ಇತರ ಮಾಹಿತಿಯನ್ನು;

- ಸಲ್ಲಿಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

28. ವಿಶೇಷ ಮಹಾ ಸಭೆ.- (1) ಸಹಕಾರ ಸಂಘದ ಸಮಿತಿಯು, ಯಾವುದೇ ಸಮಯದಲ್ಲಿ ವಿಶೇಷ ಮಹಾಸಭೆಯನ್ನು ಕರೆಯಬಹುದು ಮತ್ತು ಅಂಥ ಸಭೆಯನ್ನು ರಿಜಿಸ್ಟ್ರಾರನಿಂದ ಅಥವಾ [1][ಒಂದು ನಿರ್ದಿಷ್ಟ ಕಾರ್ಯ ಕಲಾಪವನ್ನು ನಡೆಸಲು [2][xxx][2] ಒಟ್ಟು ಸದಸ್ಯರ ಸಂಖ್ಯೆಯ ಐದನೇ ಒಂದರಷ್ಟು, [2][xxx][2] ಸದಸ್ಯರಿಂದ][1] ನಿಯಮಿಸಬಹುದಾದಷ್ಟು ಪ್ರಮಾಣದ ಸದಸ್ಯರಿಂದ ಲಿಖಿತ ಕೋರಿಕೆಯನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳೊಳಗೆ ಕರೆಯತಕ್ಕದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕೋರಿಕೆಗೆ ಅನುಸಾರವಾಗಿ ಸಹಕಾರ ಸಂಘದ ವಿಶೇಷ ಮಹಾ ಸಭೆಯನ್ನು ಕರೆಯದಿದ್ದರೆ, ರಿಜಿಸ್ಟ್ರಾರನು ಅಥವಾ ಅವನಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು ಅಂಥ ಸಭೆಯನ್ನು ಕರೆಯಲು ಅಧಿಕಾರ ಹೊಂದಿರತಕ್ಕುದು ಮತ್ತು ಆ ಸಭೆಯನ್ನು ಸಮಿತಿಯಿಂದ ಕರೆಯಲಾದ ಸಭೆ ಎಂದು ಭಾವಿಸತಕ್ಕುದು ಮತ್ತು ಆ ಸಭೆಯು ಸಂಘದ ಉಪವಿಧಿಗಳ ಮೇರೆಗೆ ವಾರ್ಷಿಕ ಮಹಾ ಸಭೆಯಲ್ಲಿ ನಡೆಸಬಹುದಾದ ಎಲ್ಲ ವ್ಯವಹಾರಗಳನ್ನು ಮತ್ತು ರಿಜಿಸ್ಟ್ರಾರನು ಮಾಡಿದ ಕೋರಿಕೆಯಲ್ಲಿ ವಿಶೇಷವಾಗಿ ನಮೂದಿಸಿದ ಇತರ ವ್ಯವಹಾರಗಳನ್ನು ನಡೆಸಲು ಅಧಿಕಾರ ಹೊಂದಿರತಕ್ಕುದು.

[1][28ಎ. ಸಹಕಾರ ಸಂಘಗಳ ವ್ಯವಸ್ಥಾಪನೆಯು ಸಮಿತಿಯಲ್ಲಿ ನಿಹಿತವಾಗಿರುವುದು.- (1) ಯಾವೊಂದು ಸಹಕಾರ ಸಂಘದ ವ್ಯವಸ್ಥಾಪನೆಯು ಈ ಅಧಿನಿಯಮ, ನಿಯಮಗಳು ಮತ್ತು ಅಂಥ ಸಂಘದ ಉಪವಿಧಿಗಳಿಗೆ ಅನುಗುಣವಾಗಿ ರಚಿಸಲಾದ ಒಂದು ಸಮಿತಿಯಲ್ಲಿ ನಿಹಿತವಾಗಿರತಕ್ಕುದು. ಆ ಸಮಿತಿಯು ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ

ಮೇರೆಗೆ ಅದಕ್ಕೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸತಕ್ಕುದು, ಕರ್ತವ್ಯಗಳನ್ನು ನಿರ್ವಹಿಸತಕ್ಕುದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) ಸಹಕಾರ ಸಂಘದ ಸಮಿತಿಯು [3][xxx][3] ಮುಖ್ಯ ಕಾರ್ಯನಿರ್ವಾಹಕರನ್ನು ಹೊರತುಪಡಿಸಿ [5][ಹನ್ನೊಂದಕ್ಕಿಂತ ಕಡಿಮೆ ಇಲ್ಲದ][5] ಆದರೆ ಕೆಳಗೆ ನಿರ್ದಿಷ್ಟಪಡಿಸಿದಷ್ಟು ಸಂಖ್ಯೆಗಿಂತ ಹೆಚ್ಚಿಲ್ಲದ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ:-

[4][(i) ಪ್ರಾಥಮಿಕ ಸಂಘದ ಮತ್ತು ಸೆಕೆಂಡರಿ ಸಂಘದ ಕಾರ್ಯಾಚರಣೆ ಪ್ರದೇಶ ವ್ಯಾಪ್ತಿಯು,-

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದ್ದರೆ, ಹನ್ನೊಂದು ಜನ ಸದಸ್ಯರು;

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದ್ದರೆ, ಹದಿಮೂರು ಜನ ಸದಸ್ಯರು;

(ಸಿ) ತಾಲ್ಲೂಕನ್ನು ಮೀರಿದ ಆದರೆ ಜಿಲ್ಲೆಯನ್ನು ಮೀರದ ಪ್ರದೇಶಕ್ಕೆ ವ್ಯಾಪಿಸಿದರೆ, ಹದಿನೈದು ಜನ ಸದಸ್ಯರು:

ಪರಂತು, ಒಂದು ಜಿಲ್ಲೆಯನ್ನು ಮೀರದ ಪ್ರವರ್ತನಾ ಪ್ರದೇಶವನ್ನು ಹೊಂದಿರುವ ನಗರ ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ, ಗರಿಷ್ಠ ಸಂಖ್ಯೆಯು ಹದಿನೇಳು ಸದಸ್ಯರನ್ನು ಮೀರತಕ್ಕದ್ದಲ್ಲ.

(ಡಿ) ಜಿಲ್ಲೆಯನ್ನು ಮೀರಿ ವ್ಯಾಪಿಸಿದ್ದರೆ, ಹತ್ತೊಂಭತ್ತು ಸದಸ್ಯರು][4]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಅಪೆಕ್ಸ್ ಸಂಘಗಳನ್ನು [2][ಒಳಗೊಂಡ][2] ಸಂಯುಕ್ತ ಸಂಘವಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು;

(iii) [3][[1][xxx][1]][3] :

1.2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.

ಪರಂತು, ಸದಸ್ಯನು ಸಂಘದ ಸಮಿತಿಯಲ್ಲಿ ಒಂದಕ್ಕಿಂತ ಹೆಚ್ಚಿನ ಮತ ಕ್ಷೇತ್ರವನ್ನು ಪ್ರತಿನಿಧಿಸತಕ್ಕುದಲ್ಲ.

[1][ಪರಂತು, ಆಡಳಿತ ಮಂಡಳಿ ಸದಸ್ಯರ ಸಂಖ್ಯೆ ಕನಿಷ್ಟ ಮತ್ತು ಗರಿಷ್ಟ ಪ್ರಮಾಣವು ಉಪಪ್ರಕರಣ (2) ರಲ್ಲಿ ನಿಗದಿಪಡಿಸಿರುವಂತೆ ಆಯಾ ಸಹಕಾರ ಸಂಘಗಳು ತಮ್ಮ ಉಪವಿಧಿಗಳಲ್ಲಿ ನಿಗದಿಪಡಿಸಿಕೊಳ್ಳತಕ್ಕದ್ದು-

(ಎ) ಆರ್ಥಿಕ ನೆರವು ಪಡೆದ ಸಹಕಾರ ಸಂಘದಲ್ಲಿ ಸರ್ಕಾರದ ನಾಮನಿರ್ದೇಶಿತ ಪ್ರಕರಣ 28ಎ(4-ಬಿ) ನಲ್ಲಿ ನಿಗದಿಪಡಿಸಿರುವಂತೆ;

(ಬಿ) ಇತರೆ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಪದನಿಮಿತ್ತ ಸದಸ್ಯ ಮತ್ತು ಸಾಲ ನೀಡಿಕೆ ಬ್ಯಾಂಕ್ ಅಥವಾ ಸಾಲ ನೀಡಿಕೆ ಸಂಸ್ಥೆಯ ನಾಮ ನಿರ್ದೇಶಿತ.

ಉಳಿದ ಸದಸ್ಯರನ್ನು ಪ್ರಕರಣ 29ಇನ ಷರತ್ತಿಗೊಳಪಟ್ಟು ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) [1][ಪ್ರತಿ ಸಹಕಾರ ಸಂಘದ][1] ಸಮಿತಿಯಲ್ಲಿ:-

(i) ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಂದ ಚುನಾವಣೆ ಮೂಲಕ ಭರ್ತಿ ಮಾಡುವುದಕ್ಕಾಗಿ;

(ii) [1][ಎರಡು ಸ್ಥಾನಗಳನ್ನು][1] ಮಹಿಳೆಯರಿಂದ ಚುನಾವಣೆ ಮೂಲಕ ಭರ್ತಿ ಮಾಡುವುದಕ್ಕಾಗಿ

[2][(iii) "ಹಿಂದುಳಿದ ವರ್ಗದವರಿಗೆ ಎರಡು ಸ್ಥಾನಗಳನ್ನು ಚುನಾವಣೆ ಮೂಲಕ ಭರ್ತಿಮಾಡತಕ್ಕದ್ದು. ಇವುಗಳಲ್ಲಿ ಒಂದು ಸ್ಥಾನವನ್ನು ಪ್ರವರ್ಗ "ಎ", ಮತ್ತೊಂದು ಸ್ಥಾನವನ್ನು ಪ್ರವರ್ಗ "ಬಿ" ವರ್ಗದವರಿಗೆ,][2]

- ಮೀಸಲಿಡತಕ್ಕುದು:

ಪರಂತು, ವ್ಯಕ್ತಿಗಳನ್ನು ಸದಸ್ಯರನ್ನಾಗಿ ಒಳಗೊಂಡಿರುವ ಮತ್ತು ವ್ಯಕ್ತಿಗಳ ಅಂಥ ವರ್ಷ ಅಥವಾ ಪ್ರವರ್ಗದಿಂದ ಸದಸ್ಯರನ್ನು ಹೊಂದಿರುವ ಪ್ರತಿಯೊಂದು ಸಹಕಾರ ಸಂಘದ ಮಂಡಳಿಯಲ್ಲಿ ಅಂಥ ಮೀಸಲಾತಿಯನ್ನು ಮಾಡತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) 29ಎ ಮತ್ತು 39ಎ ಪ್ರಕರಣದ ಉಪಬಂಧಗಳಿಗೊಳಪಟ್ಟು, [4][ಸಮಿತಿಯ ಅನ್ಯಥಾ ಉಪಬಂಧಿಸಿದುದನ್ನುಳಿದ][4] ಸದಸ್ಯರ ಅಧಿಕಾರದ ಅವಧಿಯು [2][ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು][2] ಮತ್ತು ಸದರಿ ಅವಧಿಯು ಮುಕ್ತಾಯವಾದ ದಿನಾಂಕದಂದು ಸಮಿತಿಯ ಅಂಥ ಸದಸ್ಯರು ಪದವನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕುದು:

ಪರಂತು, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1997 ಪ್ರಾರಂಭವಾಗುವುದಕ್ಕೆ ಮೊದಲು, ಅಂಥ ಸಂಘದ ಉಪ-ವಿಧಿಗಳಿಗನುಸಾರವಾಗಿ ಯಾವುದೇ ಸಹಕಾರ ಸಂಘದ ಸಮಿತಿಗೆ ಈಗಾಗಲೇ ಚುನಾವಣೆ ನಡೆದಿದ್ದರೆ, ಅಂಥ ಸಹಕಾರ ಸಂಘದ

ಸಮಿತಿಯ ಪದಾವಧಿಯು, ಅಂಥ ಚುನಾವಣೆ ನಡೆದ ಸಹಕಾರ ವರ್ಷವೂ ಸೇರಿದಂತೆ ಮೂರು ವರ್ಷಗಳಾಗಿರತಕ್ಕುದು:

[3][**ವಿವರಣೆ**.-xxx][3]

ಮತ್ತೂ ಪರಂತು, ನೋಂದಣಿಯ ನಂತರ ಸಂಘದ ಮೊದಲ ಮಹಾ ಸಭೆಯನ್ನು ಸಂಘದ ವ್ಯವಹರಣೆಗಳನ್ನು ನಿರ್ವಹಿಸುವುದಕ್ಕೆ ಮೊದಲ ಸಮಿತಿಯನ್ನು ಆಯ್ಕೆ ಮಾಡಲು ನೋಂದಣಿಯ ದಿನಾಂಕದಿಂದ ಒಂದು ತಿಂಗಳೊಳಗೆ ನಡೆಸತಕ್ಕುದು. ಮತ್ತು ಅಂಥ ಸಮಿತಿಯ ಪದಾವಧಿಯೂ ಸಹ [2][ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು.][2]

[1][ಅಲ್ಲದೆ ಪರಂತು, 14ನೇ ಪ್ರಕರಣದ ಅನುಸಾರವಾಗಿ ಒಂದುಗೂಡಿದ ಅಥವಾ ಮಾನ್ಯತೆ ಪಡೆದ ಅಥವಾ ವಿಭಾಗದ ನಂತರ ರಚನೆಯಾದ ಸಹಕಾರಿ ಸಂಘದ ಅಥವಾ ಸಂಘಗಳ ಮೊದಲ ಮಹಾಸಭೆಯನ್ನು ಸಹಕಾರಿ ಸಂಘದ ಅಥವಾ ಸಂಘಗಳ ವ್ಯವಹಾರವನ್ನು ನಿರ್ವಹಿಸಲು ಮೊದಲ ಸಮಿತಿಯನ್ನು ಆಯ್ಕೆ ಮಾಡಲು ನೋಂದಣಿಯ ದಿನಾಂಕದಿಂದ ಮೂರು ತಿಂಗಳ ಒಳಗೆ ನಡೆಸತಕ್ಕದ್ದು ಮತ್ತು ಅಂಥ ಸಮಿತಿಯ ಪದಾವಧಿಯು ಸಹ [2][ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು][2]][1]

1.2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ.
4.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(4ಎ) ಸಹಕಾರಿ ಸಂಘಗಳ ಮಂಡಳಿಯು, ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ಕ್ಷೇತ್ರಗಳಲ್ಲಿ ಅನುಭವವನ್ನು ಹೊಂದಿರುವವರನ್ನು ಸಹ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳಬಹುದು ಅಥವಾ ಸಹಕಾರ ಸಂಘವು ಕೈಗೊಳ್ಳಬೇಕಾದ ಉದ್ದೇಶಗಳು ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಇತರ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳು ಸದಸ್ಯರಾಗಿರಬೇಕು;

ಪರಂತು, ಹಾಗೆ ಸಹ ಸದಸ್ಯರನ್ನಾಗಿ ನೇಮಕ ಮಾಡಿಕೊಂಡು ಸದಸ್ಯರ ಸಂಖ್ಯೆಯು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಸಂಖ್ಯೆಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದಲ್ಲ:

ಮತ್ತು ಪರಂತು, ಹಾಗೆ ಸಹ ಸದಸ್ಯರಾದಂಥವರು, ಅಂಥ ಸದಸ್ಯರಾಗಿ ಅವರ ಸಾಮರ್ಥ್ಯದಲ್ಲಿ ಸಹಕಾರಿ ಸಂಘಗಳ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಅಲ್ಲದೆ ಪರಂತು ಮೂವರು ಸದಸ್ಯರನ್ನು ಮೀರದ ಕಾರ್ಯನಿರ್ವಹಣಾ ನಿರ್ದೇಶಕರುಗಳು ಉಪವಿಧಿಗಳಿಗನುಸಾರವಾಗಿ ಮಂಡಳಿಯ ಸದಸ್ಯರಾಗಿರತಕ್ಕದ್ದು ಮತ್ತು ಅಂಥ ಸದಸ್ಯರುಗಳನ್ನು, (2)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಿರ್ದೇಶಕರುಗಳ ಒಟ್ಟು ಸಂಖ್ಯೆಯ ಉದ್ದೇಶಕ್ಕಾಗಿ ಹೊರತುಪಡಿಸತಕ್ಕದ್ದು.

ಅಲ್ಲದೆ ಪರಂತು, ವೃತ್ತಿಪರ ನಿರ್ದೇಶಕರುಗಳು ಮತ್ತು ಕಾರ್ಯನಿರ್ವಹಣಾ ನಿರ್ದೇಶಕರುಗಳು, ಮಂಡಳಿಯ ಸಭೆಗಳನ್ನು ನಡೆಸುವ ಕೋರಂನ (ಗಣಪೂರ್ತಿಯ) ಭಾಗವಾಗಿರತಕ್ಕದ್ದಲ್ಲ.

[1][ಅಲ್ಲದೇ ಪರಂತು, ನಗರ ಸಹಕಾರಿ ಬ್ಯಾಂಕುಗಳಿಗೆ ಸಹಯೋಜಿತರಾದ ನಿರ್ದೇಶಕರು ಭಾರತೀಯ ರಿಸರ್ವ್ ಬ್ಯಾಂಕ್ ಗೊತ್ತುಪಡಿಸಿದ ಅಗತ್ಯ ತಿಳುವಳಿಕೆ ಮತ್ತು ಅನುಭವವನ್ನು ಹೊಂದಿರದಿದ್ದಲ್ಲಿ, ಅಂಥ ಬ್ಯಾಂಕುಗಳ ಮಂಡಳಿಯು ಅಂಥ ನಿರ್ದೇಶಕರಿಗೆ ತಮ್ಮ ಅಹವಾಲವನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಭಾರತೀಯ ರಿಸರ್ವ್ ಬ್ಯಾಂಕು ನಿರ್ದೇಶನವನ್ನು ನೀಡಿದ ಎರಡು ತಿಂಗಳೊಳಗೆ ಅಂಥ ವ್ಯಕ್ತಿಗಳನ್ನು ತೆಗೆದುಹಾಕತಕ್ಕದ್ದು.][1]

1.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4ಬಿ)-(1) ರಾಜ್ಯ ಸರ್ಕಾರವು, ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘದ ಮಂಡಳಿಯನ್ನು ಹೊರತು ಪಡಿಸಿದ ಪ್ರತಿಯೊಂದು ಸಹಾಯಕ ಸಂಘದ ಮಂಡಳಿಯ ಪ್ರತಿನಿಧಿಯಂತೆ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶಿಸಬಹುದು [1][ನಾಮನಿರ್ದೇಶಿತ ವ್ಯಕ್ತಿಯು ಸಹಕಾರ ಸಂಘದ ಎಲ್ಲಾ ಸಭೆಗಳಲ್ಲಿ ಹಾಗೂ ಚುನಾವಣೆಗಳಲ್ಲಿ ಮತ ಚಲಾಯಿಸಬಹುದು ಹಾಗೂ ಸಹಕಾರ ಸಂಘದ ಎಲ್ಲಾ ಚುನಾವಣೆಗಳಲ್ಲಿ ಸ್ಪರ್ಧಿಸಬಹುದು. ಪದನಿಮಿತ್ತ ಸದಸ್ಯರು ಹಾಗೂ ಹಣಕಾಸು ಅಥವಾ ಕ್ರೆಡಿಟ್ ಏಜೆನ್ಸಿಯಿಂದ ನಾಮನಿರ್ದೇಶಿತರು ಮತ ಚಲಾಯಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಆದರೆ ಪದಾಧಿಕಾರಿಯಾಗಿ ಸ್ಪರ್ಧಿಸಲು ಅರ್ಹರಾಗಿರುವುದಿಲ್ಲ][1]:

ಪರಂತು, ಸಹಕಾರ ಸಂಘದ ಸದಸ್ಯನಾಗಿ ನಾಮ ನಿರ್ದೇಶಿತನಾದ ವ್ಯಕ್ತಿಯು, ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು ಅಂಥ ಸದಸ್ಯನಾಗಿ ಪದವನ್ನು ಹೊಂದಿರತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಸರ್ಕಾರದ ಅಧಿಕಾರಿಯು (1)ನೇ ಖಂಡದಡಿಯಲ್ಲಿ ನಾಮನಿರ್ದೇಶಿತನಾದಲ್ಲಿ, ಅಂಥ ಅಧಿಕಾರಿಯು, ಮಂಡಳಿಯ ಯಾವುದೇ ಸಭೆಯಲ್ಲಿ ಸ್ವತ: ಹಾಜರಾಗಲು ಅಸಮರ್ಥನಾದಲ್ಲಿ, ತನ್ನ ಅಧೀನ ಅಧಿಕಾರಿಯಲ್ಲಿ, ಆತನ ಪ್ರತಿನಿಧಿಯಾಗಿ ಸಭೆಯಲ್ಲಿ ಹಾಜರಾಗಲು ನಿಯೋಜಿಸಬಹುದು ಮತ್ತು ಅಂಥ ಅಧೀನ ಅಧಿಕಾರಿಯನ್ನು ಅಂಥ ಸಭೆಯ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದ ಪ್ರತಿನಿಧಿಯಂತೆ ನಾಮ ನಿರ್ದೇಶಿಸಿದ ವ್ಯಕ್ತಿಯೆಂದೇ ಭಾವಿಸತಕ್ಕದ್ದು][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(5) 29ಎ ಪ್ರಕರಣದ ಮೇರೆಗೆ [1][ಸಮಿತಿಯ ಪದಾವಧಿಯು ಅಥವಾ 39ಎ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟ ಪಡಿಸಲಾದ ಕಾಲ ಮಿತಿಯೊಳಗೆ ಚುನಾವಣೆಯು ನಡೆಯದಿದ್ದಲ್ಲಿ][1] ಮುಗಿದ ನಂತರ ಹೊಸ ಸಮಿತಿಯು ರಚನೆಯಾಗಿರದಿದ್ದರೆ, ರಿಜಿಸ್ಟ್ರಾರನು ಅಥವಾ ಯಾರ ಅಧಿಕಾರ ವ್ಯಾಪ್ತಿಯೊಳಗೆ ಸಂಘವು ಇರುವುದೋ ಮತ್ತು ಯಾರು ರಿಜಿಸ್ಟ್ರಾರರಿಂದ ಅಧಿಕಾರ ಹೊಂದಿದ್ದಾರೋ ಆ ಯಾರೇ ಇತರ ಅಧಿಕಾರಿಯು ಆಡಳಿತಾಧಿಕಾರಿ ಆಗಿ ಅಧಿಕಾರ ಹೊಂದಿದ್ದಾರೆಂದು ಭಾವಿಸತಕ್ಕುದು ಮತ್ತು ಅವರು ಎಲ್ಲ ಉದ್ದೇಶಗಳಿಗಾಗಿ ವ್ಯವಸ್ಥಾಪನೆಯ ಸಮಿತಿಯಾಗಿ ಕಾರ್ಯನಿರ್ವಹಿಸತಕ್ಕುದು. ಆಡಳಿತಾಧಿಕಾರಿಯು, ರಿಜಿಸ್ಟ್ರಾರರ ನಿಯಂತ್ರಣಕ್ಕೊಳಪಟ್ಟು, ಸಹಕಾರ ಸಂಘದ ಸಮಿತಿಯ ಅಥವಾ ಸಹಕಾರ ಸಂಘದ ಯಾರೇ ಪದಾಧಿಕಾರಿಯ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಎಲ್ಲ ಪ್ರಕಾರ್ಯಗಳನ್ನೂ ನಿರ್ವಹಿಸತಕ್ಕುದು ಮತ್ತು ಸಹಕಾರ ಸಂಘದ ಹಿತದೃಷ್ಟಿಯಿಂದ ಅಗತ್ಯವೆನಿಸಬಹುದಾದ ಅಂಥ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕುದು:

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು, ರಿಜಿಸ್ಟ್ರಾರ್‌ನು 14ನೇ ಪ್ರಕರಣದ ಅನುಸಾರವಾಗಿ ಒಂದುಗೂಡಿದ ಅಥವಾ ಮಾನ್ಯತೆ ಪಡೆದ ಅಥವಾ ವಿಭಾಗದ ನಂತರ ರಚನೆಯಾದ ಸಹಕಾರಿ ಸಂಘಕ್ಕೆ ಅಥವಾ ಪ್ರತಿಯೊಂದು ಸಹಕಾರಿ ಸಂಘಗಳಿಗಾಗಿ ಮೂರು ತಿಂಗಳ ಅವಧಿಗಾಗಿ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಆಡಳಿತಾಧಿಕಾರಿಯು, ಅಂಥ ಸಹಕಾರಿ ಸಂಘದ ಅಥವಾ ಸಂದರ್ಭಾನುಸಾರವಾಗಿ ಸಂಘಗಳ ಸಮಿತಿಗೆ ಚುನಾವಣೆಯನ್ನು ನಡೆಸಲು ವ್ಯವಸ್ಥೆ ಮಾಡತಕ್ಕದ್ದು.][1]

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ಸಮಿತಿಯ [1][ಸದಸ್ಯರು][1] ಸಹಕಾರ ಸಂಘದ ಪದಾಧಿಕಾರಿಗಳನ್ನು ಅವರ ಪೈಕಿಯಿಂದಲೇ ಚುನಾಯಿಸತಕ್ಕುದು. ಪದಾಧಿಕಾರಿಗಳ ಚುನಾವಣೆಯು ರಹಸ್ಯ ಮತದಾನದ ಮೂಲಕ ನಡೆಯತಕ್ಕುದು.][1]][1]

1. 2000ದ ಅಧಿನಿಯಮ ಸಂಖ್ಯೆ 13ರ ಮೂಲಕ 26.2.2000 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][28ಬಿ. ಸಮಿತಿಯು ಚುನಾವಣೆಗೆ ವ್ಯವಸ್ಥೆ ಮಾಡಬೇಕು.- [1][[2][(1) ಮಂಡಳಿಯ ಚುನಾವಣೆಯನ್ನು ಮಂಡಳಿಯ ಪದಾವಧಿಯು ಮುಕ್ತಾಯಗೊಳ್ಳುವ ಪೂರ್ವದಲ್ಲಿಯೇ ನಡೆಸಬಹುದು.][2]][1]

1.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 39ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಚುನಾವಣೆಗೆ ವ್ಯವಸ್ಥೆ ಮಾಡಲು ವಿಫಲರಾದ ಸಮಿತಿಯ ಸದಸ್ಯರು ನಿರ್ದಿಷ್ಟಪಡಿಸಿದ ಕಾಲಮಿತಿಯ ಕೊನೆಯ ದಿನದಂದು ಅವರ ಪದವನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕುದು ಮತ್ತು ಅಂಥ ಸದಸ್ಯರು ಅವರ ಪದಾವಧಿ ಮುಕ್ತಾಯವಾದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಮಿತಿಯ ಸದಸ್ಯರಾಗಿ ಚುನಾವಣೆಗೆ ಅರ್ಹರಾಗತಕ್ಕುದಲ್ಲ.

(3) 28ಎ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಅಧಿಕಾರವನ್ನು ವಹಿಸಿಕೊಳ್ಳುವ ಆಡಳಿತಾಧಿಕಾರಿಯು, ಸಾಧ್ಯವಾದಷ್ಟು ಬೇಗನೆ, ಆದರೆ ಆರು ತಿಂಗಳ ಅವಧಿಯೊಳಗೆ, ಅಧಿನಿಯಮ, ನಿಯಮಗಳು ಮತ್ತು ಉಪ ವಿಧಿಗಳಿಗನುಸಾರವಾಗಿ ಸಂಘದ ಹೊಸ ಸಮಿತಿಯ ರಚನೆಗೆ ವ್ಯವಸ್ಥೆ ಮಾಡತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][ಪರಂತು, ಹಾಗೆ ನೇಮಕಗೊಂಡ ಆಡಳಿತಗಾರನು ಸಹಕಾರ ಪತ್ತಿನ ರಚನೆಯಲ್ಲಿಯ ಸಂಘದ ಸಂಬಂಧದಲ್ಲಿ ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಮುಂದುವರಿಯತಕ್ಕದ್ದಲ್ಲ.][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1]**[28 ಸಿ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು-** (1) ಸಹಕಾರ ಸಂಘಗಳ ಮಂಡಲಿಯು, ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳಡಿಯಲ್ಲಿ ತನ್ನಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಅವಶ್ಯಕ ಅಥವಾ ವಿಹಿತವಾಗಬಹುದಾದಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಭಾದಕವಾಗದಂತೆ, ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:-

(ಎ) ಸದಸ್ಯರನ್ನು ಸೇರಿಸಿಕೊಳ್ಳುವುದು;

(ಬಿ) ಷೇರುಗಳ ಹಂಚಿಕೆಗೆ ಸಂಬಂಧಿಸಿದ ಅರ್ಜಿಗಳನ್ನು ವಿಲೆ ಮಾಡಬಹುದು;

(ಸಿ) ಸಂಪನ್ಮೂಲಗಳ ಕ್ರೋಡೀಕರಿಸುವುದು ಮತ್ತು ನಿಧಿಗಳನ್ನು ವಿಧಿಸುವುದು;

(ಡಿ) ಸದಸ್ಯರಿಗೆ ಸಾಲಗಳು ಮತ್ತು ಮುಂಗಡಗಳ ಮಂಜೂರಾತಿಯನ್ನು ಒಳಗೊಂಡಂತೆ ಸೇವೆಗಳು ಅಥವಾ ಸೌಲಭ್ಯಗಳನ್ನು ಒದಗಿಸುವುದು ಮತ್ತು ಕೈಗೊಳ್ಳಬೇಕಾದ ಸೌಲಭ್ಯಗಳನ್ನು ನಿರ್ಧರಿಸುವುದು;

[2][(ಇ) ಸಹಕಾರ ಚುನಾವಣಾ ಪ್ರಾಧಿಕಾರದ ಮೇಲ್ವಿಚಾರಣೆಯ ಅಡಿಯಲ್ಲಿ ಸಭಾಧ್ಯಕ್ಷರನ್ನು ಮತ್ತು ಅಂಥ ಇತರ ಪದಾಧಿಕಾರಿಗಳನ್ನು ಚುನಾಯಿಸುವುದಕ್ಕೆ;][2]

(ಎಫ್) ಸಂಘದ ಉದ್ದೇಶಗಳನ್ನು ಸಾಧಿಸಲು ಅಗತ್ಯಪಡಿಸಿದ ಚರ ಮತ್ತು ಸ್ಥಿರ ಸ್ವತ್ತನ್ನು ಅರ್ಜಿಸಿಕೊಳ್ಳುವುದು ಅಥವಾ ವಿಲೆ ಮಾಡುವುದು;

(ಜಿ) ಸಂಘದ ಸಿಬಂ್ಬದಿಯ ವೃಂದಬಲ, ಪ್ರತೀ ಉದ್ಯೋಗಿಗೆ ಅರ್ಹತೆಗಳು, ವೇತನ ಶ್ರೇಣಿ ಮತ್ತು ಅಂಗೀಕಾರರ್ಹವಾದ ಇತರೆ ಭತ್ಯೆಗಳನ್ನು [3][ನಿಯಮಗಳಲ್ಲಿ ನಿಗದಿಪಡಿಸಿದಂತೆ ನಿರ್ಧರಿಸುವುದು][3];

(ಹೆಚ್) 29ಜಿ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಸಂಘದ ಮುಖ್ಯ ಕಾರ್ಯನಿರ್ವಾಹಕರು ನೇಮಕ ಮಾಡಿಕೊಳ್ಳಲು ಅಗತ್ಯಪಡಿಸದಂಥ ಮುಖ್ಯ ಕಾರ್ಯನಿರ್ವಾಹಕ ಮತ್ತು ಅಂಥ ಇತರೆ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವುದು;

(ಐ) ಕರ್ತವ್ಯಚ್ಯುತ ಉದ್ಯೋಗಿಗಳ ವಿರುದ್ಧ ನಡತೆ ಮತ್ತು ಶಿಸ್ತು ನಿಯಮಗಳನ್ನು ನಿರೂಪಿಸುವುದು, ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಆರೋಪಗಳ ಗಂಭೀರತೆಯ ಪ್ರಮಾಣಕ್ಕನುಸಾರವಾಗಿ ದಂಡಗಳನ್ನು ವಿಧಿಸುವುದು;

(ಜೆ) ಸಾಂಸ್ಥಿಕ ಉದ್ದೇಶಗಳನ್ನು ಸಾಧಿಸಲು ನಿರ್ದಿಷ್ಟ ಗುರಿಗಳನ್ನು ರೂಪಿಸಿಕೊಳ್ಳುವುದು;

(ಕೆ) ವಾರ್ಷಿಕ ಆಯವ್ಯಯಗಳ ಉಪಬಂಧಗಳಿಗೆ ಒಳಪಟ್ಟು ಸಂಘದ ವ್ಯವಹಾರಗಳಿಗೆ ಅವಶ್ಯಕವಾದ ವೆಚ್ಚವನ್ನು ಅನುಮೋದಿಸುವುದು;

(ಎಲ್) ನಿರ್ದಿಷ್ಟ ಕಾಲಮಿತಿಯೊಳಗೆ ಸಂಘದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧಿನೆಯನ್ನು ಮಾಡುವುದು ಮತ್ತು ಸದರಿ ಅವಧಿಯೊಳಗೆ ಲೆಕ್ಕಪರಿಶೋಧನಾ ವರದಿಯನ್ನು ಪಡೆಯುವುದು;

(ಎಂ) ಲೆಕ್ಕಪರಿಶೋಧನಾ ವರದಿಯನ್ನು ಪರಿಗಣಿಸುವುದು, ಲೆಕ್ಕಪರಿಶೋಧನೆಯಲ್ಲಿ ಪತ್ತೆಹಚ್ಚಿದ ಯಾವುದೇ ದೋಷಗಳನ್ನು ಸರಿಪಡಿಸಲು ಮತ್ತು ಯಾವುದೇ ಅಕ್ರಮಗಳಿಗೆ ಪರಿಹಾರವನ್ನು ಕಂಡು ಕೊಳ್ಳಲು ಕ್ರಮ ಕೈಗೊಳ್ಳುವುದು, ಪಾಲನಾ ವರದಿಯನ್ನು ಸಲ್ಲಿಸುವುದು ಮತ್ತು ಮಹಾಸಭೆಯ ಮುಂದೆ ವರದಿಗಳನ್ನು ಮಂಡಿಸುವುದು;

(ಎನ್) ವಿಚಾರಣಾ ಅಥವಾ ಪರಿಶೀಲನಾ ವರದಿಗಳನ್ನು ಪರಿಗಣಿಸುವುದು, ವಿಚಾರಣೆ ಅಥವಾ ಪರಿಶೀಲನೆಯನ್ನು ಪತ್ತೆಹಚ್ಚಲಾದ ಯಾವುದೇ ಅಕ್ರಮಗಳಿಗೆ ಕ್ರಮಕೈಗೊಳ್ಳುವುದು, ಮಹಾಸಭೆಯ ಮುಂದೆ ವರದಿಗಳನ್ನು ಮಂಡಿಸುವುದು;

(ಒ) ಮಹಾಸಭೆಯ ಅನುಮೋದನೆಗೆ ವಾರ್ಷಿಕ ವರದಿ, ವಾರ್ಷಿಕ ಹಣಕಾಸು ವಿವರಪಟ್ಟಿಗಳು, ವಾರ್ಷಿಕ ಯೋಜನೆ ಮತ್ತು ಆಯವ್ಯಯವನ್ನು ಮಂಡಿಸುವುದು;

(ಪಿ) ಕಾನೂನು ವ್ಯವಹರಣೆಗಳನ್ನು ಪ್ರಾರಂಭಿಸುವುದು, ಸಮರ್ಥಿಸುವುದು ಅಥವಾ ರಾಜಿ ಮಾಡಿಕೊಳ್ಳುವುದು;

(ಕ್ಯೂ) ಸಂಘದ ಹಣವನ್ನು ದುರ್ವಿನಿಯೋಗ ಮಾಡುವ ಮೂಲಕ ಅಥವಾ ಸಂಘಕ್ಕೆ ನಷ್ಟವುಂಟು ಮಾಡುವ ಮೂಲಕ ಸೀಮಿತ ಅಥವಾ ಕ್ರಿಮಿನಲ್ ಹೊಣೆಗಾರಿಕೆಗೆ ಗುರಿಯಾಗಿರುವಂಥ ಯಾರೇ ವ್ಯಕ್ತಿಯ ವಿರುದ್ಧ ಸಂದರ್ಭಾನುಸಾರ ಸೀಮಿತ, ಕ್ರಿಮಿನಲ್ ಮತ್ತು ಶಿಸ್ತು ಕ್ರಮವನ್ನು ಪ್ರಾರಂಭಿಸುವುದು;

(ಆರ್) ಸಕಾಲದಲ್ಲಿ ಅವಶ್ಯಕವಾದಾಗಲೆಲ್ಲಾ ಮತ್ತು ಕೋರಿಕೆಯ ಮೇರೆಗೆ ವಿಶೇಷ ಸಾಮಾನ್ಯ ಸಭೆಗಳನ್ನು ನಡೆಸುವುದು;

(ಎಸ್) ಸಂಘದ ಸರಿಯಾದ ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಅವಶ್ಯಕ ವಿನಿಯಮಗಳನ್ನು ರಚಿಸುವುದು;

(ಟಿ) ಈ ಅಧಿನಿಯಮ, ನಿಯಮಗಳಡಿಯಲ್ಲಿ ಅಗತ್ಯ ಪಡಿಸಬಹುದಾದಂಥ ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂತ ಅಥವಾ ಸಾಮಾನ್ಯ ಸಭೆಯು ಪ್ರತ್ಯಾಯೋಜಿಸಬಹುದಾದಂಥ ಇತರೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅಂಥ ಇತರೆ ಕಾರ್ಯಗಳನ್ನು ಮಾಡುವುದು.][1]

1.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**28ಡಿ. ಸಹಕಾರ ಸಂಘಗಳ ಸದಸ್ಯರು, ನಿರ್ದೇಶಕರು, ಪದಾಧಿಕಾರಿ ಮತ್ತು ಸಿಬಂ್ಬದಿಗಳಿಂದ ವಿದೇಶ ಪ್ರವಾಸ.-** ಸಹಕಾರ ಸಂಘಗಳ ಸದಸ್ಯರು, ನಿರ್ದೇಶಕರು, ಪದಾಧಿಕಾರಿಗಳು ಮತ್ತು ಸಿಬಂ್ಬದಿಯವರು ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಸಹಕಾರ ಸಂಘದ ವೆಚ್ಚದಲ್ಲಿ ವಿದೇಶ ಪ್ರವಾಸವನ್ನು ಕೈಗೊಳ್ಳತಕ್ಕದ್ದಲ್ಲ.][1]

1.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1]**[29.xxx]**[1]

1.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**29ಎ. ಪದಾವಧಿಯ ಪ್ರಾರಂಭ.-** [2][(1)][2] [3][[4][ಸಮಿತಿಯ ಸದಸ್ಯರ ಪದಾವಧಿಯು][4] ಸಮಿತಿಯ ಚುನಾಯಿತ ಬಹುಮತ ಸದಸ್ಯರು ಅಧಿಕಾರ ವಹಿಸಿಕೊಳ್ಳುವ ದಿನಾಂಕದಂದು ಅಥವಾ ಹೊರಹೋಗುವ ಸಮಿತಿಯ ಸದಸ್ಯರ ಪದಾವಧಿಯು ಮುಕ್ತಾಯವಾದ ದಿನಾಂಕದಂದು, ಯಾವುದು ನಂತರವೋ ಅಂದು ಪ್ರಾರಂಭವಾಗತಕ್ಕುದು.][3]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 29ಎ ಯಿಂದ 29ಡಿ ವರೆಗಿನ ಪ್ರಕರಣಗಳನ್ನು 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.
3. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ಈ ಅಧಿನಿಯಮದಲ್ಲಿ ಅಥವಾ ನಿಯಮಗಳಲ್ಲಿ ಅಥವಾ ಸಹಕಾರ ಸಂಘದ ಉಪವಿಧಿಗಳಲ್ಲಿ ಏನೇ ಇದ್ದರೂ, ಆ ಸಮಿತಿಯನ್ನು [2][xxx][2] ಚುನಾವಣೆಯ ತರುವಾಯ ಸಮಿತಿಯ ಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಲು [3][ಸಮಿತಿಯ ಚುನಾಯಿತ ಸದಸ್ಯರ ಪೈಕಿ ಬಹು ಸಂಖ್ಯೆಯಲ್ಲಿ ಸದಸ್ಯರು ಇರುವ ಪಕ್ಷದಲ್ಲಿ][3] ಯಥಾ ರೀತಿ ರಚಿಸಲಾಗಿದೆ ಎಂದು ಭಾವಿಸತಕ್ಕುದು.

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

3. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) (2)ನೇ ಉಪಪ್ರಕರಣದ ಮೇರೆಗೆ ರಚಿಸಲಾಗಿದೆ ಎಂದು ಭಾವಿಸಲಾದ ಸಮಿತಿಯು, ಸಹಕಾರ ಸಂಘದ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಮತ್ತು ಎಲ್ಲ ಪ್ರಕಾರ್ಯಗಳನ್ನು ನೆರವೇರಿಸಲು ಸಕ್ಷಮವಾಗಿರತಕ್ಕುದು.

[1][(4) xxxx

(5) xxxx

(6) xxxx][1]][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[2][1[29ಬಿ. ಮಂಡಳಿಯ ಸದಸ್ಯನ ಅಥವಾ ಸಹಕಾರ ಸಂಘದ ಪದಾಧಿಕಾರಿಯ ರಾಜೀನಾಮೆ.- ಸಹಕಾರ ಸಂಘದ ಮಂಡಳಿಯ ಸದಸ್ಯನು ಅಥವಾ ಸಹಕಾರ ಸಂಘದ ಪದಾಧಿಕಾರಿಯು, ಮಂಡಳಿಯ ಸದಸ್ಯತ್ವಕ್ಕೆ ಅಥವಾ ಸಂದರ್ಭಾನುಸಾರವಾಗಿ, ಸಂಘದ ಪದಾಧಿಕಾರಿಯ ಸ್ಥಾನಕ್ಕೆ, ತನ್ನ ಕೈ ಬರಹದ ಮೂಲಕ ರಾಜೀನಾಮೆಯನ್ನು ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸಬಹುದು ಮತ್ತು ಮುಖ್ಯಕಾರ್ಯನಿರ್ವಾಹಕನಿಗೆ ಬರಹದಲ್ಲಿ ಸಲ್ಲಿಸಲಾದ ಅಂಥ ರಾಜೀನಾಮೆಯನ್ನು ಸಲ್ಲಿಸಿದ ದಿನದಿಂದ ಹದಿನೈದು ದಿನಗಳೊಳಗೆ ಅಂಥ ನಿರ್ದೇಶಕರು ಅಥವಾ ಪದಾಧಿಕಾರಿಯು ತನ್ನ ಕೈ ಬರಹದ ಮೂ¨ಕ ಹಿಂತೆಗೆದುಕೊಳ್ಳದ ಹೊರತು, ಹಾಗೆ ತಿಳಿಸಿದ ಅಂಥ ದಿನಾಂಕದಿಂದ ಹದಿನೈದು ದಿನಗಳು ಮುಕ್ತಾಯವಾದ ಮೇಲೆ ಮಂಡಳಿಯ ಸದಸ್ಯತ್ವದ ಅಥವಾ ಸಂದರ್ಭಾನುಸಾರವಾಗಿ ಪದಾಧಿಕಾರಿಯ ಆ ಸ್ಥಾನವು ಖಾಲಿಯಾಗತಕ್ಕದ್ದು. ಮುಖ್ಯಕಾರ್ಯನಿರ್ವಾಹಕನು, ಅಂಥ ಪತ್ರವನ್ನು ಪಡೆದ ತರುವಾಯದಲ್ಲಿ ನಡೆದ ಮಂಡಳಿಯ ಸಭೆಯ ಮುಂದೆ ರಾಜೀನಾಮೆ ಪತ್ರವನ್ನು ಇಡತಕ್ಕದ್ದು. ರಾಜೀನಾಮೆ ನೀಡಿದ ಸದಸ್ಯನು ಸಂಘದ ನಾಮನಿರ್ದೇಶಿತ ಸದಸ್ಯನಾಗಿದ್ದರೆ, ಮುಖ್ಯಕಾರ್ಯನಿರ್ವಾಹಕನು ರಾಜೀನಾಮೆ ಪತ್ರವನ್ನು ಸ್ವೀಕರಿಸಿದ ತಕ್ಷಣ ನಾಮನಿರ್ದೇಶನ ಸಂಘಕ್ಕೆ ತಿಳಿಸತಕ್ಕದ್ದು.][1]][2]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

29ಸಿ. ಸಮಿತಿಯ ಸದಸ್ಯತ್ವಕ್ಕೆ ಅನರ್ಹತೆಗಳು.- (1) ಯಾರೇ ವ್ಯಕ್ತಿಯು [1][ಯಾವುದೇ ಸಹಕಾರ ಸಂಘದ ಸಮಿತಿಯ][1] ಸದಸ್ಯನಾಗಿ ಚುನಾಯಿತನಾಗಲು, ಅಥವಾ ನೇಮಕಗೊಳ್ಳಲು ಅಥವಾ ಮುಂದುವರಿಯಲು,-

[1][(ಎ) ಋಣಿಯಾಗಿ ತನ್ನಿಂದ ಸಲ್ಲಬೇಕಾದ ಯಾವುದೇ ಬಾಕಿಗಳ ಸಂಬಂಧದಲ್ಲಿ ಅವನು ಆ ಸಂಘ ಅಥವಾ ಇತರ ಯಾವುದೇ ಸಹಕಾರ ಸಂಘಕ್ಕೆ ಸುಸ್ತಿದಾರನಾಗಿದ್ದರೆ;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಅಂಥ ಸಹಕಾರ ಸಂಘದೊಂದಿಗೆ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಅಂಥ ಸಹಕಾರ ಸಂಘವು ಖಾಸಗಿಯಾಗಿ ಅಥವಾ ಹರಾಜಿನಲ್ಲಿ ಮಾಡಿದ ಮಾರಾಟ ಅಥವಾ ಖರೀದಿಯಲ್ಲಿ ಅಥವಾ ಆ ಕರಾರು, ಮಾರಾಟ, ಖರೀದಿ ಅಥವಾ ವಹಿವಾಟಿನಲ್ಲಿ (ಬಂಡವಾಳ ಹೂಡಿಕೆ ಮತ್ತು ಸಾಲ ಪಡೆಯುವುದನ್ನು ಬಿಟ್ಟು) ಹಣಕಾಸಿನ ಹಿತಾಸಕ್ತಿಗಳನ್ನು ಒಳಗೊಂಡ ಸಹಕಾರ ಸಂಘದ ಯಾವುದೇ ಕರಾರಿನಲ್ಲಿ ಅಥವಾ ವಹಿವಾಟಿನಲ್ಲಿ ಅವನು ನೇರವಾಗಿ ಅಥವಾ ಪರೋಕ್ಷವಾಗಿ ಹಿತಾಸಕ್ತಿ ಹೊಂದಿದ್ದರೆ;

(ಸಿ) ಅಂಥ ಸಹಕಾರ ಸಂಘವು ನಡೆಸುತ್ತಿರುವ ಅಥವಾ ಸಹಕಾರ ಸಂಘದ ಯಾವ ಸಹಕಾರ ಸಂಘವು ಸದಸ್ಯನಾಗಿರುವುದೋ ಆ ಸಹಕಾರ ಸಂಘವು ನಡೆಸುತ್ತಿರುವ ಅದೇ ಸ್ವರೂಪದ ವ್ಯವಹಾರವನ್ನು [1][ಅವನು [2][xxx][2] ನಡೆಸುತ್ತಿದ್ದರೆ:][1]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[2][[1][xxx][1]][2]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಡಿ) ಅಂಥ ಸಹಕಾರ ಸಂಘದ ಪರವಾಗಿ ನ್ಯಾಯವಾದಿಯಾಗಿ ನೇಮಕಗೊಂಡರೆ ಅಥವಾ ಅಂಥ ಸಹಕಾರ ಸಂಘದ ವಿರುದ್ಧ ನ್ಯಾಯವಾದಿಯಾಗಿ ನಿಯೋಜನೆಯನ್ನು ಸ್ವೀಕರಿಸಿದರೆ;

(ಇ) ಅವನು ಅಂಥ ಸಹಕಾರ ಸಂಘದ ಅಥವಾ ಅದರ ಹಣಕಾಸು ಬ್ಯಾಂಕಿನ ವೇತನ ಪಡೆಯುವ [1][ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯ ಹೊರತಾಗಿ ಇತರ][1] ನೌಕರನಾಗಿದ್ದರೆ;

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][xxxx][1]

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಎಫ್) ಅವನು ಅಂಥ ಸಹಕಾರ ಸಂಘದ ವೇತನ ಪಡೆಯುವ ನೌಕರನ ಹತ್ತಿರದ ಸಂಬಂಧಿಯಾಗಿದ್ದರೆ

-ಅರ್ಹನಾಗತಕ್ಕುದಲ್ಲ.

[1][**ವಿವರಣೆ.-** [2][ಈ ಖಂಡದ [4][xxx][4]][2] ಉದ್ದೇಶಕ್ಕಾಗಿ `ಹತ್ತಿರದ ಸಂಬಂಧಿ' ಎಂದರೆ,-

(i) ಗಂಡ, ಹೆಂಡತಿ ಮತ್ತು ಅವಿವಾಹಿತ ಮಗಳು;

(ii) ತಂದೆ, ತಾಯಿ ಅವಿಭಕ್ತ ಮಗ, ಅವಿಭಕ್ತ ಸಹೋದರ ಮತ್ತು ಅವಿವಾಹಿತ ಸಹೋದರಿ; ಮತ್ತು

(iii) ಹತ್ತಿರದ ಸಂಬಂಧಿಗಳೆಂದು ನಿಯಮಿಸಬಹುದಾದಂಥ ಇತರ ಸಂಬಂಧಿಕರು.

[3][xxx][3]][1]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1976ರ ಅಧಿನಿಯಮ ಸಂಖ್ಯೆ 70ರ ಮೂಲಕ 4.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಜಿ) ಅವನು ಸಹಕಾರ ಸಂಘದ ವೇತನ ಪಡೆಯುವ ನೌಕರನಾಗಿದ್ದು, ಅವನನ್ನು ಸಹಕಾರ ಸಂಘದ ಸೇವೆಯಿಂದ ವಜಾ ಮಾಡಲಾಗಿದ್ದರೆ, ತೆಗೆದುಹಾಕಲಾಗಿದ್ದರೆ ಅಥವಾ ಕಡ್ಡಾಯ ನಿವೃತ್ತಿಗೊಳಿಸಲಾಗಿದ್ದರೆ;

(ಹೆಚ್) ಅವನು ಸಂಘದ ಸದಸ್ಯನಾಗಿರುವುದರಿಂದ ಅಥವಾ ಅಂಥ ಸದಸ್ಯನಾಗಿ ಮತ ಚಲಾಯಿಸುವುದರಿಂದ ಅನರ್ಹನಾಗಿದ್ದರೆ;

(ಐ) ಅವನು 1960ರ ದಂಡ ಸಂಹಿತೆಯ (ಕೇಂದ್ರ ಅಧಿನಿಯಮ 1860ರ 45) 153ಎ ಪ್ರಕರಣ ಅಥವಾ 171ಇ ಪ್ರಕರಣ ಅಥವಾ 171ಎಫ್ ಪ್ರಕರಣ ಅಥವಾ 505ನೇ ಪ್ರಕರಣದ (2)ನೇ ಉಪಕಪ್ರಕರಣದ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಅಥವಾ ಈ ಅಧಿನಿಯಮದ 39ಜೆ ಪ್ರಕರಣದ ಅಥವಾ 39ಕೆ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ದಂಡನೀಯವಾದ ಒಂದು ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದರೆ ಹಾಗೆ ದೋಷ ಸಿದ್ಧಿಯಾದ ದಿನಾಂಕದಿಂದ ಆರು ವರ್ಷಗಳ ಅವಧಿ ಕಳೆದ ಹೊರತು;

(ಜೆ) ಅವನು, ಭಾರತದ ನ್ಯಾಯಾಲಯದಿಂದ ಯಾವುದೇ ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದು ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಕಾರಾವಾಸ ಶಿಕ್ಷೆಗೆ, ಒಳಗಾಗಿದ್ದರೆ, ಅವನ ಬಿಡುಗಡೆಯ ದಿನಾಂಕದಿಂದ ಐದು ವರ್ಷಗಳ ಅವಧಿ ಕಳೆದ ಹೊರತು;

(ಕೆ) ಅವನು 39ಸಿ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಭ್ರಷ್ಟಾಚಾರದ ದೋಷಿಯಾಗಿದ್ದರೆ, ಆ ಅಪರಾಧದ ದೋಷಿಯಾದ ದಿನಾಂಕದಿಂದ ಆರು ವರ್ಷಗಳ ಅವಧಿ ಕಳೆದ ಹೊರತು;

(ಎಲ್) ಅವನು ಈ ಅಧಿನಿಯಮದ ಉಪಬಂಧಗಳು, ನಿಯಮಗಳು ಅಥವಾ ಉಪ-ವಿಧಿಗಳನ್ನು ಉಲ್ಲಂಘಿಸಿ ಯಾವುದೇ ಸಹಕಾರ ಸಂಘದ ಯಾವುದೇ ಮೊತ್ತವನ್ನು (ಸಾಲದ ಹೊರತು) ಅವನಲ್ಲೇ ಇಟ್ಟುಕೊಂಡಿದ್ದು ಜಮೆ ಮಾಡಲು ವಿಫಲನಾಗಿದ್ದರೆ;

(ಎಂ) ಅವನು ಒಂದು ಹಣಕಾಸು ನೀಡಿಕೆ ಬ್ಯಾಂಕಿಗೆ ಅಥವಾ ಅವನು ಪ್ರತಿನಿಧಿಸುವ ಸಹಕಾರ ಸಂಘದಿಂದ ಇರುವ ಬಾಕಿಗಳ ಸಂಬಂಧದಲ್ಲಿ ಯಾವುದೇ ಸಹಕಾರ ಸಂಘಕ್ಕೆ ಸತತವಾಗಿ ಒಂದು ವರ್ಷದವರೆಗೆ ಸುಸ್ತಿದಾರನಾಗಿದ್ದರೆ

-ಅರ್ಹನಾಗತಕ್ಕುದಲ್ಲ:

ಪರಂತು, ಸಮಿತಿಯ ಸದಸ್ಯನಾಗಿ ಮುಂದುವರಿಯಲು ಈ ಖಂಡದ ಮೇರೆಗಿನ ಅನರ್ಹತೆಯು, ಅಂಥ ಬಾಕಿಗಳ ಶೇಕಡ ಮೂವತ್ತರಷ್ಟು ಮೊತ್ತವನ್ನು ಮೀರದಂತಹ ಮೊತ್ತವನ್ನು ಸಂದಾಯ ಮಾಡುವ ಸುಸ್ತಿದಾರ ಸಹಕಾರ ಸಂಘಕ್ಕೆ ಅನ್ವಯವಾಗತಕ್ಕುದು;

(ಎನ್) ಅವನು 39ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಚುನಾವಣೆಗೆ ವ್ಯವಸ್ಥೆ ಮಾಡುವಲ್ಲಿ ವಿಫಲನಾಗಿರುವ ಸಮಿತಿಯ ಸದಸ್ಯನಾಗಿದ್ದರೆ

-ಅರ್ಹನಾಗತಕ್ಕುದಲ್ಲ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಒ)xxx][1]

1.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಪಿ) ಅವನು ಗೈರುಹಾಜರಾಗಲು ಅನುಮತಿ ಪಡೆಯದೆ ಅಂಥ ಸಂಘದ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ][1]

-ಅರ್ಹನಾಗತಕ್ಕುದಲ್ಲ.

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಯಾವೊಂದು ಸಹಕಾರ ಸಂಘವು ಸದಸ್ಯನಾಗಿರುವ ಇತರ ಸಹಕಾರ ಸಂಘದ ಸಮಿತಿಯ ಸದಸ್ಯನಾಗಿ ಚುನಾಯಿತನಾಗಿರುವ ವ್ಯಕ್ತಿಯೂ ಸೇರಿ, ಯಾರೇ ವ್ಯಕ್ತಿಯು ಎರಡು ಸಹಕಾರ ಸಂಘಗಳಿಗಿಂತ ಹೆಚ್ಚು ಸಹಕಾರ ಸಂಘಗಳಿಗೆ [1][ಅಧ್ಯಕ್ಷ ಅಥವಾ ಸಭಾಧ್ಯಕ್ಷ, ಉಪಾಧ್ಯಕ್ಷ ಅಥವಾ ಉಪಸಭಾಧ್ಯಕ್ಷ ಅಥವಾ ಇತರ ಪದಾಧಿಕಾರಿ][1] ಆಗಿರತಕ್ಕುದಲ್ಲ.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) xxx][1]

[2][(3) ಸಹಕಾರ ಸಂಘದ ಮಂಡಳಿಯು-

(ಎ) 39 ಎ ಪ್ರಕರಣ ಮತ್ತು 29 ಎಫ್ ಪ್ರಕರಣದ ಪ್ರಕಾರ ಚುನಾವಣೆಗಳನ್ನು ನಡೆಸಲು ಸಹಕಾರಿ ಚುನಾವಣಾ ಆಯೋಗಕ್ಕೆ ನೆರವಾಗಲು ವಿಫಲವಾದರೆ; ಅಥವಾ

(ಬಿ) 27ನೇ ಪ್ರಕರಣದ ಅಡಿಯಲ್ಲಿ ವಾರ್ಷಿಕ ಮಹಾಸಭೆಯನ್ನು ಅಥವಾ ಅಗತ್ಯವಾಗಿರುವಾಗ 28ನೇ ಪ್ರಕರಣದ ಅಡಿಯಲ್ಲಿ ವಿಶೇಷ ಮಹಾಸಭೆಯನ್ನು ಕರೆಯಲು ವಿಫಲವಾದರೆ; ಅಥವಾ

(ಸಿ) ವಾರ್ಷಿಕ ಮಹಾಸಭೆಯಲ್ಲಿ ಪರಿಶೋಧಿತ ಲೆಕ್ಕಪತ್ರಗಳನ್ನು ಮತ್ತು ವಾರ್ಷಿಕ ಮರದಿಯನ್ನು ಮಂಡಿಸಲು ವಿಫಲವಾದರೆ,

- ಹಾಗೆ ವಿಫಲವಾದ ಮಂಡಲಿಯ ಪ್ರತಿಯೊಬ್ಬ ಸದಸ್ಯನು, ಅನರ್ಹತೆಯ ಆದೇಶದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಂಘದ ಮಂಡಲಿಯ ಸದಸ್ಯನಾಗಿ ಚುನಾಯಿತನಾಗಿರಲು, ಅಥವಾ ನೇಮಕಗೊಳ್ಳಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು.][2]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(4) (2)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ,-

(i) ರಾಜ್ಯಸರ್ಕಾರವು ಅಥವಾ ರಿಜಿಸ್ಟ್ರಾರನು, ಅಧ್ಯಕ್ಷನನ್ನಾಗಿ ಅಥವಾ ಸಭಾಧ್ಯಕ್ಷನನ್ನಾಗಿ, ಉಪಾಧ್ಯಕ್ಷನನ್ನಾಗಿ ಅಥವಾ ಉಪಸಭಾಧ್ಯಕ್ಷನನ್ನಾಗಿ ನೇಮಿಸಿದ ಯಾರೇ ವ್ಯಕ್ತಿಗೆ; ಅಥವಾ

(ii) ಸಮಿತಿಯ ಸದಸ್ಯ ಮಾತ್ರ ಆಗಿರುವ ಯಾರೇ ವ್ಯಕ್ತಿಗೆ

- ಅನ್ವಯವಾಗತಕ್ಕುದಲ್ಲ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಸಹಕಾರ ಮಾರುಕಟ್ಟೆ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು ಮತ್ತು ರಾಜ್ಯಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಹಕಾರ ಸಂಘಗಳ ವರ್ಗ ಅಥವಾ ವರ್ಗಗಳ ಸಂದರ್ಭದಲ್ಲಿ, ಯಾರೇ ವ್ಯಕ್ತಿಯು ಸಹಕಾರ ಸಂಘದೊಂದಿಗೆ ಅವನ ವ್ಯವಹಾರಗಳಿಗೆ ಸಂಬಂಧಿಸಿ ಅಂಥ ಅಧಿಸೂಚನೆಯಲ್ಲಿ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಹಣಕಾಸು ಮಿತಿಗಳಿಗೆ ಸಂಬಂಧಿಸಿದ ಕನಿಷ್ಠ ಷರತ್ತುಗಳನ್ನು ಪಾಲಿಸಿದ ಹೊರತು, ಅವನು ಅಂಥ ಸಹಕಾರ ಸಂಘದ ಸಮಿತಿಯ ಸದಸ್ಯನಾಗಿ ನೇಮಕಗೊಳ್ಳಲು ಅಥವಾ ಆಯ್ಕೆಯಾಗಲು ಅರ್ಹನಾಗತಕ್ಕುದಲ್ಲ.

(6) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಅಥವಾ ಅಪೆಕ್ಸ್ ಸಹಕಾರ ಬ್ಯಾಂಕು ಅಥವಾ ನಿಯಮಿಸಬಹುದಾದಂಥ ಇತರ ವರ್ಗಗಳ ಸಹಕಾರ ಬ್ಯಾಂಕುಗಳ ಸಮಿತಿಗಳಲ್ಲಿ ವ್ಯಕ್ತಿ ಸದಸ್ಯರ ಯಾರೇ ಪ್ರತಿನಿಧಿಯು ಇರತಕ್ಕುದಲ್ಲ.

(7) ಸಮಿತಿಯ ಯಾವೊಬ್ಬ ಸದಸ್ಯನು ಈ ಪ್ರಕರಣದಲ್ಲಿ ನಮೂದಿಸಿದ ಅನರ್ಹತೆಗಳಲ್ಲಿ ಯಾವುದೇ ಒಂದಕ್ಕೆ ಗುರಿಯಾಗಿದ್ದನೆ ಅಥವಾ ಗುರಿಯಾಗಿರುವನೇ ಎಂಬ ಯಾವುದೇ ಪ್ರಶ್ನೆಯನ್ನು ರಿಜಿಸ್ಟ್ರಾರನು ಸಂಬಂಧಪಟ್ಟ ವ್ಯಕ್ತಿಗೆ ಸುನಾವಣೆಯ ಸೂಕ್ತ ಅವಕಾಶವನ್ನು ನೀಡಿದ ತರುವಾಯ ನಿರ್ಧರಿಸತಕ್ಕುದು.

[1][(8) ಸಹಕಾರ ಸಂಘದ ಸಮಿತಿಯ ಯಾರೇ ಸದಸ್ಯನು ಅವನ ಅಧಿಕಾರ ಅವಧಿಯಲ್ಲಿ,-

(ಎ) ಅವನು (1), (2) ಮತ್ತು (5)ನೇ ಉಪಕಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಅನರ್ಹತೆಗಳಿಗೊಳಪಟ್ಟರೆ; ಅಥವಾ

(ಬಿ) ಅವನು, ಈ ಅಧಿನಿಯಮದ ನಿಯಮಗಳ ಅಥವಾ ಸಹಕಾರ ಸಂಘದ ಉಪವಿಧಿಗಳ ಉಪಬಂಧಗಳನ್ನು ಉಲಂಘಿಸಿ ಮೋಸದಿಂದ ಅಥವಾ ಪೂರ್ಣ ನಿರ್ಲಕ್ಷದಿಂದ ಅಥವಾ ಮಂಜೂರಾತಿಯ ಅಗತ್ಯವಿರುವಾಗ, ಸಹಕಾರ ಸಂಘದ ಸಮಿತಿಯ ಮಂಜೂರಾತಿ ಇಲ್ಲದೆ ಅಥವಾ ಸಹಕಾರ ಸಂಘದ ಅಥವಾ ಅದರ ಸಮಿತಿಯ ನಿರ್ಣಯಗಳಿಗೆ ವಿರುದ್ಧವಾಗಿ ಅಥವಾ ಸಹಕಾರ ಸಂಘದ ಹಿತಾಸಕ್ತಿಗೆ ಬಾಧಕವಾಗುವಂತೆ ಯಾವುದೇ ರೀತಿಯಲ್ಲಿ ವರ್ತಿಸಿದ್ದರೆ ಅಥವಾ ವರ್ತಿಸುತ್ತಿದ್ದರೆ; ಅಥವಾ

(ಸಿ) ಅವನು ನಿರಂತರವಾಗಿ ಈ ಅಧಿನಿಯಮದ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಹೊರಡಿಸಲಾದ ನಿರ್ದೇಶಗಳ ಅಥವಾ ಆದೇಶಗಳ ವಿರುದ್ಧವಾಗಿ ವರ್ತಿಸಿದ್ದರೆ ಅಥವಾ ವರ್ತಿಸುತ್ತಿದ್ದರೆ; ಅಥವಾ

(ಡಿ) ಅವನು ತನ್ನ ಕರ್ತವ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲದಿದ್ದರೆ, ರಿಜಿಸ್ಟ್ರಾರನು ತನಗೆ ಬಂದ ವರದಿಯ ಮೇರೆಗೆ ಅಥವಾ ಅನ್ಯಥಾ ಅಂತಹ ಸದಸ್ಯನನ್ನು ಆದೇಶದ ಮೂಲಕ ತೆಗೆದುಹಾಕಬಹುದು ಮತ್ತು ಈ ಉಪಕಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಹೇಳಿರುವ ವಿಷಯಗಳ ಬಗ್ಗೆ ಅಂಥ ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಸಹಕಾರ ಸಂಘದ ಯಾವುದೇ ಪದವನ್ನು ಹೊಂದದಂತೆ ಅವನನ್ನು ಅನರ್ಹಗೊಳಿಸಬಹುದು:

ಪರಂತು, ಯಾರ ವಿರುದ್ಧ ಈ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ಹೊರತು ಈ ಉಪ-ಪ್ರಕರಣದ ಮೇರೆಗೆ ಯಾವ ಆದೇಶವನ್ನು ಮಾಡತಕ್ಕುದಲ್ಲ.

(9) (8)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶದ ಒಂದು ಪ್ರತಿಯನ್ನು ಸಂಬಂಧಪಟ್ಟ ಸದಸ್ಯನಿಗೆ ಮತ್ತು ಸಹಕಾರ ಸಂಘಕ್ಕೆ ಕಳುಹಿಸತಕ್ಕುದು.][1]

[2][(10) ಸಹಕಾರ ಸಂಘದ ಯಾವೊಬ್ಬ ನಿರ್ದೇಶಕನು, (1)ನೇ ಉಪ ಪ್ರಕರಣದಲ್ಲಿ ಹೇಳಲಾದ ಯಾವುದೇ ಅನರ್ಹತೆಗೆ ಗುರಿಯಾದರೆ, ಅವನು ಇನ್ನೊಂದು ಸಂಘದ ನಿಯೋಗಿಯಾಗಿ ಚುನಾಯಿತನಾಗಿರಲು ಅರ್ಹನಾಗತಕ್ಕದ್ದಲ್ಲ. (8)ನೇ ಉಪ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(11) ಒಂದು ಸಹಕಾರ ಸಂಘದ ಯಾವೊಬ್ಬ ಸದಸ್ಯನು (1)ನೇ ಉಪ ಪ್ರಕರಣದ (ಎಂ) ಮತ್ತು (ಎನ್) ಖಂಡಗಳನ್ನು ಹೊರತುಪಡಿಸಿ, ಸದರಿ ಉಪ ಪ್ರಕರಣದಲ್ಲಿ ಹೇಳಲಾದ ಯಾವುದೇ ಅನರ್ಹತೆಗೆ ಗುರಿಯಾಗಿದ್ದರೆ, ಅವನು, ಪ್ರತಿನಿಧಿಯಾಗಿ ಚುನಾಯಿತನಾಗಲು ಅಥವಾ ನೇಮಕಗೊಳ್ಳಲು ಅಥವಾ ಮುಂದುವರೆಯಲು ಅರ್ಹನಾಗತಕ್ಕದಲ್ಲ, (8)ನೇ ಉಪ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.][2]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][29ಡಿ xxx][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][29ಇ. ಸಮಿತಿಯ ಸದಸ್ಯರ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿಮಾಡುವುದು.- ಸಹಕಾರ ಸಂಘದ ಸಮಿತಿಯ ಸದಸ್ಯರ ಪದದಲ್ಲಿ ಮರಣ, ರಾಜೀನಾಮೆ, ವಜಾಮಾಡುವಿಕೆ ಅಥವಾ ಇತರ ಕಾರಣದಿಂದ ಉಂಟಾಗುವ ಯಾವುದೇ ಖಾಲಿ ಸ್ಥಾನವನ್ನು ಅಂಥ ಸಂಘದ ಉಪ ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಭರ್ತಿ ಮಾಡತಕ್ಕುದು.

[2][ಪರಂತು, ಸಹಕಾರಿ ಚುನಾವಣಾ ಆಯೋಗವು ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಅವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಮಂಡಲಿಯ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆಯನ್ನು ನಡೆಸತಕ್ಕದ್ದು:

ಮತ್ತು ಪರಂತು, ಮಂಡಲಿಯ ಉಳಿದಿರುವ ಪದಾವಧಿಯು ಅದರ ಮೂಲ ಅವಧಿಯ ಅರ್ಧಕ್ಕಿಂತ ಕಡಿಮೆ ಇರುವಲ್ಲಿ, ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೇ ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನ ಮಾಡುವ ಮೂಲಕ ಮಂಡಲಿಯಲ್ಲಿನ ಖಾಲಿ ಸ್ಥಾನವನ್ನು ಮಂಡಲಿಯು ಭರ್ತಿ ಮಾಡಬಹುದು.][2]

[3][ಅಲ್ಲದೇ ಪರಂತು, ಆಕಸ್ಮಿಕ ರಿಕ್ತತೆಯ ಸ್ಥಾನಗಳನ್ನು ರಿಕ್ತತೆಯಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆಡಳಿತ ಮಂಡಳಿಯು ತುಂಬಲು ವಿಫಲವಾದಲ್ಲಿ ಅಂಥ ರಿಕ್ತ ಸ್ಥಾನವನ್ನು ನಿಬಂಧಕರು ನಾಮನಿರ್ದೇಶನದ ಮೂಲಕ ತುಂಬತಕ್ಕದ್ದು.][3]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

29ಎಫ್.ಅಧ್ಯಕ್ಷ, ಸಭಾಧ್ಯಕ್ಷ, ಉಪಾಧ್ಯಕ್ಷ ಅಥವಾ ಉಪಸಭಾಧ್ಯಕ್ಷ ಮುಂತಾದವರ ಚುನಾವಣೆ.- (1) ಪ್ರತಿಯೊಂದು ಸಹಕಾರ ಸಂಘವು ಈ ಅಧಿನಿಯಮದ ಉಪಬಂಧಗಳು, ನಿಯಮಗಳು ಅಥವಾ ಉಪ ವಿಧಿಗಳಿಗನುಸಾರವಾಗಿ ಚುನಾಯಿತರಾದಂಥ ಒಬ್ಬ ಅಧ್ಯಕ್ಷ ಅಥವಾ ಚೇರ್ ಪರ್ಸನ್, ಉಪಾಧ್ಯಕ್ಷ ಅಥವಾ ವೈಸ್ ಚೇರ್ಮನ್ ಮತ್ತು ಇತರ ಪದಾಧಿಕಾರಿಗಳನ್ನು ಹೊಂದಿರತಕ್ಕುದು.

(2) ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಸಂಘದ ಸಮಿತಿಯ ಮತ್ತು ಅದರ ಉಪ ಸಮಿತಿಯ ಸಭೆಗಳನ್ನು ಹಾಗೂ ಸಂಘದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸತಕ್ಕುದು.

(3) ರಾಜೀನಾಮೆ, ಮರಣ ಅಥವಾ ವಜಾಮಾಡುವಿಕೆ ಅಥವಾ ಇತರೆ ಕಾರಣದಿಂದ ಅಧ್ಯಕ್ಷ ಅಥವಾ ಚೇರ್ ಪರ್ಸನ್‌ರ ಹುದ್ದೆಯು ಖಾಲಿಯಾಗಿದ್ದ ಪಕ್ಷದಲ್ಲಿ ಉಪಾಧ್ಯಕ್ಷ ಅಥವಾ ಸಂದರ್ಭಾನುಸಾರ ವೈಸ್ ಚೇರ್‌ಪರ್ಸನ್ ಅವರು, ಸದಸ್ಯನು ಅಧ್ಯಕ್ಷ ಅಥವಾ ಚೇರ್ ಪರ್ಸನ್‌ರಾಗಿ ಆಯ್ಕೆಯಾಗುವ ತನಕ ಅಧ್ಯಕ್ಷ ಅಥವಾ ಚೇರ್ ಪರ್ಸನರ ಕರ್ತವ್ಯಗಳನ್ನು ನಿರ್ವಹಿಸತಕ್ಕುದು.

[1][(4) ಸಹಕಾರಿ ಸಂಘದ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಅದು ಮಂಡಲಿಯ ಅವಧಿಯ ಜೊತೆಗೆ ಕೊನೆಗೊಳ್ಳತಕ್ಕದ್ದು.

(5) ಸಹಕಾರಿ ಚುನಾವಣಾ ಆಯೋಗವು, ಮಂಡಲಿಗೆ ಮತ್ತು ಅಧ್ಯಕ್ಷ ಅಥವಾ ಚೇರ್ ಪರ್ಸನ್ ಅವರ, ಉಪಾಧ್ಯಕ್ಷ ಅಥವಾ ವೈಸ್ ಚೇರ್ ಪರ್ಸನ್ ಅವರ ಪದಕ್ಕೆ ಮತ್ತು ಸಹಕಾರ ಸಂಘದ ಉಪವಿಧಿಗಳ ಪ್ರಕಾರ ಚುನಾಯಿಸುವುದು ಅಗತ್ಯವಾಗಿರುವ ಅಂಥ ಇತರ ಪದಾಧಿಕಾರಿಗಳ ಪದಕ್ಕೆ ಸಹ ಮಹಾ ಚುನಾವಣೆಯ ತರುವಾಯ ಮಂಡಲಿಯ ರಚನೆಯ ಅಥವಾ ಭಾವಿತ ರಚನೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಚುನಾವಣೆಗಳನ್ನು ನಡೆಸತಕ್ಕದ್ದು.

(6) ಸಹಕಾರ ಚುನಾವಣಾ ಆಯೋಗವು, ಸಹಕಾರ ಸಂಘದ ನಿರ್ದೇಶಕರ ಅಥವಾ ಯಾರೇ ಪದಾಧಿಕಾರಿಗಳ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾದರೆ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡಲು, ಅಧಿಸೂಚಿತವಾಗಿರುವ ದಿನಾಂಕದಿಂದ ಅವರತ್ತು ದಿನಾಗಳೊಳಗೆ ಚುನಾವಣೆಯನ್ನು ನಡೆಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(5)

(6)

(7)

(8) xxx][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**29ಜಿ. ಮುಖ್ಯಕಾರ್ಯನಿರ್ವಾಹಕನ ನೇಮಕ.-** (1) ಪ್ರತಿ ಸಹಕಾರ ಸಂಘಕ್ಕೆ ಒಬ್ಬ ಮುಖ್ಯ ಕಾರ್ಯನಿರ್ವಾಹಕನು ಇರತಕ್ಕುದು, ಅವನನ್ನು [2][xxx][2] ಸಂಘದಿಂದ ನೇಮಕ ಮಾಡತಕ್ಕುದು ಮತ್ತು ವಜಾಗೊಳಿಸಬಹುದಾಗಿರತಕ್ಕುದು:

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 27.10.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಪರಂತು,-

(i) [1][ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, [2][ಸಹಕಾರ ಪತ್ತಿನ ರಚನೆಯಲ್ಲಿನ ಸಂಘವನ್ನು ಹೊರತುಪಡಿಸಿ, ನೆರವು ಪಡೆದ ಸಂಘದ][2] ಸಂದರ್ಭದಲ್ಲಿ][1] ಸರ್ಕಾರ ಅಥವಾ ರಿಜಿಸ್ಟ್ರಾರ್‌ನು ಮುಖ್ಯಕಾರ್ಯನಿರ್ವಾಹಕನನ್ನು ನೇಮಕ ಮಾಡುವ ಮತ್ತು ತೆಗೆದುಹಾಕುವ ಅಧಿಕಾರವನ್ನು ಹೊಂದಿರತಕ್ಕುದು; ಮತ್ತು

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5.9.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) [1][ಇತರ ಸಂದರ್ಭಗಳಲ್ಲಿ][1] ಅಂಥ ಸಂಘವು ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡುವಂತೆ ಕೋರಿದಲ್ಲಿ ಸರ್ಕಾರ ಅಥವಾ ರಿಜಿಸ್ಟ್ರಾರನು ಮುಖ್ಯಕಾರ್ಯನಿರ್ವಾಹಕನನ್ನು ನೇಮಿಸಬಹುದು ಮತ್ತು ಅಂಥ ಮುಖ್ಯ ಕಾರ್ಯನಿರ್ವಾಹಕನನ್ನು ವಜಾ ಮಾಡಬಹುದು.

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಮತ್ತೂ ಪರಂತು, ಸಹಕಾರ ಪತ್ತಿನ ರಚನೆಯಲ್ಲಿನ ಸಂಘವು, ಸರ್ಕಾರವನ್ನು ಅಥವಾ ಸಂದರ್ಭಾನುಸಾರ ರಿಜಿಸ್ಟ್ರಾರನನ್ನು ಕೋರುವ ಮೂಲಕ ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡಿಸಿಕೊಳ್ಳುವ ಆಯ್ಕೆಯ ಅವಕಾಶ ಹೊಂದಿರತಕ್ಕದ್ದು.][1]

[2][ಅಲ್ಲದೇ ಪರಂತು, ಸಂಘವು ಮೂರು ತಿಂಗಳುಗಳೊಳಗೆ ಹಾಗೆ ಮಾಡಲು ವಿಫಲವಾದಲ್ಲಿ, ಸರ್ಕಾರ ಅಥವಾ ಸಂದರ್ಭಾನುಸಾರವಾಗಿ, ರಿಜಿಸ್ಟ್ರಾರನು ಅದಾಗಿಯೇ ಅಥವಾ ತಾನಾಗಿಯೇ, ಆ ಸಹಕಾರ ಸಂಘಕ್ಕೆ ಮುಖ್ಯಕಾರ್ಯನಿರ್ವಹಣಾಧಿಕಾರಿಯನ್ನು ನೇಮಿಸಬಹುದು.][2]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಸರ್ಕಾರ ಅಥವಾ ರಿಜಿಸ್ಟ್ರಾರನು ಸಹಕಾರ ಸಂಘಕ್ಕೆ ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡಿದ ತರುವಾಯ, ಸಂಘದಿಂದ ನೇಮಕಗೊಂಡ ಮುಖ್ಯಕಾರ್ಯನಿರ್ವಾಹಕನು

ಅವನನ್ನು ಯಾವುದೇ ಹೆಸರಿನಿಂದ ಕರೆಯಲಾಗಿರಲಿ, ಮುಖ್ಯ ಕಾರ್ಯನಿರ್ವಾಹಕನಾಗಿರುವುದು ನಿಂತುಹೋಗತಕ್ಕುದು.

(3) ಮುಖ್ಯ ಕಾರ್ಯನಿರ್ವಾಹಕನ ಸಂಬಳ ಮತ್ತು ಇತರ ಸೇವಾ ಷರತ್ತುಗಳು,-

(i) ಅವನು ರಾಜ್ಯ ಸರ್ಕಾರದ ನೌಕರನಾಗಿದ್ದಲ್ಲಿ ರಾಜ್ಯ ಸರ್ಕಾರದಿಂದ ಹಾಗೆ ಅನುಮೋದಿತವಾದಂತೆ ಇರತಕ್ಕುದು; ಮತ್ತು

(ii) ಇತರ ಸಂದರ್ಭಗಳಲ್ಲಿ, ರಿಜಿಸ್ಟ್ರಾರರಿಂದ ಅನುಮೋದನೆ ಪಡೆದಂತೆ ಇರತಕ್ಕುದು:

[1][xxx][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) ಮುಖ್ಯ ಕಾರ್ಯ ನಿರ್ವಾಹಕನು ಸಂಘದ ಮುಖ್ಯ ಆಡಳಿತಾಧಿಕಾರಿಯಾಗಿರತಕ್ಕುದು ಮತ್ತು ಸಮಿತಿಯ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಮತ್ತು ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಷರತ್ತುಗಳು ಮತ್ತು ನಿಬಂಧನೆಗಳಿಗೊಳಪಟ್ಟು,-

(ಎ) ಸಂಘದ ಎಲ್ಲ ನೌಕರರ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾಗಿರತಕ್ಕುದು ಮತ್ತು ಸಂಘದ ದಿನನಿತ್ಯದ ನಿರ್ವಹಣೆ ಮತ್ತು ವ್ಯವಹಾರಕ್ಕೆ ಜವಾಬ್ದಾರನಾಗಿರತಕ್ಕುದು;

(ಬಿ) ಸಂಘದ ಅಧಿಕೃತ ಮತ್ತು ಸಾಮಾನ್ಯ ವ್ಯವಹಾರಗಳನ್ನು ನಡೆಸತಕ್ಕುದು;

(ಸಿ) ರಾಜ್ಯ ಸರ್ಕಾರಕ್ಕೆ ಬಾಕಿ ಇರುವ ಮತ್ತು ಸರ್ಕಾರದ ಖಾತರಿಯ ಮೇಲೆ ಪಡೆದ ಸಾಲಗಳ ಮತ್ತು ಇತರ ಸಾಲಗಳ ಮರುಪಾವತಿಗೆ ವ್ಯವಸ್ಥೆ ಮಾಡತಕ್ಕುದು ಮತ್ತು ಇದರ ಸಂಬಂಧದಲ್ಲಿ ವರದಿಯನ್ನು ರಿಜಿಸ್ಟ್ರಾರರಿಗೆ ಕಳುಹಿಸತಕ್ಕುದು;

(ಡಿ) ಉಪವಿಧಿಗಳ ಉಪಬಂಧಗಳಿಗನುಸಾರವಾಗಿ ಬ್ಯಾಂಕ್ ಲೆಕ್ಕಗಳನ್ನು ನಿರ್ವಹಿಸಲು ಜವಾಬ್ದಾರನಾಗಿರತಕ್ಕುದು ಮತ್ತು ನಿಗದಿತ ಸುರಕ್ಷಿತ ಅಭಿರಕ್ಷೆಗೆ ವ್ಯವಸ್ಥೆಗಳನ್ನು ಮಾಡತಕ್ಕುದು;

(ಇ) ಸಂಘಕ್ಕಾಗಿ ಮತ್ತು ಅದರ ಪರವಾಗಿ ಸಹಕಾರ ಸಂಘದ ಎಲ್ಲ ದಸ್ತಾವೇಜುಗಳಿಗೆ ಸಹಿ ಹಾಕತಕ್ಕುದು ಮತ್ತು ಅನುಪ್ರಮಾಣಿಸತಕ್ಕುದು;

(ಎಫ್) ಸಹಕಾರ ಸಂಘದ ಎಲ್ಲ ದಾಖಲೆಗಳು ಮತ್ತು ದಾಸ್ತಾವೇಜುಗಳ ಅಭಿರಕ್ಷಕನಾಗಿರತಕ್ಕುದು ಮತ್ತು ಸಂಘದ ಲೆಕ್ಕಪತ್ರಗಳು ಮತ್ತು ವಿವಿಧ ಪುಸ್ತಕಗಳು ಮತ್ತು ದಾಖಲೆಗಳ ಮತ್ತು ಅಧಿನಿಯಮದ ಉಪಬಂಧಗಳು, ನಿಯಮಗಳು ಮತ್ತು ಉಪ ವಿಧಿಗಳಿಗನುಸಾರವಾಗಿ ಮತ್ತು ರಿಜಿಸ್ಟ್ರಾರರು ಅಥವಾ ಸಹಕಾರ ಲೆಕ್ಕದ ನಿರ್ದೇಶಕರು ನಿರ್ದೇಶಿಸಿದಂತೆ ಸರಿಯಾದ ನಿರ್ವಹಣೆಗೆ ನಿಯತಕಾಲಿತ ವಿವರ ಪಟ್ಟಿಗಳ ಮತ್ತು ವರದಿಗಳ ಸರಿಯಾದ ನಿರ್ವಹಣೆ ಮತ್ತು ಅವುಗಳ ಸಕಾಲಿಕ ಸಲ್ಲಿಕೆಗೆ ವ್ಯವಸ್ಥೆ ಮಾಡತಕ್ಕುದು;

(ಜಿ) ಅಧ್ಯಕ್ಷ ಅಥವಾ ಚೇರ್‌ಪರ್ಸನ್ ರೊಂದಿಗೆ ಸಮಾಲೋಚಿಸಿ ಮಹಾಸಭೆ, ವ್ಯವಸ್ಥಾಪನಾ ಸಮಿತಿ ಮತ್ತು ಉಪ ಸಮಿತಿಯ ಸಭೆಯನ್ನು ನಡೆಸಲು ಜವಾಬ್ದಾರನಾಗಿರತಕ್ಕುದು ಮತ್ತು ಅಂಥ ಸಭೆಗಳ ನಡವಳಿಕೆಗಳನ್ನು ದಾಖಲು ಮಾಡತಕ್ಕುದು ಮತ್ತು ನಿರ್ವಹಿಸತಕ್ಕುದು;

(ಹೆಚ್) ಕಾರ್ಯನೀತಿಗಳು ಮತ್ತು ಗುರಿಗಳು ಮತ್ತು ಯೋಜನೆಯ ರಚನೆಯಲ್ಲಿ ಸಮಿತಿಗೆ ನೆರವು ನೀಡತಕ್ಕುದು;

(ಐ) ಸಮಿತಿಗೆ ಅಗತ್ಯವಾದ ಮಾಹಿತಿ ಒದಗಿಸುವುದು ಮತ್ತು ಸಂಘದ ಪ್ರಕಾರ್ಯಗಳು ಮತ್ತು ಕಾರ್ಯಾಚರಣೆಗಳ ಬಗ್ಗೆ ಮೌಲ್ಯ ನಿರ್ಣಯ ಮಾಡತಕ್ಕುದು;

(ಜೆ) ಸಹಕಾರ ಸಂಘದ ಪರವಾಗಿ ದಾವೆ ಹೂಡತಕ್ಕುದು ಮತ್ತು ದಾವೆಗೆ ಗುರಿಯಾಗತಕ್ಕುದು;

(ಕೆ) ಅಧಿನಿಯಮದ, ನಿಯಮಗಳ ಅಥವಾ ಉಪ-ವಿಧಿಗಳ ಮೇರೆಗೆ ಅವನಿಗೆ ವಿಧಿಸಿದ ಅಥವಾ ಅವನಿಗೆ ಪ್ರಧಾನ ಮಾಡಿದಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕುದು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕುದು.

[1][(4ಎ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, ಸಂಘದ ಮತ್ತು ಅದರ ಸಮಿತಿಯ ಪ್ರತಿಯೊಂದು ಸಭೆಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಪಾಲ್ಗೊಳ್ಳಲು ಹಾಗೂ ಯಾವುದೇ ಗೊತ್ತುವಳಿಯನ್ನು ಮಂಡಿಸಲು [2][xxx][2] ಹಕ್ಕುಳ್ಳವನಾಗಿರತಕ್ಕುದು.][1]

[3][(4-ಬಿ) ಈ ಅಧಿನಿಯಮದಲ್ಲಿ ಅಥವಾ ನಿಯಮಗಳಲ್ಲಿ ಅಥವಾ ಸಹಕಾರ ಸಂಘದ ಉಪವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯು ಸಹಕಾರ ಸಂಘದ ಸಮಿತಿಯ ಒಬ್ಬ ಸದಸ್ಯನಾಗಿರತಕ್ಕದ್ದು.][3]

[4][(4ಸಿ) ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, ಮಂಡಲಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಮತ ನೀಡುವ ಹಕ್ಕು ಹೊಂದಿರತಕ್ಕದ್ದಲ್ಲ.][4]

1.2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

3. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

4.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(5) (4)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳು ಮತ್ತು ಕರ್ತವ್ಯಗಳ ಜೊತೆಗೆ ಅಪೆಕ್ಸ್ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು,-

(ಎ) ಸಮಿತಿಯ ಅನುಮೋದನೆಯೊಂದಿಗೆ ಮತ್ತು ಅಧಿನಿಯಮ, ಉಪಬಂಧಗಳು, ನಿಯಮಗಳು ಮತ್ತು ಉಪವಿಧಿಗಳಿಗೊಳಪಟ್ಟು ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಅಧಿಕಾರ ಹೊಂದಿರತಕ್ಕುದು;

(ಬಿ) ಸಂಘದ ಉದ್ಯೋಗಿಗಳ ಅಧಿಕಾರಗಳು, ಕಾರ್ಯಗಳು ಮತ್ತು ಕರ್ತವ್ಯಗಳನ್ನು ನಿರ್ದಿಷ್ಟಪಡಿಸತಕ್ಕುದು;

(ಸಿ) ಸಂಘದ ಮೂಲಕ ಅಥವಾ ಸಂಘದ ವಿರುದ್ಧ ಅಥವಾ ಅನ್ಯಥಾ ಸಂಘದ ವ್ಯವಹಾರಗಳಿಗೆ ಸಂಬಂಧಪಡುವ ಯಾವುದೇ ದಾವೆ, ಅಥವಾ ಕಾನೂನು ವ್ಯವಹರಣೆಯನ್ನು ನಡೆಸಬಹುದು, ಸಮರ್ಥಿಸಿಕೊಳ್ಳಬಹುದು, ರಾಜೀ ಮಾಡಿಕೊಳ್ಳಬಹುದು

ಅಥವಾ ಕೈಬಿಡಬಹುದು ಮತ್ತು ಅಧ್ಯಕ್ಷರ ಅಥವಾ ಛೇರ್ ಪರ್ಸನ್‌ರೊಂದಿಗೆ ಸಮಾಲೋಚಿಸಿ ಸಂಘದಿಂದ ಅಥವಾ ಸಂಘದ ವಿರುದ್ಧ ಮಾಡಲಾದ ಯಾವುದೇ ಕ್ಲೇಮುಗಳ ಅಥವಾ ಬೇಡಿಕೆಗಳ ಸಂದಾಯಕ್ಕಾಗಿ ಯಥೋಚಿತ ಕಾಲಾವಕಾಶವನ್ನು ನೀಡಬಹುದು.

(ಡಿ) ಸಮಿತಿಯು ಹೊರಡಿಸಿದ ಮಾರ್ಗದರ್ಶನಗಳಿಗೊಳಪಟ್ಟು, ಒಪ್ಪಂದಗಳನ್ನು ಮಾಡಿಕೊಳ್ಳಬಹುದು ಮತ್ತು ಕರಾರುಗಳನ್ನು ಬರೆದು ಕೊಡಬಹುದು;

(ಇ) ಅವನ ಯಾವುದೇ ಅಧಿಕಾರಗಳನ್ನು ಯಾರೇ ನೌಕರನಿಗೆ ಪ್ರತ್ಯಾಯೋಜಿಸಬಹುದು.

(6) ಪ್ರಾಥಮಿಕ ಸಹಕಾರ ಸಂಘಗಳ ಸಂಬಂಧದಲ್ಲಿ, ಮುಖ್ಯ ಕಾರ್ಯನಿರ್ವಾಹಕನು, ಅವನಿಂದ ಅಧಿಕೃತವಾಗಿ ದೃಢೀಕರಿಸಿದ [1][ಸ್ವೀಕೃತಿ ಮತ್ತು ಸಂದಾಯ ಲೆಕ್ಕದ ಪ್ರತಿಯನ್ನು][1] ಪ್ರತಿ ತಿಂಗಳು ರಿಜಿಸ್ಟ್ರಾರನಿಗೆ ಮತ್ತು ಹಣಕಾಸು ಬ್ಯಾಂಕ್‌ಗೆ ಅಥವಾ ಕ್ರೆಡಿಟ್ ಏಜೆನ್ಸಿಗೆ ತರುವಾಯದ ತಿಂಗಳ ಹದಿನೈದು ದಿನಗಳೊಳಗೆ ಕಳುಹಿಸತಕ್ಕುದು. ಅವನು ಮಹಾಸಭೆಗಳ ಮತ್ತು ಸಮಿತಿ ಸಭೆಗಳ ವ್ಯವಹರಣೆಗಳ ಒಂದು ದೃಢೀಕೃತ ಪ್ರತಿಯನ್ನು ಅಂತಹ ಸಭೆಗಳ ದಿನಾಂಕಗಳಿಂದ ಹದಿನೈದು ದಿನಗಳೊಳಗಾಗಿ ರಿಜಿಸ್ಟ್ರಾರ್ ಮತ್ತು ಹಣಕಾಸು ಬ್ಯಾಂಕ್ ಅಥವಾ ಕ್ರೆಡಿಟ್ ಏಜೆನ್ಸಿಗೆ ಕಳುಹಿಸಿಕೊಡತಕ್ಕುದು.][1]

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**30. ಮಂಡಲಿಯ ರದ್ದಿಯಾತಿ ಅಥವಾ ಅಮಾನತು.-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಹಕಾರ ಸಂಘದ ಯಾವುದೇ ಮಂಡಲಿಯನ್ನು, ಆರು ತಿಂಗಳನ್ನು ಮೀರುವ ಅವಧಿಗೆ ರದ್ದುಗೊಳಿಸತಕ್ಕದಲ್ಲ ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ;

ಪರಂತು, ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುತ್ತಿರುವ ಸಹಕಾರ ಸಂಘದ ಸಂದರ್ಭದಲ್ಲಿ, ಈ ಖಂಡದ ಉಪಬಂಧವು, "ಆರು ತಿಂಗಳು" ಎಂಬ ಪದಗಳಿಗೆ "ಒಂದು ವರ್ಷ" ಎಂಬ ಪದಗಳನ್ನು ಪ್ರತಿಯೋಜಿಸಿದ್ದಿದ್ದರೆ ಹೇಗೋ ಹಾಗೆ ಪರಿಣಾಮವನ್ನು ಹೊಂದಿರತಕ್ಕದ್ದು.

(2) ಸಹಕಾರ ಸಂಘದ ಮಂಡಲಿಯು.-

(i) ಈ ಅಧಿನಿಯಮ ಅಥವಾ ನಿಯಮಗಳು ಅಥವಾ ಉಪವಿಧಿಗಳ ಮೂಲಕ ಅದಕ್ಕೆ ವಹಿಸಿರುವ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸತತವಾಗಿ ತಪ್ಪಿತವನ್ನು ಎಸಗುತ್ತಿದೆ ಅಥವಾ ಉಪೇಕ್ಷಿಸುತ್ತಿದೆ ಎಂದು; ಅಥವಾ

(ii) ಸಂಘದ ಅಥವಾ ಅದರ ಸದಸ್ಯರ ಹಿತಾಸಕ್ತಿಗೆ ಬಾಧಕ ಉಂಟುಮಾಡುವ ಯಾವುದೇ ಕೃತ್ಯ ಎಸಗುತ್ತಿದೆ ಎಂದು; ಅಥವಾ

(iii) ಮಂಡಲಿಯ ಸಂರಚನೆಯಲ್ಲಿ ಅಥವಾ ಕಾರ್ಯ ನಿರ್ವಹಣೆಯಲ್ಲಿ ಇಕ್ಕಟ್ಟಿನ ಸ್ಥಿತಿ ಇದೆ ಎಂದು; ಅಥವಾ

(iv) ಪತ್ತೆಹಚ್ಚಲಾಗಿರುವ ಗಂಭೀರ ಸ್ವರೂಪದ ಹಣಕಾಸು ಅಕ್ರಮಗಳು ಅಥವಾ ಮೋಸ ನಡೆದಿದೆ ಎಂದು; ಅಥವಾ

(v) ಗೊತ್ತುಪಡಿಸಿದ ಕಾಲದೊಳಗಾಗಿ ಮಂಡಲಿಗೆ ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗವು ನಿರೂಪಿಸಿರುವ ಕ್ಯಾಲೆಂಡರಿನ ಪ್ರಕಾರ ಚುನಾವಣಾ ಆಯೋಗಕ್ಕೆ ಪುಸ್ತಕಗಳು ಮತ್ತು ದಾಖಲೆಗಳು ಅವಶ್ಯ ಮಾಹಿತಿ ಮತ್ತು ನೆರವನ್ನು ಒದಗಿಸಲು ವಿಫಲವಾಗಿದೆ ಎಂದು ಮತ್ತು ತತ್ಪರಿಣಾಮವಾಗಿ ಅಥವಾ ಅನ್ಯಥಾ ಗೊತ್ತುಪಡಿಸಿದ ಕಾಲದೊಳಗೆ ಚುನಾವಣಾ ಆಯೋಗವು ಚುನಾವಣೆಗಳನ್ನು ನಡೆಸಲು ವಿಫಲವಾಗಿದೆ ಎಂದು,

- ರಿಜಿಸ್ಟ್ರಾರನು ಅಭಿಪ್ರಾಯಪಟ್ಟರೆ, ಅವನು, ಮಂಡಲಿಯ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ತಿಳಿಸಲು ಮಂಡಲಿಗೆ ಒಂದು ಅವಕಾಶವನ್ನು ನೀಡಿದ ತರುವಾಯ, ಲಿಖಿತ ಆದೇಶದ ಮೂಲಕ ಸದರಿ ಮಂಡಲಿಯನ್ನು ರದ್ದುಗೊಳಿಸಬಹುದು ಅಥವಾ ಅಮಾನತುಗೊಳಿಸಬಹುದು ಮತ್ತು ಆರು ತಿಂಗಳನ್ನು ಮೀರದ ಅವಧಿಗೆ ಸಂಘದ ವ್ಯವಹಾರಗಳನ್ನು ನಿರ್ವಹಿಸಲು ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಬಹುದು:

ಪರಂತು, ಯಾವುದೇ ಸರ್ಕಾರಿ ಷೇರು ಧಾರಣೆ ಅಥವಾ ಸರ್ಕಾರವು ನೀಡಿರುವ ಸಾಲ, ಹಣಕಾಸು ನೆರವು ಅಥವಾ ಯಾವುದೇ ಖಾತ್ರಿ ಇಲ್ಲದಿದ್ದರೆ, ಯಾವುದೇ ಸಹಕಾರ ಸಂಘದ ಮಂಡಲಿಯನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ:

ಮತ್ತು ಪರಂತು, ಸಹಕಾರ ಸಂಘದ ಮಂಡಲಿಯ ರದ್ದಿಯಾತಿಯನ್ನು ಸಂದರ್ಭಾನುಸಾರ ಭಾರತದ ರಿಸರ್ವ್ ಬ್ಯಾಂಕ್ ನೊಂದಿಗೆ/ರಾಷ್ಟ್ರೀಯ ಬ್ಯಾಂಕ್ ನೊಂದಿಗೆ ಸಮಾಲೋಚಿಸಿದ ತರುವಾಯ ಮಾತ್ರವೇ ಮಾಡತಕ್ಕದ್ದು ಮತ್ತು ಬ್ಯಾಂಕಿಂಗ್ ವಿನಿಮಯ ಅಧಿನಿಯಮ, 1949 ರ (AACS) ಉಪಬಂಧಗಳೂ ಸಹ ಅನ್ವಯವಾಗತಕ್ಕದ್ದು.

[1][ಅಲ್ಲದೇ ಪರಂತು, (2)ನೇ ಉಪಪ್ರಕರಣದ ಅಡಿಯಲ್ಲಿ ತೆಗೆದುಹಾಕಲಾದ ಮಂಡಳಿಯ ಯಾವೊಬ್ಬ ಸದಸ್ಯನು, ತೆಗೆದುಹಾಕಲಾದ ದಿನಾಂಕದಿಂದ ಒಂದು ವರ್ಷದ ಅವಧಿಗಾಗಿ ಅಂಥ ಸಹಕಾರ ಸಂಘದ ಅಥವಾ ಇತರ ಯಾವುದೇ ಇತರ ಸಹಕಾರ ಸಂಘದ

ಮಂಡಳಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗತಕ್ಕದ್ದಲ್ಲ ಮತ್ತು ಅಂಥ ಆದೇಶವನ್ನು ಯಾರ ವಿರುದ್ಧವಾಗಿ ಮಾಡಲಾಗಿದೆಯೋ ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು, ಮಂಡಳಿಯ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಾಗಿ ಅನರ್ಹನಾಗಿರುವನೆಂಬ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಹಾಗೆ ನೇಮಕಗೊಂಡ ಆಡಳಿತಾಧಿಕಾರಿಯು, ರಿಜಿಸ್ಟ್ರಾರನ ನಿಯಂತ್ರಣಕ್ಕೆ ಮತ್ತು ಆತನು ಕಾಲಕಾಲಕ್ಕೆ ನೀಡಬಹುದಾದಂಥ ಸೂಚನೆಗಳಿಗೆ ಒಳಪಟ್ಟು, ಸಹಕಾರ ಸಂಘದ ಮಂಡಲಿಯ ಅಥವಾ ಯಾರೇ ಪದಾಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಸಂಘದ ಹಿತದೃಷ್ಟಿಯಿಂದ ಅವನು ಅವಶ್ಯವೆಂದು ಪರಿಗಣಿಸಬಹುದಾದಂಥ ಕ್ರಮವನ್ನು ಕೈಗೊಳ್ಳತಕ್ಕದ್ದು.

(4)ಮಂಡಲಿಯನ್ನು ರದ್ದುಗೊಳಿಸಿರುವ ಸಂದರ್ಭದಲ್ಲಿ, ಆಡಳಿತಾಧಿಕಾರಿಯು ಅವನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಈ ಅಧಿನಿಯಮ, ನಿಯಮಗಳು ಮತ್ತು ಸಹಕಾರ ಸಂಘದ ಉಪವಿಧಿಗಳಿಗೆ ಅನುಸಾರವಾಗಿ ಚುನಾವಣೆಗಳನ್ನು ನಡೆಸಲು ಮತ್ತು ಹೊಸ ಮಂಡಲಿಯನ್ನು ರಚಿಸಲು ಹಾಗೂ ಚುನಾಯಿತ ಮಂಡಳಿಗೆ ಆಡಳಿತವನ್ನು ಹಸ್ತಾಂತರಿಸಲು ಏರ್ಪಾಡು ಮಾಡತಕ್ಕದ್ದು.

(5) ಮಂಡಲಿಯನ್ನು ರದ್ದುಗೊಳಿಸಿರುವ ಸಂದರ್ಭದಲ್ಲಿ, ರಿಜಿಸ್ಟ್ರಾರರು ಸದರಿ ಮಂಡಲಿಯನ್ನು ಪುನರ್ ಸ್ಥಾಪಿಸತಕ್ಕದ್ದು ಮತ್ತು ಆಡಳಿತಾಧಿಕಾರಿಯು ಅವನ ಪದಾವಧಿಯು ಮುಕ್ತಾಯಗೊಂಡ ಮೇಲೆ ಸದರಿ ಮಂಡಲಿಯ ಆಡಳಿತವನ್ನು ಹಸ್ತಾಂತರಿಸತಕ್ಕದ್ದು ಮತ್ತು ಮಂಡಲಿಯ ಮೂಲ ಪದಾವಧಿಯನ್ನು ಲೆಕ್ಕಹಾಕುವಾಗ ಅಮಾನತ್ತಿನ ಅವಧಿಯನ್ನು ಪರಿಗಣಿಸತಕ್ಕದ್ದು.

(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಿಜಿಸ್ಟ್ರಾರರು, ಸಹಕಾರ ಸಂಘದ ಸಂಧರ್ಭದಲ್ಲಿ ಸಹಕಾರ ಬ್ಯಾಂಕಿನ ವ್ಯವಹಾರಗಳನ್ನು ಠೇವಣಿದಾರರ ಹಿತಾಸಕ್ತಿಗೆ ಬಾದಕ ಉಂಟುಮಾಡುವ ರೀತಿಯಲ್ಲಿ ನಡೆಸುತ್ತಿರುವುದನ್ನು ತಡೆಗಟ್ಟಲು ಅಥವಾ ಸಹಕಾರ ಬ್ಯಾಂಕಿನ ಯುಕ್ತ ಆಡಳಿತವನ್ನು ಸಾಧಿಸುವುದಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಅಗತ್ಯ ಪಡಿಸಿದರೆ, ಲಿಖಿತ ಆದೇಶದ ಮೂಲಕ ಆ ಸಹಕಾರ ಬ್ಯಾಂಕಿನ ಮಂಡಲಿಯನ್ನು ತೆಗೆದುಹಾಕತಕ್ಕದ್ದು, ಮತ್ತು ಭಾರತದ ರಿಸರ್ವ್ ಬ್ಯಾಂಕ್ ನಿರ್ದಿಷ್ಟ

ಪಡಿಸಬಹುದಾದಂತೆ ಒಂದು ವರ್ಷವನ್ನು ಮೀರದ ಅಂಥ ಅವಧಿಯವರೆಗೆ ಸಹಕಾರ ಬ್ಯಾಂಕಿನ ವ್ಯವಹಾರಗಳನ್ನು ನಿರ್ವಹಿಸಲು ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು.

[1][ಪರಂತು, ತೆಗೆದುಹಾಕಲಾದ ಮಂಡಳಿಯ ಯಾವೊಬ್ಬ ಸದಸ್ಯನು, ತೆಗೆದುಹಾಕಲಾದ ದಿನಾಂಕದಿಂದ ಒಂದು ವರ್ಷದ ಅವಧಿಗಾಗಿ ಅಂಥ ಬ್ಯಾಂಕು ಅಥವಾ ಇತರ ಯಾವುದೇ ಸಹಕಾರ ಸಂಘದ ಮಂಡಳಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗತಕ್ಕದ್ದಲ್ಲ ಮತ್ತು ಅಂಥ ಆದೇಶವನ್ನು ಯಾರ ವಿರುದ್ಧವಾಗಿ ಮಾಡಲಾಗಿದೆಯೋ ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು, ಅನರ್ಹನಾಗಿರುವನೆಂಬ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(7) ಸರ್ಕಾರದ ಅಥವಾ ಸಹಕಾರಿ ಸಂಘಟನೆಯ ಸಮುಚಿತ ದರ್ಜೆಯ ಯಾರೇ ಅದಿಕಾರಿ ಅಥವಾ ಉದ್ಯೋಗಿಯನ್ನು ಸಹಕಾರ ಸಂಘದ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಬಹುದು.

(i) ಅವನು ಪೂರ್ಣಕಾಲಿಕ ಆದಾರದ ಮೇಲೆ ನೇಮಕಗೊಂಡಿದ್ದರೆ ಅವನ ವೇತನ ಮತ್ತು ಇತರ ಭತ್ಯೆಗಳನ್ನು ಸಹಕಾರ ಸಂಘವು ಭರಿಸತಕ್ಕದ್ದು, ಇಲಾಖೆಯಲ್ಲಿ/ ಸಂಘಟನೆಯಲ್ಲಿ ಅವನಿಗೆ ಅನ್ಯಾಯವಾಗುವ ಸೇವಾ ನಿಯಮಗಳು, ಸಂಘದ ಆಡಳಿತಾಧಿಕಾರಿಯಾಗಿ ಅವನ ಸೇವೆಯನ್ನು ನಿಯಂತ್ರಿಸುವುದು ಮುಂದುವರೆಯತಕ್ಕದ್ದು.

(ii) ಅವನು ತನ್ನ ನಿಯತ ಹುದ್ದೆಯ ಜೊತೆಗೆ ಆಡಳಿತಾಧಿಕಾರಿಯಾಗಿ ನೇಮಕಗೊಂಡರೆ ಅವನ ಮೂಲವೇತನದ ಶೇಕಡಾ ಹತ್ತರ ದರದಲ್ಲಿ ಪರಿಶ್ರಮ ಧನವನ್ನು ಸಹಕಾರ ಸಂಘದ ನಿಧಿಯಿಂದ ಅವನಿಗೆ ಸಂದಾಯ ಮಾಡತಕ್ಕದ್ದು, ಇಲಾಖೆಯಲ್ಲಿ/ ಸಂಘಟನೆಯಲ್ಲಿ ಅವನಿಗೆ ಅನ್ವಯವಾಗುವ ಸೇವಾ ನಿಯಮಗಳ ಸಂಘದ ಆಡಳಿತಗಾರನಾಗಿ ಅವನ ಸೇವೆಯನ್ನು ನಿಯಂತ್ರಿಸುವುದು ಮುಂದುವರೆಯತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][30ಎ. xxx][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][30ಬಿ. ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ದೇಶನ ನೀಡಲು ಅಧಿಕಾರ.- (1) ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ರಾಜ್ಯ ಸರ್ಕಾರವು ಅನುಮೋದಿಸಿದ ಅಥವಾ ಕೈಗೊಂಡ ಸಹಕಾರ ಮತ್ತು ಇತರ ಅಭಿವೃದ್ಧಿ ಕಾರ್ಯಕ್ರಮಗಳು ಸೂಕ್ತ ರೀತಿಯಲ್ಲಿ

ಕಾರ್ಯರೂಪಕ್ಕೆ ಬರುವುದನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ಅಥವಾ ಸಾಮಾನ್ಯವಾಗಿ ಸಹಕಾರ ಸಂಘಗಳ ವ್ಯವಹಾರಗಳ ಸೂಕ್ತ ನಿರ್ವಹಣೆಯನ್ನು ಸುನಿಶ್ಚಿತಗೊಳಿಸುವ ಸಲುವಾಗಿ ಅಥವಾ ಅದರ ಸದಸ್ಯರ ಅಥವಾ ಠೇವಣಿದಾರರ ಅಥವಾ ಅದಕ್ಕೆ ಸಾಲ ಕೊಡುವವರ

ಹಿತಾಸಕ್ತಿಗಳಿಗೆ ಬಾಧಕವಾಗುವ ರೀತಿಯಲ್ಲಿ ಸಹಕಾರ ಸಂಘದ ವ್ಯವಹಾರಗಳು ನಡೆಯುವುದನ್ನು ತಡೆಯುವುದಕ್ಕಾಗಿ ಅಥವಾ ವಿಶೇಷವಾಗಿ, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರುಗಳ ಹಿತಾಸಕ್ತಿಯನ್ನು ಸಂರಕ್ಷಿಸುವುದಕ್ಕಾಗಿ ಮತ್ತು ಸಹಕಾರ ಸಂಘಗಳ ಅಡಿಯಲ್ಲಿಯ ಸೇವೆಗಳಲ್ಲಿ ಅಂಥ ಜಾತಿಗಳು, ಬುಡಕಟ್ಟುಗಳು ಅಥವಾ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಾತಿಯನ್ನು ಖಚಿತಪಡಿಸುವುದಕ್ಕಾಗಿ, ಸಾಮಾನ್ಯವಾಗಿ ಸಹಕಾರ ಸಂಘಗಳ ಯಾವುದೇ ವರ್ಗಕ್ಕೆ ಅಥವಾ ವಿಶೇಷವಾಗಿ ಯಾವುದೇ ಸಹಕಾರ ಸಂಘಕ್ಕೆ ಅಥವಾ ಸಂಘಗಳಿಗೆ ನಿರ್ದೇಶನಗಳನ್ನು ನೀಡುವುದು ಅವಶ್ಯಕವೆಂದು ರಾಜ್ಯ ಸರ್ಕಾರಕ್ಕೆ ಮನವರಿಕೆಯಾದರೆ, ಅದು ಕಾಲಕಾಲಕ್ಕೆ ನಿರ್ದೇಶನವನ್ನು ನೀಡಬಹುದು ಮತ್ತು ಅಂಥ ಎಲ್ಲ ಸಹಕಾರ ಸಂಘಗಳು ಅಥವಾ ಸಂಬಂಧಪಟ್ಟ ಸಹಕಾರ ಸಂಘವು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕುದು.

(2) ರಾಜ್ಯ ಸರ್ಕಾರವು, (1)ನೇ ಉಪ ಪ್ರಕರಣದ ಅಡಿಯಲ್ಲಿ ನೀಡಿದ ಯಾವುದೇ ನಿರ್ದೇಶನಗಳನ್ನು ಮಾರ್ಪಾಡು ಮಾಡಬಹುದು ಅಥವಾ ರದ್ದುಪಡಿಸಬಹುದು ಮತ್ತು ಅಂಥ ನಿರ್ದೇಶನಗಳನ್ನು ಮಾರ್ಪಾಟು ಮಾಡುವಲ್ಲಿ ಅಥವಾ ರದ್ದುಪಡಿಸುವಲ್ಲಿ, ಅದು, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಷರತ್ತುಗಳನ್ನು ವಿಧಿಸಬಹುದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ರಿಜಿಸ್ಟ್ರಾರ್ ಅವರಿಗೆ ಈ ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು.][1]

1. 2000ದ ಅಧಿನಿಯಮ ಸಂಖ್ಯೆ 13ರ ಮೂಲಕ 26.2.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**31.** [2][**ರಿಜಿಸ್ಟ್ರಾರ್‌ನಿಂದ**][2] **ವಿಶೇಷಾಧಿಕಾರಿಯ ನೇಮಕಾತಿ.-** (1) ಅನರ್ಹತೆ, ರಾಜೀನಾಮೆ ಅಥವಾ ಮರಣ ಅಥವಾ ಸದಸ್ಯನನ್ನು ತೆಗೆದುಹಾಕುವಿಕೆ [4][xxx][4] ಕೋರಂ ಆಗಲು ಸಮಿತಿಯ ಸದಸ್ಯರುಗಳ ಸಂಖ್ಯೆಯು ಅಗತ್ಯಕ್ಕಿಂತ ಕಡಿಮೆಯಾದ ಕಾರಣದಿಂದ ಒಂದು ಸಹಕಾರ ಸಂಘವು, ಅಧಿನಿಯಮದ ಉಪಬಂಧಗಳು, ನಿಯಮಗಳು ಅಥವಾ ಉಪ ವಿಧಿಗಳಿಗನುಸಾರವಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ರಿಜಿಸ್ಟ್ರಾರರು ಅಭಿಪ್ರಾಯಪಟ್ಟಲ್ಲಿ,

ಅವರು, ಈ ಅಧಿನಿಯಮ, ನಿಯಮ, ನಿಯಮಗಳು ಅಥವಾ ಉಪವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ, ಆದೇಶದ ಮೂಲಕ, ಅಂತಹ ಸಹಕಾರ ಸಂಘಕ್ಕೆ ಆರು ತಿಂಗಳಿಗಿಂತ ಹೆಚ್ಚಿಲ್ಲದಂಥ ಅವಧಿಗೆ ಒಬ್ಬ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು. [2][ರಿಜಿಸ್ಟ್ರಾರನು, [3][xxxx][3] ಬರಹದಲ್ಲಿ ಕಾರಣಗಳನ್ನು ಮಾಡಿ ಅಂಥ ನೇಮಕಾತಿಯ ಅವಧಿಯನ್ನು ಒಮ್ಮೆಗೆ ಆರು ತಿಂಗಳುಗಳ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು. ಮತ್ತು ಯಾವುದೇ ಸಂದರ್ಭದಲ್ಲೂ ಅಂಥ ವಿಸ್ತರಣೆಯ ಸರಾಸರಿ ಒಂದು ವರ್ಷವನ್ನು ಮೀರತಕ್ಕದ್ದಲ್ಲ.][2]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ ಸೇರಿಸಲಾಗಿದೆ.

3. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ ಬಿಟ್ಟುಬಿಡಲಾಗಿದೆ.

4. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) (1)ನೇ ಉಪ-ಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೂ ಮೊದಲು, ರಿಜಿಸ್ಟ್ರಾರನು ಅಂಥ ಆದೇಶದ ಮೂಲಕ ಬಾಧಿತವಾಗುವ ಯಾವುದೇ ಸಹಕಾರ ಸಂಘಕ್ಕೆ ಅಥವಾ ವ್ಯಕ್ತಿಗೆ ಯಾವುದಾದರೂ ಆಕ್ಷೇಪಣೆ ಇದ್ದರೆ ಅದನ್ನು ತಿಳಿಸುವ ಅವಕಾಶವನ್ನು ನೀಡುವ ಅವಶ್ಯಕತೆ ಇರತಕ್ಕುದಲ್ಲ.

(3) (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶದ ತರುವಾಯ:Š

(ಎ) ಸಹಕಾರ ಸಂಘದ ಸಮಿತಿಯ ಸದಸ್ಯರು ಇದ್ದಲ್ಲಿ, ತಮ್ಮ ಪದಗಳನ್ನು ಖಾಲಿ ಮಾಡತಕ್ಕುದು ಮತ್ತು ಅವರು ಪದಗಳನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕುದು; ಮತ್ತು

(ಬಿ) ವಿಶೇಷಾಧಿಕಾರಿಯು ಸಹಕಾರ ಸಂಘದ ವ್ಯವಹಾರಗಳ ಪ್ರಭಾರವನ್ನು ವಹಿಸಿಕೊಂಡಿರುವುದಾಗಿ ಭಾವಿಸತಕ್ಕುದು.

(4) ವಿಶೇಷಾಧಿಕಾರಿಯು, ರಿಜಿಸ್ಟ್ರಾರರ ನಿಯಂತ್ರಣಕ್ಕೆ ಒಳಪಟ್ಟು, ಸಹಕಾರ ಸಂಘದ ಸಮಿತಿಯ ಅಥವಾ ಸಹಕಾರ ಸಂಘದ ಯಾರೇ ಪದಾಧಿಕಾರಿಯ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು ಮತ್ತು ಸಹಕಾರ ಸಂಘದ ಹಿತದೃಷ್ಟಿಯಿಂದ ಅಗತ್ಯವಾಗಬಹುದಾದಂಥ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕುದು.

(5) ವಿಶೇಷಾಧಿಕಾರಿಯು, ತನ್ನ ಅಧಿಕಾರಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಸಂಘದ ಹೊಸ ಸಮಿತಿಯ ರಚನೆಗೆ [2][ಅಧಿನಿಯಮ, ನಿಯಮಗಳು ಮತ್ತು ಅದರ ಉಪವಿಧಿಗಳಿಗನುಸಾರವಾಗಿ][2] ವ್ಯವಸ್ಥೆ ಮಾಡತಕ್ಕುದು.

[1][ಪರಂತು, ಹಾಗೆ ನೇಮಕ ಮಾಡಲಾದ ವಿಶೇಷಾಧಿಕಾರಿಯು, ಸಹಕಾರಿ ಪತ್ತಿನ ರಚನೆಯಲ್ಲಿಯ ಸಂಘದ ಸಂಬಂಧದಲ್ಲಿ ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಮುಂದುವರೆಯತಕ್ಕದ್ದಲ್ಲ.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.9.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

31ಎ. ಸಹಕಾರ ಸಂಘಗಳ ದಾಖಲೆಗಳು ಮತ್ತು ಸ್ವತ್ತುಗಳ ಸ್ವಾಧೀನತೆಯನ್ನು ಒಪ್ಪಿಸುವುದು.- (1) ಒಂದು ಹೊಸ ಸಮಿತಿ ಚುನಾಯಿತಗೊಂಡಿದ್ದರೆ ಅಥವಾ ರಿಜಿಸ್ಟ್ರಾರನಿಂದ ಆಡಳಿತಾಧಿಕಾರಿಯು ಅಥವಾ ವಿಶೇಷಾಧಿಕಾರಿಯು ನೇಮಕಗೊಂಡಿದ್ದರೆ ಅಥವಾ ಸಹಕಾರ ಸಂಘವನ್ನು ಪರಿಸಮಾಪನೆಗೊಳಿಸುವ ಆದೇಶ ಮಾಡಿದ್ದು ಈ ಅಧಿನಿಯಮದ ಮೇರೆಗೆ ಒಬ್ಬ ಪರಿಸಮಾಪಕನು ನೇಮಕಗೊಂಡಿದ್ದರೆ ಮತ್ತು ಅಂಥ ಹೊಸ ಸಮಿತಿ, ಆಡಳಿತಾಧಿಕಾರಿ ಅಥವಾ ವಿಶೇಷಾಧಿಕಾರಿ ಅಥವಾ ಪರಿಸಮಾಪಕನಿಗೆ, ಅಂಥ ಹಿಂದಿನ ಸಮಿತಿಯು ಅಥವಾ ರದ್ದುಗೊಳಿಸಿದ

ಸಮಿತಿಯು ಅಥವಾ ಯಾವುದನ್ನು ವಹಿಸಿಕೊಳ್ಳುವಂತೆ ಅಥವಾ ಪರಿಸಮಾಪನಗೊಳಿಸುವಂತೆ ಆದೇಶಿಸಲಾಗಿದೆಯೋ ಆ ಯಾವುದೇ ಸಂಘದ ಸಮಿತಿಯು ಅಥವಾ ಸಂಘದ ಸ್ವತ್ತುಗಳನ್ನು ಮತ್ತು ದಾಖಲೆಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಲು ಹಕ್ಕಿಲ್ಲದ ಯಾರೇ ವ್ಯಕ್ತಿಯು, ಸಹಕಾರ ಸಂಘದ ಪುಸ್ತಕಗಳು, ಲೆಕ್ಕಗಳು, ದಾಖಲೆಗಳು, ರೇವಣಿಗಳು, ನಗದು ಮತ್ತು ಇತರ ಸ್ವತ್ತುಗಳು, ಚರಾಸ್ತಿಗಳು ಅಥವಾ ಸ್ಥಿರಾಸ್ತಿಗಳನ್ನು (ಈ ಪ್ರಕರಣದಲ್ಲಿ ಸಂಘದ ದಾಖಲೆಗಳು ಮತ್ತು ಸ್ವತ್ತಗಳು ಎಂದು ಉಲ್ಲೇಖಿಸಲಾಗಿದೆ) ಸ್ವಾಧೀನಕ್ಕೆ ತೆಗೆದುಕೊಳ್ಳುವುದನ್ನು ಪ್ರತಿರೋಧಿಸಿದ್ದರೆ ಅಥವಾ ತಡೆದರೆ, ರಿಜಿಸ್ಟ್ರಾರನು ಹೊಸ ಸಮಿತಿಯಿಂದ ಅಥವಾ ಆಡಳಿತಾಧಿಕಾರಿಯಿಂದ ಅಥವಾ ವಿಶೇಷಾಧಿಕಾರಿಯಿಂದ ಅಥವಾ ಪರಿಸಮಾಪಕದಿಂದ ಸ್ವೀಕರಿಸಿದ ಅರ್ಜಿಯ ಮೇಲೆ, ತಮಗೆ ಮನದಟ್ಟಾದರೆ, ನಿಯಮಿಸಲಾದ ನಮೂನೆಯಲ್ಲಿ ಕಾರಣಗಳನ್ನು ವಿವರಿಸಿ, ಸಹಕಾರ ಸಂಘಗಳ ಹಿರಿಯ ಇನ್ಸ್‌ಪೆಕ್ಟರ್ ಸ್ಥಾನದಿಂದ ಕಡಿಮೆಯಿಲ್ಲದ ದರ್ಜೆಯ ತನ್ನ ಯಾರೇ ಅಧೀನ ಅಧಿಕಾರಿಯನ್ನು ಸಹಕಾರ ಸಂಘಗಳ ಅಂಥ ದಾಖಲೆಗಳನ್ನು ಮತ್ತು ಸ್ವತ್ತುಗಳನ್ನು ಇಟ್ಟಿರುವ ಯಾವುದೇ ಆವರಣವನ್ನು ಅಥವಾ ಸ್ಥಳವನ್ನು ಪ್ರವೇಶಿಸಲು, ಶೋಧಿಸಲು ಅಥವಾ ಮುರಿದು ತೆಗೆಯಲು ಮತ್ತು ಸಹಕಾರ ಸಂಘದ ಯಾವುದೇ ಅಂಥ ದಾಖಲೆಗಳನ್ನು ಮತ್ತು ಸ್ವತ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿಕಾರ ನೀಡತಕ್ಕುದು ಮತ್ತು ಅವುಗಳನ್ನು ಹೊಸ ಸಮಿತಿಗೆ, ಆಡಳಿತಾಧಿಕಾರಿಗೆ ಅಥವಾ ವಿಶೇಷಾಧಿಕಾರಿಗೆ ಅಥವಾ ಪರಿಸಮಾಪಕನಿಗೆ ಒಪ್ಪಿಸುವಂತೆ ಮಾಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗಿನ ವ್ಯವಹರಣೆಗಳ ಉದ್ದೇಶಕ್ಕಾಗಿ ಮೇಲೆ ಹೇಳಿದ ಅಧಿಕಾರ ನೀಡಿಕೆಯು ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಮತ್ತು ಸ್ವತ್ತುಗಳು ಸಹಕಾರ ಸಂಘಕ್ಕೆ ಸೇರಿದ್ದು ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯ ವಾಗಿರತಕ್ಕುದು.

(3) ಶೋಧನೆಗಳಿಗೆ ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ 1973ರ ದಂಡ ಪ್ರಕ್ರಿಯಾ ಸಂಹಿತೆಯ 100, 101 ಮತ್ತು 102ನೇ ಪ್ರಕರಣದ ಉಪಬಂಧಗಳು ಈ ಪ್ರಕರಣದ ಮೇರೆಗಿನ ಶೋಧನೆಗೆ ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕುದು.

(4) ಈ ಅಧಿನಿಯಮದ ಮೇರೆಗಿನ ತಪಾಸಣೆ, ವಿಚಾರಣೆ ಅಥವಾ ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಅಥವಾ ಮುಖ್ಯ ಕಾರ್ಯನಿರ್ವಾಹಕನು ಅಥವಾ ಯಾರೇ ಇತರ ನೌಕರನು ಹುದ್ದೆಯ ಪ್ರಭಾರವನ್ನು ವಹಿಸಿಕೊಳ್ಳುವುದಕ್ಕಾಗಿ ಸಹಕಾರ ಸಂಘದ ಅಗತ್ಯ ದಾಖಲೆಗಳನ್ನು ಮತ್ತು ಸ್ವತ್ತುಗಳನ್ನು ದೊರೆಯುವಂತೆ ಮಾಡದಿದ್ದರೆ (1), (2) ಮತ್ತು (3)ನೇ ಉಪ-ಪ್ರಕರಣಗಳ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕುದು.][1]

ಅಧ್ಯಾಯ- V

ಸಹಕಾರ ಸಂಘಗಳ ವಿಶೇಷಾಧಿಕಾರಗಳು

32. ಕೆಲವು ಸ್ವತ್ತುಗಳ ಮೇಲೆ ಸಹಕಾರ ಸಂಘದ ಪ್ರಥಮ ಭಾರ.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಅದರ ಭೂ ಕಂದಾಯದ ಅಥವಾ ಭೂ ಕಂದಾಯದಂತೆ ವಸೂಲೀಯವಾದ ಯಾವುದೇ ಹಣದ ಸಂಬಂಧದಲ್ಲಿ ಸರ್ಕಾರದ ಯಾವುದೇ ಆದ್ಯ ಕ್ಲೇಮಿಗೊಳಪಟ್ಟು, ಯಾರೇ ಸದಸ್ಯನಿಂದ ಅಥವಾ ಹಿಂದಿನ ಸದಸ್ಯನಿಂದ ಅಥವಾ ಮೃತ ಸದಸ್ಯನಿಂದ ಸಹಕಾರ ಸಂಘಕ್ಕೆ ಸಲ್ಲಬೇಕಾಗಿರುವ ಯಾವುದೇ ಋಣ ಅಥವಾ ಬಾಕಿ ಉಳಿದ ತಗಾದೆಗೆ ಸಂಬಂಧಿಸಿದಂತೆ ಸಂದರ್ಭಾನುಸಾರ ಅಂಥ ಸದಸ್ಯನಿಗೆ ಅಥವಾ ಹಿಂದಿನ ಸದಸ್ಯನಿಗೆ ಸೇರಿದ ಅಥವಾ ಮೃತ ಸದಸ್ಯನ ಎಸ್ಟೇಟಿನ ಭಾಗವಾಗಿರುವ ಬೆಳೆಗಳು ಮತ್ತು ಇತರ ಕೃಷಿ ಉತ್ಪನ್ನಗಳು, ದನಗಳು, ದನಗಳ ಮೇವು, ಕೃಷಿ ಅಥವಾ ಕೈಗಾರಿಕೆಯ ಉಪಕರಣಗಳು ಅಥವಾ ಯಂತ್ರ ಸಾಮಗ್ರಿಗಳು, ತಯಾರಿಕೆಯ ಕಚ್ಚಾ ಸಾಮಗ್ರಿಗಳು ಮತ್ತು ಅಂಥ ಕಚ್ಚಾ ಸಾಮಗ್ರಿಯಿಂದ ತಯಾರಿಸಲಾದ ಉತ್ಪಾದನೆಗಳು

(2) ಭಾರವನ್ನು ಹೊಂದಿರುವ ಸಹಕಾರ ಸಂಘದ ಲಿಖಿತ ಪೂರ್ವಾನುಮತಿಯನ್ನು ಪಡೆದ ಹೊರತು ಯಾರೇ ವ್ಯಕ್ತಿಯು, (1)ನೇ ಉಪಕರಣದ ಮೇರೆಗೆ ಭಾರಕ್ಕೆ ಒಳಪಟ್ಟಿರುವ ಸ್ವತ್ತನ್ನು ವರ್ಗಾಯಿಸತಕ್ಕುದಲ್ಲ.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸಿ ಮಾಡಿದ ಸ್ವತ್ತಿನ ಯಾವುದೇ ವರ್ಗಾವಣೆಯು ಶೂನ್ಯವಾಗತಕ್ಕುದು.

(4) (1)ನೇ ಉಪಪ್ರಕರಣದ ಮೇರೆಗೆ ಸೃಜಿಸಲಾದ ಭಾರವು, ಸಂಘವು ಮಂಜೂರು ಮಾಡಿದ ಸಾಲದ ತರುವಾಯ [1][ಕರ್ನಾಟಕ ಭೂ ಸುಧಾರಣಾ ಸಾಲಗಳ ಅಧಿನಿಯಮ, 1963 ಅಥವಾ ಕರ್ನಾಟಕ ಕೃಷಿಕರ ಸಾಲಗಳ ಅಧಿನಿಯಮ, 1963][1] ಇದರ ಮೇರೆಗೆ ಮಂಜೂರು ಮಾಡಿದ ಸಾಲದಿಂದ ಉದ್ಭವಿಸಿದ ಸರ್ಕಾರದ ಯಾವುದೇ ಕ್ಲೇಮಿಗೆ ಲಭ್ಯವಾಗತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

33. ಕೆಲವು ಸಹಕಾರ ಸಂಘಗಳಿಂದ ಸಾಲ ಪಡೆದ ಸದಸ್ಯರ ಒಡೆತನದಲ್ಲಿರುವ ಅಥವಾ ಸದಸ್ಯರು ಗೇಣಿದಾರರಾಗಿ ಧಾರಣ ಮಾಡಿರುವ ಭೂಮಿಗಳ ಮೇಲಣ ಭಾರ.- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮದಲ್ಲಿ ಏನೇ ಇದ್ದರೂ,-

(i) ತಾನು ಸದಸ್ಯನಾಗಿರುವ ಸಂಘಕ್ಕೆ ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಯಾರೇ ವ್ಯಕ್ತಿಯು, ಅವನು ಯಾವುದೇ ಭೂಮಿಯ ಒಡೆತನ ಹೊಂದಿದ್ದರೆ ಅಥವಾ ಗೇಣಿದಾರನಾಗಿ ಯಾವುದೇ ಭೂಮಿಯನ್ನು ಧಾರಣ ಮಾಡಿದ್ದರೆ, ನಿಯಮಿಸಲಾದ ನಮೂನೆಯಲ್ಲಿ ಒಂದು ಘೋಷಣೆಯನ್ನು ಮಾಡತಕ್ಕುದು. ಅಂಥ ಘೋಷಣೆಯು, ಸಾಲದ ಅರ್ಜಿಗೆ ಅನುಸಾರವಾಗಿ ಸಂಘವು ಸದಸ್ಯನಿಗೆ ಕೊಡಬಹುದಾದ ಸಾಲದ ಸಂದಾಯದ ಬಗ್ಗೆ ಮತ್ತು ಸದಸ್ಯನಿಗೆ ಅಗತ್ಯವಾದ, ಸಂಘವು ನಿರ್ಧರಿಸಬಹುದಾದಂಥ ಗರಿಷ್ಠ ಮಿತಿಗೆ ಒಳಪಟ್ಟು ಅಂಥ ಸದಸ್ಯನಾಗಿರುವ ಅವನಿಗೆ ಸಂಘವು ನೀಡಬಹುದಾದ ಮುಂದಿನ ಎಲ್ಲಾ ಮುಂಗಡಗಳ ಬಗ್ಗೆ, ಆ ಸಾಲ ಮತ್ತು ಮುಂಗಡಗಳ ಅಂಥ ಮೊಬಲಗಿನ ಮೇಲಣ ಬಡ್ಡಿಯೊಂದಿಗೆ, ಅರ್ಜಿದಾರನು ಆ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ತಾನು ಒಡೆತನ ಹೊಂದಿರುವ ಭೂಮಿಯ ಮೇಲೆ ಅಥವಾ ಗೇಣಿದಾರನಾಗಿ ತಾನು ಹೊಂದಿರುವ ಭೂಮಿಯಲ್ಲಿನ ಅವನ ಹಿತಾಸಕ್ತಿಯ ಮೇಲೆ ಭಾರವನ್ನು ಸೃಜಿಸುವುದಾಗಿ ತಿಳಿಸತಕ್ಕುದು;

(ii) (i)ನೇ ಖಂಡದ ಮೇರೆಗೆ ಮಾಡಿದ ಘೋಷಣೆಯನ್ನು ಯಾವ ಸಹಕಾರ ಸಂಘದ ಪರವಾಗಿ ಅಂಥ ಭಾರವನ್ನು ಸೃಜಿಸಲಾಗಿದೆಯೋ ಅದರ ಸಮ್ಮತಿಯಿಂದ ಸದಸ್ಯನು ಯಾವುದೇ ಸಮಯದಲ್ಲಿ ವ್ಯತ್ಯಾಸಗೊಳಿಸಬಹುದು;

(iii) ಯಾರೇ ಸದಸ್ಯನು, (i)ನೇ ಖಂಡದ ಮೇರೆಗೆ ಮಾಡಿದ ಅಥವಾ (ii)ನೇ ಖಂಡದ ಮೇರೆಗೆ ವ್ಯತ್ಯಾಸಗೊಳಿಸಿದ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಇಡೀ ಭೂಮಿಯನ್ನು ಅಥವಾ ಆ ಭೂಮಿಯ ಯಾವುದೇ ಭಾಗವನ್ನು ಅಥವಾ ಅದರಲ್ಲಿ ಅವನ ಹಿತಾಸಕ್ತಿಯನ್ನು ಸದಸ್ಯನು ತೆಗೆದುಕೊಂಡ ಸಾಲದ ಇಡೀ ಮೊಬಲಗನ್ನು ಅದರ ಮೇಲಣ ಬಡ್ಡಿಯೊಂದಿಗೆ ಪೂರ್ಣವಾಗಿ ಸಂದಾಯಮಾಡುವವರೆಗೆ ಪರಭಾರೆ ಮಾಡತಕ್ಕುದಲ್ಲ:

ಪರಂತು, ಅಂಥ ಯಾವುದೇ ಭೂಮಿಯಲ್ಲಿನ ಬೆಳೆಯನ್ನು ಸಂಘದ ಲಿಖಿತ ಪೂರ್ವಾನುಮತಿಯನ್ನು ಪಡೆದು ಪರಭಾರೆ ಮಾಡಬಹುದು:

[1][ಮತ್ತೂ ಪರಂತು, ಸದಸ್ಯನು ಅಂಥ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ರಾಜ್ಯ ಸರ್ಕಾರದ ಅಥವಾ [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][2] ಹೆಸರಿಗೆ ಅಡಮಾನ ಮಾಡುವುದು ಕಾನೂನು ಸಮ್ಮತವಾಗಿರತಕ್ಕುದು:

ಅಲ್ಲದೆ ಪರಂತು ಸದಸ್ಯನೊಬ್ಬನು, ಸಾಲ ತೆಗೆದುಕೊಂಡ ಮೊಬಲಗಿನ ಒಂದು ಭಾಗವನ್ನು ಸಂದಾಯ ಮಾಡಿದ್ದರೆ, ಸಹಕಾರ ಸಂಘವು ತಾನು ಋಣಿಯಾಗಿರಬಹುದಾದ ಹಣಕಾಸು ನೀಡಿಕೆ ಬ್ಯಾಂಕಿನ ಅನುಮೋದನೆಯೊಂದಿಗೆ, ಸದಸ್ಯನ ಅರ್ಜಿಯ ಮೇಲೆ, (i)ನೇ ಖಂಡದ ಮೇರೆಗೆ ಮಾಡಲಾದ ಅಥವಾ (ii)ನೇ ಖಂಡದ ಮೇರೆಗೆ ವ್ಯತ್ಯಾಸಗೊಳಿಸಿದ ಘೋಷಣೆಯ ಮೂಲಕ ಸೃಜಿಸಿದ ಭಾರದಿಂದ, ಅದು ಸೂಕ್ತವೆಂದು ಭಾವಿಸಬಹುದಾದಂತೆ ಆ ಘೋಷಣೆಯಲ್ಲಿ

ನಿರ್ದಿಷ್ಟಪಡಿಸಿದ ಭೂಮಿಯ ಅಂಥ ಭಾಗವನ್ನು ಅಥವಾ ಭೂಮಿಯಲ್ಲಿನ ಹಿತಾಸಕ್ತಿಯನ್ನು, ಸದಸ್ಯನಿಂದ ಬಾಕಿ ಇರುವ ಸಾಲದ ಮೊಬಲಗಿನ ಶಿಲ್ಕಿನ ಬಗ್ಗೆ ಭದ್ರತೆಗಾಗಿ ತಕ್ಕ ಗಮನ ನೀಡಿ ಮುಕ್ತಗೊಳಿಸಬಹುದು;][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iv) (iii)ನೇ ಖಂಡದ ಉಪಬಂಧಗಳನ್ನು ಉಲ್ಲಂಘಿಸಿ ಮಾಡಲಾದ ಯಾವುದೇ ಪರಭಾರೆಯು ಶೂನ್ಯವಾಗತಕ್ಕುದು;

(iv) ಭೂಕಂದಾಯದ ಅಥವಾ ಭೂಕಂದಾಯದಂತೆ ವಸೂಲೀಯವಾದ ಯಾವುದೇ ಹಣಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕಿರುವ ಆದ್ಯ ಕ್ಲೇಮಿಗೆ ಮತ್ತು ಸಂಘವು ಸಾಲ ಮಂಜೂರು ಮಾಡಿದ ದಿನಾಂಕಕ್ಕೆ ಮುಂಚೆ ಭೂಮಿಯನ್ನು ಅಥವಾ ಅದರಲ್ಲಿರುವ ಹಿತಾಸಕ್ತಿಯನ್ನು ಯಾವ ವ್ಯಕ್ತಿಗೆ ಪರಭಾರೆ ಮಾಡಿ, ಅದನ್ನು ಯುಕ್ತವಾಗಿ ನೋಂದಾಯಿಸಲಾಗಿದೆಯೋ ಆ ಯಾರೇ ವ್ಯಕ್ತಿಯ ಆದ್ಯ ಕ್ಲೇಮಿಗೆ ಒಳಪಟ್ಟು, ಸಾಲದ ಸಂಬಂಧದಲ್ಲಿ ಅವನಿಂದ ಬಾಕಿಯಿರುವ ಮೊಬಲಗಿಗೆ ಮತ್ತು ಅಷ್ಟರಮಟ್ಟಿಗೆ (i)ನೇ ಖಂಡದ ಮೇರೆಗೆ ಮಾಡಿದ ಅಥವಾ (ii)ನೇ ಖಂಡದ ಮೇರೆಗೆ ವ್ಯತ್ಯಾಸಗೊಳಿಸಿದ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿರುವ ಭೂಮಿ ಅಥವಾ ಭೂಮಿಯಲ್ಲಿನ ಹಿತಾಸಕ್ತಿಯ ಮೇಲೆ, ಆ ಸಂಘವು ಮೊದಲ ಭಾರವನ್ನು ಹೊಂದಿರತಕ್ಕುದು.

(2) [1][ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರಲ್ಲಿ (1964ರ ಕರ್ನಾಟಕ ಅಧಿನಿಯಮ 12)][1] ಏನೇ ಇದ್ದರೂ,-

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ಸದರಿ ಅಧಿನಿಯಮದ ಮೇರೆಗೆ ಇಟ್ಟಿರುವ ಹಕ್ಕುಗಳ ದಾಖಲಾತಿಯು, (1)ನೇ ಉಪಪ್ರಕರಣದ ಮೇರೆಗೆ ಸೃಜಿಸಿದ ಭೂಮಿಯ ಅಥವಾ ಭೂಮಿಯಲ್ಲಿನ ಹಿತಾಸಕ್ತಿಯ ಮೇಲಣ ಪ್ರತಿಯೊಂದು ಭಾರದ ವಿವರಗಳನ್ನು ಸಹ ಒಳಗೊಂಡಿರತಕ್ಕುದು;

(ii) (1)ನೇ ಉಪಪ್ರಕರಣದ ಮೇರೆಗೆ ಯಾವ ಸಂಘದ ಹೆಸರಿಗೆ ಭಾರವನ್ನು ಸೃಜಿಸಲಾಗಿದೆಯೋ ಆ ಸಹಕಾರ ಸಂಘವು ಭಾರದ ವಿವರಗಳನ್ನು ಮತ್ತು ಸಾಲ ಚುಕ್ತಾ ಆದಾಗ ಆ ಭಾರವು ಕೊನೆಗೊಂಡ ವಿಷಯವನ್ನು ಡೆಪ್ಯುಟಿ ಕಮೀಷನರನಿಗೆ ಅಥವಾ ನಿಯಮಿಸಲಾದ ಅಧಿಕಾರಿಗೆ ತಿಳಿಸತಕ್ಕುದು ಮತ್ತು ಅವನು ಹಕ್ಕುಗಳ ದಾಖಲಾತಿಯಲ್ಲಿ ಅವಶ್ಯಕ ನಮೂದುಗಳನ್ನು ಮಾಡಿಸತಕ್ಕುದು;

(iii) (i)ನೇ ಮತ್ತು (ii)ನೇ ಖಂಡಗಳ ಉದ್ದೇಶಗಳನ್ನು ನೆರವೇರಿಸಲು ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ,-

(1) `ಭೂಮಿ' ಎಂದರೆ [1][(ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)][1] ಇದು ಅನ್ವಯವಾಗುವ ಭೂಮಿ; ಮತ್ತು

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) `ಸಹಕಾರ ಸಂಘ' ಎಂದರೆ ಯಾವ ಸಹಕಾರ ಸಂಘದ ಬಹುತೇಕ ಸದಸ್ಯರು ಕೃಷಿಕರಾಗಿದ್ದು, ಅದು,-

(ಎ) ತನ್ನ ಸದಸ್ಯರಿಗೆ ಸಾಲ ದೊರಕಿಸುವುದೇ ಪ್ರಾಥಮಿಕ ಉದ್ದೇಶವಾಗಿರುವ ಪತ್ತಿನ ಸಂಘವಾಗಿರುವ; ಅಥವಾ

(ಬಿ) ರಾಜ್ಯ ಸರ್ಕಾರವು ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಿದ ಇತರ ಯಾವುದೇ ವರ್ಗದ ಸಂಘವಾಗಿರುವ

- ಸಹಕಾರ ಸಂಘ.

34. ಕೆಲವು ಸಂದರ್ಭಗಳಲ್ಲಿ ಸಂಘದ ಕ್ಲೇಮನ್ನು ವೇತನದಿಂದ ಕಳೆದುಕೊಳ್ಳುವುದು.- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಹಕಾರ ಸಂಘದ ಸದಸ್ಯನು, ತನ್ನ ನಿಯೋಜಕನು ತನಗೆ ಸಂದಾಯ ಮಾಡಬೇಕಾದ ಸಂಬಳ ಅಥವಾ ಮಜೂರಿಯಿಂದ, ಒಪಂಪ್ಪದ ಪತ್ರದಲ್ಲಿ ನಿರ್ದಿಷ್ಟಪಡಿಸಬಹುದಾದ ಮೊಬಲಗನ್ನು ಕಳೆದುಕೊಳ್ಳಲು ಮತ್ತು ಹಾಗೆ ಕಳೆದುಕೊಂಡ ಮೊಬಲಗನ್ನು ಆ ಸದಸ್ಯನಿಂದ ಸಂಘಕ್ಕೆ ಸಲ್ಲಬೇಕಾದ ಯಾವುದೇ ಋಣ ಅಥವಾ ಇತರ ತಗಾದೆಯ ತೀರಿಕೆಯಲ್ಲಿ ಸಂಘಕ್ಕೆ ಸಂದಾಯಮಾಡಲು ಸಕ್ಷಮನಾಗಿರುತ್ತಾನೆಂದು ಸಂಘಕ್ಕೆ ಒಂದು ಒಪಂಪ್ಪದ ಪತ್ರವನ್ನು ಬರೆದುಕೊಡಬಹುದು.

[1][ಪರಂತು, ತನ್ನ ಸಂಬಳ ಅಥವಾ ಮಂಜೂರಿಯಿಂದ ಮುರುಗಡೆ ಮಾಡಿಕೊಳ್ಳಲು ಒಪ್ಪುವ ಉದ್ಯೋಗಿಯಿಂದ ಲಿಖಿತದಲ್ಲಿ ಪೂರ್ವ ಸಮ್ಮತಿಯನ್ನು ನಿಯೋಜಕನು ಪಡೆಯತಕ್ಕದ್ದು;

ಮತ್ತು ಪರಂತು, ಉದ್ಯೋಗಿಯ ಹೊಣೆಗಾರಿಕೆಯು ಅವರ ಸಂಬಳದಿಂದ ಆಗುವ ಎಲ್ಲ ಒಟ್ಟು ಮುರುಗಡೆಗಳು ಸೇರಿದಂತೆ ಉದ್ಯೋಗಿಯ ಸಂಬಳದ ಶೇಕಡಾ ಐವತ್ತರಷ್ಟನ್ನು ಮೊಬಲಗಿನ ಮುರುಗಡೆಯ ಮಟ್ಟಿಗೆ ಸೀಮಿತವಾಗಿರತಕ್ಕದ್ದು:

ಅಲ್ಲದೆ ಪರಂತು, ಸಹಕಾರ ಸಂಘದ ಮಂಡಳಿಯು, ಸಾಲದ ಮೇಲಿನ ಬಡ್ಡಿಯ ಜೊತೆಗೆ ಸಾಲದ ಕಂತುಗಳ ನಿಮಿತ್ತ ಮಾಡುವ ಮುರುಗಡೆಗಳನ್ನು ಸೇರಿದಂತೆ ಎಲ್ಲ ಒಟ್ಟು ಮುರುಗಡೆಗಳು ಉದ್ಯೋಗಿಯ ಸಂಬಳದ ಶೇಕಡಾ ಐವತ್ತರಷ್ಟನ್ನು ಮೀರತಕ್ಕದ್ದಲ್ಲ ಎಂಬ ರೀತಿಯಲ್ಲಿ

ಉದ್ಯೋಗಿಗೆ ಮಂಜೂರು ಮಾಡಬೇಕಾದ ಸಾಲದ ಮೊಬಲಗನ್ನು ಮತ್ತು ಕಂತುಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಒಪಂಪ್ಪದಪತ್ರವನ್ನು ಬರೆದುಕೊಟ್ಟ ತರುವಾಯ ನಿಯೋಜಕನು, ಸಹಕಾರ ಸಂಘವು ಒಪಂಪ್ಪದಕ್ಕೆ ಅನುಸಾರವಾಗಿ ಕಳೆತಗಳನ್ನು ಮಾಡಬೇಕೆಂದು ಮತ್ತು ಹಾಗೆ ಕಳೆದ ಮೊಬಲಗನ್ನು, ಅದನ್ನು ಕಳೆದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಸಂಘಕ್ಕೆ ಸಂದಾಯಮಾಡಬೇಕೆಂದು ಲಿಖಿತ ಕೋರಿಕೆಯ ಮೂಲಕ ಅಗತ್ಯಪಡಿಸಿದರೆ ಮತ್ತು ಅಂಥ ಋಣ ಅಥವಾ ತಗಾದೆ ಅಥವಾ ಅದರ ಯಾವುದೇ ಭಾಗವು ಸಂದಾಯವಾಗದೆ ಉಳಿದಿರುವವರೆಗೆ, ಹಾಗೆ ಮಾಡಬಹುದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಸಂವಿಧಾನದ 366ನೇ ಅನುಚ್ಛೇದದಲ್ಲಿ ಪರಿಭಾಷಿಸಿರುವಂತೆ ರೈಲ್ವೆಯಲ್ಲಿ, ಗಣಿಗಳಲ್ಲಿ ಮತ್ತು ತೈಲ ಕ್ಷೇತ್ರಗಳಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ಅನ್ವಯವಾಗತಕ್ಕುದಲ್ಲ.

35. ಸಹಕಾರ ಸಂಘದ ಷೇರುಗಳ ಅಥವಾ ಬಂಡವಾಳದಲ್ಲಿ ಸದಸ್ಯರ ಹಿತಾಸಕ್ತಿಯ ಸಂಬಂಧದಲ್ಲಿ ಭಾರ ಮತ್ತು ವಜಾವಟ್ಟು.- ಸಹಕಾರ ಸಂಘಕ್ಕೆ ಸಲ್ಲಬೇಕಾಗಿರುವ ಋಣದ ಅಥವಾ ಬಾಕಿ ತಗಾದೆಯ ಸಂಬಂಧದಲ್ಲಿ, ಸದಸ್ಯನ ಅಥವಾ ಹಿಂದಿನ ಸದಸ್ಯನ ಷೇರು, ಅಥವಾ ಬಂಡವಾಳದಲ್ಲಿನ ಹಿತಾಸಕ್ತಿಯ ಮೇಲೆ ಅಥವಾ ಠೇವಣಿಯ ಮೇಲೆ ಅಥವಾ ಸದಸ್ಯನಿಗೆ ಅಥವಾ ಹಿಂದಿನ ಸದಸ್ಯನಿಗೆ ಸಂದಾಯಮಾಡಬೇಕಾದ ಲಾಭಾಂಶ, ಬೋನಸ್ಸು ಅಥವಾ ಲಾಭಗಳ ಮೇಲೆ ಸಹಕಾರ ಸಂಘವು ಭಾರವನ್ನು ಹೊಂದಿರತಕ್ಕುದು ಮತ್ತು ಅಂಥ ಯಾವುದೇ ಋಣ ಅಥವಾ ಬಾಕಿ ತಗಾದೆಯ ಸಂದಾಯದ ಬಗ್ಗೆ ಸದಸ್ಯನ ಲೆಕ್ಕಕ್ಕೆ ಜಮೆ ಮಾಡಿದ ಅಥವಾ ಸಂದಾಯಮಾಡಬೇಕಾದ ಯಾವುದೇ ಮೊತ್ತದಿಂದ ವಜಾವಟ್ಟು ಮಾಡಿಕೊಳ್ಳಬಹುದು:

ಪರಂತು, ಸಹಕಾರ ಸಂಘವು ಯಾವ ಹಣಕಾಸು ನೀಡಿಕೆ ಬ್ಯಾಂಕಿಗೆ ಸಂಯೋಜಿತವಾಗಿದೆಯೋ ಆ ಹಣಕಾಸು ನೀಡಿಕೆ ಬ್ಯಾಂಕು, ಆ ಹಣಕಾಸು ನೀಡಿಕೆ ಬ್ಯಾಂಕಿನಲ್ಲಿ ಸಂಘವು ಮೀಸಲು ನಿಧಿಯಾಗಿ ಇಟ್ಟ ಯಾವುದೇ ಮೊತ್ತದ ಮೇಲೆ, ಆ ಬ್ಯಾಂಕು ಸಂಘದ ಏಕೈಕ ಲೇಣೇದಾರ ಬ್ಯಾಂಕು ಆಗಿರದಿದ್ದರೆ ಭಾರವನ್ನು ಹೊಂದಿರತಕ್ಕುದಲ್ಲ ಅಥವಾ ಅಂಥ ಸಂಘದಿಂದ ಬಾಕಿ ಇರುವ ಯಾವುದೇ ಋಣದ ಬಗ್ಗೆ ಸಂಘದ ಲೆಕ್ಕಕ್ಕೆ ಜಮೆ ಮಾಡಿದ ಅಥವಾ ಸಂದಾಯ ಮಾಡಬೇಕಾದ ಯಾವುದೇ ಮೊತ್ತದಿಂದ ವಜಾವಟ್ಟು ಮಾಡಿಕೊಳ್ಳಲು ಹಕ್ಕು ಹೊಂದಿರತಕ್ಕುದಲ್ಲ.

36. ಷೇರುಗಳು ಅಥವಾ ಹಿತಾಸಕ್ತಿಗಳು ಜಪ್ತಿಗೆ ಒಳಪಡತಕ್ಕುದಲ್ಲ.- 35ನೆಯ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸಹಕಾರ ಸಂಘದ ಬಂಡವಾಳದಲ್ಲಿರುವ ಸದಸ್ಯನ ಷೇರು

ಅಥವಾ ಹಿತಾಸಕ್ತಿಯು, ಅಂಥ ಸದಸ್ಯನು ಅಥವಾ ಹಿಂದಿನ ಸದಸ್ಯನು ಮಾಡಿರುವ ಯಾವುದೇ ಋಣ ಅಥವಾ ಹೊಣೆಯ ಸಂಬಂಧದಲ್ಲಿ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದ ಮೇರೆಗೆ ಜಪ್ತಿಗೆ ಅಥವಾ ಮಾರಾಟಕ್ಕೆ ಒಳಪಡತಕ್ಕುದಲ್ಲ ಮತ್ತು ದಿವಾಳಿಗೆ

ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ ದಿವಾಳಿ ಆಸ್ತಿಕರು ಅಧಿಕಾರಿ ಅಥವಾ ರಿಸೀವರನು ಅಂಥ ಷೇರು ಅಥವಾ ಹಿತಾಸಕ್ತಿಗೆ ಹಕ್ಕು ಹೊಂದಿರತಕ್ಕುದಲ್ಲ ಅಥವಾ ಅದರ ಮೇಲೆ ಯಾವುದೇ ಕ್ಲೇಮನ್ನು ಹೊಂದಿರತಕ್ಕುದಲ್ಲ.

37. ಕೆಲವು ತೆರಿಗೆಗಳು, ಸುಂಕಗಳು ಮತ್ತು ಫೀಜುಗಳಿಂದ ವಿನಾಯಿತಿ.- ರಾಜ್ಯಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯಕವೆಂದು ಅಭಿಪ್ರಾಯಪಟ್ಟರೆ, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಯಾವುದೇ ವರ್ಗದ ಸಹಕಾರ ಸಂಘಗಳ ಸಂಬಂಧದಲ್ಲಿ,-

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ [1][ಕರ್ನಾಟಕ][1] ಕೃಷಿ ಆದಾಯ ತೆರಿಗೆ ಅಧಿನಿಯಮ, 1957ರ (1957ರ [1][ಕರ್ನಾಟಕ][1] ಅಧಿನಿಯಮ 22) ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(ಬಿ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25)ರ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆ;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಸಿ) ತತ್ಕಾಲದಲ್ಲಿ ಜಾರಿಯಲ್ಲಿರುವ [1][ಕರ್ನಾಟಕ][1] ಸ್ಟಾಂಪು ಅಧಿನಿಯಮ, 1957 (1957ರ [1][ಕರ್ನಾಟಕ][1] ಅಧಿನಿಯಮ 34)ರ ಮೇರೆಗೆ ಸಹಕಾರ ಸಂಘವು ಅಥವಾ ಅದರ ಅಧಿಕಾರಿ ಅಥವಾ ಸದಸ್ಯನು ಬರೆದುಕೊಟ್ಟ ಮತ್ತು ಅಂಥ ಸಂಘದ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ಲಿಖಿತದ ಅಥವಾ ಅಂಥ ಲಿಖಿತಗಳ ಯಾವುದೇ ವರ್ಗದ ಮೇಲೆ, ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಐತೀರ್ಪು ಅಥವಾ ಆದೇಶದ ಸಂಬಂಧದಲ್ಲಿ ವಿಧಿಸಬಹುದಾದ ಸುಂಕಗಳು;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ [1][ಕರ್ನಾಟಕ][1] ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958ರ (1958ರ [1][ಕರ್ನಾಟಕ][1] ಅಧಿನಿಯಮ 16) ಮೇರೆಗೆ ಯಾವುದೇ ದಸ್ತಾವೇಜಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜುಗಳು;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಇ) ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತ ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ xvi) ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಫೀಜು

-ಇವುಗಳನ್ನು ಕಡಿಮೆ ಮಾಡಬಹುದು ಅಥವಾ ಇವುಗಳಿಗೆ ವಿನಾಯಿತಿ ನೀಡಬಹುದು.

38. ಕಡ್ಡಾಯ ನೋಂದಣಿಯಿಂದ ಲಿಖಿತಗಳ ವಿನಾಯಿತಿ.- ಭಾರತ ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ XVI) 17ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಮತ್ತು (ಸಿ) ಖಂಡದಲ್ಲಿರುವುದು ಯಾವುದೂ,-

(ಎ) ಸಹಕಾರ ಸಂಘದ ಆಸ್ತಿಯು ಪೂರ್ಣವಾಗಿ ಅಥವಾ ಭಾಗಶಃ ಸ್ಥಿರ ಸ್ವತ್ತನ್ನೊಳಗೊಂಡಿದ್ದರೂ, ಆ ಸಂಘದ ಷೇರುಗಳಿಗೆ ಸಂಬಂಧಿಸಿದ ಯಾವುದೇ ಲಿಖಿತಕ್ಕೆ;

(ಬಿ) ಸಂಘವು ತನ್ನ ಇಡೀ ಸ್ಥಿರ ಸ್ವತ್ತನ್ನು ಅಥವಾ ಅದರ ಭಾಗವನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಡಿಬೆಂಚರುಧಾರಕರ ಪ್ರಯೋಜನಕ್ಕಾಗಿ ನ್ಯಾಸವಾಗಿ ನ್ಯಾಸಧಾರಿಗಳಿಗೆ ಅಡಮಾನ ಮಾಡಿದ, ಹಸ್ತಾಂತರಿಸಿದ ಅಥವಾ ಅನ್ಯಥಾ ವರ್ಗಾಯಿಸಿದ ನೋಂದಾಯಿತ ಲಿಖಿತವು ಒದಗಿಸಿದ ಭದ್ರತೆಗೆ ಅದು ಧಾರಕನನ್ನು ಹಕ್ಕುದಾರನನ್ನಾಗಿಸುವಷ್ಟು ಮಟ್ಟಿಗೆ ಹೊರತು, ಅಂಥ ಯಾವುದೇ ಸಂಘವು ಹೊರಡಿಸಿದ ಮತ್ತು ಸ್ಥಿರ ಸ್ವತ್ತಿನಲ್ಲಿ ಯಾವುದೇ ಅಧಿಕಾರ, ಹಕ್ಕು ಅಥವಾ ಹಿತಾಸಕ್ತಿಯನ್ನು ಸೃಜಿಸಿದ, ಘೋಷಿಸದ, ವಹಿಸಿಕೊಡದ, ಮಿತಗೊಳಿಸದ ಅಥವಾ ಅಂತ್ಯಗೊಳಿಸದ ಯಾವುದೇ ಡಿಬೆಂಚರುಗಳಿಗೆ;

(ಸಿ) ಅಂಥ ಯಾವುದೇ ಸಂಘವು ಹೊರಡಿಸಿದ ಯಾವುದೇ ಇತರ ಡಿಬೆಂಚರಿನ ಹಿಂಬರಹಕ್ಕೆ ಅಥವಾ ವರ್ಗಾವಣೆಗೆ

-ಅನ್ವಯವಾಗತಕ್ಕುದಲ್ಲ:

[1][ಪರಂತು, ಲಿಖಿತಗಳ ಕಡ್ಡಾಯ ನೋಂದಣಿ ವಿನಾಯಿತಿಯು, ಈ ಅಧಿನಿಯಮದ ಮೇರೆಗೆ, ನೋಂದಾಯಿತ ಗೃಹನಿರ್ಮಾಣ ಸಹಕಾರ ಸಂಘ ಅಥವಾ ಅದರ ಹೆಸರಿನಲ್ಲಿ ಬರೆದುಕೊಟ್ಟ ಸ್ಥಿರಸ್ವತ್ತಿನ ಹಕ್ಕು ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ವರ್ಗಾಯಿಸಲು ಉದ್ದೇಶಿಸಿರುವ ಅಥವಾ ವರ್ಗಾಯಿಸುತ್ತಿರುವ ಲಿಖಿತಗಳಿಗೆ ಅನ್ವಯವಾಗತಕ್ಕುದಲ್ಲ.][1]

1. 2001ರ ಅಧಿನಿಯಮ ಸಂಖ್ಯೆ 6ರ ಮೂಲಕ 1.4.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

39. ಸಹಕಾರ ಸಂಘಗಳ ಪರವಾಗಿ ಬರೆದುಕೊಡಲಾದ ದಸ್ತಾವೇಜುಗಳ ನೋಂದಣಿ.- (1) ಭಾರತ ನೋಂದಣಿ ಅಧಿನಿಯಮ, 1908ರಲ್ಲಿ, (1908ರ ಕೇಂದ್ರ ಅಧಿನಿಯಮ xvi) ಏನೇ ಇದ್ದರೂ, ಸಹಕಾರ ಸಂಘದ ಸಮಿತಿಯ ಯಾರೇ ಸದಸ್ಯನು, [1][ಮುಖ್ಯ ಕಾರ್ಯನಿರ್ವಾಹಕನು][1] ಅಥವಾ [1][ಸಹಕಾರ ಸಂಘದ ಇತರ ಪದಾಧಿಕಾರಿಯು][1] ಅಥವಾ ಸಹಕಾರ ಇಲಾಖೆಯ ಯಾರೇ ಅಧಿಕಾರಿಯು, ಸಹಕಾರ ಸಂಘದ ಪರವಾಗಿ ತನ್ನ ಅಧಿಕಾರ ಸ್ಥಾನದಿಂದ

ಬರೆದುಕೊಟ್ಟ ಯಾವುದೇ ಲಿಖಿತದ ನೋಂದಣಿಗೆ ಸಂಬಂಧಿಸಿದ ಯಾವುದೇ ವ್ಯವಹರಣೆಯಲ್ಲಿ ಯಾವುದೇ ನೋಂದಣಿ ಕಚೇರಿಯಲ್ಲಿ ಆ ಅಧಿನಿಯಮದ 58ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಖುದ್ದಾಗಿ ಅಥವಾ ಏಜೆಂಟನ ಮೂಲಕ ಹಾಜರಾಗುವುದು ಅಥವಾ ಸಹಿ ಮಾಡುವುದು ಅವಶ್ಯವಾಗಿರತಕ್ಕುದಲ್ಲ.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಯಾವುದೇ ಲಿಖಿತವನ್ನು ಹಾಗೆ ಬರೆದುಕೊಟ್ಟಿದ್ದು, ಅದನ್ನು ನೋಂದಣಿಯ ಸಲುವಾಗಿ ಯಾವ ನೋಂದಣಿ ಅಧಿಕಾರಿಗೆ ಹಾಜರುಪಡಿಸಲಾಗಿದೆಯೋ, ಆ ಅಧಿಕಾರಿಯು ಸೂಕ್ತವೆಂದು ಭಾವಿಸಿದರೆ ಅದನ್ನು ಅದಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಅಂಥ ಸದಸ್ಯನಿಗೆ, ಕಾರ್ಯದರ್ಶಿಗೆ ಅಥವಾ ಅಧಿಕಾರಿಗೆ ಕಳುಹಿಸಬಹುದು ಮತ್ತು ಅದನ್ನು ಬರೆದುಕೊಟ್ಟಿರುವ ಬಗ್ಗೆ ಮನದಟ್ಟು ಮಾಡಿಕೊಂಡ ತರುವಾಯ ಆ ಲಿಖಿತವನ್ನು ನೋಂದಾಯಿಸತಕ್ಕುದು.

[1][ಅಧ್ಯಾಯ VŠJ

ಸಹಕಾರ ಸಂಘಗಳ ಸಮಿತಿಗಳ ಸದಸ್ಯರ ಚುನಾವಣೆ

[2][**39ಎ ಚುನಾವಣೆಗಳನ್ನು ನಡೆಸುವುದು.-** (1) ಯಾವುದೇ ಆಕಸ್ಮಿಕ ಖಾಲಿ ಸ್ಥಾನವೂ ಸೇರಿದಂತೆ ಒಟ್ಟು ಒಂದು ಸಹಕಾರ ಸಂಘದ ಮಂಡಳಿಯ ಸದಸ್ಯರ ಪ್ರತಿಯೊಂದು ಮಹಾ ಚುನಾವಣೆಯನ್ನು ಮತ್ತು ಪದಾಧಿಕಾರಿಗಳ ಚುನಾವಣೆಯನ್ನು, [1][ಸಹಕಾರ ಚುನಾವಣಾ ಪ್ರಾಧಿಕಾರದ ಅಧೀಕ್ಷಣೆಯಡಿಯಲ್ಲಿ,][1] ಸಹಕಾರಿ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸಹಕಾರ ಸಂಘಗಳ ಮಂಡಲಿಯ ಸದಸ್ಯರ ಮಹಾ ಚುನಾವಣೆಗಳು, ಈ ಮುಂದಿನಂತೆ, ನಾಲ್ಕು ಹಂತಗಳಲ್ಲಿ ನಡೆಯತಕ್ಕದ್ದು.

(ಎ) ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳು ನಡೆಯತಕ್ಕದ್ದು;

[1][(ಬಿ) ಎರಡನೇ ಹಂತದಲ್ಲಿ ಸೆಕೆಂಡರಿ ಸಹಕಾರ ಸಂಘಗಳ ಸಂಬಂಧದಲ್ಲಿನ ಚುನಾವಣೆಗಳು ನಡೆಯತಕ್ಕದ್ದು;

(ಸಿ) ಮೂರನೇ ಹಂತದಲ್ಲಿ ಸಂಯುಕ್ತ ಸಹಕಾರ ಸಂಘಗಳ ಸಂಬಂಧದಲ್ಲಿನ ಚುನಾವಣೆಗಳು ನಡೆಯತಕ್ಕದ್ದು;

(ಡಿ) ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳ ಸಂಬಂಧದಲ್ಲಿನ ಚುನಾವಣೆಗಳು ನಡೆಯತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಇ) ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆÀ ಚುನಾವಣೆ ನಡೆಸಲು ಚುನಾವಣಾ ಪ್ರಕ್ರಿಯೆಯನ್ನು ಸಂಯುಕ್ತ ಸಹಕಾರ ಸಂಘಗಳ ಚುನಾವಣೆಗಳು ಪೂರ್ಣಗೊಂಡ ಮೂವತ್ತು ದಿನಗಳ ತರುವಾಯ ಪ್ರಾರಂಭಿಸತಕ್ಕದ್ದು.

ಪರಂತು, ಸಹಕಾರಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಒಂದು ಸಹಕಾರ ಸಂಘದ ಮಂಡಳಿಯ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದು.

[1][(3) xxx][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

39ಎಎ. ಸಹಕಾರಿ ಚುನಾವಣಾ ಆಯೋಗ.- (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಒಬ್ಬ ಸಹಕಾರಿ ಚುನಾವಣಾ ಆಯುಕ್ತ ಮತ್ತು ಒಬ್ಬ ಕಾರ್ಯದರ್ಶಿಯನ್ನು ಒಳಗೊಂಡಿರುವ ಒಂದು ಸಹಕಾರಿ ಚುನವಣಾ ಆಯೋಗವನ್ನು ರಚಿಸತಕ್ಕದ್ದು.

[1][(2) ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರ ನಿಹಿತವಾಗಿರತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) ಸರ್ಕಾರವು, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ದರ್ಜೆಯ ಅಧಿಕಾರಿಯಾಗಿರುವ ಅಥವಾ ಅಧಿಕಾರಿಯಾಗಿದ್ದ ವ್ಯಕ್ತಿಯೊಬ್ಬನನ್ನು ಸಹಕಾರ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡತಕ್ಕದ್ದು ಮತ್ತು ಅಂಥ ಸಹಕಾರ ಚುನಾವಣಾ ಆಯುಕ್ತರು ಐದು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(4) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು, ರಾಜ್ಯ ಸರ್ಕಾರವು, ಸಹಕಾರ ಸಂಘಗಳ ಹೆಚ್ಚುವರಿ ರಿಜಿಸ್ಟ್ರಾರ್ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯಾಗಿರುವ ವ್ಯಕ್ತಿಯೊಬ್ಬನನ್ನು, ನಿಯಮಿಸಬಹುದಾದಂಥ ಅವಧಿಗಾಗಿ, ಸಹಕಾರ ಚುನಾವಣಾ ಪ್ರಾಧಿಕಾರದ ಕಾರ್ಯದರ್ಶಿಯನ್ನಾಗಿ ನೇಮಕ ಮಾಡತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಸಹಕಾರಿ ಚುನಾವಣಾ ಆಯುಕ್ತ ಮತ್ತು ಕಾರ್ಯದರ್ಶಿಯ ಸಂಬಳ ಮತ್ತು ಭತ್ಯೆಗಳೂ ಸೇರಿದಂತೆ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು;

(6) (8)ನೇ ಉಪಪ್ರಕರಣದ ಉಪಬಂಧಗಳಿಗೆ [1][ಸರ್ಕಾರವು][1] ಆದೇಶ ಮಾಡಿದ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ನಡೆಸಿದ ವಿಚಾರಣೆಯ ತರುವಾಯ ರುಜುವಾತಾದ ದುರ್ವರ್ತನೆ ಅಥವಾ ಅಸಮರ್ಥತೆಯ ಆಧಾರದ ಮೇಲೆ, ವಿಚಾರಣೆಯಲ್ಲಿ ಅಂಥ ಆಧಾರದ ಚುನಾವಣಾ ಆಯುಕ್ತರನ್ನು ತೆಗೆದುಹಾಕತಕ್ಕದ್ದು ಎಂದು ಅವರು ವರದಿ ಮಾಡಿದ ಮೇಲೆ [1][ಸರ್ಕಾರದ][1] ಆದೇಶದ ಮೂಲಕವೇಸಹಕಾರಿ ಚುನಾವಣಾ ಆಯುಕ್ತನನ್ನು ತೆಗೆದುಹಾಕತಕ್ಕದ್ದು

(7) [1][ಸರ್ಕಾರವು][1] (6)ನೇ ಉಪಪ್ರಕರಣದ ಮೇರೆಗೆ ಯಾವ ಚುನಾವಣಾ ಆಯುಕ್ತರ ವಿರುದ್ಧ ವಿಚಾರಣೆ ಮಾಡಲು ಆದೇಶಿಸಲಾಗಿದೆಯೋ ಆ ಚುನಾವಣಾ ಆಯುಕ್ತರನ್ನು ಕಚೇರಿಗೆ ಹಾಜರಾಗುವುದರಿಂದ ನಿಷೇಧಿಸುವುದು ಅವಶ್ಯ ಎಂದು ಭಾವಿಸಿದ್ದರೆ, ಉಚ್ಚನ್ಯಾಯಾಲಯದ ನ್ಯಾಯಾಧೀಶರ ವರದಿಯನ್ನು ಸ್ವೀಕರಿಸಿದ ಮೇಲೆ [ಸರ್ಕಾರವು][1] ಆದೇಶವನ್ನು ಹೊರಡಿಸುವವರೆಗೆ, ಪದದಿಂದ ಅಮಾನತುಗೊಳಿಸಬಹುದು

(8) (6)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಹಕಾರಿ ಚುನಾವಣಾ ಆಯುಕ್ತರು,-

(ಎ) ನಿರ್ಣೀತ ದಿವಾಳಿಯಾಗಿದ್ದರೆ; ಅಥವಾ

(ಬಿ) [1][ಸರ್ಕಾರದ][1] ಅಭಿಪ್ರಾಯದಲ್ಲಿ, ನೈತಿಕ ಅಧ:ಪತನವನ್ನೊಳಗೊಂಡ ಅಪರಾಧದ ನಿರ್ಣೀತ ಅಪರಾಧಿಯಾಗಿದ್ದರೆ; ಅಥವಾ

(ಸಿ) ಅವನ ಪದಾವಧಿಯಲ್ಲಿ, ಅವನ ಪದದ ಕರ್ತವ್ಯದಿಂದ ಹೊರಗೆ ಹಣ ಸಂದಾಯವಾಗುವ ಉದ್ಯೋಗದಲ್ಲಿ ನಿರತನಾಗಿದ್ದರೆ;

(ಡಿ) ಸರ್ಕಾರದ ಅಭಿಪ್ರಾಯದಲ್ಲಿ ಅವನು ಮಾನಸಿಕ ಅಥವಾ ದೈಹಿಕ ದುರ್ಬಲತೆಯ ಕಾರಣದಿಂದಾಗಿ ಪದದಲ್ಲಿ ಮುಂದುವರೆಯಲು ಸೂಕ್ತನಾಗಿಲ್ಲದಿದ್ದರೆ; ಅಥವಾ

(ಇ) ಆತನು ಚುನಾವಣಾ ಆಯುಕ್ತನಾಗಿ ತನ್ನ ಪ್ರಕಾರ್ಯಗಳ ಮೇಲೆ ಬಾಧಕವನ್ನುಂಟುಮಾಡುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದ್ದಾನೆಂದು, [1][ಸರ್ಕಾರವು][1] ಅಭಿಪ್ರಾಯಪಟ್ಟರೆ, ಅವರು ಆದೇಶದ ಮೂಲಕ ಚುನಾವಣಾ ಆಯುಕ್ತನ್ನು ಪದದಿಂದ ತೆಗೆದು ಹಾಕಬಹುದು,

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(9) ಸಹಕಾರಿ ಚುನಾವಣಾ ಆಯುಕ್ತನು, ಕರ್ನಾಟಕ ಸರ್ಕಾರವು ಮಾಡಿಕೊಂಡ ಅಥವಾ ಅದರ ಪರವಾಗಿ ಮಾಡಿಕೊಳ್ಳಲಾದ ಯಾವುದೇ ಕರಾರಿನಲ್ಲಿ ಅಥವಾ ಒಪ್ಪಂದದಲ್ಲಿ

ಸಂಬಂಧಪಟ್ಟವನಾಗಿದ್ದರೆ ಅಥವಾ ಹಿತಾಸಕ್ತಿ ಹೊಂದಿದ್ದರೆ ಅಥವಾ ಸದಸ್ಯನಾಗಿ ಮತ್ತು ನಿಗಮಿತ ಕಂಪನಿಯ ಇತರ ಸದಸ್ಯನಾಗಿ ಅನ್ಯಥಾ ಅದರಿಂದ ದೊರೆಯುವ ಯಾವುದೇ ಲಾಭ ಅಥವಾ ಯಾವುದೇ ಪ್ರಯೋಜನ ಅಥವಾ ಉಪಬಲಬ್ಧಗಳಲ್ಲಿ ಯಾವುದೇ ರೀತಿಯಲ್ಲಿ ಪಾಲ್ಗೊಂಡರೆ, ಅವನನ್ನು (6)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ದುರ್ವರ್ತನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

[1][(10) ಸಹಕಾರ ಚುನಾವಣಾ ಪ್ರಾಧಿಕಾರವು, ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ, ಸಹಕಾರ ಚುನಾವಣಾ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅಗತ್ಯವಿರುವ ಅಧಿಕಾರಿಗಳು ಮತ್ತು ಇತರ ನೌಕರರ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(11) (2)ನೇ ಉಪಪ್ರಕರಣದ ಅಡಿಯಲ್ಲಿ ಸಹಕಾರಿ ಚುನಾವಣಾ ಆಯೋಗಕ್ಕೆ ಪ್ರದತ್ತವಾದ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅವಶ್ಯವಾಗಬಹುದಾದಷ್ಟು ಸಿಬಂಬ್ಬದಿಯನ್ನು ಸಹಕಾರಿ ಚುನಾವಣಾ ಆಯೋಗಕ್ಕೆ ರಾಜ್ಯ ಸರ್ಕಾರವು ಹಾಗೆ ಒದಗಿಸತಕ್ಕದ್ದು.

(12) ಸಹಕಾರಿ ಚುನಾವಣಾ [1][ಪ್ರಾಧಿಕಾರದ][1] ಅಧಿಕಾರಿಗಳು ಮತ್ತು ನೌಕರರ ಸಂಬಳ, ಭತ್ಯೆಗಳು, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(13) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಚುನಾವಣೆಯನ್ನು ನಡೆಸುವುದಕ್ಕಾಗಿ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ನಿಯಮಿಸಬಹುದಾದ ಅಂಥ ರೀತಿಯಲ್ಲಿರತಕ್ಕದ್ದು.

(14) ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದುಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ತಗಲುವ ವೆಚ್ಚವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಭರಿಸತಕ್ಕದ್ದು.

(15) ಪ್ರತಿಯೊಂದು ಸಹಕಾರ ಸಂಘದ ಮಂಡಳಿಯು,-

(ಎ) ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ ಆರು ತಿಂಗಳಿಗೆ ಮುಂಚೆ ಸಹಕಾರಿ ಚುನಾವಣಾ [ಪ್ರಾಧಿಕಾರಕ್ಕೆ] ತಿಳಿಸತಕ್ಕದ್ದು;

(ಬಿ) ಸಹಕಾರಿ ಚುನಾವಣಾ [ಪ್ರಾಧಿಕಾರವು] ನಿಯಮಿಸಬಹುದಾದಂಥ ಕ್ಯಾಲೆಂಡರ್ ಪ್ರಕಾರ ಆಯೋಗವು ಅಗತ್ಯಪಡಿಸಬಹುದಾದಂಥ ಪುಸ್ತಕಗಳು, ದಾಖಲೆಗಳು ಮತ್ತು ಮಾಹಿತಿಯನ್ನು ಒದಗಿಸತಕ್ಕದ್ದು; ಮತ್ತು

(ಸಿ) ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಎಲ್ಲ ಅವಶ್ಯಕ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.][2]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3.2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

39ಬಿ. ಚುನಾವಣೆಗಳನ್ನು ನಡೆಸುವುದಕ್ಕಾಗಿ ವೆಚ್ಚ.- ಚುನಾವಣೆಯ ಸಂಬಂಧದಲ್ಲಿ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಅಧಿಕಾರಗಳನ್ನು ಚಲಾಯಿಸಲು ನೇಮಕ ಮಾಡಲಾದ ವ್ಯಕ್ತಿಗಳಿಗೆ ಪ್ರಯಾಣ ಭತ್ಯೆಗಳು, ದಿನಭತ್ಯೆಗಳು ಮತ್ತು ಇತರೆ ಗೌರವಧನ ಸಂದಾಯ ಯಾವುದಾದರೂ ಇದ್ದರೆ ಅದೂ ಸೇರಿ ಯಾವುದೇ ಚುನಾವಣೆಯನ್ನು ನಡೆಸುವ ಖರ್ಚು ವೆಚ್ಚಗಳನ್ನು ಸಂಬಂಧಪಟ್ಟ ಸಹಕಾರ ಸಂಘವು ಭರಿಸತಕ್ಕುದು.

39ಸಿ. ಭ್ರಷ್ಟಾಚಾರಗಳು.- ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಮುಂದಿನವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕುದು, ಎಂದರೆ:-

(i) ತತ್ಕಾಲದಲ್ಲಿ ಜಾರಿಯಲ್ಲಿರುವ, 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ (ಕೇಂದ್ರಾಧಿನಿಯಮ 1951ರ 43)ರ 123ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ``ಲಂಚಗುಳಿತನ'';

(ii) ತತ್ಕಾಲದಲ್ಲಿ ಜಾರಿಯಲ್ಲಿರುವ, ಮೇಲಿನ ಪ್ರಕರಣದ (2)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಅನುಚಿತ ಪ್ರಭಾವ;

(iii) ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ ಯಾರೇ ವ್ಯಕ್ತಿಗೆ, ಆತನ ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ವ್ಯಕ್ತಿಯು ಮಾಡಿಕೊಳ್ಳುವ ಮನವಿ ಅಥವಾ ರಾಷ್ಟ್ರ ಧ್ವಜ ಅಥವಾ ರಾಷ್ಟ್ರೀಯ ಲಾಂಛನಗಳಂಥ ರಾಷ್ಟ್ರೀಯ ಚಿಹ್ನೆಗಳ ಬಳಕೆ ಅಥವಾ ಅವುಗಳತ್ತ ಗಮನ ಸೆಳೆಯುವುದು;

(iv) ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರಗಳ ಮೇಲೆ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ

ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು, ಭಾರತದ ನಾಗರಿಕರ ಭಿನ್ನಭಿನ್ನ ವರ್ಗಗಳ ನಡುವೆ ಹಗೆತನದ ಅಥವಾ ದ್ವೇಷದ ಭಾವನೆಗಳನ್ನು ಬೆಳೆಸುವುದು ಅಥವಾ ಬೆಳೆಸಲು ಪ್ರಯತ್ನಿಸುವುದು;

(v) ಯಾರೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯಕ್ಕೆ ಅಥವಾ ನಡತೆಗೆ ಸಂಬಂಧಪಟ್ಟಂತೆ ಅಥವಾ ಯಾರೇ ಅಭ್ಯರ್ಥಿಯ ಉಮೇದುವಾರಿಕೆಗೆ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಸುಳ್ಳಿನ ಅಥವಾ ಸುಳ್ಳೆಂದು ತಾನು ನಂಬುವ ಅಥವಾ ನಿಜವೆಂದು ತಾನು ನಂಬದಿರುವ ಮತ್ತು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಮೇಲೆ ಪ್ರತಿಕೂಲ ಪ್ರಭಾವ ಬೀರಲು ಯುಕ್ತವಾಗಿ

ಉದ್ದೇಶಿಸಿರುವ ಸಂಗತಿಯ ಯಾವುದೇ ನಿರೂಪಣೆಯನ್ನು ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಪ್ರಕಟಿಸುವುದು;

(vi) ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ರಚಿಸಿರುವ ನಿಯಮಗಳ ಅನುಸಾರ ವ್ಯವಸ್ಥೆ ಮಾಡಿದ ಯಾವುದೇ ಮತದಾನ ಕೇಂದ್ರಕ್ಕೆ (ಸ್ವತಃ ಅಭ್ಯರ್ಥಿ, ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟ್ ಇವರನ್ನು ಹೊರತುಪಡಿಸಿ) ಯಾರೇ ಮತದಾರನನ್ನು ಉಚಿತವಾಗಿ ಕರೆದೊಯ್ಯಲು ಅಥವಾ ಅಲ್ಲಿಂದ ಕರೆತರಲು ಯಾವುದೇ ವಾಹನ ಅಥವಾ ದೋಣಿಯನ್ನು ಹಣ ಸಂದಾಯದ ಮೇಲೆ ಅಥವಾ ಅನ್ಯಥಾ ಬಾಡಿಗೆಗೆ ತೆಗೆದುಕೊಳ್ಳುವುದು ಅಥವಾ ಪಡೆದುಕೊಳ್ಳುವುದು ಅಥವಾ ಅಂಥ ವಾಹನ ಅಥವಾ ದೋಣಿಯನ್ನು ಬಳಸುವುದು:

ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗುವುದು ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಯಾರೇ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ವಾಹನ ಅಥವಾ ದೋಣಿ ಅಥವಾ ರೈಲುಬೋಗಿಯನ್ನು ಬಳಸುವುದನ್ನು ಭ್ರಷ್ಟಾಚಾರವೆಂದು ಭಾವಿಸತಕ್ಕುದಲ್ಲ;

ವಿವರಣೆ.- ಈ ಖಂಡದಲ್ಲಿ `ವಾಹನ' ಎಂಬ ಪದಕ್ಕೆ, ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಬಳಸಿದ ಅಥವಾ ಬಳಸಲು ಸಮರ್ಥವಾಗಿರುವ ಯಾವುದೇ ವಾಹನ ಎಂದು ಅರ್ಥ; ಆ ವಾಹನವು ಯಂತ್ರಚಾಲಿತ ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು; ಮತ್ತು ಅದು ಇತರ ವಾಹನಗಳನ್ನು ಎಳೆಯಲು ಅಥವಾ ಅನ್ಯಥಾ ಉಪಯೋಗಿಸುವಂಥದಾಗಿರಬಹುದು;

(vii) ಅಮಲೇರಿಸುವ ಮದ್ಯಗಳು ಸರಬರಾಜಾಗುವ ಯಾವುದೇ ಸಭೆಯನ್ನು ನಡೆಸುವುದು;

(viii) ಚುನಾವಣೆಗೆ ಉಲ್ಲೇಖ ಇರುವ, ಮುದ್ರಕನ ಮತ್ತು ಪ್ರಕಾಶಕನ ಹೆಸರು ಮತ್ತು ವಿಳಾಸ ಇಲ್ಲದಿರುವ ಯಾವುದೇ ಸುತ್ತೋಲೆ, ಜಾಹೀರಾತು ಪತ್ರಗಳು, ಬಿತ್ತಿಪತ್ರಗಳನ್ನು ಹೊರಡಿಸುವುದು;

(ix) ರಾಜ್ಯ ಸರ್ಕಾರವು, ನಿಯಮದ ಮೂಲಕ ಭ್ರಷ್ಟಾಚಾರವೆಂದು ನಿರ್ದಿಷ್ಟ ಪಡಿಸಬಹುದಾದ ಯಾವುದೇ ಇತರ ಆಚರಣೆ.

39ಡಿ. ಮತದಾನದ ರಹಸ್ಯವನ್ನು ಕಾಪಾಡುವುದು.- (1) ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದಕ್ಕೆ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕುದು ಮತ್ತು ಹಾಗೆ ಕಾಪಾಡುವಲ್ಲಿ ನೆರವಾಗತಕ್ಕುದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸಲು ಉದ್ದೇಶಿಸುವ ಯಾವುದೇ ಮಾಹಿತಿಯನ್ನು ಯಾರೇ ವ್ಯಕ್ತಿಗೆ ತಿಳಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದಾಗ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

39ಇ. ಅಧಿಕಾರಿಗಳು, ಮುಂತಾದವರು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಪರವಾಗಿ ಕಾರ್ಯ ನಿರ್ವಹಿಸಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಬೀರಕೂಡದು.- (1) ಚುನಾವಣೆಯಲ್ಲಿ ರಿಟರ್ನಿಂಗ್ ಆಫೀಸರಾಗಿರುವ ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರಾಗಿರುವ ಅಥವಾ ಪ್ರಿಸೈಡಿಂಗ್ ಆಫೀಸರಾಗಿರುವ ಅಥವಾ ಪೋಲಿಂಗ್ ಆಫೀಸರಾಗಿರುವ ಯಾರೇ ವ್ಯಕ್ತಿಯು ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯ ನಿರ್ವಹಿಸಲು ರಿಟರ್ನಿಂಗ್ ಆಫೀಸರಿಂದ ಅಥವಾ ಪ್ರಿಸೈಡಿಂಗ್ ಆಫೀಸರಿಂದ ನೇಮಕಗೊಂಡಿರುವ ಅಧಿಕಾರಿಯು ಅಥವಾ ಗುಮಾಸ್ತನು ಚುನಾವಣೆ ನಡೆಸುವಲ್ಲಿ ಅಥವಾ ಅದರ ನಿರ್ವಹಣೆಯಲ್ಲಿ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ (ಮತ ನೀಡುವುದರ ಹೊರತಾಗಿ) ಯಾವುದೇ ಕಾರ್ಯವನ್ನು ಮಾಡತಕ್ಕುದಲ್ಲ.

(2) ಮೇಲೆ ಹೇಳಲಾದಂಥ ಯಾರೇ ವ್ಯಕ್ತಿಯು, ಮತ್ತು ಪೊಲೀಸ್ ಪಡೆಯ ಯಾರೇ ಸದಸ್ಯನು -

(ಎ) ಚುನಾವಣೆಯಲ್ಲಿ ತನ್ನ ಮತವನ್ನು ನೀಡುವಂತೆ ಯಾರೇ ವ್ಯಕ್ತಿಯನ್ನು ಪ್ರೇರೇಪಿಸಲು; ಅಥವಾ

(ಬಿ) ಚುನಾವಣೆಯಲ್ಲಿ ತನ್ನ ಮತವನ್ನು ನೀಡದಿರುವಂತೆ ಯಾರೇ ವ್ಯಕ್ತಿಯನ್ನು ವಿಮುಖಗೊಳಿಸಲು; ಅಥವಾ

(ಸಿ) ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಿ ಯಾರೇ ವ್ಯಕ್ತಿಯನ್ನು ವಿಮುಖಗೊಳಿಸಲು -ಪ್ರಯತ್ನಿಸತಕ್ಕುದಲ್ಲ.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(4) (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯರಾಗಿರತಕ್ಕುದು.

39ಎಫ್. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಮತಕೋರಿಕೆಯ ನಿಷೇಧ:- (1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಂದು ಯಾರೇ ವ್ಯಕ್ತಿಯು ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದ ಒಂದು ನೂರು ಮೀಟರ್ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗೀ ಸ್ಥಳದಲ್ಲಿ ಈ ಕೆಳಕಂಡ ಯಾವುದೇ ಕಾರ್ಯಗಳನ್ನು ಮಾಡತಕ್ಕುದಲ್ಲ, ಎಂದರೆ:-

(ಎ) ಮತಗಳಿಗಾಗಿ ಬೇಡುವುದು; ಅಥವಾ

(ಬಿ) ಯಾರೇ ಮತದಾರನ ಮತವನ್ನು ಯಾಚಿಸುವುದು; ಅಥವಾ

(ಸಿ) ಯಾರೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡದಂತೆ ಯಾರೇ ಮತದಾರನನ್ನು ಮನವೊಲಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತ ನೀಡದಂತೆ ಯಾರೇ ಮತದಾರನನ್ನು ಮನವೊಲಿಸುವುದು; ಅಥವಾ

(ಇ) ಚುನಾವಣೆಗೆ ಸಂಬಂಧಿಸಿದ (ಅಧಿಕೃತ ನೋಟೀಸಿನ ಹೊರತು) ಯಾವುದೇ ನೋಟೀಸು ಅಥವಾ ಚಿಹ್ನೆಯನ್ನು ಪ್ರದರ್ಶಿಸುವುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದಾಗ ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(3) (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

39ಜಿ. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ.- (1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳ ಯಾರೇ ವ್ಯಕ್ತಿಯು,-

(ಎ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾನವ ಧ್ವನಿಯನ್ನು ವರ್ಧಿಸುವುದಕ್ಕಾಗಿ ಅಥವಾ ಪುನರುಚ್ಚರಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂತಹ ಯಾವುದೇ ಸಲಕರಣೆಯನ್ನು ಬಳಸತಕ್ಕುದಲ್ಲ ಅಥವಾ ನಡೆಸತಕ್ಕುದಲ್ಲ; ಅಥವಾ

(ಬಿ) ಮತದಾನ ಮಾಡಲು ಮತದಾನ ಕೇಂದ್ರಕ್ಕೆ ಭೇಟಿ ನೀಡುವ ಯಾರೇ ವ್ಯಕ್ತಿಗೆ ಕಿರುಕುಳ ಉಂಟು ಮಾಡುವಂತೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರತರಾಗಿರುವ ಅಧಿಕಾರಿಗಳ ಮತ್ತು ಇತರ ವ್ಯಕ್ತಿಗಳ ಕೆಲಸಕ್ಕೆ ಅಡ್ಡಿಯುಂಟಾಗುವಂತೆ, ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೂಗತಕ್ಕುದಲ್ಲ ಅಥವಾ ಅನ್ಯಥಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಅಥವಾ ಅಂಥ ಉಲಂಘನೆಗೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯದ ತರುವಾಯ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(3) ಯಾರೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿದ್ದಾನೆ ಅಥವಾ ಮಾಡಿದ್ದಾನೆ ಎಂದು ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರನಿಗೆ ನಂಬಲು ಕಾರಣ ಇದ್ದರೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅವನು ಯಾರೇ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅನಂತರ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕುದು.

(4) ಯಾರೇ ಪೊಲೀಸ್ ಅಧಿಕಾರಿಯು (1)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವೆನಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂಥ ಬಲವನ್ನು ಉಪಯೋಗಿಸಬಹುದು ಮತ್ತು ಅಂಥ ಉಲಂಘನೆಗಾಗಿ ಬಳಸಿದ ಯಾವುದೇ ಸಲಕರಣೆಯನ್ನು ವಶಕ್ಕೆ ತೆಗೆದುಕೊಳ್ಳಬಹುದು.

39ಎಚ್. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡ.- (1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕೆ ನಿಗದಿಪಡಿಸಲಾದ ಸಮಯದಲ್ಲಿ ಸ್ವತಃ ದುರ್ವರ್ತಿಸುವ ಅಥವಾ ಪ್ರಿಸೈಡಿಂಗ್ ಆಫೀಸರ್‌ರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯನ್ನು ಪ್ರಿಸೈಡಿಂಗ್ ಆಫೀಸರ್‌ರು ಅಥವಾ ಕರ್ತವ್ಯನಿರತ ಯಾರೇ ಪೊಲೀಸ್ ಅಧಿಕಾರಿಯು ಅಥವಾ ಈ ಬಗ್ಗೆ ಅಂಥ ಪ್ರಿಸೈಡಿಂಗ್ ಆಫೀಸರ್‌ರು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಹಾಕಬಹುದು.

(2) (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು, ಮತದಾನ ಕೇಂದ್ರದಲ್ಲಿ ಮತದಾನ ಮಾಡಲು ಅನ್ಯಥಾ ಹಕ್ಕುಳ್ಳ ಯಾರೇ ಮತದಾರನು ಆ ಕೇಂದ್ರದಲ್ಲಿ ಮತದಾನ ಮಾಡುವ ಅವಕಾಶವು ತಪ್ಪುವ ಹಾಗೆ ಚಲಾಯಿಸತಕ್ಕುದಲ್ಲ.

(3) ಒಂದು ಮತದಾನ ಕೇಂದ್ರದಿಂದ ಹಾಗೆ ಹೊರಹಾಕಲಾದ ಯಾರೇ ವ್ಯಕ್ತಿಯು, ಪ್ರಿಸೈಡಿಂಗ್ ಆಫೀಸರ್‌ರ ಅನುಮತಿ ಇಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(4) (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

39ಐ. ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲಂಘನೆಗಳು.- (1) ಈ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ತನ್ನ ಪದೀಯ ಕರ್ತವ್ಯದ ಉಲಂಘನೆಯಾಗುವ ಯಾವುದೇ ಕಾರ್ಯದ ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

[1][(2) xxx

(3) xxx][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ, ರಿಟರ್ನಿಂಗ್ ಆಫೀಸರ್‌ಗಳು, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್‌ಗಳು, ಪ್ರಿಸೈಡಿಂಗ್ ಆಫೀಸರ್‌ಗಳು, ಪೋಲಿಂಗ್ ಆಫೀಸರ್‌ಗಳು ಮತ್ತು ನಾಮನಿರ್ದೇಶನ ಪತ್ರಗಳ ಸ್ವೀಕಾರಕ್ಕೆ ಅಥವಾ ಉಮೇದುವಾರಿಕೆಯ ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದಕ್ಕೆ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡಿರುವ ಯಾರೇ ಇತರ ವ್ಯಕ್ತಿ; ಮತ್ತು ``ಪದೀಯ ಕರ್ತವ್ಯ'' ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ತದನುಸಾರವಾಗಿ ಅರ್ಥೈಸತಕ್ಕುದು, ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಕರ್ತವ್ಯಗಳನ್ನು ಒಳಗೊಂಡಿರತಕ್ಕುದಲ್ಲ.

39ಜೆ. ಮತದಾನ ಕೇಂದ್ರದಿಂದ ಮತಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ.- (1) ಯಾವುದೇ ಚುನಾವಣೆಯಲ್ಲಿ ಮತದಾನ ಕೇಂದ್ರದಿಂದ ಮತಪತ್ರವನ್ನು ಅನಧಿಕೃತವಾಗಿ ತೆಗೆದುಕೊಂಡು ಹೋಗುವ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸುವ ಅಥವಾ ಯಾವುದೇ ಅಂಥ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದಕ್ಕೆ ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು ಆ ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್‌ರಿಗೆ (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣ ಇದ್ದರೆ, ಅಂಥ ಅಧಿಕಾರಿಯು, ಅಂಥ ವ್ಯಕ್ತಿಯು ಆ ಮತದಾನ ಕೇಂದ್ರವನ್ನು ಬಿಡುವ ಮೊದಲು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಅವನನ್ನು ಪೊಲೀಸ್ ಅಧಿಕಾರಿಯು ಶೋಧನೆ ಮಾಡುವಂತೆ ಮಾಡಬಹುದು:

ಪರಂತು, ಮಹಿಳೆಯನ್ನು ಶೋಧನೆ ಮಾಡುವ ಅಗತ್ಯವಿದ್ದರೆ, ಮತ್ತೊಬ್ಬ ಮಹಿಳೆಯಿಂದ ಶೋಧನೆಯನ್ನು ಕಟ್ಟುನಿಟ್ಟಾಗಿ ಸಭ್ಯತೆಯಿಂದ ಮಾಡಿಸತಕ್ಕುದು.

(3) ಶೋಧನೆಯ ಬಳಿಕ ದಸ್ತಗಿರಿಯಾದ ವ್ಯಕ್ತಿಯ ಬಳಿ ಕಂಡುಬಂದ ಯಾವುದೇ ಮತಪತ್ರವನ್ನು, ಪ್ರಿಸೈಡಿಂಗ್ ಆಫೀಸರ್‌ರು ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ

ಒಪ್ಪಿಸತಕ್ಕುದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದ್ದರೆ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕುದು.

(4) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

39ಕೆ. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು.- (1) ಯಾವುದೇ ಚುನಾವಣೆಯಲ್ಲಿ ವ್ಯಕ್ತಿಯು,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ರಿಟರ್ನಿಂಗ್ ಆಫೀಸರ್‌ರ ಅಧಿಕಾರದ ಪ್ರಕಾರ ಅಥವಾ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ನೋಟೀಸು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ ಮತಪತ್ರವನ್ನು, ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತ ಚಿಹ್ನೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ನಾಶಪಡಿಸಿದರೆ; ಅಥವಾ

(ಡಿ) ಯುಕ್ತ ಅಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಯಾರೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೆ; ಅಥವಾ

(ಇ) ಮತ ಪೆಟ್ಟಿಗೆಯೊಳಕ್ಕೆ ಹಾಕಲು ಕಾನೂನಿನ ಮೂಲಕ ಅಧಿಕೃತವಾಗಿರುವ ಮತಪತ್ರವನ್ನು ಹೊರತುಪಡಿಸಿ ಇತರ ಯಾವುದೇ ವಸ್ತುವನ್ನು ಯಾವುದೇ ಮತಪೆಟ್ಟಿಗೆಯಲ್ಲಿ ಮೋಸದಿಂದ ಹಾಕಿದರೆ; ಅಥವಾ

(ಎಫ್) ಚುನಾವಣಾ ಉದ್ದೇಶಗಳಿಗಾಗಿ, ಆಗ ಬಳಕೆಯಲ್ಲಿರುವ ಯಾವುದೇ ಮತಪೆಟ್ಟಿಗೆಯನ್ನು ಮತಪತ್ರಗಳನ್ನು ಯುಕ್ತ ಅಧಿಕಾರವಿಲ್ಲದೆ ನಾಶಪಡಿಸಿದರೆ, ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ ಮೋಸದಿಂದ ಅಥವಾ ಯುಕ್ತ ಅಧಿಕಾರವಿಲ್ಲದೆ ಮೇಲೆ ಹೇಳಿದ ಯಾವುದೇ ಕೃತ್ಯಗಳನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುದೇ ಅಂಥ ಕೃತ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ

-ಅವನು ಚುನಾವಣಾ ಅಪರಾಧದ ತಪ್ಪಿತಸ್ಥನಾಗತಕ್ಕುದು.

(2) ಈ ಪ್ರಕರಣದ ಮೇರೆಗಿನ ಚುನಾವಣಾ ಅಪರಾಧದ ತಪ್ಪಿತಸ್ಥನಾದ ಯಾರೇ ವ್ಯಕ್ತಿಯು,-

(ಎ) ಮತದಾನ ಕೇಂದ್ರದಲ್ಲಿ ರಿಟರ್ನಿಂಗ್ ಆಫೀಸರಾಗಿದ್ದರೆ, ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರಾಗಿದ್ದರೆ ಅಥವಾ ಪ್ರಿಸೈಡಿಂಗ್ ಆಫೀಸರಾಗಿದ್ದರೆ ಅಥವಾ ಚುನಾವಣೆಗೆ ಸಂಬಂಧಿಸಿದ ಪದೀಯ ಕರ್ತವ್ಯದ ಮೇಲೆ ನಿಯೋಜಿತನಾಗಿರುವ ಯಾವುದೇ ಇತರ ಅಧಿಕಾರಿ ಅಥವಾ ಗುಮಾಸ್ತನಾಗಿದ್ದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು;

(ಬಿ) ಯಾರೇ ಇತರ ವ್ಯಕ್ತಿಯಾಗಿದ್ದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ ಮತಗಳ ಎಣಿಕೆಯೂ ಸೇರಿದಂತೆ ಚುನಾವಣೆ ನಡೆಸುವುದರಲ್ಲಿ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಭಾಗವಹಿಸುವುದು ಒಬ್ಬ ವ್ಯಕ್ತಿಯ ಕರ್ತವ್ಯವಾಗಿದ್ದರೆ, ಅವನು ಪದೀಯ ಕರ್ತವ್ಯದ ಮೇಲಿರುವನೆಂದು ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಬಳಸಿದ್ದ ಮತಪತ್ರಗಳು ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯ ಜವಾಬ್ದಾರನಾಗಿರುವನೆಂದು ಭಾವಿಸತಕ್ಕುದು, ಆದರೆ ``ಪದೀಯ ಕರ್ತವ್ಯ" ಎಂಬ ಪದಾವಳಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಯಾವುದೇ ಕರ್ತವ್ಯವನ್ನು ಒಳಗೊಂಡಿರತಕ್ಕುದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕುದು.][2]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ ಅಧ್ಯಾಯ ಗಿಎ ಮತ್ತು 39ಎ ದಿಂದ 39ಕೆ ವರೆಗಿನ ಪ್ರಕರಣಗಳನ್ನು 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. 39ಎ ಪ್ರಕರಣದ (3)ನೇ ಉಪ ಪ್ರಕರಣವನ್ನು ಮಾತ್ರ 27.10.1998 ರಿಂದ ಜಾರಿಗೆ ಕೊಡಲಾಗಿದೆ.

ಅಧ್ಯಾಯ- VI

ಸಹಕಾರ ಸಂಘಗಳಿಗೆ ರಾಜ್ಯದ ನೆರವು

40. ಸಹಕಾರ ಚಳುವಳಿಯ ಪ್ರವರ್ಧನೆ.- ರಾಜ್ಯದಲ್ಲಿ ಸಹಕಾರಿ ಕೃಷಿಗೆ ಉತ್ತೇಜನವೂ ಸೇರಿ ಸಹಕಾರ ಚಳುವಳಿಯನ್ನು ಉತ್ತೇಜಿಸುವುದು ಮತ್ತು ಪ್ರವರ್ಧಿಸುವುದು ಮತ್ತು ಈ ದಿಸೆಯಲ್ಲಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಕೊಳ್ಳುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರತಕ್ಕುದು.

41. ಸಹಕಾರ ಸಂಘಗಳಲ್ಲಿ ರಾಜ್ಯ ಸರ್ಕಾರದ ಪ್ರತ್ಯಕ್ಷ ಪಾಲುಗಾರಿಕೆ.- (1) ಪರಿಮಿತ ಹೊಣೆಗಾರಿಕೆಯೊಂದಿಗೆ ಸಹಕಾರ ಸಂಘದ ಷೇರು ಬಂಡವಾಳಕ್ಕೆ ರಾಜ್ಯಸರ್ಕಾರವು ಪ್ರತ್ಯಕ್ಷವಾಗಿ ವಂತಿಗೆ ನೀಡಬಹುದು.

(2) ತದ್ವಿರುದ್ಧವಾದ ಯಾವುದೇ ಒಪ್ಪಂದ ಇದ್ದರೂ, ಅಂಥ ಯಾವುದೇ ಸಹಕಾರ ಸಂಘದ ಯಾರೇ ಇತರ ಷೇರುದಾರರಿಗೆ ಆ ಸಂಘದ ಷೇರುಗಳ ಮೇಲೆ ಸಂದಾಯವಾಗತಕ್ಕ ಲಾಭಾಂಶದ ದರಕ್ಕಿಂತ ಹೆಚ್ಚಿನ ದರದ ಲಾಭಾಂಶಕ್ಕೆ ರಾಜ್ಯಸರ್ಕಾರವು ಹಕ್ಕುಳ್ಳದ್ದಾಗಿರತಕ್ಕುದಲ್ಲ.

42. ಸಹಕಾರ ಸಂಘಗಳಲ್ಲಿ ರಾಜ್ಯಸರ್ಕಾರದ ಪರೋಕ್ಷ ಪಾಲುಗಾರಿಕೆ.- ರಾಜ್ಯ ಸರ್ಕಾರವು, ಕಾನೂನಿನ ಮೂಲಕ ಧನವಿನಿಯೋಗಕ್ಕೆ ಒಳಪಟ್ಟು, ಪರಿಮಿತ ಹೊಣೆಗಾರಿಕೆಯೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಷೇರುಗಳನ್ನು ಖರೀದಿಸಲು (ಈ ಅಧ್ಯಾಯದಲ್ಲಿ ಇನ್ನು ಮುಂದೆ ಅಪೆಕ್ಸ್ ಸಂಘವೆಂದು ಉಲ್ಲೇಖಿಸಲಾಗುವ) ಸಹಕಾರ ಸಂಘಕ್ಕೆ ಒದಗಿಸಬಹುದು.

43. ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿ.- (1) 42ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಹಣ ಒದಗಿಸಿದ ಅಪೆಕ್ಸ್ ಸಂಘವು, ಅಂಥ ಹಣದಿಂದ `ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿ' ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕುದು.

(2) ಅಪೆಕ್ಸ್ ಸಂಘವು, ಮುಖ್ಯ ರಾಜ್ಯಪಾಲುಗಾರಿಕೆ ನಿಧಿಯನ್ನು -

(ಎ) ಪರಿಮಿತ ಹೊಣೆಗಾರಿಕೆಯ ಇತರ ಸಹಕಾರ ಸಂಘಗಳಲ್ಲಿ ಪ್ರತ್ಯಕ್ಷವಾಗಿ ಷೇರುಗಳನ್ನು ಕೊಳ್ಳುವ;

(ಬಿ) (ಈ ಅಧ್ಯಾಯದಲ್ಲಿ ಇನ್ನು ಮುಂದೆ ಕೇಂದ್ರ ಸಂಘವೆಂದು ಉಲ್ಲೇಖಿಸಿರುವ) ಸಹಕಾರ ಸಂಘಕ್ಕೆ ಪರಿಮಿತ ಹೊಣೆಗಾರಿಕೆಯ (ಈ ಅಧ್ಯಾಯದಲ್ಲಿ ಇನ್ನು ಮುಂದೆ ಪ್ರಾಥಮಿಕ ಸಂಘಗಳೆಂದು ಉಲ್ಲೇಖಿಸಿರುವ) ಸಹಕಾರ ಸಂಘಗಳಲ್ಲಿ ಷೇರುಗಳನ್ನು ಖರೀದಿಸಲು ಹಣವನ್ನು ಒದಗಿಸುವ;

(ಸಿ) ಈ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ ರಾಜ್ಯಸರ್ಕಾರಕ್ಕೆ ಸಂದಾಯಗಳನ್ನು ಮಾಡುವ

-ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕುದೇ ಹೊರತು ಇತರ ಉದ್ದೇಶಕ್ಕಾಗಿ ಅಲ್ಲ.

44. ರಾಜ್ಯ ಪಾಲುಗಾರಿಕೆ ಉಪನಿಧಿ.- (1) ರಾಜ್ಯ ಅಪೆಕ್ಸ್ ಸಂಘವು ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿಯಿಂದ ಹಣ ಒದಗಿಸಿದ ಕೇಂದ್ರ ಸಂಘವು ಅಂಥ ಹಣದಿಂದ `ರಾಜ್ಯ ಪಾಲುಗಾರಿಕೆ ಉಪನಿಧಿ' ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕುದು.

(2) ಕೇಂದ್ರ ಸಂಘವು ರಾಜ್ಯ ಪಾಲುಗಾರಿಕೆ ಉಪನಿಧಿಯನ್ನು-

(ಎ) ಪ್ರಾಥಮಿಕ ಸಂಘಗಳಲ್ಲಿ ಷೇರುಗಳನ್ನು ಖರೀದಿಸುವ;

(ಬಿ) ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಅಪೆಕ್ಸ್ ಸಂಘಕ್ಕೆ ಸಂದಾಯಗಳನ್ನು ಮಾಡುವ

-ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕುದೇ ಹೊರತು ಇತರ ಉದ್ದೇಶಕ್ಕಾಗಿ ಅಲ್ಲ.

45. ಷೇರುಗಳನ್ನು ಖರೀದಿಸಲು ರಾಜ್ಯ ಸರ್ಕಾರದ ಅನುಮೋದನೆ.- ರಾಜ್ಯ ಸರ್ಕಾರದ ಲಿಖಿತಪೂರ್ವಾನುಮೋದನೆ ಪಡೆದ ಹೊರತು, ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿಯ ಅಥವಾ ರಾಜ್ಯ ಪಾಲುಗಾರಿಕೆಯ ಉಪನಿಧಿಯ ಹಣದಿಂದ ಯಾವುದೇ ಷೇರುಗಳನ್ನು ಸಹಕಾರ ಸಂಘದಲ್ಲಿ ಖರೀದಿಸತಕ್ಕುದಲ್ಲ.

46. ಕೆಲವು ಷೇರುಗಳ ಸಂಬಂಧದಲ್ಲಿ ಹೊಣೆಗಾರಿಕೆಯನ್ನು ಪರಿಮಿತಗೊಳಿಸುವುದು.- ಸಹಕಾರ ಸಂಘದಲ್ಲಿ,-

(ಎ) ರಾಜ್ಯಸರ್ಕಾರವು; ಅಥವಾ

(ಬಿ) ಸಂದರ್ಭಾನುಸಾರ ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿಯಿಂದ ಅಥವಾ `ರಾಜ್ಯ ಪಾಲುಗಾರಿಕೆ ಉಪನಿಧಿ'ಯಿಂದ ಅಪೆಕ್ಸ್ ಸಂಘವು ಅಥವಾ ಕೇಂದ್ರ ಸಂಘವು

- ಯಾವುದೇ ಷೇರುಗಳನ್ನು ಖರೀದಿಸಿರುವಲ್ಲಿ, ಆ ಸಹಕಾರಿ ಸಂಘವನ್ನು ಸಮಾಪ್ತಿಗೊಳಿಸುವ ಸಂದರ್ಭದಲ್ಲಿ ಅಂಥ ಷೇರುಗಳಿಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು, ಅಂಥ ಷೇರುಗಳಿಗೆ ಸಂಬಂಧಿಸಿ ಸಂದಾಯಮಾಡಿದ ಮೊಬಲಗಿಗೆ ಪರಿಮಿತಗೊಳಿಸತಕ್ಕುದು.

47. ಲಾಭಾಂಶದ ಮೊಬಲಗಿನ ಮೇಲೆ ನಿರ್ಬಂಧ.- ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿಯ ಹಣದಿಂದ ಇತರ ಸಹಕಾರ ಸಂಘಗಳಲ್ಲಿ ಷೇರುಗಳನ್ನು ಖರೀದಿಸಿದ ಅಪೆಕ್ಸ್ ಸಂಘವು ಮತ್ತು `ರಾಜ್ಯ ಪಾಲುಗಾರಿಕೆ ಉಪನಿಧಿ'ಯ ಹಣದಿಂದ ಪ್ರಾಥಮಿಕ ಸಂಘಗಳಲ್ಲಿ ಷೇರುಗಳನ್ನು ಖರೀದಿಸಿದ ಕೇಂದ್ರ ಸಂಘವು, ಸದರಿ ಷೇರುಗಳ ಮೇಲೆ, ಸಂಬಂಧಪಟ್ಟ ಸಂಘವು ಘೋಷಿಸಿದಂಥ ಮತ್ತು ಆ ಸಂಘದ ಇತರ ಷೇರುದಾರರಿಗೆ ಸಂದಾಯವಾಗುವಂಥ ಲಾಭಾಂಶಕ್ಕೆ ಮಾತ್ರ ಹಕ್ಕುಳ್ಳದ್ದಾಗಿರತಕ್ಕುದು.

48. ಅಪೆಕ್ಸ್ ಮತ್ತು ಕೇಂದ್ರ ಸಂಘಗಳಿಗೆ ನಷ್ಟಭರ್ತಿ.- (1) ರಾಜ್ಯ ಪಾಲುಗಾರಿಕೆ ಮುಖ್ಯ ನಿಧಿಯಿಂದ ಯಾವ ಸಹಕಾರ ಸಂಘದಲ್ಲಿ ಷೇರುಗಳನ್ನು ಕೊಳ್ಳಲಾಗಿದೆಯೋ ಆ ಸಹಕಾರ ಸಂಘವನ್ನು ಸಮಾಪ್ತಗೊಳಿಸಿದರೆ ಅಥವಾ ವಿಸರ್ಜಿಸಿದರೆ, ಷೇರುಗಳನ್ನು ಖರೀದಿಸಿದ ಅಪೆಕ್ಸ್ ಸಂಘದ ವಿರುದ್ಧ ಅಂಥ ಖರೀದಿಯಿಂದ ಉದ್ಭವಿಸುವ ಯಾವುದೇ ನಷ್ಟಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರವು ಯಾವುದೇ ಕ್ಲೇಮು ಮಾಡತಕ್ಕುದಲ್ಲ. ಆದರೆ, ಸಂದರ್ಭಾನುಸಾರ, ಸಮಾಪನ

ವ್ಯವಹರಣೆಗಳಲ್ಲಿ ಅಥವಾ ವಿಸರ್ಜನೆಯ ತರುವಾಯ ಅಪೆಕ್ಸ್ ಸಂಘವು ಸ್ವೀಕರಿಸಿದ ಯಾವುದೇ ಹಣಕ್ಕೆ ರಾಜ್ಯಸರ್ಕಾರವು ಹಕ್ಕುಳ್ಳದ್ದಾಗಿರತಕ್ಕುದು.

(2) `ರಾಜ್ಯಪಾಲುಗಾರಿಕೆ ಉಪನಿಧಿ'ಯಿಂದ ಯಾವ ಸಹಕಾರ ಸಂಘದಲ್ಲಿ ಷೇರುಗಳನ್ನು ಖರೀದಿಸಲಾಗಿದೆಯೋ ಆ ಸಹಕಾರ ಸಂಘವನ್ನು ಸಮಾಪನಗೊಳಿಸಿದರೆ ಅಥವಾ ವಿಸರ್ಜಿಸಿದರೆ ಷೇರುಗಳನ್ನು ಖರೀದಿಸಿದ ಕೇಂದ್ರ ಸಂಘದ ವಿರುದ್ಧ ಅಂಥ ಖರೀದಿಯಿಂದ ಉದ್ಭವಿಸುವ ಯಾವುದೇ ನಷ್ಟಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರವು ಅಥವಾ ಅಪೆಕ್ಸ್ ಸಂಘವು ಯಾವುದೇ ಕ್ಲೇಮು ಮಾಡತಕ್ಕುದಲ್ಲ. ಆದರೆ ಸಂದರ್ಭಾನುಸಾರ ಸಮಾಪನ ವ್ಯವಹರಣೆಗಳಲ್ಲಿ ಅಥವಾ ವಿಸರ್ಜನೆಯ ತರುವಾಯ ಕೇಂದ್ರ ಸಂಘವು ಸ್ವೀಕರಿಸಿದ ಯಾವುದೇ ಹಣಕ್ಕೆ ಅಪೆಕ್ಸ್ ಸಂಘವು ಹಕ್ಕುಳ್ಳದ್ದಾಗಿರತಕ್ಕುದು ಮತ್ತು ಅಂಥ ಹಣವನ್ನು ಮುಖ್ಯ ರಾಜ್ಯಪಾಲುಗಾರಿಕೆ ನಿಧಿಗೆ ಜಮೆಮಾಡತಕ್ಕುದು.

49. ಷೇರು ಬಂಡವಾಳ ಮತ್ತು ಲಾಭಾಂಶ, ಮೊದಲಾದವುಗಳ ವಿಲೆ.- (1) ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿಯ ಹಣದಿಂದ ಖರೀದಿಸಿದ ಇತರ ಸಹಕಾರ ಸಂಘಗಳ ಷೇರುಗಳ ಸಂಬಂಧದಲ್ಲಿ ಅಂಥ ಷೇರುಗಳ ವಿಮೋಚನೆಯ ತರುವಾಯ ಅಥವಾ ಲಾಭಾಂಶ ರೂಪದಲ್ಲಿ ಅಥವಾ ಅನ್ಯಥಾ ಅಪೆಕ್ಸ್ ಸಂಘವು ಸ್ವೀಕರಿಸಿದ ಎಲ್ಲಾ ಹಣವನ್ನು ಮೊದಲು ಆ ನಿಧಿಗೆ ಜಮೆ ಮಾಡತಕ್ಕುದು.

(2) `ರಾಜ್ಯ ಪಾಲುಗಾರಿಕೆ ಉಪನಿಧಿ'ಯ ಹಣದಿಂದ ಖರೀದಿಸಿದ ಪ್ರಾಥಮಿಕ ಸಂಘಗಳ ಷೇರುಗಳ ಸಂಬಂಧದಲ್ಲಿ, ಅಂಥ ಷೇರುಗಳ ವಿಮೋಚನೆಯ ತರುವಾಯ ಅಥವಾ ಲಾಭಾಂಶದ ರೂಪದಲ್ಲಿ ಅಥವಾ ಅನ್ಯಥಾ ಕೇಂದ್ರ ಸಂಘವು ಸ್ವೀಕರಿಸಿದ ಎಲ್ಲಾ ಹಣವನ್ನು ಮೊದಲು ಆ ನಿಧಿಗೆ ಜಮೆ ಮಾಡತಕ್ಕುದು ಮತ್ತು ಆ ತರುವಾಯ ಅದನ್ನು ಅಪೆಕ್ಸ್ ಸಂಘಕ್ಕೆ ವರ್ಗಾಯಿಸತಕ್ಕುದು, ಆ ಸಂಘವು ಅದನ್ನು ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿಗೆ ಜಮೆ ಮಾಡತಕ್ಕುದು.

(3) (1)ನೇ ಉಪಪ್ರಕರಣ ಮತ್ತು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಎಲ್ಲಾ ಹಣವನ್ನು ಮತ್ತು ಲಾಭಾಂಶಗಳನ್ನು, ಷೇರು, ಸಂದರ್ಭಾನುಸಾರ, ಅಪೆಕ್ಸ್ ಸಂಘದ ಅಥವಾ ಕೇಂದ್ರ ಸಂಘದ ಹೆಸರಿನಲ್ಲಿ ಇದ್ದರೂ, ರಾಜ್ಯಸರ್ಕಾರಕ್ಕೆ ಸಂದಾಯ ಮಾಡತಕ್ಕುದು.

(4) (3)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವುದನ್ನು ಉಳಿದು, ರಾಜ್ಯಸರ್ಕಾರವು 42ನೇ ಪ್ರಕರಣದ ಮೇರೆಗೆ ಅಪೆಕ್ಸ್ ಸಂಘಕ್ಕೆ ಒದಗಿಸಿದ ಹಣದ ಮೇಲೆ ಅದು ಯಾವುದೇ ಇತರ ಪ್ರತಿಫಲಕ್ಕೆ ಹಕ್ಕು ಹೊಂದಿರತಕ್ಕುದಲ್ಲ.

50. ಅಪೆಕ್ಸ್ ಅಥವಾ ಕೇಂದ್ರ ಸಂಘದ ಸಮಾಪನದ ತರುವಾಯ `ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿ'ಯ ಮತ್ತು `ರಾಜ್ಯ ಪಾಲುಗಾರಿಕೆ ಉಪನಿಧಿ'ಯ ವಿಲೆ.- (1) `ಮುಖ್ಯ ರಾಜ್ಯ

ಪಾಲುಗಾರಿಕೆ ನಿಧಿ'ಯನ್ನು ಸ್ಥಾಪಿಸಿದ ಅಪೆಕ್ಸ್ ಸಂಘವನ್ನು ಸಮಾಪನಗೊಳಿಸಿದರೆ ಅಥವಾ ವಿಸರ್ಜಿಸಿದರೆ, ಆ ನಿಧಿಯಲ್ಲಿ ಜಮೆ ಆಗಿರುವ ಅಥವಾ ಅದಕ್ಕೆ ಸಂದಾಯವಾಗತಕ್ಕ ಎಲ್ಲಾ ಹಣಗಳನ್ನು ರಾಜ್ಯಸರ್ಕಾರಕ್ಕೆ ಸಂದಾಯಮಾಡತಕ್ಕುದು.

(2) `ರಾಜ್ಯ ಪಾಲುಗಾರಿಕೆ ಉಪನಿಧಿ'ಯನ್ನು ಸ್ಥಾಪಿಸಿದ ಕೇಂದ್ರ ಸಂಘವನ್ನು ಸಮಾಪನಗೊಳಿಸಿದರೆ ಅಥವಾ ವಿಸರ್ಜಿಸಿದರೆ, ಆ ನಿಧಿಯಲ್ಲಿ ಜಮೆ ಆಗಿರುವ ಅಥವಾ ಅದಕ್ಕೆ ಸಂದಾಯವಾಗತಕ್ಕ ಎಲ್ಲಾ ಹಣಗಳನ್ನು, ಅದು 43ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವ `ಮುಖ್ಯ ಪಾಲುಗಾರಿಕೆ ನಿಧಿ'ಯಿಂದ ಹಣವನ್ನು ಪಡೆಯಿತೋ ಆ ನಿಧಿಗೆ ಸಂದಾಯ ಮಾಡತಕ್ಕುದು ಮತ್ತು ಜಮೆ ಮಾಡತಕ್ಕುದು. **51. ಮುಖ್ಯ ರಾಜ್ಯಪಾಲುಗಾರಿಕೆ ನಿಧಿಯು ಮತ್ತು ರಾಜ್ಯ ಪಾಲುಗಾರಿಕೆ ಉಪನಿಧಿಯು ಆಸ್ತಿಗಳ ಭಾಗವಾಗದಿರುವುದು.-** `ಮುಖ್ಯ ರಾಜ್ಯಪಾಲುಗಾರಿಕೆ ನಿಧಿ'ಗೆ ಅಥವಾ `ರಾಜ್ಯ ಪಾಲುಗಾರಿಕೆ ಉಪನಿಧಿಗೆ' ಜಮೆ ಆಗಿರುವ ಯಾವುದೇ ಮೊಬಲಗು, ಸಂದರ್ಭಾನುಸಾರ, ಅಪೆಕ್ಸ್ ಸಂಘದ ಅಥವಾ ಕೇಂದ್ರ ಸಂಘದ ಆಸ್ತಿಯ ಭಾಗವಾಗಿರತಕ್ಕುದಲ್ಲ.

52. ರಾಜ್ಯ ಸರ್ಕಾರ ಮತ್ತು ಅಪೆಕ್ಸ್ ಸಂಘಗಳು ಮಾಡಿಕೊಳ್ಳುವ ಒಪಂಪ್ಪದ.- ಈ ಅಧ್ಯಾಯದ ಹಿಂದೆ ಹೇಳಿದ ಉಪಬಂಧಗಳಿಗೆ ಒಳಪಟ್ಟು,-

(ಎ) 44ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಅಪೆಕ್ಸ್ ಸಂಘಕ್ಕೆ ಹಣವನ್ನು ಒದಗಿಸುವ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿರೂಪಿಸುತ್ತಾ ರಾಜ್ಯ ಸರ್ಕಾರವು ಅಪೆಕ್ಸ್ ಸಂಘದೊಡನೆ ಒಪಂಪ್ಪದ ಮಾಡಿಕೊಳ್ಳಬಹುದು;

(ಬಿ) 43ನೇ ಪ್ರಕರಣದ (2)ನೇ ಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ `ಮುಖ್ಯ ರಾಜ್ಯ ಪಾಲುಗಾರಿಕೆ ನಿಧಿ'ಯಿಂದ ಕೇಂದ್ರ ಸಂಘಕ್ಕೆ ಹಣವನ್ನು ಒದಗಿಸುವ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿರೂಪಿಸುತ್ತಾ ಅಪೆಕ್ಸ್ ಸಂಘವು ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆದು ಆ ಸಂಘದೊಡನೆ ಒಪಂಪ್ಪದ ಮಾಡಿಕೊಳ್ಳಬಹುದು.

53. ಸಹಕಾರ ಸಂಘಗಳಿಗೆ ನೀಡಲಾಗುವ ರಾಜ್ಯ ನೆರವಿನ ಇತರ ಪ್ರಕಾರಗಳು.- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು,- (ಎ) ಸಹಕಾರ ಸಂಘಗಳಿಗೆ ಸಾಲಗಳನ್ನು ಅಥವಾ ಮುಂಗಡಗಳನ್ನು ಕೊಡಬಹುದು;

(ಬಿ) ಸಹಕಾರ ಸಂಘವು ಹೊರಡಿಸಿದ ಡಿಬೆಂಚರುಗಳ ಅಸಲಿನ ಮರುಸಂದಾಯದ ಮತ್ತು ಅದರ ಮೇಲಣ ಬಡ್ಡಿಯ ಸಂದಾಯದ ಬಗ್ಗೆ ಖಾತರಿ ಕೊಡಬಹುದು;

(ಸಿ) ಸಹಕಾರ ಸಂಘದ ಷೇರು ಬಂಡವಾಳದ ಮರು ಸಂದಾಯ ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ದರಗಳಲ್ಲಿ ಅದರ ಮೇಲಣ ಲಾಭಾಂಶಗಳ ಸಂದಾಯದ ಬಗ್ಗೆ ಖಾತರಿ ಕೊಡಬಹುದು;

(ಡಿ) ಸಹಕಾರ ಸಂಘಕ್ಕೆ ನೀಡಲಾದ ಸಾಲಗಳು ಮತ್ತು ಮುಂಗಡಗಳ ಅಸಲಿನ ಮರುಸಂದಾಯದ ಮತ್ತು ಅವುಗಳ ಮೇಲಣ ಬಡ್ಡಿಯ ಸಂದಾಯದ ಬಗ್ಗೆ ಖಾತರಿ ಕೊಡಬಹುದು; ಮತ್ತು

(ಇ) ಯಾವುದೇ ಸಹಕಾರ ಸಂಘಕ್ಕೆ ಸಹಾಯಧನವೂ ಸೇರಿ ಯಾವುದೇ ಇತರ ಪ್ರಕಾರದ ಹಣಕಾಸು ನೆರವನ್ನು ಕೊಡಬಹುದು.

[2][[1][53ಎ. xxx][1]][2]

1.2000ದ ಅಧಿನಿಯಮ ಸಂಖ್ಯೆ 13ರ ಮೂಲಕ 26.2.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][54. xxx][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

55. ಈ ಅಧ್ಯಾಯದ ಉಪಬಂಧಗಳು ಇತರ ಕಾನೂನುಗಳ ಮೇಲೆ ಅಧ್ಯಾರೋಹಿಯಾಗಿರುವುದು.- ಈ ಅಧ್ಯಾಯದ 42ರಿಂದ 54ರ ವರೆಗಿನ ಪ್ರಕರಣಗಳ ಉಪಬಂಧಗಳು, ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿರುವುದು ಏನೇ ಇದ್ದರೂ, ಪರಿಣಾಮಕಾರಿಯಾಗತಕ್ಕುದು.

ಅಧ್ಯಾಯ VII

ಸಹಕಾರ ಸಂಘಗಳ ಸ್ವತ್ತುಗಳು ಮತ್ತು ನಿಧಿಗಳು

[1][**56. ನಿಧಿಗಳ ಸಂಗ್ರಹಣೆ.-** (1) ಸಹಕಾರ ಸಂಘವು,-

(i) ತನ್ನ ಸದಸ್ಯರಿಂದ; ಅಥವಾ

(ii) ತನ್ನ ಠೇವಣಿದಾರರಿಂದ; ಅಥವಾ

(iii) ಯಾರೇ ಇತರ ವ್ಯಕ್ತಿಯಿಂದ, ಸಂಸ್ಥೆಗಳಿಂದ ಅಥವಾ ಸಂಘಟನೆಗಳಿಂದ,

- ಸಹಕಾರ ಸಂಘದ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಷೇರು ಬಂಡವಾಳ, ಠೇವಣಿಗಳು, ಡಿಬೆಂಚರುಗಳು, ಸಾಲಗಳು ಮತ್ತು ಇತರ ವಂತಿಗೆಗಳ ರೂಪದಲ್ಲಿ ನಿಧಿಗಳನ್ನು ಸಂಗ್ರಹಿಸಬಹುದು.

(2) ಸಹಕಾರ ಸಂಘದ ನಿವ್ವಳ ಲಾಭಗಳನ್ನು ಹೊರತುಪಡಿಸಿ, ಅದರ ನಿಧಿಯ ಯಾವುದೇ ಭಾಗವನ್ನು ಬೋನಸ್ಸಿನ ಅಥವಾ ಲಾಭಾಂಶದ ರೂಪದಲ್ಲಿ ಸಂದಾಯ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ತನ್ನ ಸದಸ್ಯರಿಗೆ ಹಂಚಿಕೆ ಮಾಡತಕ್ಕದ್ದಲ್ಲ:

ಪರಂತು, ಸದಸ್ಯನಿಗೆ, ಸಹಕಾರ ಸಂಘಕ್ಕೆ ಅವನು ಸಲ್ಲಿಸಿದ ಯಾವುದೇ ಸೇವೆಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ ಪರಿಶ್ರಮ ಧನ, ಭತ್ಯೆಗಳು ಮತ್ತು ಗೌರವ ಧನವನ್ನು ಸಂದಾಯಮಾಡಬಹುದು:

[2][ಮತ್ತು ಪರಂತು, ಯಾರೇ ನಿರ್ದೇಶಕನಿಗೆ, ಮಂಡಳಿಯ ಅಥವಾ ಸಮಿತಿಯ ಅಥವಾ ಉಪ ಸಮಿತಿಗಳ ಸಭೆಗಳಿಗೆ ಹಾಜರಾಗುವುದಕ್ಕಾಗಿ ಅಥವಾ ನಿರ್ದೇಶಕನಾಗಿ ಯಾವುದೇ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಪ್ರಯಾಣ ಭತ್ಯೆ, ದಿನ ಭತ್ಯೆ ಅಥವಾ ಇತರ ಭತ್ಯೆಗಳ ಅಥವಾ ಫೀಜ್ ನ್ನು, ಆ ಸಂಘದ ಹಣಕಾಸಿನ ಸ್ಥಿತಿಗತಿ ಮತ್ತು ಲಾಭಗಳಿಕೆಯನ್ನು ಗಮನದಲ್ಲಿಟ್ಟುಕೊಂಡು, ಆ ಉದ್ದೇಶಕ್ಕಾಗಿ ಉಪ ವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾದ ಕನಿಷ್ಠ ದರಕ್ಕಿಂತ ಹೆಚ್ಚಿನ ದರದಲ್ಲಿ ಸಂದಾಯ ಮಾಡತಕ್ಕದ್ದಲ್ಲ.][1]][2]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

57. ನಿವ್ವಳ ಲಾಭಗಳು ಮತ್ತು ಅವುಗಳ ವಿಲೆ.- (1) ಸಹಕಾರ ಸಂಘಗಳ ನಿವ್ವಳ ಲಾಭಗಳನ್ನು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ನಿರ್ಧರಿಸತಕ್ಕುದು ಮತ್ತು ಸಹಕಾರ ಸಂಘಗಳ ವಿವಿಧ ವರ್ಗಗಳಿಗಾಗಿ ವಿವಿಧ ನಿಯಮಗಳನ್ನು ರಚಿಸಬಹುದು.

(2) ಸಹಕಾರ ಸಂಘವು, ಯಾವುದೇ ವರ್ಷದ ತನ್ನ ನಿವ್ವಳ ಲಾಭಗಳ ಪೈಕಿ ಆ ಲಾಭಗಳ ಶೇಕಡಾ ಇಪ್ಪತ್ತೈದಕ್ಕಿಂತ ಕಡಿಮೆಯಿಲ್ಲದ ಮೊಬಲಗನ್ನು ವಿಧಿಸಲು ನಿಧಿಗೆ ವರ್ಗಾಯಿಸತಕ್ಕುದು.

[3][(2ಎ) ಸಹಕಾರ ಸಂಘವು, ತನ್ನ ನಿವ್ವಳ ಲಾಭದ ಶಿಲ್ಕಿನಿಂದ ಶೇಕಡಾ ಎರಡರಷ್ಟನ್ನು ಕರ್ನಾಟಕ ರಾಜ್ಯ ಸಹಕಾರಿ ಒಕ್ಕೂಟ ನಿಯಮಿತ, ಬೆಂಗಳೂರು ಇವರ ಆಡಳಿತದಲ್ಲಿರುವ ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ನೀಡತಕ್ಕುದು.

[4][ಪರಂತು, ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ನಿವ್ವಳ ಲಾಭದಲ್ಲಿ ಉಪಪ್ರಕರಣ (2ಎ) ರಲ್ಲಿ ನಿಗದಿಪಡಿಸಿರುವ ಶೇಕಡ ಎರಡರಷ್ಟು ಸಹಕಾರ ಶಿಕ್ಷಣ ನಿಧಿಯ ಜೊತೆಗೆ ಶೇಕಡಾ ಒಂದರಷ್ಟನ್ನು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಕ್ಕೆ ವಂತಿಗೆ ನೀಡತಕ್ಕದ್ದು.][4]

[5][ಮತ್ತು ಪರಂತು, ಸಹಕಾರ ಶಿಕ್ಷಣ ನಿಧಿಯ ಖಾತೆಗೆ ಸಹಕಾರ ಸಂಘವು ನೀಡುವ ಒಟ್ಟು ವಂತಿಗೆಯಿಂದ ಪ್ರತಿ ವರ್ಷವು ನಾಲ್ಕನೇ ಒಂದು ಭಾಗದಷ್ಟನ್ನು ಸಹಕಾರಿ ಶಿಕ್ಷಣ, ತರಬೇತಿ ಮತ್ತು

ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದ ಮೂಲಕ ಪ್ರಾಯೋಜಿತವಾದ ಮತ್ತು ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿತವಾದ ಸಹಕಾರ ಅಕಾಡೆಮಿ (ನೋಂ.) ಮೈಸೂರು ಇದರ ಖಾತೆಗೆ ಸಂದಾಯ ಮಾಡತಕ್ಕದ್ದು.][5]

(2ಬಿ) ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ಕೊಡಲು ವಿಫಲವಾದ ಯಾವ ಸಹಕಾರ ಸಂಘವೂ ತನ್ನ ಸದಸ್ಯರುಗಳಿಗೆ ಲಾಭಾಂಶವನ್ನು ಸಂದಾಯ ಮಾಡತಕ್ಕುದಲ್ಲ.][3]

(3) ನಿವ್ವಳ ಲಾಭಗಳ ಶಿಲ್ಕನ್ನು [2][xxx][2] ಈ ಕೆಳಕಂಡ ಎಲ್ಲ ಉದ್ದೇಶಗಳಿಗೆ ಅಥವಾ ಅವುಗಳಲ್ಲಿ ಯಾವೊಂದಕ್ಕೆ ಉಪಯೋಗಿಸಬಹುದು, ಎಂದರೆ:-

[1][(ಎ) xxxx

(ಬಿ) xxxx][1]

(ಸಿ) ಸದಸ್ಯರಿಗೆ ಅವರು ಸಂಘದೊಡನೆ ಮಾಡಿದ ವ್ಯವಹಾರದ ಮೊಬಲಗಿನ ಅಥವಾ ಪ್ರಮಾಣದ ಮೇಲೆ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಷ್ಟು ಮತ್ತು ಅಂಥ ರೀತಿಯಲ್ಲಿ ಬೋನಸ್ಸಿನ ಸಂದಾಯ:

ಪರಂತು, ಪತ್ತಿನ ಸಂಘದ ಸದಸ್ಯರಿಗೆ ಯಾವುದೇ ಬೋನಸ್ಸನ್ನು ಸಂದಾಯ ಮಡತಕ್ಕುದಲ್ಲ;

(ಡಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ವಿಶೇಷ ರಚನೆ ಮತ್ತು ಅವುಗಳಿಗೆ ವಂತಿಗೆಗಳು;

(ಇ) ಧರ್ಮಾರ್ಥ ದತ್ತಿಗಳ ಅಧಿನಿಯಮ, 1890ರ (1890ರ ಕೇಂದ್ರ ಅಧಿನಿಯಮ VI) 2ನೇ ಪ್ರಕರಣದಲ್ಲಿ ಪರಿಭಾಷಿಸಿದಂಥ ಯಾವುದೇ ಧರ್ಮಾರ್ಥ ಉದ್ದೇಶಕ್ಕಾಗಿ ನಿವ್ವಳ ಲಾಭಗಳ ಶೇಕಡಾ ಹತ್ತಕ್ಕೆ ಮಿರದ ಮೊಬಲಗುಗಳ ದೇಣಿಗೆ; ಮತ್ತು

(ಎಫ್) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಷ್ಟು ಮತ್ತು ಅಂಥ ರೀತಿಯಲ್ಲಿ ಸಂಘದ ನೌಕರರಿಗೆ ಬೋನಸ್ಸಿನ ಸಂದಾಯ:

ಪರಂತು, ಯಾವುದೇ ವರ್ಷದಲ್ಲಿ ಯಾರೇ ನೌಕರನಿಗೆ ಸಂದಾಯಮಾಡತಕ್ಕ ಬೋನಸ್ಸು ಎರಡು ತಿಂಗಳ ವೇತನವನ್ನು ಮಿÁರತಕ್ಕುದಲ್ಲ.

2[(4) ಸಹಕಾರ ಸಂಘವು, (2), (2ಎ) ಮತ್ತು (3)ನೇ ಉಪಕಪ್ರಕರಣಗಳಲ್ಲಿ ಮತ್ತು ಸಂಘದ ಉಪ ವಿಧಿಗಳಲ್ಲಿ ಉಪಬಂಧಿಸಿದಂತೆ ಮುರುಗಡೆ ಮಾಡಿದ ನಂತರ ಲಭ್ಯವಿರುವ ನಿವ್ವಳ ಲಾಭಗಳ ಶಿಲ್ಕಿನಿಂದ ಲಾಭಾಂಶಗಳನ್ನು ತನ್ನ ಸದಸ್ಯರಿಗೆ ಸಂದಾಯ ಮಾಡತಕ್ಕುದು.][2]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

5. 2017ರ ಅಧಿನಿಯಮ ಸಂಖ್ಯೆ 7ರ ಮೂಲಕ 04.01.2017 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][57ಎ- ಸಹಕಾರಿ ಶಿಕ್ಷಣ ಮತ್ತು ತರಬೇತಿ,- ಸಹಕಾರಿ ಶಿಕ್ಷಣ ನಿಧಿಯನ್ನು, ರಾಜ್ಯದ ಸಹಕಾರ ಚಳುವಳಿಯ ಸಂವರ್ಧನೆಯ ಉದ್ದೇಶಕ್ಕಾಗಿ ಮತ್ತು ಸಹಕಾರ ಸಂಘಗಳ ಸದಸ್ಯರು, ನಿರ್ದೇಶಕರು ಮತ್ತು ಸಹಕಾರಿ ಕಾರ್ಯಕರ್ತರಿಗೆ ಮತ್ತು ಸಾರ್ವಜನಿಕರಿಗೆ ಶಿಕ್ಷಣ ನೀಡುವುದಕ್ಕಾಗಿ ಮತ್ತು ಸಹಕಾರ ಸಂಘಗಳ ನೌಕರರಿಗೆ ತರಬೇತಿ ನೀಡುವುದಕ್ಕಾಗಿ ಬಳಸತಕ್ಕದ್ದು.

(2) ಪ್ರತಿಯೊಂದು ಸಹಕಾರ ಸಂಘವು, ತನ್ನ ವಂತಿಗೆಯನ್ನು ಕರ್ನಾಟಕ ರಾಜ್ಯ ಸಹಕಾರ ಬ್ಯಾಂಕ್ ನಿಯಮಿತದಲ್ಲಿ ಕರ್ನಾಟಕ ರಾಜ್ಯ ಸಹಕಾರ ಒಕ್ಕೂಟದ ಖಾತೆಗೆ ಅಥವಾ ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ, ಅದರ ವಾರ್ಷಿಕ ಮಹಾಸಭೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಂದಾಯ ಮಾಡತಕ್ಕದ್ದು. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಮೊಬಲಗನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಅದನ್ನು, ಕರ್ನಾಟಕ ರಾಜ್ಯ ಸಹಕಾರಿ ಒಕ್ಕೂಟದ ಖಾತೆಗೆ ರಾಜ್ಯ ಸಹಕಾರ ಬ್ಯಾಂಕಿಗೆ ವರ್ಗಾವಣೆ ಮಾಡತಕ್ಕದ್ದು.

(3) ಸಹಕಾರಿ ಶಿಕ್ಷಣ ನಿಧಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳು ನೀಡಿದ ಎಲ್ಲ ವಂತಿಗೆಗಳನ್ನು ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರಗಳಿಂದ ಸ್ವೀಕರಿಸಿದ ಅನುದಾನಗಳನ್ನು ಮತ್ತು ಯಾರೇ ವ್ಯಕ್ತಿಯು ನೀಡಿದ ದೇಣಿಗೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಸಹಕಾರಿ ಶಿಕ್ಷಣ ನಿಧಿಗೆ ಜಮೆ ಮಾಡತಕ್ಕದ್ದು,

(4) ಸಹಕಾರಿ ಶಿಕ್ಷಣ ನಿಧಿಯನ್ನು, ನಿಯಮಿಸಬಹುದಾದಂಥ ಕಾರ್ಯಕ್ರಮಗಳಿಗಾಗಿ ಮತ್ತು ಅಂತಹ ರೀತಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಒಕ್ಕೂಟ ನಿಯಮಿತವು ನಿರ್ವಹಿಸತಕ್ಕದ್ದು ಮತ್ತು ನಿಯಂತ್ರಿಸತಕ್ಕದ್ದು.

(5) ಸಹಕಾರ ಶಿಕ್ಷಣ ನಿಧಿಯ ಪೈಕಿ ಯಾವುದೇ ವೆಚ್ಚವನ್ನು, ನಿಯಮಿಸಬಹುದಾದ ಉದ್ದೇಶಕ್ಕಾಗಿ ರಚಿಸಲಾದ ಸಲಹಾ ಸಮಿತಿಯ ಅನುಮೋದನೆ ಪಡೆಯದೆ ಭರಿಸತಕ್ಕದ್ದಲ್ಲ.][1]

1.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

58. ನಿಧಿಗಳ ಹೂಡಿಕೆ.- ಸಹಕಾರ ಸಂಘವು ತನ್ನ ನಿಧಿಗಳನ್ನು -

(ಎ) ಸರ್ಕಾರಿ ಉಳಿತಾಯ ಖಾತೆಯಲ್ಲಿ; ಅಥವಾ

(ಬಿ) ಭಾರತ ನ್ಯಾಸಗಳ ಅಧಿನಿಯಮ, 1882ರ (1882ರ ಕೇಂದ್ರ ಅಧಿನಿಯಮII) 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತಾ ಪತ್ರಗಳಲ್ಲಿ; ಅಥವಾ

(ಸಿ) ಇತರ ಯಾವುದೇ ಸಹಕಾರ ಸಂಘದ ಷೇರುಗಳಲ್ಲಿ ಅಥವಾ ಭದ್ರತಾ ಪತ್ರಗಳಲ್ಲಿ; ಅಥವಾ

[1][(ಡಿ) ಯಾವುದೇ ಸಹಕಾರ ಬ್ಯಾಂಕಿನಲ್ಲಿ; ಅಥವಾ

(ಇ) ರಿಸರ್ವ್ ಬ್ಯಾಂಕಿನ ನಿಯಂತ್ರಣದಲ್ಲಿರುವ, ಅದರ ಆಯ್ಕೆಯಂತೆ ಮತ್ತು [3][ಮುಂದಿನ ವಾರ್ಷಿಕ ಸಾಮಾನ್ಯ ನಿಕಾಯದ][3] ಅನುಮೋದಿಸಿದಂತೆ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ [2][xxx][2]:

[4][ಪರಂತು, ಸಹಕಾರ ಸಂಘವು, ಅಂಥ ಸಂಘದ ಕಾರ್ಯನಿರ್ವಹಣಾ ಪ್ರದೇಶದ ಹೊರಗೆ ನಿಧಿಯನ್ನು ಹೂಡಿಕೆ ಅಥವಾ ಠೇವಣಿ ಮಾಡಿದಲ್ಲಿ, ರಿಜಿಸ್ಟ್ರಾರ್‌ರಿಂದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.][4]

[2][xxx][2]

ಮತ್ತೂ ಪರಂತು, ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ, ಅಂಥ ಹೂಡಿಕೆಗಳನ್ನು, ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ಹೊರಡಿಸಿದ ಸೂಚನೆಗಳಿಗೆ ಮತ್ತು ನಿರ್ದೇಶನಗಳಿಗೆ ಅನುಸಾರವಾಗಿ ಮಾಡತಕ್ಕದ್ದು.][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

3. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

59. ಎರವಲುಗಳ ಮೇಲೆ ನಿರ್ಬಂಧಗಳು:- [1][(1)][1] ಸಹಕಾರ ಸಂಘವು, [2][xxx][2] ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಮಾತ್ರವೇ ಠೇವಣಿಗಳನ್ನು ಮತ್ತು ಸಾಲಗಳನ್ನು ಸ್ವೀಕರಿಸತಕ್ಕುದು.

1. 1975ರ ಅಧಿನಿಯಮ ಸಂಖ್ಯೆ 2ರ ಮೂಲಕ 17.7.1975 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ಕೊಡಲಾಗಿದೆ.

2. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[2][[1][(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಸಹಕಾರ ಸಂಘದ ಮಹಾಸಭೆಯು, ಆ ಮಹಾಸಭೆಯು ಠರಾವಿನಲ್ಲಿ ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪತ್ತಿನ ಏಜೆನ್ಸಿಯಿಂದ ಸಾಲ ತೆಗೆದುಕೊಳ್ಳಲು ಸಂಘಕ್ಕೆ ಅನುಮತಿ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು:

ಪರಂತು, ಅಂಥ ಠರಾವು ಮುಂದಿನ ವಾರ್ಷಿಕ ಮಹಾಸಭೆಯವರೆಗೆ ಸಿಂಧುವಾಗಿರತಕ್ಕದ್ದು.][1]][2]

1.2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

60. ಸಾಲಗಳ ಮೇಲೆ ನಿರ್ಬಂಧಗಳು.- (1) ಸಹಕಾರ ಸಂಘವು ಸದಸ್ಯನನ್ನು ಹೊರತುಪಡಿಸಿ ಯಾರೇ ವ್ಯಕ್ತಿಗೆ ಸಾಲ ಕೊಡತಕ್ಕುದಲ್ಲ:

ಪರಂತು, [1][xxx][1] ಸಹಕಾರ ಸಂಘವು ಇತರ ಸಹಕಾರ ಸಂಘಕ್ಕೆ ಸಾಲಗಳನ್ನು ಕೊಡಬಹುದು.

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಸಹಕಾರ ಸಂಘವು ಠೇವಣಿದಾರನಿಗೆ ಅವನ ಠೇವಣಿಯ ಭದ್ರತೆಯ ಮೇಲೆ ಸಾಲ ಕೊಡಬಹುದು.

61. ಸದಸ್ಯರಲ್ಲದ ಇತರರೊಡನೆ ನಡೆಸುವ ಇತರ ವ್ಯವಹಾರಗಳ ಮೇಲೆ ನಿರ್ಬಂಧ.- 59ನೇ ಮತ್ತು 60ನೇ ಪ್ರಕರಣಗಳಲ್ಲಿ ಉಪಬಂಧಿಸಿರುವುದನ್ನುಳಿದು, ಸದಸ್ಯರಲ್ಲದ ಇತರ ವ್ಯಕ್ತಿಗಳೊಡನೆ ಸಹಕಾರ ಸಂಘವು ನಡೆಸುವ ವ್ಯವಹಾರಗಳು, ನಿಯಮಿಸಬಹುದಾದ ನಿರ್ಬಂಧಗಳು, ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟಿರತಕ್ಕುದು.

62. ಭವಿಷ್ಯ ನಿಧಿ.- (1) ಸಹಕಾರ ಸಂಘವು ತನ್ನ ನೌಕರರ ಪ್ರಯೋಜನಕ್ಕಾಗಿ ವಂತಿಗೆ ಭವಿಷ್ಯ ನಿಧಿಯನ್ನು ಸ್ಥಾಪಿಸಬಹುದು, ಅದಕ್ಕೆ ಸಂಘದ ಉಪವಿಧಿಗಳಿಗನುಸಾರವಾಗಿ ನೌಕರರು ಮತ್ತು ಸಂಘವು ನೀಡಿದ ಎಲ್ಲ ವಂತಿಗೆಗಳನ್ನು ಜಮೆ ಮಾಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಸಹಕಾರ ಸಂಘವು ಸ್ಥಾಪಿಸಿದ ವಂತಿಗೆ ಭವಿಷ್ಯ ನಿಧಿಯನ್ನು

(ಎ) ಸಂಘದ ವ್ಯವಹಾರದಲ್ಲಿ ಉಪಯೋಗಿಸತಕ್ಕುದಲ್ಲ;

(ಬಿ) ಅದು ಸಂಘದ ಆಸ್ತಿಯ ಭಾಗವಾಗಿರತಕ್ಕುದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಜಪ್ತಿಗೆ ಗುರಿಯಾಗತಕ್ಕುದಲ್ಲ ಅಥವಾ ಯಾವುದೇ ಇತರ ಆದೇಶಿಕೆಗೆ ಒಳಪಡತಕ್ಕುದಲ್ಲ.

ಅಧ್ಯಾಯ- VIII

ಲೆಕ್ಕ ಪರಿಶೋಧನೆ, ವಿಚಾರಣೆ, ಪರಿಶೀಲನೆ ಮತ್ತು ಅಧಿಭಾರ

[1]**[63. ಲೆಕ್ಕ ಪರಿಶೋಧನೆ.-** (1) ಪ್ರತಿಯೊಂದು ಸಹಕಾರ ಸಂಘವು, ಸಹಕಾರ ವರ್ಷವು ಮುಕ್ತಾಯವಾದ ತರುವಾಯ ಸೆಪ್ಟಂಬರ್ ಮೊದಲನೇ ದಿನಾಂಕಕ್ಕೆ ಮೊದಲು, ಕೊನೆ ಪಕ್ಷ ವರ್ಷಕ್ಕೊಮ್ಮೆಯಾದರೂ ತನ್ನ ಲೆಕ್ಕ ಪತ್ರಗಳನ್ನು, ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರು ಅನುಮೋದಿಸಿದ ಲೆಕ್ಕ ಪರಿಶೋಧಕರ ಅಥವಾ ಲೆಕ್ಕ ಪರಿಶೋಧನಾ ಫರ್ಮುಗಳ ಪಟ್ಟಿಯ

ಪೈಕಿಯಿಂದ ಸಹಕಾರ ಸಂಘದ ಮಹಾಸಭೆಯು ನೇಮಕ ಮಾಡಿದ ಒಬ್ಬ ಲೆಕ್ಕಪರಿಶೋಧಕನಿಂದ ಅಥವಾ ಒಂದು ಲೆಕ್ಕ ಪರಿಶೋಧನಾ ಫರ್ಮ್‌ನಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು:

ಪರಂತು, ಸಹಕಾರಿ ಲೆಕ್ಕ ಪರಿಶೋಧನಾ ನಿರ್ದೇಶಕರು, ರಾಜ್ಯದಲ್ಲಿರುವ ಸಹಕಾರಿ ಸಂಘಗಳ ಲೆಕ್ಕಪತ್ರಗಳ ಪರಿಶೋಧನೆ ಕೈಗೊಳ್ಳುವುದಕ್ಕಾಗಿ ಗೊತ್ತುಪಡಿಸಿರುವ ಅರ್ಹತೆ ಮತ್ತು ಅನುಭವದ ಅಗತ್ಯತೆಯನ್ನು ಪೂರೈಸುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧನಾ ಫರ್ಮುಗಳ ಒಂದು ಪಟ್ಟಿಯನ್ನು ತಯಾರಿಸಲು ಮತ್ತು ನಿರ್ವಹಿಸಲು ಸಕ್ಷಮ ಪ್ರಾಧಿಕಾರಿಯಾಗಿರತಕ್ಕದ್ದು:

[1][ಮತ್ತು ಪರಂತು, ರಾಜ್ಯ ಸಹಕಾರ ಬ್ಯಾಂಕು ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಲೆಕ್ಕಪರಿಶೋಧನೆ ನಡೆಸಲು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರುವ ಲೆಕ್ಕಪರಿಶೋಧಕರು ಮತ್ತು ಸಂಸ್ಥೆಗಳ ಪಟ್ಟಿಯನ್ನು ರಾಷ್ಟ್ರೀಯ ಬ್ಯಾಂಕು ತಯಾರಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಪ್ರತಿಯೊಂದು ಸಹಕಾರ ಸಂಘದ ಮಹಾ ಸಭೆಯು ತನ್ನ ಮಹಾ ಸಭೆಯಲ್ಲಿ, ಯಾವ ಸಹಕಾರ ವರ್ಷಕ್ಕಾಗಿ ಮಹಾಸಭೆಯು ನಡೆಯುತ್ತಿದೆಯೋ ಆ ಸಹಕಾರ ವರ್ಷಕ್ಕೆ ಸಂಬಂಧಿಸಿದ ಸಂಘದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಲು ಒಬ್ಬ ಲೆಕ್ಕ ಪರಿಶೋಧಕನನ್ನು ಅಥವಾ ಲೆಕ್ಕ ಪರಿಶೋಧನಾ ಫರ್ಮನ್ನು ನೇಮಕ ಮಾಡತಕ್ಕದ್ದು.

[1][ಪರಂತು, ಸಂಘವು ಸಹಕಾರಿ ವರ್ಷದ ಲೆಕ್ಕಪರಿಶೋಧನೆಯನ್ನು ಮಾಡಿಸಲು ಮಹಾ ಸಭೆಯಲ್ಲಿ ಲೆಕ್ಕಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧನಾ ಫರ್ಮನ್ನು ನೇಮಿಸಲು ಮತ್ತು ಅದನ್ನು ತಿಳಿಸಲು ವಿಫಲವಾಗಿದೆಯೆಂದು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮನದಟ್ಟಾದಲ್ಲಿ, ಸಂಬಂಧಿತ ಸಂಘಕ್ಕೆ ಹೇಳಿಕೆ ನೀಡಲು ಅವಕಾಶವನ್ನು ಲಿಖಿತದಲ್ಲಿ ನೀಡಿದ ತರುವಾಯ ಹಾಗೂ ಲೆಕ್ಕ ಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧನಾ ಫರ್ಮನ್ನು ನೇಮಕ ಮಾಡಿಲ್ಲದಿರುವುದನ್ನು ಖಚಿತಪಡಿಸಿಕೊಂಡ ನಂತರ, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು, ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧನಾ ಫರ್ಮ್‌ಗಳ ಅನುಮೋದಿತ ಪಟ್ಟಿಯೊಳಗಿನಿಂದ ಸಂಘದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಲು ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧನಾ ಫರ್ಮನ್ನು ನೇಮಿಸಬಹುದು ಮತ್ತು ಹಾಗೆ ನೇಮಕಗೊಂಡ ಲೆಕ್ಕಪರಿಶೋಧಕರನ್ನು ಅಥವಾ ಲೆಕ್ಕಪರಿಶೋಧನಾ ಫರ್ಮನ್ನು ಪರಿಗಣನೆಯಲ್ಲಿರುವ ಆ ನಿರ್ದಿಷ್ಟ ಸಹಕಾರಿ ವರ್ಷಕ್ಕೆ ಆ ಸಂಘದ ಲೆಕ್ಕಪರಿಶೋಧನೆಯನ್ನು ನಡೆಸುವ ಉದ್ದೇಶಕ್ಕಾಗಿ ಲೆಕ್ಕಪರಿಶೋಧಕರೆಂದು ಅಥವಾ ಲೆಕ್ಕ ಪರಿಶೋಧನಾ ಫರ್ಮ್‌ಯೆಂದು ಭಾವಿಸತಕ್ಕದ್ದು;

ಮತ್ತು ಪರಂತು, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ನಿರ್ವಹಿಸುವ ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧನಾ ಫರ್ಮ್‌ಗಳ ಪಟ್ಟಿಯಲ್ಲಿ ನಮೂದಿಸಿರುವ ಸರ್ಕಾರಿ ಲೆಕ್ಕಪರಿಶೋಧಕರ ಸಂದರ್ಭದಲ್ಲಿ ಅವರನ್ನು ಪದನಾಮ ಮಾತ್ರದಿಂದಲೇ

ನಮೂದಿಸತಕ್ಕದ್ದು ಮತ್ತು ಆ ಲೆಕ್ಕಪರಿಶೋಧಕರ ಪಟ್ಟಿಯಿಂದ ಸರ್ಕಾರಿ ಲೆಕ್ಕಪರಿಶೋಧಕರನ್ನು ಸಹಕಾರ ಸಂಘವು ಆಯ್ಕೆ ಮಾಡಿಕೊಂಡಲ್ಲಿ, ಇಲಾಖಾ ಲೆಕ್ಕಪರಿಶೋಧಕರನ್ನು ಅವರ ಪದನಾಮದಿಂದ ಮಾತ್ರವೇ ಲೆಕ್ಕಪರಿಶೋಧನೆಯನ್ನು ನಡೆಸುವಂತೆ ಮಾಡಲು ಸಹಕಾರ ಸಂಘವು, ಸಂಬಂಧಿಸಿದ ಜಿಲ್ಲೆಯ ಸಹಕಾರಿ ಲೆಕ್ಕಪರಿಶೋಧನಾ ಉಪನಿರ್ದೇಶಕರಿಗೆ ತಿಳಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು, ಲೆಕ್ಕ ಪರಿಶೋಧಕರ ಮತ್ತು ಲೆಕ್ಕ ಪರಿಶೋಧನಾ ಫರ್ಮುಗಳ ಪಟ್ಟಿಯನ್ನು ತಯಾರಿಸುವ ರೀತಿಯು ಮತ್ತು ಪ್ರತಿಯೊಂದು ಸಹಕಾರ ಸಂಘಕ್ಕೆ ಪಟ್ಟಿಯನ್ನು ನೀಡುವ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಈ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಥವಾ 98ಯು ಪ್ರಕರಣದ ಅಥವಾ 98ವಿ ಪ್ರಕರಣದ ಅಡಿಯಲ್ಲಿಯ ಲೆಕ್ಕ ಪರಿಶೋಧನೆಯು, ಅವಧಿ ಮೀರಿದ ಋಣಗಳು ಯಾವುದಾದರೂ ಇದ್ದರೆ ಅವುಗಳ ಪರಿಶೀಲನೆಯನ್ನು, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಾಸ್ತವಿಕ ಪರಿಶೀಲನೆ ಮತ್ತು ಮೌಲ್ಯಮಾಪನವನ್ನು ನಗದು ಬಾಕಿಗಳ ಮತ್ತು ಭದ್ರತಾ ಪತ್ರಗಳ ಪರಿಶೀಲನೆಯನ್ನು ಲಾಭಗಳು ಅಥವಾ ನಷ್ಟಗಳ ಪ್ರಮಾಣೀಕರಣವನ್ನು, ನಬಾರ್ಡ್ ಅಥವಾ ಭಾರತದ ರಿಸರ್ವ್ ಬ್ಯಾಂಕಿನ ಸೂಚನೆಗಳು ಮತ್ತು ನಿರ್ದೇಶನಗಳೂ ಸೇರಿದಂತೆ ಸಹಕಾರ ಸಂಘಗಳಿಗೆ ಅನ್ವಯವಾಗುವ ಪಾರದರ್ಶಕ ಕಾನೂನು ಮತ್ತು ಇತರ ಕಾನೂನುಗಳ ಪಾಲನೆಯನ್ನು ಮತ್ತು ಸಂಘದ ಕಾರ್ಯನಿರ್ವಹಣೆಯ ಮತ್ತು ನಿಯಮಿಸಿದ ಇತರ ವಿವರಗಳ ಪರಿಶೀಲನೆಯನ್ನು ಒಳಗೊಳ್ಳುತ್ತದೆ.

(5) ಲೆಕ್ಕ ಪರಿಶೋಧಕನು ಅಥವಾ ಲೆಕ್ಕಪರಿಶೋಧನಾ ಫರ್ಮು, ಸಂಘಕ್ಕೆ ಸೇರಿದ ಅಥವಾ ಮಂಡಲಿಯು ಯಾವೊಬ್ಬ ಸದಸ್ಯನ ಅಥವಾ ಪದಾಧಿಕಾರಿಯ ಅಥವಾ ಮುಖ್ಯ ಕಾರ್ಯನಿರ್ವಾಹಕನ ಅಥವಾ ಸಂಘದ ಯಾವೊಬ್ಬ ಇತರ ಸದಸ್ಯನ ಅಭಿರಕ್ಷೆಯಲ್ಲಿರುವ ಎಲ್ಲಾ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಕಾಗದಪತ್ರಗಳು, ಭದ್ರತೆಗಳು, ನಗದು ಮತ್ತು ಇತರ ಸ್ವತ್ತುಗಳನ್ನು ಎಲ್ಲಾ ವೇಳೆಗಳಲ್ಲಿ ನೋಡಲು ಅವಕಾಶವಿರತಕ್ಕದ್ದು ಮತ್ತು ಅಂಥ ಯಾವುದೇ ಪುಸ್ತಕಗಳು, ಲೆಕ್ಕ ಪತ್ರಗಳು, ದಸ್ತಾವೇಜುಗಳ, ಕಾಗದಪತ್ರಗಳು, ಭದ್ರತೆಗಳು, ನಗದು ಅಥವಾ ಇತರ ಸ್ವತ್ತುಗಳ ಸ್ವಾಧೀನತೆಯನ್ನು ಹೊಂದಿರುವ ಅಥವಾ ಅದರ ಜವಾಬ್ದಾರಿಯನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು, ಅವುಗಳನ್ನು ಸಂಘದ ನೋಂದಾಯಿತ ಕಚೇರಿಯಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಅಥವಾ ಸಂಘದ ಕೇಂದ್ರ ಕಚೇರಿಯ ಯಾವುದೇ ಸಾರ್ವಜನಿಕ ಕಚೇರಿಯಲ್ಲಿ ಹಾಜರುಪಡಿಸಲು ಕರೆಸಿಕೊಳ್ಳಬಹುದು.

(6) ಸಂಘದ ಒಬ್ಬ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಯಾವುದೇ ಸಮಯದಲ್ಲಿ ಅಧಿಕಾರಿ ಅಥವಾ ನೌಕರನಾಗಿದ್ದಿರುವ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಸಂಘದ ಪ್ರತಿಯೊಬ್ಬ

ಸದಸ್ಯನು ಮತ್ತು ಹಿಂದಿನ ಸದಸ್ಯನು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಂದ ಅನುಮೋದನೆ ಪಡೆದ ಲೆಕ್ಕಪರಿಶೋಧಕನು ಅಥವಾ ಲೆಕ್ಕ ಪರಿಶೋಧನಾ ಫರ್ಮುಗಳು ಸಂಘದ ವ್ಯವಹಾರಕ್ಕೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಪಟ್ಟಂತೆ ಅಗÀತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(7) ಪ್ರತಿಯೊಂದು ಸಹಕಾರ ಸಂಘ ಮಂಡಲಿಯು, ಸಹಕಾರ ವರ್ಷದ ಕೊನೆಯಲ್ಲಿ ಇರುವಂತೆ, ನಿಯಮಿಸಬಹುದಾದ ಅಂಥ ಅನುಸೂಚಿಗಳು ಮತ್ತು ಇತರ ವಿವರಪತ್ರಗಳೊಂದಿಗೆ ಸ್ವೀಕೃತಿಗಳು ಮತ್ತು ಸಂದಾಯಗಳು ಅಥವಾ ಆದಾಯ ಮತ್ತು ವೆಚ್ಚ, ಲಾಭ ಮತ್ತು ನಷ್ಟ ಮತ್ತು ಜಮಾ ಖರ್ಚು ಪಟ್ಟಿಗಳಂಥ ವಾರ್ಷಿಕ ಹಣಕಾಸು ತ:ಖ್ತೆಗಳನ್ನು ಸಿದ್ಧಪಡಿಸಿ ಸಹಕಾರ ವರ್ಷವು ಮುಕ್ತಾಯವಾಗುವ ಮೂವತ್ತು ದಿನಗಳೊಳಗಾಗಿ ಲೆಕ್ಕ ಪರಿಶೋಧಕನ ಅಥವಾ ಲೆಕ್ಕಪರಿಶೋಧನಾ ಫರ್ಮಿನ ಮುಂದೆ ಲೆಕ್ಕ ಪರಿಶೋಧನೆಗಾಗಿ ಹಾಜರುಪಡಿಸುವಂತೆ ನೋಡಿಕೊಳ್ಳತಕ್ಕದ್ದು.

(8) ಲೆಕ್ಕ ಪರಿಶೋಧಕನು ಅಥವಾ ಲೆಕ್ಕ ಪರಿಶೋಧನಾ ಫರ್ಮು, ಈ ಅಧಿನಿಯಮ ಅಥವಾ ನಿಯಮಗಳಲ್ಲಿ ಉಪಬಂಧಿಸಲಾದಂತೆ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆ ನಡೆಸತಕ್ಕದ್ದು ಮತ್ತು ಪೂರ್ಣಗೊಳಿಸತಕ್ಕದ್ದು ಮತ್ತು ಸಾಧ್ಯವಾದಷ್ಟು ಬೇಗನೆ, ಆದರೆ ಪ್ರತಿವರ್ಷದ ಸೆಪ್ಟೆಂಬರ್ ಒಂದನೇ ತಾರೀಖಿನ ಒಳಗಾಗಿ ರಿಜಿಸ್ಟ್ರಾರ್‌ಗೆ, ಸಹಕಾರಿ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಮತ್ತು ಹಣಕಾಸು ಒದಗಿಸುವ ಬ್ಯಾಂಕ್‌ಗೆ ಅಥವಾ ಪತ್ತಿನ ಏಜೆನ್ಸಿಗೆ ಮತ್ತು ಆ ಸಂಘವು ಯಾವುದೇ ಇತರ ಸಹಕಾರ ಸಂಘಕ್ಕೆ ಸಂಯೋಜನೆಗೊಂಡಿದ್ದರೆ, ಅಂಥ ಸಹಕಾರ ಸಂಘಕ್ಕೆ ಲೆಕ್ಕಪರಿಶೋಧನಾ ವರದಿಯ ಪ್ರತಿಗಳನ್ನು ಕಳುಹಿಸಿ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ತಿಳಿಸತಕ್ಕದ್ದು.

(9) ಲೆಕ್ಕ ಪರಿಶೋಧಕನು ಅಥವಾ ಲೆಕ್ಕ ಪರಿಶೋಧನಾ ಫರ್ಮುಗಳು ಸಹಕಾರಿ ಸಂಘದ ಮಹಾ ಸಭೆಗೆ ಸಂಬಂಧಪಟ್ಟ ಎಲ್ಲಾ ನೋಟೀಸುಗಳನ್ನು ಮತ್ತು ಪ್ರತಿಯೊಂದು ತಿಳುವಳಿಕೆ ಪತ್ರವನ್ನು ಸ್ವೀಕರಿಸಲು ಹಕ್ಕು ಹೊಂದಿರತಕ್ಕದ್ದು ಮತ್ತು ಆ ಸಹಕಾರ ಸಂಘದ ಖರ್ಚಿನಲ್ಲಿ ಅಂಥ ಸಭೆಗೆ ಹಾಜರಾಗಲು ಮತ್ತು ಲೆಕ್ಕ ಪರಿಶೋಧಕನಾಗಿ ಅಥವಾ ಲೆಕ್ಕ ಪರಿಶೋಧನಾ ಫರ್ಮ್ ಆಗಿ ತನಗೆ ಸಂಬಂಧಿಸಿದಂತೆ ವ್ಯವಹಾರದ ಎಲ್ಲ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಮಹಾಸಭೆಯಲ್ಲಿ ಅಹವಾಲುಗಳನ್ನು ಕೇಳಲು ಹಕ್ಕು ಹೊಂದಿರತಕ್ಕದ್ದು.

(10) (1)ನೇ ಉಪ-ಪ್ರಕರಣದ ಅಡಿಯಲ್ಲಿ ನಡೆದ ಲೆಕ್ಕಪರಿಶೋಧನೆಯ ಫಲಿತಾಂಶವು, ಸಂಘದ ಕಾರ್ಯನಿರ್ವಹಣೆಯಲ್ಲಿ ಇರುವ ದೋಷಗಳನ್ನು ಬಹಿರಂಗಪಡಿಸಿದರೆ, ಮಂಡಲಿಯು, ಆ ಲೆಕ್ಕಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಿರುವ ದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಪ್ರತಿವರ್ಷ ಸೆಪ್ಟಂಬರ್ ತಿಂಗಳ ಇಪ್ಪತ್ತೈದನೇ ತಾರೀಖಿಗೆ ಮೊದಲು ನಡೆಯುವ ಮಹಾಸಭೆಯ ಮುಂದೆ ಕ್ರಮಕೈಗೊಂಡ ವರದಿಯ ಜೊತೆಗೆ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸತಕ್ಕದ್ದು ಮತ್ತು ಅಲ್ಲಿ ಸದರಿ

ದೋಷಗಳು ಮತ್ತು ಅಕ್ರಮಗಳನ್ನು ವಿವರಿಸತಕ್ಕದ್ದು. ಮಂಡಳಿಯು ಲೆಕ್ಕಪರಿಶೋಧನಾ ವರದಿಯಲ್ಲಿ ಹೇಳಿರುವ ಎಲ್ಲ ದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದನ್ನು ಮುಂದುವರೆಸತಕ್ಕದ್ದು. ಆ ಎಲ್ಲ ದೋಷಗಳನ್ನು ಸರಿಪಡಿಸುವ ವರೆಗೆ ಮತ್ತು ಅಕ್ರಮಗಳನ್ನು ಪರಿಹರಿಸುವವರೆಗೆ ಪ್ರತಿವರ್ಷ ಮಹಾಸಭೆಯಲ್ಲಿ ಆ ಬಗ್ಗೆ ಮೌಲ್ಯಮಾಪನ ಮಾಡತಕ್ಕದ್ದು. ಮಂಡಲಿಯು, ಕ್ರಮಕೈಗೊಂಡ ವರದಿಯನ್ನು ರಿಜಿಸ್ಟ್ರಾರ್‌ಗೆ ಮತ್ತು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಮಹಾಸಭೆಯ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಕಳುಹಿಸತಕ್ಕದ್ದು.

(11) ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು, ಪ್ರತೀವರ್ಷ ಅಪೆಕ್ಸ್ ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ವರದಿಗಳನ್ನು ನಿಯಮಿಸಬಹುದಾದ ರೀತಿಯಲ್ಲಿ ವಿಧಾನಮಂಡಲದ ಮುಂದೆ ಮಂಡಿಸಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(12) ನಿಯತ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಲೆಕ್ಕಪರಿಶೋಧಕನಿಂದ ಪತ್ತೆ ಹಚ್ಚಲಾಗದ ಅಥವಾ ಯುಕ್ತವಾಗಿ ಪರಿಶೀಲಿಸಲಾಗದ ಮೇಲ್ನೋಟಕ್ಕೆ ನಿಧಿಯ ವಂಚನೆ ಅಥವಾ ದುರ್ವಿನಿಯೋಗ ಅಥವಾ ಅಪರಾಧಿಕ ದುರ್ವಿನಿಯೋಗವಾಗಿದೆಯೆಂದು ಸಹಕಾರಿ ಸಂಘದ ಮಹಾ ಸರ್ವ ಸದಸ್ಯರ ಸಭೆಗೆ ಕಂಡುಬಂದಲ್ಲಿ, ಮಹಾ ಸಭೆಯು ಸಂಘದ ಹಣಕಾಸು ಸ್ಥಿತಿಗತಿಯನ್ನು ವಾಸ್ತವಿಕವಾಗಿ ಪ್ರತಿಬಿಂಬಿಸುವ ದೃಷ್ಟಿಯಿಂದ ಸಂಘದ ಯಾವುದೇ ಲೆಕ್ಕಪತ್ರವನ್ನು ಪುನರ್ ಲೆಕ್ಕಪರಿಶೋಧಿಸಲು ಅವಕಾಶ ಕಲ್ಪಿಸುವ ನಿರ್ಣಯವನ್ನು ತೆಗೆದುಕೊಳ್ಳಬಹುದು ಮತ್ತು ಲೆಕ್ಕ ಪರಿಶೋಧನೆಗೆ ಅನ್ವಯವಾಗುವ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳು ಅಂಥ ಪುನರ್-ಲೆಕ್ಕಪರಿಶೋಧನೆಗೂ ಅನ್ವಯವಾಗತಕ್ಕದ್ದು.

(13) ಸಂಘದ ಲೆಕ್ಕಪತ್ರಗಳ ಪುನರ್ ಲೆಕ್ಕಪರಿಶೋಧನೆಯು ಅವಶ್ಯಕ ಅಥವಾ ಯುಕ್ತವೆಂದು ಸಹಕಾರಿ ಸಂಘವು ಸಲ್ಲಿಸಿರುವ ಅರ್ಜಿಯಿಂದ ಅಥವಾ ಅನ್ಯಥಾ ರೀತಿಯಿಂದ ರಾಜ್ಯ ಸರ್ಕಾರಕ್ಕೆ ಕಂಡುಬಂದಲ್ಲಿ, ರಾಜ್ಯ ಸರ್ಕಾರವು, ಆದೇಶದ ಮೂಲಕ ಅಂಥ ಪುನರ್ ಲೆಕ್ಕಪರಿಶೋಧನೆಗೆ ಅವಕಾಶವನ್ನು ಕಲ್ಪಿಸಬಹುದು ಮತ್ತು ಲೆಕ್ಕಪರಿಶೋಧನೆಗೆ ಅನ್ವಯವಾಗುವ ನಿಯಮಗಳೇ ಅಂಥ ಪುನರ್ ಲೆಕ್ಕಪರಿಶೋಧನೆಗೆ ಅವಕಾಶವನ್ನು ಕಲ್ಪಿಸಬಹುದು ಮತ್ತು ಲೆಕ್ಕಪರಿಶೋಧನೆಗೆ ಅನ್ವಯವಾಗುವ ನಿಯಮಗಳೇ ಅಂಥ ಪುನರ್ ಲೆಕ್ಕಪರಿಶೋಧನೆಗೂ ಅನ್ವಯವಾಗತಕ್ಕದ್ದು :

ಪರಂತು ನಿಯಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಲೆಕ್ಕಪರಿಶೋದಕರಿಂದ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗಳಿಂದ ಪತ್ತೆಹಚ್ಚಲಾಗದ ಅಥವಾ ಯುಕ್ತವಾಗಿ ಪರೀಕ್ಷೆ ಮಾಡಲಾಗದ, ಮೇಲ್ನೋಟಕ್ಕೆ ವಂಚನೆ ಅಥವಾ ದುರ್ವಿನಿಯೋಗ ಅಥವಾ ಅಪರಾಧಿತ ದುರ್ವಿನಿಯೋಗವೆಂದು ಕಂಡುಬರುವ ಸಂದರ್ಭದಲ್ಲಿ ಅಥವಾ ಲೆಕ್ಕಪತ್ರಗಳೆಂದು ಕಂಡುಬರುವ ಸಂದರ್ಭದಲ್ಲಿ ಅಥವಾ ಲೆಕ್ಕಪತ್ರಗಳ ತಪ್ಪು ವರ್ಗಿಕರಣವಾಗಿದೆ ಎಂಬ ಸಂಧರ್ಭದಲ್ಲಿ ಅಥವಾ ಸಂಘದ ಹಣಕಾಸು

ಸ್ಥಿತಿಗತಿಯನ್ನು ವಾಸ್ತವವಾಗಿ ಪ್ರತಿಬಿಂಬಸುವಂಥ ಯಾವುದೇ ಇತರ ಯುಕ್ತ ಕಾರಣಗಳ ಸಂದರ್ಭದಲ್ಲಿ ಮಾತ್ರ ಅಂಥ ಪುನರ ಲೆಕ್ಕಪರಿಶೋಧನೆಗೆ ಆದೇಶಿಸತಕ್ಕದ್ದು.

[1][(13ಎ) ಹಿಂದಿನ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಸಹಕಾರಿ ಸಂಘದ ಲೆಕ್ಕಪರಿಶೋಧನೆಯ ನಿರ್ದೇಶಕನು, ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು, ಹಿಂದಿನ ಮೂರು ವರ್ಷಗಳಿಗೆ ಸಂಬಂಧಿಸಿದ ಯಾವುದೇ ಸಹಕಾರ ಸಂಘದ ಲೆಕ್ಕಪರಿಶೋಧಿತ ನಿರ್ದಿಷ್ಟ ಲೆಕ್ಕಪತ್ರವನ್ನು ಅಥವಾ ಲೆಕ್ಕಪತ್ರಗಳನ್ನು ಪುನರ್‌ಪರಿಶೀಲಿಸಲು ಅಥವಾ ಪುನರ್‌ಸತ್ಯಾಪನೆ ಮಾಡಲು ಮತ್ತು ಅಂಥ ಪುನರ್‌ಪರಿಶೀಲನೆ ಅಥವಾ ಪುನರ್‌ಸತ್ಯಾಪನೆಯ ಅವಧಿಯಲ್ಲಿ ಗಮನಿಸಲಾದ ಲೋಪಗಳನ್ನು, ಹೊರಡಿಸಬೇಕಾದ ಮುಂದಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸರಿಪಡಿಸಿಕೊಳ್ಳುವಂತೆ ಸಂಬಂಧಪಟ್ಟ ಲೆಕ್ಕಪರಿಶೋಧಕನಿಗೆ ತಿಳಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(14) (5) ಮತ್ತು (6)ನೇ ಉಪಪ್ರಕರಣಗಳ ಉಪಬಂಧಗಳಿಗೆ ಬಾಧಕವಾಗದಂತೆ, ಲೆಕ್ಕ ಪರಿಶೋಧಕನು,

(ಎ) ಭದ್ರತೆಯ ಆಧಾರದ ಮೇಲೆ ಸಹಕಾರಿ ಸಂಘಗಳು ಪಡೆದಿರುವ ಸಾಲಗಳು ಮತ್ತು ಮುಂಗಡಗಳಿಗೆ ಯುಕ್ತವಾದ ಭದ್ರತೆಯನ್ನು ಒದಗಿಸಿದಲ್ಲಿ ಮತ್ತು ಇವುಗಳ ಮೇಲಿನ ನಿಬಂಧನೆಗಳು ಸಹಕಾರಿ ಸಂಘ ಅಥವಾ ಇದರ ಸದಸ್ಯರ ಹಿತಾಸಕ್ತಿಗೆ ಭಾದಕವುಂಟು ಮಾಡದಿದ್ದಲ್ಲಿ,

(ಬಿ) ಸಹಕಾರಿ ಸಂಘಗಳ ವ್ಯವಹರಣೆಗಳು, ಸಹಕಾರಿ ಸಂಘದ ಹಿತಾಸಕ್ತಿಗೆ ಬಾಧಕವುಂಟುಮಾಡದೆ ಕೇವಲ ಪುಸ್ತಕದ ನಮೂದುಗಳಾಗಿ ಬಿಂಬಿತವಾದಲ್ಲಿ,

(ಸಿ) ವೈಯಕ್ತಿಕ ವೆಚ್ಚಗಳನ್ನು ರಾಜಸ್ವ ಲೆಕ್ಕ ಖಾತೆಗೆ ವಿಧಿಸಲಾಗಿದ್ದಲ್ಲಿ;

(ಡಿ) ಹಣಕ್ಕಾಗಿ ಯಾವುದೇ ಷೇರುಗಳನ್ನು ಹಂಚಿಕೆ ಮಾಡಲಾಗಿದ್ದಲ್ಲಿ, ಅಂಥ ಹಂಚಿಕೆಯ ಸಂಬಂಧದಲ್ಲಿ ವಾಸ್ತವಿಕವಾಗಿ ಹಣವನ್ನು ಸ್ವೀಕರಿಸಿದ್ದಲ್ಲಿ ಅದನ್ನು ಸಹಕಾರಿ ಸಂಘಗಳ ಪುಸ್ತಕಗಳು ಮತ್ತು ಕಾಗದಪತ್ರಗಳಲ್ಲಿ ಹೇಳಲಾಗದ್ದು, ಮತ್ತು ಲೆಕ್ಕ ಪುಸ್ತಕಗಳಲ್ಲಿ ಹೇಳಲಾದಂತೆ ವಾಸ್ತವಿಕವಾಗಿ ಯಾವುದೇ ಹಣವನ್ನು ಸ್ವೀಕರಿಸದಿದ್ದಲ್ಲಿ, ಮತ್ತು ಆಯವ್ಯಯ ಪಟ್ಟಿಯು ಸರಿಯಾಗಿದೆ, ನಿಯತವಾಗಿದೆ ಮತ್ತು ತಪ್ಪಾಗಿಲ್ಲವೆಂದು ಕಂಡು ಬಂದಲ್ಲಿ; ಮತ್ತು

(ಇ) ರಿಸರ್ವ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕು ವಿಚಾರಣೆ ನಡೆಸಲು ಯಾವುದೇ ವಿಶೇಷ ವಿವಾದ ಅಥವಾ ವಸ್ತು ವಿಷಯವನ್ನು ಉಲ್ಲೇಖಿಸಿ, ಅದನ್ನು ಯುಕ್ತವಾಗಿ ವಿಚಾರಣೆ ಮಾಡಿ, ಅದರ ಮೇಲಿನ ವರದಿಯನ್ನು ಸಂದರ್ಭಾನುಸಾರ ರಿಸರ್ವ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕಿಗೆ ಸಲ್ಲಿಸಿ, ವಿಚಾರಣೆ ಮಾಡತಕ್ಕದ್ದು.

(15) ಲೆಕ್ಕಪರಿಶೋಧಕನು, ತಾನು ಪರಿಶೀಲಿಸಿದ ಲೆಕ್ಕಪತ್ರ ಮೇಲೆ ಮತ್ತು ಪ್ರತಿಯೊಂದು ಜಮಾಖರ್ಚು ಪಟ್ಟಿಯ ಮೇಲೆ ಮತ್ತು ಲಾಭ ಮತ್ತು ನಷ್ಟದ ಲೆಕ್ಕಪತ್ರದ ಮೇಲೆ ಮತ್ತು ಜಮಾಖರ್ಚು ಪಟ್ಟಿ ಅಥವಾ ಲಾಭ ಮತ್ತು ನಷ್ಟದ ಲೆಕ್ಕಪತ್ರದ ಭಾಗವಾಗಿ ಅಗತ್ಯಪಡಿಸಿದ ಅಥವಾ ಅನುಬಂಧಿಸಿದ ಪ್ರತಿಯೊಂದು ಇತರೆ ದಸ್ತಾವೇಜಿನ ಮೇಲೆ ಸಹಕಾರಿ ಸಂಘಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು, ಈ ವರದಿಯನ್ನು ಈ ಅಧಿನಿಯಮವು ಅಗತ್ಯಪಡಿಸಿದ ಮಾಹಿತಿಯನ್ನು ಹಾಗೆ ಅಗತ್ಯಪಡಿಸಲಾದಂಥ ರೀತಿಯಲ್ಲಿ ಪಡೆದ ಮತ್ತು

(ಎ) ಜಮಾ ಖರ್ಚು ಪಟ್ಟಿಯ ಸಂದರ್ಭದಲ್ಲಿ ವರ್ಷದ ಕೊನೆಯಲ್ಲಿನ ಸಹಕಾರಿ ಸಂಘಗಳ ವ್ಯವಹಾರಗಳ ಸ್ಥಿತಿಗತಿ,

(ಬಿ) ಲಾಭ ಮತ್ತು ನಷ್ಟದ ಲೆಕ್ಕಪತ್ರಗಳ ಸಂದರ್ಭದಲ್ಲಿ ವರ್ಷದ ಲಾಭ ಮತ್ತು ನಷ್ಟ,

- ಇವುಗಳನ್ನು ಸತ್ಯವಾದ ಮತ್ತು ನ್ಯಾಯೋಚಿತವಾದ ದೃಷ್ಟಿಯೊಂದಿಗೆ, ತನ್ನ ಅಭಿಪ್ರಾಯಗಳಲ್ಲಿ ಮತ್ತು ತನಗೆ ದೊರೆತ ಉತ್ತಮ ಮಾಹಿತಿಗಳೊಂದಿಗೆ ಮತ್ತು ತನಗೆ ದೊರೆತ ವಿವರಣೆಗಳ ಅನುಸಾರವಾಗಿ ನಿರೂಪಿಸತಕ್ಕದ್ದು.

(16) ಲೆಕ್ಕಪರಿಶೋಧಕನ ವರದಿಯು,

(ಎ) ಆತನ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅವಶ್ಯಕವಾಗಿರುವಂಥ ಆತನ ತಿಳುವಳಿಕೆ ಮತ್ತು ನಂಬಿಕೆ ಪ್ರಕಾರ ಉತ್ತಮ ವಾಗಿರುವಂಥ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಪಡೆದಿದ್ದಾನೇ ಎಂಬುದನ್ನು;

(ಬಿ) ಆತನ ಅಭಿಪ್ರಾಯದಲ್ಲಿ, ಲೆಕ್ಕಪತ್ರಗಳ ಯುಕ್ತ ಪುಸ್ತಕಗಳನ್ನು, ಅಂತಹ ಪುಸ್ತಕಗಳ ಈ ವರೆಗಿನ ತನ್ನ ಪರಿಶೀಲನೆಯಿಂದ ಸಹಕಾರಿ ಸಂಘ ಅವುಗಳನ್ನು ಸರಿಯಾಗಿ ನಿರ್ವಹಿಸಿದೆಯೇ ಎಂಬುದನ್ನು ಮತ್ತು ಆತನ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಸಾಕಷ್ಟು ಯುಕ್ತ ವಿವರ ಪಟ್ಟಿಗಳನ್ನು, ತಾನು ಬೇಟಿನಿಡಿದ ಸಹಕಾರಿ ಸಂಘಗಳ ಶಾಖೆಗಳು ಮತ್ತು ಕಚೇರಿಯಿಂದ ಸ್ವೀಕರಿಸಲಾಗಿದೆಯೇ ಎಂಬುದನ್ನು;

(ಸಿ) ಸಹಕಾರಿ ಸಂಘದ ಲೆಕ್ಕಪರಿಶೋಧಕನನ್ನು ಹೊರತು ಪಡಿಸಿದ ವ್ಯಕ್ತಿಯು ಲೆಕ್ಕಪರಿಶೋಧಿಸಿದ ಯಾವುದೇ ಶಾಖಾ ಕಚೇರಿಯ ಲೆಕ್ಕಪತ್ರಗಳನ್ನು ಕುರಿತಾದ ವರದಿಯನ್ನು ಆತನಿಗೆ ಕಳುಹಿಸಲಾಗಿದೆಯೇ ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಸಿದ್ಧಪಡಿಸುವಲ್ಲಿ ಸದರಿ ವರದಿಯೊಂದಿಗೆ ಆತನು ಹೇಗೆ ವ್ಯವಹರಿಸಿದ ಎಂಬುದನ್ನು;

(ಡಿ) ವರದಿಯಲ್ಲಿ ವ್ಯವಹರಿಸಲಾದ ಸಹಕಾರ ಸಂಘದ ಜಮಾಖರ್ಚು ಪಟ್ಟಿ ಮತ್ತು ಲಾಭ ನಷ್ಟದ ಲೆಕ್ಕವು, ಲೆಕ್ಕಪುಸ್ತಕಗಳು ಮತ್ತು ವಿವರಪಟ್ಟಿಗಳಿಗೆ ಅನುಸಾರವಾಗಿದೆ ಎಂಬುದನ್ನು ;

- ನಿರೂಪಿಸತಕ್ಕದ್ದು.

(17) ಲೆಕ್ಕಪರಿಶೋಧನಾ ವರದಿಯು:-

(ಎ) ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ದೋಷಗಳು ಮತ್ತು ಅಕ್ರಮಗಳ ಎಲ್ಲಾ ವಿವರಗಳನ್ನು ಹೊಂದಿರತಕ್ಕದ್ದು ಮತ್ತು ಹಣಕಾಸು ಅಕ್ರಮಗಳು ಮತ್ತು ನಿಧಿಗಳ ದುರ್ವಿನಿಯೋಗ ಅಥವಾ ಅಪರಾಧಿಕ ದುರ್ವಿನಿಯೋಗ ಅಥವಾ ವಂಚನೆಯ ಸಂದರ್ಭದಲ್ಲಿ ಲೆಕ್ಕಪರಿಶೋಧಕ/ಲೆಕ್ಕಪರಿಶೋಧನಾ ಫರ್ಮು ತನಿಖೆ ನಡೆಸತಕ್ಕದ್ದು ಮತ್ತು ಅದರ ಕಾರ್ಯ ರೀತಿ, ವಹಿಸಿಕೊಡುವಿಕೆ ಒಳಗೊಂಡ ಮೊಬಲಗಿನ ಬಗ್ಗೆ ವರದಿ ನೀಡತಕ್ಕದ್ದು ಮತ್ತು ಎಲ್ಲಾ ಅವಶ್ಯಕ ಸಾಕ್ಷಿದೊಂದಿಗೆ, ಸಂಧರ್ಭಾನುಸಾರ ಮಂಡಳಿಯ ಸದಸ್ಯರು ಅಥವಾ ಸಂಘದ ಉದ್ಯೋಗಿಗಳು ಅಥವಾ ಯಾವೊಬ್ಬ ಇತರ ವ್ಯಕ್ತಿಯ ಮೇಲೆ ಅಂಥ ದುರ್ವಿನಿಯೋಗ ಅಥವಾ ನಿಧಿಗಳ ಅಪರಾಧಿಕ ದುರ್ವಿನಿಯೋಗ ಅಥವಾ ವಂಚನೆಗೆ ಸಂಬಂಧಿಸಿದಂತೆ ಹೊಣೆಗಾರಿಕೆಯನ್ನು ನಿಗದಿಪಡಿಸತಕ್ಕದ್ದು.

(ಬಿ) ಲಾಭ ಮತ್ತು ನಷ್ಟ ಕುರಿತಾದ ಸಂವಾದಿ ಪರಿಣಾಮಗಳೊಂದಿಗೆ ವರದಿಯಲ್ಲಿ ವಿವರವಾಗಿ ಸೂಚಿಸಬೇಕಾದ ಹಣಕಾಸು ವಿವರ ಪಟ್ಟಿಗಳ ಮೇಲೆ ಲೆಕ್ಕ ಹಾಕಲಾದ ಅಕ್ರಮಗಳು ಮತ್ತು ಅವುಗಳ ಇಂಗಿತಗಳನ್ನು ಒಳಗೊಂಡಿರತಕ್ಕದ್ದು.

(ಸಿ) ಪರಿಶೀಲಿಸಬೇಕಾದ ಸಹಕಾರಿ ಸಂಘಗಳ ಸಭೆ ಮಂಡಳಿಯ ಮತ್ತು ಉಪ ಸಮಿತಿಗಳ ಕಾರ್ಯವಿಧಾನ ಮತ್ತು ಗಮನಿಸಲಾದ ಯಾವುವೆ ಅಕ್ರಮಗಳು ಉಲಂಘನೆಗಳು ವರದಿಮಾಡಲಾದ ಅಂಥ ಅಕ್ರಮಗಳು/ ಉಲಂಘನೆಗಳಿಗೆ ಯುಕ್ತವಾಗಿ ನಿಗದಿಗೊಳಿಸಿದ ಹೊಣೆಗಾರಿಕೆಗಳನ್ನು ವರದಿ ಮಾಡತಕ್ಕದ್ದು.

(ಡಿ) ನಿಯಮಿಸಬಹುದಾದ ಎಲ್ಲ ಪರಿಶಿಷ್ಟಗಳು ಮತ್ತು ಇತರ ವಿವರ ಪಟ್ಟಿಗಳನ್ನು ವರದಿಮಾಡತಕ್ಕದ್ದು.

(18) (14)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (15) ಉಪ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (16) ಉಪ ಪ್ರಕರಣದ (ಎ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಿದ ಯಾವುದೇ ವಿಷಯಗಳಲ್ಲಿ ಸಕಾರಾತ್ಮಕವಾಗಿ ಉತ್ತರಿಸಿದ್ದಲ್ಲಿ ಅಥವಾ ಪರಿಗಣಿಸಬಹುದಾದ ಅಭಿಪ್ರಾಯದೊಂದಿಗೆ ಉತ್ತರಿಸಿದ್ದಲ್ಲಿ ಲೆಕ್ಕಪರಿಶೋಧಕರ ವರದಿಯು ಸದರಿ ಉತ್ತರಕ್ಕೆ ಕಾರಣವನ್ನು ಹೇಳತಕ್ಕದ್ದು.

(19) ಸಹಕಾರಿ ಸಂಘಗಳ ಲೆಕ್ಕಪರಿಶೋಧಕರು ಅಥವಾ ಲೆಕ್ಕಪರಿಶೋಧನಾ ಫರ್ಮ್‌ಗಳ ಪರಿಶ್ರಮ ಧನವನ್ನು ಸಂಘಗಳಿಂದ ಭರಿಸತಕ್ಕದ್ದು ಮತ್ತು [1][ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಸಂಘದ

ಕಾರ್ಯಶೀಲ (ವರ್ಕಿಂಗ್) ಬಂಡವಾಳ ಮತ್ತು ವಹಿವಾಟಿನ (ಟರ್ನ್‌ಓವರ್) ಆಧಾರದ ಮೇಲೆ][1] ಅದು ಸಂಘದ ಮಹಾಸಭೆಯು ನಿಗದಿ ಪಡಿಸಬಹುದಾದಂಥ ದರಗಳಲ್ಲಿರತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(20) ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು, ಜಿಲ್ಲಾವಾರು ಸಹಕಾರಿ ಸಂಘಗಳ ಪಟ್ಟಿ, ಕಾರ್ಯನಿರ್ವಹಣಾ ಸಂಘಗಳ ಪಟ್ಟಿ ನಿಗದಿ ಪಡಿಸಬಹುದಾದ ಸಮಯದೊಳಗೆ ಮತ್ತು ಅದರ ಕಾರಣಗಳೊಂದಿಗೆ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆ ಮಾಡಿದಂಥ ಸಂಘಗಳ ಪಟ್ಟಿ, ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆ ಮಾಡದಂಥ ಸಂಘಗಳ ಪಟ್ಟಿಯನ್ನು ನಿರ್ವಹಿಸತಕ್ಕದ್ದು. ಈತನು ಸಹಕಾರಿ ಸಂಘಗಳು ಮತ್ತು ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧನಾ ಸಂಸ್ಥೆಗಳೊಂದಿಗೆ ಸಹಕರಿಸತಕ್ಕದ್ದು ಮತ್ತು ಪ್ರತೀ ವರ್ಷ ಸಕಾಲದಲ್ಲಿ ಎಲ್ಲ ಸಹಕಾರಿ ಸಂಘಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸುವುದನ್ನು ಖಚಿತ ಪಡಿಸತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ,-

(i) `ಲೆಕ್ಕ ಪರಿಶೋಧಕ' ಎಂದರೆ, ಪದವಿ ಅಥವಾ ಸ್ನಾತಕೋತ್ತರ ಪದವಿಯ ಜೊತೆಗೆ ಸಹಕಾರ ಸಂಘಗಳ ವ್ಯವಸ್ಥಾಪನೆಯಲ್ಲಿ ಉನ್ನತ ಡಿಪ್ಲೊಮೊ/ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಯಲ್ಲಿ ಡಿಪ್ಲೋಮೊ/ಸಹಕಾರ ಸಂಘ ವ್ಯವಸ್ಥಾಪನೆಯಲ್ಲಿ, ಸಾಮಾನ್ಯ ಡಿಪ್ಲೊಮೊದಲ್ಲಿ ಉತ್ತೀರ್ಣನಾಗಿರುವ ಮತ್ತು ಪ್ರೊಬೇಷನ್ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಮತ್ತು ಕನ್ನಡ ಭಾಷೆಯಲ್ಲಿ ವ್ಯವಹರಿಸುವ ಜ್ಞಾನವನ್ನು ಹೊಂದಿರುವಂಥ ಒಬ್ಬ ಲೆಕ್ಕ ಪರಿಶೋದಕ ಅಥವಾ ಸಹಕಾರಿ ಲೆಕ್ಕ ಪರಿಶೋಧನಾ ಇಲಾಖೆಯ ಒಬ್ಬ ಅಧಿಕಾರಿ; ಅಥವಾ ಸಹಕಾರ ಸಂಘಗಳ ಕಾರ್ಯನಿರ್ವಹಣೆಯ ಬಗ್ಗೆ ಯುಕ್ತ ತಿಳುವಳಿಕೆಯನ್ನು ಹೊಂದಿರುವ ಮತ್ತು ಪಟ್ಟಿಯಲ್ಲಿ ಸೇರಿಸುವ ಸಂಭವಿರುವ ಲೆಕ್ಕಪರಿಶೋಧನಾ ಫರ್ಮಿನ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ, ಅಂಥ ವಿಧದ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯಲ್ಲಿ ಕೊನೆಪಕ್ಷ ಮೂರು ವರ್ಷಗಳ ಅನುಭವವನ್ನು ಹೊಂದಿರುವ ಚಾರ್ಟರ್ಡ್ ಅಕೌಂಟೆಂಟರ ಅಧಿನಿಯಮ, 1949ರ ಅರ್ಥ ವ್ಯಾಪ್ತಿಯಲ್ಲಿ ಬರುವ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಎಂದು ಸಹ ಅರ್ಥ ಮತ್ತು ಚಾರ್ಟರ್ಡ್ ಅಕೌಂಟೆಂಟರು ಕನ್ನಡ ಭಾಷೆಯಲ್ಲಿ ವ್ಯವಹರಿಸುವ ಜ್ಞಾನವನ್ನು ಹೊಂದಿರತಕ್ಕದ್ದು [2][ಅಥವಾ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ ಅಧಿನಿಯಮ, 1959ರ ಅರ್ಥವ್ಯಾಪ್ತಿಯೊಳಗೆ ಸಹಕಾರ ಸಂಘಗಳ ಕಾರ್ಯನಿರ್ವಹಣೆಯ ಸರಿಯಾದ ತಿಳುವಳಿಕೆಯುಳ್ಳ ಮತ್ತು ಲೆಕ್ಕಪರಿಶೋಧನೆಯಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವವುಳ್ಳ ಒಬ್ಬ ಕಾಸ್ಟ್ ಅಕೌಂಟೆಂಟನು ಕನ್ನಡ ಭಾಷೆಯ ಕಾರ್ಯನಿರ್ವಹಣಾ ತಿಳುವಳಿಕೆಯುಳ್ಳವನಾಗಿರತಕ್ಕದ್ದು,][2]

(ii) `ಲೆಕ್ಕ ಪರಿಶೋಧನಾ ಫರ್ಮ್' ಎಂದರೆ, ಸಹಕಾರ ಸಂಘಗಳ ಕಾರ್ಯನಿರ್ವಹಣೆಯ ಬಗ್ಗೆ ಯುಕ್ತ ಜ್ಞಾನವನ್ನು ಹೊಂದಿರುವ ಮತ್ತು ಪಟ್ಟಿಯಲ್ಲಿ ಸೇರಿಸುವ ಸಂಭವವಿರುವ ಲೆಕ್ಕ ಪರಿಶೋಧನಾ ಫರ್ಮಿನ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಅಂಥ ವಿಧದ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಯಲ್ಲಿ ಕೊನೇ ಪಕ್ಷ ಮೂರು ವರ್ಷಗಳ ಅನುಭವ ಹೊಂದಿರುವ ಚಾರ್ಟರ್ಡ್ ಅಕೌಂಟೆಂಟರ ಅಧಿನಿಯಮ, 1949ರ ಅರ್ಥ ವ್ಯಾಪ್ತಿಯೊಳಗೆ ಬರುವ ಒಂದು ಅಥವಾ ಹೆಚ್ಚು ಚಾರ್ಟರ್ಡ್ ಅಕೌಂಟೆಂಟರು [2][ಅಥವಾ ಕಾಸ್ಟ್ ಅಂಡ್ ವರ್ಕ್ಸ್ ಅಕೌಂಟೆಂಟ್ ಅಧಿನಿಯಮ, 1959ರ ಅರ್ಥ ವ್ಯಾಪ್ತಿಯಲ್ಲಿರುವ ಒಂದಕ್ಕಿಂತ ಹೆಚ್ಚು ಕಾಸ್ಟ ಅಕೌಂಟೆಂಟ್‌ರ ಒಂದು ಫರ್ಮ್][2] ಮತ್ತು ಚಾರ್ಟರ್ಡ್ ಅಕೌಂಟೆಂಟರು ಕನ್ನಡ ಭಾಷೆಯಲ್ಲಿ ವ್ಯವಹರಿಸುವ ಜ್ಞಾನವನ್ನು ಹೊಂದಿರತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

64. ರಿಜಿಸ್ಟ್ರಾರನಿಂದ ವಿಚಾರಣೆ.- (1) ರಿಜಿಸ್ಟ್ರಾರನು ಸ್ವಇಚ್ಛೆಯಿಂದ ತಾನೇ ಅಥವಾ ಲಿಖಿತ ಆದೇಶದ ಮೂಲಕ ತಾನು ಅಧಿಕೃತಗೊಳಿಸಿದ ವ್ಯಕ್ತಿಯ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಸಹಕಾರ ಸಂಘದ ರಚನೆ, ಕಾರ್ಯನಿರ್ವಹಣೆ ಮತ್ತು ಹಣಕಾಸು ಪರಿಸ್ಥಿತಿ [1][ಇವುಗಳಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ][1] ವಿಚಾರಣೆ ನಡೆಸಬಹುದು.

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾದ ಸ್ವರೂಪದ ವಿಚಾರಣೆಯನ್ನು -

(ಎ) ಸಂಬಂಧಪಟ್ಟ ಸಂಘವು ಯಾವ ಸಹಕಾರ ಸಂಘದೊಡನೆ ಸಂಯೋಜಿತ ವಾಗಿದೆಯೋ ಆ ಸಹಕಾರ ಸಂಘ;

(ಬಿ) ಸಂಘದ ಸಮಿತಿಯ ಬಹುಸಂಖ್ಯಾತ ಸದಸ್ಯರು; ಅಥವಾ

(ಸಿ) ಸಂಘದ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು

- ಸಲ್ಲಿಸುವ ಅರ್ಜಿಯ ಮೇಲೆ ನಡೆಸತಕ್ಕುದು.

[1][(2ಎ) (1)ನೇ ಉಪ-ಪ್ರಕರಣದ ಮೇರೆಗಿನ ವಿಚಾರಣೆಯು [2][ಹನ್ನೆರಡು ತಿಂಗಳುಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದು, ಈ ಅವಧಿಯನ್ನು 3[ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಿಜಿಸ್ಟ್ರಾರನು][3] ಆರುತಿಂಗಳ ಮತ್ತಷ್ಟು ಅವಧಿಗೆ ವಿಸ್ತರಿಸಬಹುದು.][2]][1]

[4][ಪರಂತು, ರಿಜಿಸ್ಟ್ರಾರನು ನೀಡಿದ ವರದಿಯ ಮೇಲೆ, ವಿಚಾರಣಾ ಅವಧಿಯನ್ನು ವಿಸ್ತರಿಸಲು ಸಮಂಜಸ ಕಾರಣಗಳಿವೆ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಹದಿನೆಂಟು

ತಿಂಗಳ ಅವಧಿಯನ್ನು ಮೀರಿ ವಿಚಾರಣೆ ನಡೆಸುವ ಅವಧಿಯನ್ನು ವಿಸ್ತರಿಸುವ ಅಧಿಕಾರ ಹೊಂದಿರತಕ್ಕದ್ದು.][4]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22-3-2004 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ರಿಜಿಸ್ಟ್ರಾರನು ಅಥವಾ (1)ನೇ ಉಪಪ್ರಕರಣದ ಮೇರೆಗೆ ಅವನು ಅಧಿಕೃತಗೊಳಿಸಿದ ವ್ಯಕ್ತಿಗಳು ಈ ಪ್ರಕರಣದ ಮೇರೆಗಿನ ವಿಚಾರಣೆಯ ಉದ್ದೇಶಗಳಿಗಾಗಿ ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ,-

(ಎ) ಅವನು ಎಲ್ಲಾ ಕಾಲಗಳಲ್ಲಿ ಸಂಘಕ್ಕೆ ಸೇರಿದ ಮತ್ತು ಅದರ ಅಭಿರಕ್ಷೆಯಲ್ಲಿರುವ ಎಲ್ಲಾ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಕಾಗದಪತ್ರಗಳನ್ನು, ಭದ್ರತಾ ಪತ್ರಗಳನ್ನು, ನಗದು ಹಣವನ್ನು ಮತ್ತು ಇತರ ಸ್ವತ್ತುಗಳನ್ನು ಪರಿಶೀಲಿಸಲು ಮುಕ್ತ ಅವಕಾಶ ಹೊಂದಿರತಕ್ಕುದು ಮತ್ತು ಅಂಥ ಯಾವುವೇ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಭದ್ರತಾ ಪತ್ರಗಳನ್ನು, ನಗದು ಹಣವನ್ನು ಅಥವಾ ಇತರ ಸ್ವತ್ತುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಅಥವಾ ಅವುಗಳ ಅಭಿರಕ್ಷೆಗೆ ಹೊಣೆಗಾರನಾದ ಯಾರೇ ವ್ಯಕ್ತಿಯನ್ನು ಅವುಗಳನ್ನು ಸಂಘದ ಕೇಂದ್ರ ಕಾರ್ಯಸ್ಥಾನದಲ್ಲಿರುವ ಯಾವುದೇ ಸಾರ್ವಜನಿಕ ಕಚೇರಿಯಲ್ಲಿ ಅಥವಾ ಇತರ ಯಾವುದೇ ಶಾಖೆಯಲ್ಲಿ ಹಾಜರುಡಿಸುವಂತೆ ಸಮನು ಮಾಡಬಹುದು;

[1][(ಬಿ) ವಿಚಾರಣಾಧಿಕಾರಿಯು, ಸಂದರ್ಭಾನುಸಾರ ಹಣಕಾಸು ಬ್ಯಾಂಕಿನ ಅಥವಾ ಸಾಲ ಏಜೆನ್ಸಿಯ ಯಾರೇ ಅಧಿಕಾರಿಯನ್ನು ಅಥವಾ ಸಂಘದೊಂದಿಗೆ ಯಾವುದೇ ರೀತಿಯ ವ್ಯವಹಾರ ಸಂಬಂಧವನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಅಥವಾ ಸಂಘದ ವ್ಯವಹಾರಗಳ ಕಾರ್ಯನಿರ್ವಹಣೆಯೊಂದಿಗೆ ಸಂಬಂಧಹೊಂದಿರುವ ಅಥವಾ ಅದರ ಬಗ್ಗೆ ತಿಳಿವಳಿಕೆಹೊಂದಿರುವ ಯಾರೇ ವ್ಯಕ್ತಿಯನ್ನು, ಸಂಘದ ವ್ಯವಹಾರಗಳೊಂದಿಗೆ ಅಥವಾ ಕಾರ್ಯನಿರ್ವಹಣೆಯೊಂದಿಗೆ ಸಂಬಂಧಹೊಂದಿರುವ ದಾಖಲೆಗಳು ಅಥವಾ ದಸ್ತಾವೇಜುಗಳು ಯಾವುವಾದರೂ ಇದ್ದರೆ ಅವುಗಳನ್ನು ವಿಚಾರಣೆಯ ಉದ್ದೇಶಕ್ಕಾಗಿ ವಿಚಾರಣಾಧಿಕಾರಿಯು ಅಗತ್ಯಪಡಿಸಬಹುದಾದಂತೆ ಸಂಘದ ನೋಂದಾಯಿತ ಕಚೇರಿಯಲ್ಲಿ ಅಥವಾ ಶಾಖಾ ಕಚೇರಿಯಲ್ಲಿ ಅಥವಾ ಸಂಘದ ಕೇಂದ್ರ ಕಾರ್ಯ ಸ್ಥಾನದಲ್ಲಿರುವ ಯಾವುದೇ ಸಾರ್ವಜನಿಕ ಕಚೇರಿಯಲ್ಲಿ ಹಾಜರುಪಡಿಸಲು ಮತ್ತು ಅಂಥ ಮಾಹಿತಿ ಅಥವಾ ವಿವರಣೆಗಳನ್ನು ಒದಗಿಸಲು ಸಮನ್ ಮಾಡಬಹುದು.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಸಿ) (i) ಅವನು ಸಂಘದ ಸರ್ವ ಸದಸ್ಯರ ಸಭೆಯನ್ನು ಕರೆಯುವ ನೋಟೀಸಿನ ಅವಧಿಯನ್ನು ನಿರ್ದಿಷ್ಟಪಡಿಸುವ ಯಾವುದೇ ನಿಯಮ ಅಥವಾ ಉಪವಿಧಿ ಇದ್ದಾಗ್ಯೂ, ಸಂಘದ [1][ಪದಾಧಿಕಾರಿಗಳ][1]ನ್ನು, ತಾನು ನಿರ್ದೇಶಿಸಬಹುದಾದಂಥ ಸಮಯದಲ್ಲಿ ಮತ್ತು ಸಂಘದ ಕೇಂದ್ರ ಕಾರ್ಯಸ್ಥಾನದಲ್ಲಿರುವ ಯಾವುದೇ ಸ್ಥಳದಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಸರ್ವಸದಸ್ಯರ ಸಭೆಯನ್ನು ಕರೆಯುವಂತೆ ಮತ್ತು ಅಂಥ ವಿಷಯಗಳನ್ನು ನಿರ್ಧರಿಸುವಂತೆ ಅಗತ್ಯಪಡಿಸಬಹುದು, ಮತ್ತು ಅಂಥ ಸಭೆಯನ್ನು ಕರೆಯಲು ಸಂಘದ [1][ಪದಾಧಿಕಾರಿಗಳು][1] ನಿರಾಕರಿಸಿದಲ್ಲಿ ಅಥವಾ ತಪ್ಪಿದಲ್ಲಿ ಅದನ್ನು ತಾನೇ ಕರೆಯಲು ಅಧಿಕಾರವನ್ನು ಹೊಂದಿರತಕ್ಕುದು;

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) (i)ನೇ ಖಂಡದ ಮೇರೆಗೆ ಕರೆಯಲಾದ ಯಾವುದೇ ಸಭೆಯು, ಸಂಘದ ಉಪವಿಧಿಗಳ ಮೇರೆಗೆ ಕರೆಯಲಾದ ಸರ್ವಸದಸ್ಯರ ಸಭೆಯ ಅಧಿಕಾರಗಳನ್ನು ಹೊಂದಿರತಕ್ಕುದು ಮತ್ತು ಅದರ ವ್ಯವಹರಣೆಗಳು ಅಂಥ ಸಭೆಗೆ ಯಾವುದೇ ಕೋರಂ ಅಗತ್ಯವಿರತಕ್ಕುದಲ್ಲ ಎಂಬುದನ್ನು ಹೊರತುಪಡಿಸಿ ಅಂಥ ಉಪವಿಧಿಗಳಿಂದ ವಿನಿಯಮಿಸಲ್ಪಡತಕ್ಕುದು.

(4) ಈ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಿರುವಲ್ಲಿ, ರಿಜಿಸ್ಟ್ರಾರನು ಆ ವಿಚಾರಣೆಯ ಫಲಿತಾಂಶವನ್ನು ಆ ಸಂಘಕ್ಕೆ ಮತ್ತು ಆ ಸಂಘವು ಸಂಯೋಜಿತವಾದ ಸಹಕಾರ ಸಂಘವು ಯಾವುದಾದರೂ ಇದ್ದರೆ ಅದಕ್ಕೆ [1][ಮತ್ತು ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಸಹ][1] [2][ವಿಚಾರಣೆಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ತಿಳಿಸತಕ್ಕದ್ದು][2]

1 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(4ಎ) ವಿಚಾರಣಾ ವರದಿಯನ್ನು ಮತ್ತು ರಿಜಿಸ್ಟ್ರಾರನಿಂದ ಫಲಿತಾಂಶವನ್ನು ಸ್ವೀಕರಿಸಿದ ತರುವಾಯ, ಅದರಲ್ಲಿ ನ್ಯೂನತೆಗಳು ಯಾವುವಾದರೂ ಇದ್ದರೆ ಅವುಗಳನ್ನು ಸರಿಪಡಿಸಲು ಮತ್ತು ಆ ಉದ್ದೇಶಕ್ಕಾಗಿ ಕರೆಯಲಾದ ವಾರ್ಷಿಕ ಮಹಾ ಸಭೆಯ ಮುಂದೆ ಅಥವಾ ವಿಶೇಷ ಮಹಾಸಭೆಯ ಮುಂದೆ ವರದಿಯನ್ನು ಮಂಡಿಸಲು ಕೂಡಲೇ ಅಗತ್ಯಕ್ರಮ ಕೈಗೊಳ್ಳುವುದು ಮಂಡಲಿಯ ಜವಾಬ್ದಾರಿಯಾಗಿರತಕ್ಕದ್ದು:

ಪರಂತು, ಸಹಕಾರ ಸಂಘದ ಸಾಮಾನ್ಯ ನಿಕಾಯವು ವಿಚಾರಣಾ ನಿರ್ಣಯಗಳಿಗೆ ವಿರುದ್ಧವಾದ ಠರಾವನ್ನು ಅಂಗೀಕರಿಸಲು ಸಕ್ಷಮವಾಗಿರತಕ್ಕದ್ದಲ್ಲ.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(5) (1)ನೇ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ ವಿಚಾರಣೆಯ ಫಲಿತಾಂಶವು, ಸಂಘದ ಕಾರ್ಯನಿರ್ವಹಣೆಯಲ್ಲಿ ಯಾವುವೇ ದೋಷಗಳನ್ನು ಬಹಿರಂಗಪಡಿಸಿದ್ದರೆ, ಸಂಘವು, ವಿಚಾರಣಾ ವರದಿಯನ್ನು ಸ್ವೀಕರಿಸಿದ ಅಥವಾ ವಿಚಾರಣೆಯ ಫಲಿತಾಂಶಗಳನ್ನು ತಿಳಿಸಿದ ದಿನಾಂಕದಿಂದ

[2][ನಲವತ್ತೈದು ದಿನಗಳ][2]ೊಳಗೆ, ವಿಚಾರಣೆಯಲ್ಲಿ ಎತ್ತಿತೋರಿಸಲಾದ ದೋಷಗಳ ಅಥವಾ ಅಕ್ರಮಗಳ ಬಗ್ಗೆ ರಿಜಿಸ್ಟ್ರಾರನಿಗೆ ವಿವರಿಸತಕ್ಕದ್ದು ಮತ್ತು ದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅದು ಅದರ ಮೇಲೆ ಕೈಗೊಂಡ ಕ್ರಮದ ಬಗ್ಗೆ ರಿಜಿಸ್ಟ್ರಾರನಿಗೆ ವರದಿ ಮಾಡತಕ್ಕದ್ದು. ರಿಜಿಸ್ಟ್ರಾರನು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ದೋಷಗಳನ್ನು ಸರಿಪಡಿಸುವುದಕ್ಕಾಗಿ ಅಂಥ ಕ್ರಮ ಕೈಗೊಳ್ಳುವಂತೆ ಸಂಘಕ್ಕೆ ಅಥವಾ ಅದರ ಪದಾಧಿಕಾರಿಗಳಿಗೆ ನಿರ್ದೇಶಿಸಿ ಆದೇಶವನ್ನು ಸಹ ಮಾಡಬಹುದು.][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

65. ಸಹಕಾರ ಸಂಘದ ಪುಸ್ತಕಗಳ ಪರಿಶೀಲನೆ.- (1) ರಿಜಿಸ್ಟ್ರಾರನು ಸ್ವಇಚ್ಛೆಯಿಂದ ಅಥವಾ ಸಹಕಾರ ಸಂಘದ ಲೇಣೀದಾರನ ಅರ್ಜಿಯ ಮೇಲೆ ಸಂಘದ ಪುಸ್ತಕಗಳನ್ನು ಪರಿಶೀಲಿಸಬಹುದು ಅಥವಾ ಈ ಬಗ್ಗೆ ಲಿಖಿತ ಆದೇಶದ ಮೂಲಕ ತಾನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ಪರಿಶೀಲಿಸುವಂತೆ ನಿರ್ದೇಶಿಸಬಹುದು:

ಪರಂತು, ಲೇಣೀದಾರನು ಅರ್ಜಿಸಲ್ಲಿಸಿರುವಲ್ಲಿ ಅವನು -

(ಎ) ರಿಜಿಸ್ಟ್ರಾರನಿಗೆ, ಆ ಋಣವು ಆಗ ಬಾಕಿಯಾಗಿದ್ದ ಮೊತ್ತವೆಂದು ಮತ್ತು ಅದರ ಸಂದಾಯಕ್ಕೆ ತಾನು ತಗಾದೆ ಮಾಡಿದ್ದೇನೆಂದು ಮತ್ತು ಯುಕ್ತ ಕಾಲದೊಳಗೆ ಅದರ ತೀರ್ವಳಿ ಪ್ರಾಪ್ತವಾಗಿಲ್ಲವೆಂದು ಮನದಟ್ಟು ಮಾಡಿಕೊಟ್ಟ ಹೊರತು; ಮತ್ತು

(ಬಿ) ರಿಜಿಸ್ಟ್ರಾರನು ಅಗತ್ಯಪಡಿಸಬಹುದಾದಂತೆ ಪ್ರಸ್ತಾವಿತ ಪರಿಶೀಲನೆಯ ವೆಚ್ಚದ ಬಗ್ಗೆ ಭದ್ರತೆಯಾಗಿ ಮೊತ್ತವನ್ನು ರಿಜಿಸ್ಟ್ರಾರನ ಬಳಿ ಠೇವಣಿ ಇಟ್ಟ ಹೊರತು

- ಆ ಅರ್ಜಿಯ ಮೇಲೆ ಅಂಥ ಯಾವುದೇ ಪರಿಶೀಲನೆ ನಡೆಸತಕ್ಕುದಲ್ಲ.

(2) ರಿಜಿಸ್ಟ್ರಾರನು, [1][ಅಂಥ ಯಾವುದೇ ಪರಿಶೀಲನೆಯ ಫಲಿತಾಂಶವನ್ನು ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನಿಗೆ ಮತ್ತು][1] -

(ಎ) ಪರಿಶೀಲನೆಯನ್ನು ಸ್ವಇಚ್ಛೆಯಿಂದ ಮಾಡಿರುವಲ್ಲಿ, ಸಂಘಕ್ಕೆ; ಮತ್ತು

(ಬಿ) ಪರಿಶೀಲನೆಯನ್ನು ಲೇಣೀದಾರನ ಅರ್ಜಿಯ ಮೇಲೆ ಮಾಡಿರುವಲ್ಲಿ, ಲೇಣೀದಾರನಿಗೆ ಮತ್ತು ಆ ಸಂಘಕ್ಕೆ

- [2][ವಿಚಾರಣೆಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ತಿಳಿಸತಕ್ಕದ್ದು.][2]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2ಎ) ರಿಜಿಸ್ಟ್ರಾರನಿಂದ ತಪಾಸಣಾ ವರದಿಯನ್ನು ಮತ್ತು ತಪಾಸಣಾ ಫಲಿತಾಂಶವನ್ನು ಸ್ವೀಕರಿಸಿದ ತರುವಾಯ, ಅದರಲ್ಲಿ ದೋಷಗಳು ಯಾವುವಾದರೂ ಇದ್ದರೆ ಅವುಗಳನ್ನು ಸರಿಪಡಿಸಲು ಮತ್ತು ಆ ಉದ್ದೇಶಕ್ಕಾಗಿ ಕರೆಯಲಾದ ವಾರ್ಷಿಕ ಮಹಾಸಭೆಯ ಮುಂದೆ ಅಥವಾ ವಿಶೇಷ ಮಹಾ ಸಭೆಯ ಮುಂದೆ ವರದಿಯನ್ನು ಮಂಡಿಸಲು ಕೂಡಲೇ ಅವಶ್ಯಕ್ರಮ ಕೈಗೊಳ್ಳುವುದು ಮಂಡಲಿಯ ಜವಾಬ್ದಾರಿಯಾಗಿರತಕ್ಕದ್ದು:

ಪರಂತು, ಸಹಕಾರ ಸಂಘಗಳ ಸಾಮಾನ್ಯ ನಿಕಾಯವು ವಿಚಾರಣಾ ನಿರ್ಣಯಗಳಿಗೆ ವಿರುದ್ಧವಾದ ಠರಾವನ್ನು ಅಂಗೀಕರಿಸಲು ಸಕ್ಷಮವಾಗಿರತಕ್ಕದ್ದಲ್ಲ.][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(3) (1)ನೇ ಉಪಪ್ರಕರಣದ ಅಡಿಯಲ್ಲಿ ನಡೆಸಲಾದ [2][ತಪಾಸಣೆ][2]ಯ ಫಲಿತಾಂಶವು, ಸಂಘದ ಕಾರ್ಯನಿರ್ವಹಣೆಯಲ್ಲಿ ಯಾವುವೇ ದೋಷಗಳನ್ನು ಬಹಿರಂಗಪಡಿಸಿದರೆ, ಸಂಘವು, [2][ತಪಸಣಾ][2] ವರದಿಯನ್ನು ಸ್ವೀಕರಿಸಿದ ಅಥವಾ [2][ತಪಾಸಣೆ][2]ಯ ಫಲಿತಾಂಶಗಳನ್ನು ತಿಳಿಸಿದ ದಿನಾಂಕದಿಂದ [2][ನಲವತ್ತೈದು ದಿನಗಳೊಳಗೆ][2], [2][ತಪಾಸಣೆ][2]ಯಲ್ಲಿ ಎತ್ತಿತೋರಿಸಲಾದ ದೋಷಗಳ ಅಥವಾ ಅಕ್ರಮಗಳ ಬಗ್ಗೆ ರಿಜಿಸ್ಟ್ರಾರನಿಗೆ ವಿವರಿಸತಕ್ಕದ್ದು ಮತ್ತು ದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅದು ಅದರ ಮೇಲೆ ಕೈಗೊಂಡ ಕ್ರಮದ ಬಗ್ಗೆ ರಿಜಿಸ್ಟ್ರಾರನಿಗೆ ವರದಿ ಮಾಡತಕ್ಕದ್ದು. ರಿಜಿಸ್ಟ್ರಾರನು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ದೋಷಗಳನ್ನು ಸರಿಪಡಿಸುವುದಕ್ಕಾಗಿ ಅಂಥ ಕ್ರಮ ಕೈಗೊಳ್ಳುವಂತೆ ಸಂಘಕ್ಕೆ ಅಥವಾ ಅದರ ಪದಾಧಿಕಾರಿಗಳಿಗೆ ನಿರ್ದೇಶಿಸಿ ಆದೇಶ [2][ತಪಾಸಣೆ][2] ಮಾಡಬಹುದು.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][65ಎ. [2][ವಿಚಾರಣೆ][2] ಹಾಗೂ ಪರಿಶೀಲನೆಯ ವರದಿಯನ್ನು ಮತ್ತು ಅಂತಿಮ ವರದಿಯನ್ನು ಪತ್ತಿನ ಏಜೆನ್ಸಿಗೆ ಒದಗಿಸತಕ್ಕುದು.Š ರಿಜಿಸ್ಟ್ರಾರನು, ಅಂಥ ಸಹಕಾರ ಸಂಘದ ಯಾವುದೇ ವಿಚಾರಣೆ ಅಥವಾ [2][ಪರಿಶೀಲನೆಯಲ್ಲಿ ಗಮನಿಸಿದ ನ್ಯೂನತೆಗಳತ್ತ][2] ಆ ಸಹಕಾರ ಸಂಘಕ್ಕೆ ಹಣಕಾಸು ನೀಡುವ ಪತ್ತಿನ ಏಜೆನ್ಸಿಯ ಗಮನ ಸೆಳೆಯತಕ್ಕುದು ಮತ್ತು ಅಂಥ ಪತ್ತಿನ ಏಜೆನ್ಸಿಯ ಲಿಖಿತದಲ್ಲಿ ತಗಾದೆ ಮಾಡಿದರೆ [2][ಅಂಥ ವಿಚಾರಣೆಯ ಅಥವಾ ಪರಿಶೀಲನಾ ವರದಿಯ][2] ಒಂದೊಂದು ಪ್ರತಿಯನ್ನು ಸಹ ಒದಗಿಸತಕ್ಕುದು.

1. 1975ರ ಅಧಿನಿಯಮ ಸಂಖ್ಯೆ 2ರ ಮೂಲಕ 17.7.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1980ರ ಅಧಿನಿಯಮ ಸಂಖ್ಯೆ 3ರ ಮೂಲಕ 11.8.1977 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**ವಿವರಣೆ.-** ಈ ಪ್ರಕರಣದ ಮತ್ತು 65ಬಿ ಪ್ರಕರಣದ ಉದ್ದೇಶಕ್ಕಾಗಿ ಸಾಲನೀಡಿಕೆ ಏಜೆನ್ಸಿಯು ಹಣಕಾಸು ನೀಡಿಕೆ ಬ್ಯಾಂಕನ್ನು ಒಳಗೊಳ್ಳುತ್ತದೆ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

65ಬಿ. ಪತ್ತಿನ ಏಜೆನ್ಸಿಯಿಂದ ಸಹಕಾರ ಸಂಘದ ಪುಸ್ತಕಗಳ ಪರಿಶೀಲನೆ.- (1) ಪತ್ತಿನ ಏಜೆನ್ಸಿಯು, ಯಾವ ಸಹಕಾರ ಸಂಘವು ಆ ಪತ್ತಿನ ಏಜೆನ್ಸಿಗೆ ಹಣಕಾಸು ನೆರವಿಗೆ ಅರ್ಜಿ ಸಲ್ಲಿಸಿರುವುದೋ ಅಥವಾ ಅದಕ್ಕೆ ಋಣಿಯಾಗಿರುವುದೋ ಆ ಯಾವುದೇ ಸಹಕಾರ ಸಂಘದ ಪುಸ್ತಕಗಳನ್ನು ಪರಿಶೀಲಿಸಲು ಅಧಿಕಾರ ಹೊಂದಿರತಕ್ಕುದು.

(2) ಪರಿಶೀಲನೆಯನ್ನು ಪತ್ತಿನ ಏಜೆನ್ಸಿಯ ಅಧಿಕಾರಿ ಅಥವಾ ಆ ಪತ್ತಿನ ಏಜೆನ್ಸಿಯ ಅಂಥ ಪರಿಶೀಲನೆಯನ್ನು ಕೈಗೊಳ್ಳಲು ಸಕ್ಷಮನೆಂದು ಅಧಿಕೃತಗೊಳಿಸಿದ ಅದರ ವೇತನ ಪಡೆಯುವ ಸಿಬಂ್ಬದಿ ವರ್ಗದ ಸದಸ್ಯನು ನಡೆಸಬಹುದು.

(3) ಹಾಗೆ ಪರಿಶೀಲನೆಯನ್ನು ನಡೆಸುವ ಅಧಿಕಾರಿಯು ಅಥವಾ ಸದಸ್ಯನು, ಎಲ್ಲ ಸೂಕ್ತ ವೇಳೆಗಳಲ್ಲಿ ಆ ಸಹಕಾರ ಸಂಘಕ್ಕೆ ಸೇರಿದ ಅಥವಾ ಅದರ ಅಭಿರಕ್ಷೆಯಲ್ಲಿರುವ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತಾಪತ್ರಗಳು ನಗದು ಹಣ ಮತ್ತು ಇತರ ಸ್ವತ್ತು ಇವುಗಳನ್ನು ಪರಿಶೀಲಿಸಲು ಮುಕ್ತ ಅವಕಾಶ ಹೊಂದಿರತಕ್ಕುದು ಮತ್ತು ಆ ಸಹಕಾರ ಸಂಘದ ಹಣಕಾಸು ಪರಿಸ್ಥಿತಿಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಪತ್ತಿನ ಏಜೆನ್ಸಿಯು ಅದಕ್ಕೆ ಸಾಲ ನೀಡಿದ ಮೊತ್ತಗಳ ಭದ್ರತೆಯನ್ನು ಸುನಿಶ್ಚಿತಗೊಳಿಸಲು ಅವಶ್ಯವಾಗಬಹುದಾದಂಥ ಮಾಹಿತಿಯನ್ನು, ವಿವರಪತ್ರಗಳನ್ನು ಮತ್ತು ವಿವರ ಪಟ್ಟಿಕೆಗಳನ್ನು ಸಹ ತರಿಸಿಕೊಳ್ಳಬಹುದು.][1]

66. ಪುಸ್ತಕಗಳನ್ನು ಮತ್ತು ಸ್ವತ್ತನ್ನು ವಶಪಡಿಸಿಕೊಳ್ಳುವ ಅಧಿಕಾರ.- 63ನೇ ಪ್ರಕರಣದ ಮೇರೆಗೆ ಲೆಕ್ಕಪರಿಶೋಧನೆಯನ್ನು, 64ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ಅಥವಾ 65ನೇ ಪ್ರಕರಣದ ಮೇರೆಗೆ ಪರಿಶೀಲನೆಯನ್ನು ನಡೆಸುವ [1][ಅಥವಾ ಅನ್ಯಥಾ][1] ಯಾರೇ ಅಧಿಕಾರಿಗೆ ಅಥವಾ ವ್ಯಕ್ತಿಗೆ ಲೆಕ್ಕಪರಿಶೋಧನೆಯ, ವಿಚಾರಣೆಯ ಅಥವಾ ಪರಿಶೀಲನೆಯ ಅವಧಿಯಲ್ಲಿ ತನ್ನ ಗಮನಕ್ಕೆ ಬಂದ ಯಾವುದೇ ನ್ಯೂನತೆ ಅಥವಾ ಅಕ್ರಮಗಳನ್ನು ರುಜುವಾತುಪಡಿಸುವುದಕ್ಕೆ ಸಂಬಂಧಿಸಿದಂತೆ ಅಗತ್ಯವೆಂದು ಅಂಥ ಅಧಿಕಾರಿಯು ಅಥವಾ ವ್ಯಕ್ತಿಯು ಭಾವಿಸಬಹುದಾದಂಥ ಯಾವುದೇ ಸಾಕ್ಷ ್ಯವನ್ನು ನಾಶಪಡಿಸುವ ಅಥವಾ ಅಳಿಸುವ ಅಥವಾ ಬದಲಾಯಿಸುವ ಅಥವಾ ಕೈ ಚಳಕ ಮಾಡುವ ದೃಷ್ಟಿಯಿಂದ ಸಂಘದ ಯಾವುವೇ ಪುಸ್ತಕಗಳನ್ನು ಅಥವಾ ಇತರ ಸ್ವತ್ತುಗಳನ್ನು ಕೆಡಿಸಲಾಗಿದೆ ಎಂದು ಅಥವಾ ಅವುಗಳನ್ನು ಸಂಘದಲ್ಲಿ ಉಳಿಯಗೊಟ್ಟರೆ ಹಾಗೆ ಕೆಡಿಸುವ ಸಂಭವವಿದೆಯೆಂದು ನಂಬಲು ಕಾರಣವಿದ್ದರೆ ಅವನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯವರೆಗೆ ಅಂಥ ಪುಸ್ತಕಗಳನ್ನು ಅಥವಾ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿಕಾರ ಹೊಂದಿರತಕ್ಕುದು.

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

67. ವಿಚಾರಣೆಯ ವೆಚ್ಚಗಳು.- 64ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಿರುವಲ್ಲಿ ಅಥವಾ ಲೇಣೀದಾರನ ಅರ್ಜಿಯ ಮೇಲೆ 65ನೇ ಪ್ರಕರಣದ ಮೇರೆಗೆ ಪರಿಶೀಲನೆಯನ್ನು ಮಾಡಿರುವಲ್ಲಿ, ರಿಜಿಸ್ಟ್ರಾರನು, ಅದಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಅಥವಾ ಅವನು ಸೂಕ್ತವೆಂದು ಭಾವಿಸಬಹುದಾದಂಥ ಆ ವೆಚ್ಚಗಳ ಭಾಗವನ್ನು, ಸಂಬಂಧಪಟ್ಟ ಸಂಘವು ಯಾವ ಸಹಕಾರ ಸಂಘಕ್ಕೆ ಸಂಯೋಜಿತವಾಗಿದೆಯೋ ಆ ಸಹಕಾರ ಸಂಘ, ವಿಚಾರಣೆಯನ್ನು ಪರಿಶೀಲನೆಯನ್ನು ಮಾಡಬೇಕೆಂದು ಕೋರುವ ಸದಸ್ಯರು ಅಥವಾ ಲೇಣೀದಾರ ಮತ್ತು ಸಂಘದ [1][ಪದಾಧಿಕಾರಿಗಳ][1] ಅಥವಾ ಹಿಂದಿನ [1][ಪದಾಧಿಕಾರಿಗಳ][1] ನಡುವೆ ಭಾಗಮಾಡಬಹುದು:

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು,-

(ಎ) ಈ ಅಧಿನಿಯಮದ ಮೇರೆಗೆ ವೆಚ್ಚಗಳ ಹಂಚಿಕೆಯ ಯಾವುದೇ ಆದೇಶವನ್ನು, ಅದರ ಮೇರೆಗೆ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧಗೊಳಿಸುವಂತೆ ಕೋರಲಾದ ಸಂಘಕ್ಕೆ ಅಥವಾ ವ್ಯಕ್ತಿಗೆ ಸುನಾವಣೆಯ ಸೂಕ್ತ ಅವಕಾಶವನ್ನು ಕೊಟ್ಟ ಹೊರತು, ಮಾಡಲ್ಪಡತಕ್ಕುದಲ್ಲ;

(ಬಿ) ಯಾವ ಕಾರಣಗಳ ಮೇಲೆ ವೆಚ್ಚಗಳನ್ನು ಹಂಚಿ ಹಾಕಲಾಯಿತೋ ಅವುಗಳನ್ನು ರಿಜಿಸ್ಟ್ರಾರನು ಲಿಖಿತದಲ್ಲಿ ನಿರೂಪಿಸತಕ್ಕುದು.

68. ರಿಜಿಸ್ಟ್ರಾರನ ಆದೇಶ.- [2][1][2] ರಿಜಿಸ್ಟ್ರಾರನು, ಸಹಕಾರ ಸಂಘ ಅಥವಾ ಅದರ [1][ಪದಾಧಿಕಾರಿಗಳನ್ನು][1] [5][xxx][5] 64ನೇ ಪ್ರಕರಣದ ಮೇರೆಗಿನ ವಿಚಾರಣೆಯಲ್ಲಿ ಅಥವಾ 65ನೇ [3][ಮತ್ತು 65ಬಿ][3] ಪ್ರಕರಣದ ಮೇರೆಗಿನ ಪರಿಶೀಲನೆಯಲ್ಲಿ ಕಂಡುಬಂದ [4][ನ್ಯೂನತೆಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ಪರಿಹರಿಸಲು][4] ನಿರ್ದೇಶಿಸುವ ಆದೇಶವನ್ನು ಮಾಡಿ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕ್ರಮವನ್ನು ಅದರಲ್ಲಿ ತಿಳಿಸಿದ ಅವಧಿಯೊಳಗೆ ಕೈಗೊಳ್ಳುವಂತೆ ಆ ಮೂಲಕ ನಿರ್ದೇಶಿಸಬಹುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ. ನೀಡಲಾಗಿದೆ.
3. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(2) ನ್ಯೂನತೆಗಳನ್ನು ಸಹಕಾರ ಸಂಘವು ಸರಿಪಡಿಸುವುದರ ಬಗ್ಗೆ ಒಂದು ವರದಿಯನ್ನು ಅಂಥ ಸಂಘದ ಸಮಿತಿಯು, ಅಂಥ ಎಲ್ಲ ನ್ಯೂನತೆಗಳನ್ನು ಸರಿಪಡಿಸುವವರೆಗೆ ನಿಯತವಾಗಿ ರಿಜಿಸ್ಟ್ರಾರ್‌ಗೆ, ಸಾಲನೀಡಿಕೆ ಏಜೆನ್ಸಿಗೆ ಮತ್ತು ಹಣಕಾನು ನೀಡಿಕೆ ಬ್ಯಾಂಕ್‌ಗೆ ಮತ್ತು ನ್ಯೂನತೆಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಎತ್ತಿ ತೋರಿಸಿದ್ದಲ್ಲಿ ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಕಳುಹಿಸತಕ್ಕುದು.

(3) ವಿಚಾರಣೆಯಲ್ಲಿ ಅಥವಾ ಪರಿಶೀಲನೆಯಲ್ಲಿ ಕಂಡು ಬಂದ ದೋಷಗಳನ್ನು ಬಗೆಹರಿಸುವಂತೆ ರಿಜಿಸ್ಟ್ರಾರನು (1)ನೇ ಉಪಪ್ರಕರಣದ ಮೇರೆಗೆ ಆದೇಶ ಮಾಡಿದಾಗ, ವಿಚಾರಣೆಯ ಅಥವಾ ಸಂದರ್ಭಾನುಸಾರ ಪರಿಶೀಲನೆಯ ಫಲಿತಾಂಶದೊಂದಿಗೆ ಆದೇಶದ ಒಂದು ಪ್ರತಿಯನ್ನು ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಕಳುಹಿಸತಕ್ಕುದು. ಅವನು, ಅಂಥ ಫಲಿತಾಂಶಗಳನ್ನು ಮುಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಮತ್ತು ಹಣಕಾಸು ವಿವರಣ ಪಟ್ಟಿಗಳಲ್ಲಿ [2][ಸೇರಿಸಲು ಸಂಘದ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಂಘ ಅಥವಾ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧನಾ ಫರ್ಮಿಗೆ ಮಾಹಿತಿ ನೀಡತಕ್ಕದ್ದು.][2]][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**ವಿವರಣೆ.-** x x x x][1]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][69. ಅಧಿಭಾರ.- (1) ಸಹಕಾರ ಸಂಘದ ಲೆಕ್ಕಪರಿಶೋಧನೆ, ವಿಚಾರಣೆ, ಪರಿಶೀಲನೆ ಅಥವಾ ಸಮಾಪನದ ಕ್ರಮದಲ್ಲಿ ಅಂಥ ಸಂಘದ ವ್ಯವಸ್ಥಾಪನೆ ನಡೆಸುವ ಸಮಿತಿ ಅಥವಾ [2][ಸರ್ಕಾರದಿಂದ ನಾಮನಿರ್ದೇಶಿತರು ಮತ್ತು ಪದನಿಮಿತ್ತ ಸದಸ್ಯರೂ ಒಳಗೊಂಡಂತೆ][2] ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ, ಸಭಾಪತಿ, ಉಪಸಭಾಪತಿ ಅಥವಾ ಯಾರೇ ಇತರ ಸದಸ್ಯನು ಅಥವಾ ಅಂಥ ಸಹಕಾರ ಸಂಘದ ಸಂಘಟನೆ ಅಥವಾ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾರೇ ವ್ಯಕ್ತಿಯು ಅಥವಾ ಯಾವುದೇ ಕಾಲಕ್ಕೆ ಸಹಕಾರ ಸಂಘದ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಆಗಿದ್ದ ಯಾರೇ ವ್ಯಕ್ತಿಯು, ಅಧಿನಿಯಮ, ನಿಯಮಗಳು ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯವನ್ನು ಮಾಡಿದ್ದರೆ ಅಥವಾ ವಿಶ್ವಾಸಭಂಗ ಅಥವಾ 3[xxx]3 ನಿರ್ಲಕ್ಷ್ಯದಿಂದ ಸಹಕಾರ ಸಂಘದ ಆಸ್ತಿಗಳಲ್ಲಿ ಯಾವುದೇ ಕೊರತೆ ಉಂಟು ಮಾಡಿದ್ದರೆ ಅಥವಾ ಅಂಥ ಸಹಕಾರ ಸಂಘಕ್ಕೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ತನ್ನಲ್ಲಿ ಇಟ್ಟುಕೊಂಡಿದ್ದರೆ, ರಿಜಿಸ್ಟ್ರಾರನು ತಾನಾಗಿಯೇ ಅಥವಾ ಸಮಿತಿಯ, ಸಮಾಪಕನ ಅಥವಾ ಯಾವುದೇ ಲೇಣೇದಾರನ ಅರ್ಜಿಯ ಮೇಲೆ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗೆ ಮತ್ತು ಮೃತ ವ್ಯಕ್ತಿಯ ಸಂದರ್ಭದಲ್ಲಿ ಅವನ ಸಂಪದದ ಉತ್ತರಾಧಿಕಾರಿಯಾದ ಅವನ ಪ್ರತಿನಿಧಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ, ಆ ಹಣ, ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನಿರ್ಧರಿಸಬಹುದಾದಂಥ ದರದ ಬಡ್ಡಿಯೊಂದಿಗೆ ಸಂದಾಯ ಮಾಡುವಂತೆ ಅಥವಾ ಪುನಃ ಸ್ಥಾಪಿಸುವಂತೆ ಅಥವಾ ತಾನು ನ್ಯಾಯ ಸಮ್ಮತವಾದದ್ದೆಂದು ಮತ್ತು ನ್ಯಾಯಯುತವಾದದ್ದೆಂದು

ಪರಿಗಣಿಸುವಂಥ ಮೊತ್ತವನ್ನು ಅಷ್ಟು ಮಟ್ಟಿಗೆ ಪರಿಹಾರ ರೂಪದಲ್ಲಿ ಸಹಕಾರ ಸಂಘದ ಆಸ್ತಿಗಳಿಗೆ ವಂತಿಗೆ ಕೊಡುವಂತೆ ಅಗತ್ಯಪಡಿಸುವ ಆದೇಶವನ್ನು ಹೊರಡಿಸಬಹುದು.

(2) ಆ ಕೃತ್ಯವು ಸಂಬಂಧಪಟ್ಟ ವ್ಯಕ್ತಿಯು ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕ ಕೃತ್ಯವಾಗಿದ್ದಾಗ್ಯೂ, ಈ ಪ್ರಕರಣವು ಅನ್ವಯವಾಗತಕ್ಕುದು.][1]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5-9-2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(3) (1)ನೇ ಉಪ-ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶವು, ಯಾರ ವಿರುದ್ಧ ಆದೇಶ ಮಾಡಲಾಯಿತೋ ಆ ವ್ಯಕ್ತಿಯಿಂದ ವ್ಯವಹರಣೆಯ ವೆಚ್ಚವನ್ನು ನಿಯಮಿಸಬಹುದಾದಂಥ ದರದಲ್ಲಿ ಮತ್ತು ಅಂಥ ರೀತಿಯಲ್ಲಿ ವಸೂಲಿ ಮಾಡುವುದಕ್ಕೆ ಉಪಬಂಧಿಸಬಹುದು.][1]

1.1998ರ ಅಧಿನಿಯಮ ಸಂಖ್ಯೆ 25ರ ಮೂಲಕ 27.10.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(4) (1)ನೇ ಉಪಪ್ರಕರಣದ ಅಡಿಯಲ್ಲಿಯ ಅರ್ಜಿಯನ್ನು ನ್ಯಾಯಾಲಯವು ಯಾವುದೇ ತಡೆಯನ್ನು ನೀಡಿದ್ದರೆ, ಅದನ್ನು ಹೊರತುಪಡಿಸಿ, ಹನ್ನೆರಡು ತಿಂಗಳುಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು. ಆದಾಗ್ಯೂ, ರಿಜಿಸ್ಟ್ರಾರನು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಸದರಿ ಅವಧಿಯನ್ನು ಹದಿನೆಂಟು ತಿಂಗಳುಗಳವರೆಗೆ ವಿಸ್ತರಿಸಬಹುದು.][1]

[2][ಪರಂತು, ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ಮಾಡಿದ ವರದಿಯ ಮೇಲೆ ವಿಸ್ತರಣೆಗೆ ನೈಜ ಅಥವಾ ಸಮಂಜಸ ಅಧಾರಗಳಿವೆ ಎಂದು ಅದಕ್ಕೆ ಮನದಟ್ಟಾದರೆ, ಹದಿನೆಂಟು ತಿಂಗಳುಗಳಿಗೆ ಮೀರಿದ ಅವಧಿಗೆ ವಿಸ್ತರಿಸಬಹುದು.][2]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಅಧ್ಯಾಯ-IX

ವಿವಾದಗಳ ಇತ್ಯರ್ಥ

70. ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಉಲ್ಲೇಖಿಸಬಹುದಾದ ವಿವಾದಗಳು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಹಕಾರ ಸಂಘದ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿ [3][[2][xxx][2]][3] ಯಾವುದೇ ವಿವಾದವು,-

(ಎ) ಸದಸ್ಯರು, ಹಿಂದಿನ ಸದಸ್ಯರು ಮತ್ತು ಸದಸ್ಯರು, ಹಿಂದಿನ ಸದಸ್ಯರು ಮತ್ತು ಮೃತ ಸದಸ್ಯರ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳು - ಇವರ ನಡುವೆ;ಅಥವಾ

(ಬಿ) ಸದಸ್ಯ, ಹಿಂದಿನ ಸದಸ್ಯ ಅಥವಾ ಸದಸ್ಯನ, ಹಿಂದಿನ ಸದಸ್ಯನ ಅಥವಾ ಮೃತ ಸದಸ್ಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿ ಮತ್ತು ಸಂಘ, ಅದರ ಸಮಿತಿ ಅಥವಾ ಸಂಘದ ಯಾರೇ ಅಧಿಕಾರಿ, ಏಜೆಂಟ್ ಅಥವಾ ನೌಕರ ಇವರ ನಡುವೆ; ಅಥವಾ

(ಸಿ) ಸಂಘ ಅಥವಾ ಅದರ ಸಮಿತಿ ಮತ್ತು ಸಂಘದ ಯಾವುದೇ ಹಿಂದಿನ ಸಮಿತಿ ಸಂಘದ ಯಾರೇ ಅಧಿಕಾರಿ, ಏಜೆಂಟ್ ಅಥವಾ ನೌಕರ ಅಥವಾ ಯಾರೇ ಹಿಂದಿನ ಅಧಿಕಾರಿ, ಹಿಂದಿನ ಏಜೆಂಟ್, ಹಿಂದಿನ ನೌಕರ ಅಥವಾ ಯಾರೇ ಮೃತ ಅಧಿಕಾರಿಯ ಮೃತ ಏಜೆಂಟ್‌ನ ಅಥವಾ ಮೃತ ನೌಕರನ ನಾಮನಿರ್ದೇಶಿತನು, ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಇವರ ನಡುವೆ; ಅಥವಾ

(ಡಿ) ಸಂಘ ಮತ್ತು ಇತರ ಯಾವುದೇ ಸಹಕಾರ ಸಂಘ [1][ಅಥವಾ ಪತ್ತಿನ ಏಜೆನ್ಸಿ][1] ಇವುಗಳ ನಡುವೆ

1. 1975ರ ಅಧಿನಿಯಮ ಸಂಖ್ಯೆ 2ರ ಮೂಲಕ 17.7.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

- ಯಾವುದೇ ವಿವಾದವು ಉದ್ಭವಿಸಿದರೆ, ಅಂಥ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಉಲ್ಲೇಖಿಸತಕ್ಕುದು ಮತ್ತು [1][ಯಾವುದೇ ಸಿವಿಲ್ ಅಥವಾ ಕಾರ್ಮಿಕ ಅಥವಾ ರೆವಿನ್ಯೂ ನ್ಯಾಯಾಲಯವು ಅಥವಾ ಕೈಗಾರಿಕಾ ನ್ಯಾಯಾಧಿಕರಣವು][1] ಅಂಥ ವಿವಾದಕ್ಕೆ ಸಂಬಂಧಿಸಿದ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಅಂಗೀಕರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದಲ್ಲ.

1. 2000ದ ಅಧಿನಿಯಮ ಸಂಖ್ಯೆ 2ರ ಮೂಲಕ 20.6.2000 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ. ಅಧಿಸೂಚನೆ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಈ ಕೆಳಕಂಡ ವಿವಾದಗಳನ್ನು ಸಹಕಾರ ಸಂಘದ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಪಟ್ಟ ವಿವಾದಗಳೆಂದು ಭಾವಿಸತಕ್ಕುದು, ಎಂದರೆ:-

(ಎ) ಸಂಘವು, ಸದಸ್ಯನಿಂದ ಅಥವಾ ಮೃತ ಸದಸ್ಯನ ನಾಮನಿರ್ದೇಶಿತನಿಂದ, ವಾರಸುದಾರರಿಂದ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳಿಂದ ತನಗೆ ಬರಬೇಕಾದ ಯಾವುದೇ ಋಣ ಅಥವಾ ತಗಾದೆಯ ಬಗ್ಗೆ ಮಾಡಿದ ಕ್ಲೇಮು, ಅಂಥ ಋಣ ಅಥವಾ ತಗಾದೆಯು ಅಂಗೀಕೃತವಾಗಿರಲಿ ಅಥವಾ ಇಲ್ಲದಿರಲಿ;

(ಬಿ) ಸಂಘವು, ಪ್ರಧಾನ ಋಣಿಯ ತಪ್ಪಿನ ಪರಿಣಾಮವಾಗಿ ಅಂಥ ಋಣ ಅಂಗೀಕೃತವಾಗಿರಲಿ ಅಥವಾ ಇಲ್ಲದಿರಲಿ, ಪ್ರಧಾನ ಋಣಿಯಿಂದ ತನಗೆ ಬಾಕಿ ಇರುವ ಯಾವುದೇ

ಋಣ ಅಥವಾ ತಗಾದೆಯ ಸಂಬಂಧದಲ್ಲಿ ಯಾವುದೇ ಮೊಬಲಗನ್ನು ಜಾಮಿÁನುದಾರರಿಂದ ವಸೂಲು ಮಾಡಿರುವಲ್ಲಿ, ಆ ಪ್ರಧಾನ ಋಣಿಯ ವಿರುದ್ಧ ಜಮಿÁನುದಾರನು ಮಾಡಿದ ಕ್ಲೇಮು;

(ಸಿ) [2][[1][xxx]][1]][2]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಡಿ) [2][ಕೈಗಾರಿಕಾ ವಿವಾದಗಳ ಅಧಿನಿಯಮ, 1947ರಲ್ಲಿ (1947ರ ಕೇಂದ್ರ ಅಧಿನಿಯಮ ಸಂಖ್ಯೆ 14) ತದ್ವಿರುದ್ಧವಾದುದು ಏನೇ ಇದ್ದರೂ,][2] ನಿಯೋಜನೆಯ ನಿಬಂಧನೆಗಳ, ಕೆಲಸದ ಪರಿಸ್ಥಿತಿಗಳು ಮತ್ತು ಸಹಕಾರ ಸಂಘವು ಕೈಗೊಂಡ ಶಿಸ್ತು ಕ್ರಮ ಇವುಗಳಿಗೆ ಸಂಬಂಧಿಸಿದ ವಿವಾದವೂ ಸೇರಿ, ಸಹಕಾರ ಸಂಘ ಮತ್ತು ಅದರ ನೌಕರರು, ಅಥವಾ ಹಿಂದಿನ ನೌಕರರು ಅಥವಾ ಮೃತ ನೌಕರರ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಇವರ ನಡುವಿನ ಯಾವುದೇ ವಿವಾದ;

(ಇ) ಸದಸ್ಯ, ಹಿಂದಿನ ಸದಸ್ಯ, ಮೃತ ಸದಸ್ಯ ಅಥವಾ ಮೃತ ಅಧಿಕಾರಿ, ಹಿಂದಿನ ಏಜೆಂಟ್ ಅಥವಾ ಮೃತ ಏಜೆಂಟ್ ಅಥವಾ ಯಾವುದೇ ಸೇವಕ, ಹಿಂದಿನ ಸೇವಕ ಅಥವಾ ಮೃತ ಸೇವಕನಿಂದ ಅಥವಾ ಅದರ ಹಿಂದಿನ ಅಥವಾ ಈಗಿನ ಸಮಿತಿಯಿಂದ ಸಹಕಾರ ಸಂಘದ ಆಸ್ತಿಗಳಿಗೆ ಉಂಟು ಮಾಡಿದ ಯಾವುದೇ ಕೊರತೆಯು ಅಂಗೀಕರಿಸಲ್ಪಟ್ಟಿರಲಿ ಅಥವಾ ಇಲ್ಲದಿರಲಿ, ಆ ಬಗ್ಗೆ ಸಹಕಾರ ಸಂಘವು ಮಾಡಿದ ಕ್ಲೇಮು.][1]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2000ರ ಅಧಿನಿಯಮ ಸಂಖ್ಯೆ 2ರ ಮೂಲಕ 20.6.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಈ ಪ್ರಕರಣದ ಮೇರೆಗೆ ರಿಜಿಸ್ಟ್ರಾರನಿಗೆ ಉಲ್ಲೇಖಿಸಲಾದ ವಿವಾದವು, ಸಹಕಾರ ಸಂಘದ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ವಿವಾದವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದರ ಮೇಲೆ ರಿಜಿಸ್ಟ್ರಾರನ ತೀರ್ಮಾನವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

[1][[2][(4) xxx

(5) xxx]][1]][2]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][70ಎ. ಕಾಲಪರಿಮಿತಿಯ ಅವಧಿ.- (1) 70ನೇ ಪ್ರಕರಣದ ಮೇರೆಗಿನ ಯಾವುದೇ ವಿವಾದವನ್ನು, ಅದನ್ನು ವ್ಯಾಜ್ಯ ಕಾರಣದ ದಿನಾಂಕದಿಂದ ಆರು ವರ್ಷಗಳ ಒಳಗೆ ರಿಜಿಸ್ಟ್ರಾರನಿಗೆ ಉಲ್ಲೇಖಿಸಿದ್ದ ಹೊರತು, ಅಂಗೀಕರಿಸತಕ್ಕುದಲ್ಲ:

ಪರಂತು, ಸಮಿತಿಯ ಸದಸ್ಯ, ಅಧ್ಯಕ್ಷ, ಉಪಾಧ್ಯಕ್ಷ, [2][ಅಥವಾ ಇತರ ಪದಾಧಿಕಾರಿಯ][2] ಚುನಾವಣೆಗೆ ಸಂಬಂಧಿಸಿದ ವಿವಾದವನ್ನು ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ರಿಜಿಸ್ಟ್ರಾರನಿಗೆ ಉಲ್ಲೇಖಿಸತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ ಉಲ್ಲೇಖಿಸಿದ ವಿವಾದವನ್ನು, ಆ ಅವಧಿಯ ಒಳಗೆ ಅದನ್ನು ಉಲ್ಲೇಖಿಸದಿರಲು ಉಲ್ಲೇಖಿಸುವ ವ್ಯಕ್ತಿಗೆ ಸಾಕಷ್ಟು ಕಾರಣಗಳು ಇದ್ದುವೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅವನು ಅಂಗೀಕರಿಸಬಹುದು.]1

[3][ಪರಂತು, ನೌಕರನ ವಿರುದ್ಧದ ಶಿಸ್ತು ಕ್ರಮಕ್ಕೆ ಅಥವಾ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಒಂದು ವಿವಾದವನ್ನು ಅಂಥ ವಿವಾದಕ್ಕೆ ಸಂಬಂಧಪಟ್ಟ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ದಾಖಲು ಮಾಡತಕ್ಕದ್ದು.][3]

1.1975ರ ಅಧಿನಿಯಮ ಸಂಖ್ಯೆ 39ರ, ಮೂಲಕ 1.6.1960 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

71. ವಿವಾದಗಳ ವಿಲೆ.- (1) ರಿಜಿಸ್ಟ್ರಾರನು, 70ನೆಯ ಪ್ರಕರಣದ ಮೇರೆಗೆ ವಿವಾದದ ಉಲ್ಲೇಖವನ್ನು ಸ್ವೀಕರಿಸಿದ ತರುವಾಯ-

(ಎ) ಆ ವಿವಾದವನ್ನು ತಾನೇ ತೀರ್ಮಾನಿಸಬಹುದು; ಅಥವಾ

(ಬಿ) ಆ ಬಗ್ಗೆ ರಾಜ್ಯಸರ್ಕಾರವು ಅಧಿಕಾರ ನೀಡಿರುವ ಯಾರೇ ವ್ಯಕ್ತಿಗೆ ವಿಲೆಗಾಗಿ ಅದನ್ನು ವರ್ಗಾಯಿಸಬಹುದು; ಅಥವಾ

(ಸಿ) ರಿಜಿಸ್ಟ್ರಾರನು ನೇಮಿಸಿದ ಒಬ್ಬ ಮಧ್ಯಸ್ಥಗಾರನಿಗೆ ವಿಲೆಗಾಗಿ ಅದನ್ನು ಉಲ್ಲೇಖಿಸಬಹುದು.

(2) ರಿಜಿಸ್ಟ್ರಾರನು (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ವರ್ಗಾಯಿಸಿದ ಅಥವಾ ಆ ಉಪಪ್ರಕರಣದ (ಸಿ) ಖಂಡದ ಮೇರೆಗೆ ಉಲ್ಲೇಖಿಸಿದ ಯಾವುದೇ ಉಲ್ಲೇಖವನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು ಮತ್ತು ಅದನ್ನು ತಾನೇ ತೀರ್ಮಾನಿಸಬಹುದು.

(3) ಈ ಪ್ರಕರಣದ ಮೇರೆಗೆ ತೀರ್ಮಾನಕ್ಕಾಗಿ ವಿವಾದವನ್ನು ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ರಿಜಿಸ್ಟ್ರಾರನು ಅಥವಾ ಯಾರೇ ಇತರ ವ್ಯಕ್ತಿಯು, ವಿವಾದವು ತೀರ್ಮಾನವಾಗುವವರೆಗೆ ನ್ಯಾಯದ ಹಿತದೃಷ್ಟಿಯಿಂದ ತಾನು ಅವಶ್ಯವೆಂದು ಭಾವಿಸುವಂಥ ವಾದಕಾಲೀನ ಆದೇಶಗಳನ್ನು ಮಾಡಬಹುದು.

[1][(3ಎ) (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ವಿವಾದವನ್ನು ಮಧ್ಯಸ್ಥಗಾರನಿಗೆ ಉಲ್ಲೇಖಿಸಿರುವಲ್ಲಿ, ಐತೀರ್ಪು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಮಧ್ಯಸ್ಥಗಾರನಿಗೆ ಸಂದಾಯಮಾಡಬೇಕಾದ ಫೀಜನ್ನು ಮತ್ತು ರಿಜಿಸ್ಟ್ರಾರನಿಗೆ ಸಂದಾಯಮಾಡಬೇಕಾದ ಫೀಜುಗಳು ಮತ್ತು ವೆಚ್ಚಗಳನ್ನು ಒಳಗೊಂಡಿರತಕ್ಕುದು. ಅಂಥ ಐತೀರ್ಪನ್ನು, ರಿಜಿಸ್ಟ್ರಾರನಿಂದ ವಿವಾದವನ್ನು ತೀರ್ಮಾನಿಸಲು ನಿಗದಿಪಡಿಸಿದ ಅವಧಿ ಕೊನೆಗೊಂಡ ತರುವಾಯ, ನೀಡಲಾಗಿತ್ತೆಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ ಮತ್ತು ಅದು, ಅಪೀಲಿಗೆ ಅಥವಾ ಪುನರೀಕ್ಷಣೆಗೆ ಒಳಪಟ್ಟು, ವಿವಾದದ ಪಕ್ಷಕಾರರಿಗೆ ಬಂಧನಕಾರಿಯಾಗತಕ್ಕುದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) 70ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಸದರಿ ಪ್ರಕರಣದ (1)ನೇ ಉಪಪ್ರಕರಣದ (ಎ) ಅಥವಾ (ಬಿ) ಖಂಡದ ಮೇರೆಗೆ ಯಾವುದೇ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಉಲ್ಲೇಖಿಸಿರುವಾಗ, ರಿಜಿಸ್ಟ್ರಾರನಿಗೆ ಸಂಬಂಧಪಟ್ಟ ಸಂಘವು ಅರ್ಜಿ ಸಲ್ಲಿಸಿದ ಮೇಲೆ, ಆ ಸಂಘದ ಹಿತದೃಷ್ಟಿಯಲ್ಲಿ ಅವನ ಮುಂದಿರುವ ವ್ಯವಹರಣೆಗಳಲ್ಲಿ ವಿವಾದಕ್ಕೆ ಪಕ್ಷಕಾರರನ್ನಾಗಿ ಮಾಡಲಾಗದಂಥ ವ್ಯಕ್ತಿಗಳನ್ನು ವಿವಾದದ ಪರಿಣಾಮಕಾರಿ ತೀರ್ಮಾನಕ್ಕಾಗಿ ಪಕ್ಷಕಾರರನ್ನಾಗಿ ಸೇರಿಸುವುದು ಅಗತ್ಯವೆಂದು ಮನದಟ್ಟಾದರೆ, ಅಧಿಕಾರ ವ್ಯಾಪ್ತಿಹೊಂದಿರುವ ಸಿವಿಲ್ ನ್ಯಾಯಾಲಯದಲ್ಲಿ ಕ್ರಮಬದ್ಧವಾಗಿ ದಾವೆಯನ್ನು ಹೂಡಲು ಅವನು ಆ ಸಂಘಕ್ಕೆ ಅನುಮತಿ ನೀಡಬಹುದು ಮತ್ತು ಆ ಸಿವಿಲ್ ನ್ಯಾಯಾಲಯವು ಅಂಥ ದಾವೆಯನ್ನು ವಿಚಾರಣೆಗೆ ತೆಗೆದುಕೊಳ್ಳಲು ಸಕ್ಷಮವಾಗಿರತಕ್ಕುದು.

[1][(5) (1)ನೇ ಉಪಪ್ರಕರಣದ ಅಡಿಯಲ್ಲಿಯ ವಿವಾದವನ್ನು, ನ್ಯಾಯಾಲಯವು ಯಾವುದೇ ತಡೆಯನ್ನು ನೀಡಿದ್ದರೆ, ಅದನ್ನು ಹೊರತುಪಡಿಸಿ, ಹನ್ನೆರಡು ತಿಂಗಳುಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು. ಆದಾಗ್ಯೂ, ರಿಜಿಸ್ಟ್ರಾರನು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಸದರಿ ಅವಧಿಯನ್ನು ಹದಿನೆಂಟು ತಿಂಗಳುಗಳವರೆಗೆ ವಿಸ್ತರಿಸಬಹುದು.][1]

[2][ಪರಂತು, ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ಮಾಡಿದ ವರದಿಯ ಮೇಲೆ ಅಂಥ ವಿಸ್ತರಣೆಗೆ ನೈಜ ಅಥವಾ ಸಮಂಜಸ ಅಧಾರಗಳಿವೆ ಎಂದು ಅದಕ್ಕೆ ಮನದಟ್ಟಾದರೆ, ಹದಿನೆಂಟು ತಿಂಗಳುಗಳಿಗೆ ಮೀರಿದ ಅವಧಿಗೆ ವಿಸ್ತರಿಸಬಹುದು.][2]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][71ಎ. ಹಣಕಾಸು ನೀಡಿಕೆ ಬ್ಯಾಂಕಿಗೆ ಯಾವೊಂದು ಸಹಕಾರ ಸಂಘದಿಂದ ಬರಬೇಕಾದ ಹಣಗಳ ವಸೂಲಿಗಾಗಿ ಅಂಥ ಸಂಘದ ಸದಸ್ಯರ ವಿರುದ್ಧ ವ್ಯವಹರಣೆ ನಡೆಸಲು ಆ ಹಣಕಾಸು ನೀಡಿಕೆ ಬ್ಯಾಂಕಿನ ಅಧಿಕಾರ.- ಯಾವೊಂದು ಸಹಕಾರ ಸಂಘಕ್ಕೆ, ಅದರ

ಸದಸ್ಯರಿಂದ ಬಾಕಿಯಿರುವ ಹಣಗಳನ್ನು ಅವರು ಸಂದಾಯಮಾಡಲು ತಪ್ಪಿದ ಕಾರಣ ಆ ಸಹಕಾರ ಸಂಘವು ಹಣಕಾಸು ನೀಡಿಕೆ ಬ್ಯಾಂಕಿಗೆ ತನ್ನ ಋಣಗಳನ್ನು ಸಂದಾಯ ಮಾಡಲು ಅಸಮರ್ಥವಾದಲ್ಲಿ ಆ ಹಣಕಾಸು ನೀಡಿಕೆ ಬ್ಯಾಂಕು ಅಂಥ ಸಹಕಾರ ಸಂಘದ ಸಮಿತಿಗೆ ಅಂಥ ಸದಸ್ಯರ ವಿರುದ್ಧ ಸಂದರ್ಭಾನುಸಾರ 70ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ಹೂಡಲು ಅಥವಾ 101ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ಪ್ರಾರಂಭಿಸಲು ನಿರ್ದೇಶಿಸಬಹುದು ಮತ್ತು ಅಂಥ ನಿರ್ದೇಶವನ್ನು ಸ್ವೀಕರಿಸಿದ ದಿನಾಂಕದಿಂದ ತೊಂಭತ್ತು ದಿನಗಳ ಅವಧಿಯ ಒಳಗೆ ಸಮಿತಿಯು ಹಾಗೆ ಮಾಡಲು ತಪ್ಪಿದರೆ, ಹಣಕಾಸು ನೀಡಿಕೆ ಬ್ಯಾಂಕು, ಸಂದರ್ಭಾನುಸಾರ, 70ನೇ ಪ್ರಕರಣ ಅಥವಾ 101ನೇ ಪ್ರಕರಣದ ಮೇರೆಗೆ ಅಂಥ ಸದಸ್ಯರ ವಿರುದ್ಧ ತಾನೇ ವ್ಯವಹರಣೆ ನಡೆಸಬಹುದು, ಮತ್ತು ಅಂಥ ಸಂದರ್ಭದಲ್ಲಿ ಈ ಅಧಿನಿಯಮ, ನಿಯಮಗಳು ಅಥವಾ ಉಪವಿಧಿಗಳು, ಉಪಬಂಧಗಳು, ಸದರಿ ಉಪಬಂಧಗಳಲ್ಲಿ ಸಹಕಾರ ಸಂಘ ಅಥವಾ ಅದರ ಸಮಿತಿಗೆ ಮಾಡಲಾದ ಎಲ್ಲಾ ಉಲ್ಲೇಖಗಳು ಹಣಕಾಸು ನೀಡಿಕೆ ಬ್ಯಾಂಕಿಗೆ ಮಾಡಲಾದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

(2) ಹಣಕಾಸು ನೀಡಿಕೆ ಬ್ಯಾಂಕಿಗೆ ಸಹಕಾರ ಸಂಘದಿಂದ ಬಾಕಿ ಇರುವ ಹಣಗಳ ಸಂಬಂಧದಲ್ಲಿ ಆ ಸಹಕಾರ ಸಂಘದ ವಿರುದ್ಧ ಅದು ಡಿಕ್ರಿ ಅಥವಾ ತೀರ್ಮಾನವನ್ನು ಪಡೆದುಕೊಂಡಿರುವಲ್ಲಿ, ಆ ಹಣಕಾಸು ನೀಡಿಕೆ ಬ್ಯಾಂಕು ಅಂಥ, ಹಣವನ್ನು ಮೊದಲು ಸಹಕಾರ ಸಂಘದ ಆಸ್ತಿಗಳಿಂದ ಮತ್ತು ಎರಡನೆಯದಾಗಿ ಅಂಥ ಸಹಕಾರ ಸಂಘದ ಸದಸ್ಯರಿಂದ ಸಂಘಕ್ಕೆ ಸಲ್ಲತಕ್ಕ ಋಣಗಳಷ್ಟರಮಟ್ಟಿಗೆ ವಸೂಲು ಮಾಡಲು ಕ್ರಮ ಕೈಗೊಳ್ಳಬಹುದು.][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**71ಬಿ.ಪತ್ತಿನ ಏಜೆನ್ಸಿಗೆ ಸಹಕಾರ ಸಂಘದಿಂದ ಬಾಕಿ ಇರುವ ಹಣದ ವಸೂಲಿಗಾಗಿ ಏಜೆನ್ಸಿಯು ಅಂಥ ಸಂಘದ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಲು ಆ ಪತ್ತಿನ ಏಜೆನ್ಸಿಯ ಅಧಿಕಾರಗಳು.-** (1) ಯಾವೊಂದು ಸಹಕಾರ ಸಂಘಕ್ಕೆ, ಅದರ ಸದಸ್ಯರಿಂದ ಬಾಕಿಯಿರುವ ಹಣಗಳನ್ನು ಅವರು ಸಂದಾಯ ಮಾಡಲು ತಪ್ಪಿದ ಕಾರಣ ಆ ಸಹಕಾರ ಸಂಘವು ಪತ್ತಿನ ಏಜೆನ್ಸಿಗೆ ತನ್ನ ಋಣಗಳನ್ನು ಸಂದಾಯ ಮಾಡಲು ಅಸಮರ್ಥವಾದಲ್ಲಿ ಆ ಪತ್ತಿನ ಏಜೆನ್ಸಿಯು ಅಂಥ ಸಹಕಾರ ಸಂಘದ ಸಮಿತಿಗೆ ಅಂಥ ಸದಸ್ಯರ ವಿರುದ್ಧ ಸಂದರ್ಭಾನುಸಾರ, 70ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ಹೂಡಲು ಅಥವಾ 101ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ಪ್ರಾರಂಭಿಸಲು ನಿರ್ದೇಶಿಸಬಹುದು ಮತ್ತು ಅಂಥ ನಿರ್ದೇಶನವನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯ ಒಳಗೆ ಸಮಿತಿಯು ಹಾಗೆ ಮಾಡಲು ತಪ್ಪಿದರೆ ಪತ್ತಿನ ಏಜೆನ್ಸಿಯು, ಸಂದರ್ಭಾನುಸಾರ, 70ನೇ ಪ್ರಕರಣದ ಅಥವಾ 101ನೇ ಪ್ರಕರಣದ ಮೇರೆಗೆ ಅಂಥ ಬಾಕಿದಾರ ಸದಸ್ಯರ ವಿರುದ್ಧ ತಾನೇ ವ್ಯವಹರಣೆಯನ್ನು ನಡೆಸಬಹುದು ಮತ್ತು ಅಂಥ ಸಂದರ್ಭದಲ್ಲಿ ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳು, ಸದರಿ ಉಪಬಂಧಗಳಲ್ಲಿ ಆ ಸಹಕಾರ ಸಂಘ ಅಥವಾ ಅದರ ಸಮಿತಿಗೆ ಮಾಡಲಾದ ಎಲ್ಲ

ಉಲ್ಲೇಖಗಳು ಪತ್ತಿನ ಏಜೆನ್ಸಿಗೆ ಮಾಡಲಾದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

(2) ಪತ್ತಿನ ಏಜೆನ್ಸಿಗೆ ಸಹಕಾರ ಸಂಘದಿಂದ ಬಾಕಿ ಇರುವ ಹಣಗಳ ಸಂಬಂಧದಲ್ಲಿ ಆ ಸಹಕಾರ ಸಂಘದ ವಿರುದ್ಧ ಅದು ಡಿಕ್ರಿ ಅಥವಾ ಐತೀರ್ಪನ್ನು ಪಡೆದುಕೊಂಡಿರುವಲ್ಲಿ ಆ ಪತ್ತಿನ ಏಜೆನ್ಸಿಯು ಅಂಥ ಹಣಗಳನ್ನು ಮೊದಲು ಸಹಕಾರ ಸಂಘದ ಆಸ್ತಿಗಳಿಂದ ಮತ್ತು ಎರಡನೆಯದಾಗಿ ಅಂಥ ಸಹಕಾರ ಸಂಘದ ಸದಸ್ಯರಿಂದ, ಸಂಘಕ್ಕೆ ಸಲ್ಲತಕ್ಕ ಋಣಗಳಷ್ಟರ ಮಟ್ಟಿಗೆ ವಸೂಲು ಮಾಡಲು ಕ್ರಮ ಕೈಗೊಳ್ಳಬಹುದು.][1]

1. 1975ರ ಅಧಿನಿಯಮ ಸಂಖ್ಯೆ 2ರ ಮೂಲಕ 17.7.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಅಧ್ಯಾಯ- X

ಸಹಕಾರ ಸಂಘಗಳ ಸಮಾಪನ ಮತ್ತು ವಿಸರ್ಜನೆ

72. ಸಹಕಾರ ಸಂಘಗಳ ಸಮಾಪನ.- (1) ರಿಜಿಸ್ಟ್ರಾರನು, 64ನೇ ಪ್ರಕರಣದ ಮೇರೆಗೆ ವಿಚಾರಣೆ ನಡೆಸಿದ ಅಥವಾ [1][63ನೇ ಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನೆ ನಡೆಸಿದ ಅಥವಾ][1] 65ನೇ ಪ್ರಕರಣದ ಮೇರೆಗೆ ಪರಿಶೀಲನೆ ಮಾಡಿದ ತರುವಾಯ ಅಥವಾ ಸಹಕಾರ ಸಂಘದ ಸದಸ್ಯರ ಪೈಕಿ ನಾಲ್ಕನೇ ಮೂರು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಜನ ಸದಸ್ಯರು ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆ ಸಂಘವನ್ನು ಸಮಾಪನಗೊಳಿಸಬೇಕೆಂದು ಅಭಿಪ್ರಾಯಪಡುವಲ್ಲಿ, ಅವನು ಅದನ್ನು ಸಮಾಪನಗೊಳಿಸಬೇಕೆಂದು ನಿರ್ದೇಶಿಸುವ ಆದೇಶವನ್ನು [1][ಸಹಕಾರಿಗೆ ತನ್ನ ಮನವಿಯನ್ನು ಮಾಡಲು ಅವಕಾಶವನ್ನು ನೀಡಿದ ತರುವಾಯ][1] ಹೊರಡಿಸಬಹುದು.

1.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ರಿಜಿಸ್ಟ್ರಾರನು ತಾನಾಗಿಯೇ -

[1][(ಎ) ಸಂಘದ ಸದಸ್ಯರ ಸಂಖ್ಯೆಯು ಒಂದು ಸಹಕಾರ ಸಂಘದ ನೋಂದಣಿಗೆ ಅಗತ್ಯವಿರುವ ಕನಿಷ್ಠ ಸಂಖ್ಯೆಗಿಂತ ಕಡಿಮೆಯಾಗಿರುವಲ್ಲಿ; ಅಥವಾ][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಸಹಕಾರ ಸಂಘವು ಕಾರ್ಯವನ್ನು ಪ್ರಾರಂಭಿಸದಿರುವಲ್ಲಿ ಅಥವಾ ಕಾರ್ಯವನ್ನು ನಿಲ್ಲಿಸಿರುವಲ್ಲಿ; [1][ಅಥವಾ][1] [2][ಅವರ ನೋಂದಣಿಯ ದಿನಾಂಕದ ಆರು ತಿಂಗಳುಗಳೊಳಗೆ ಅಥವಾ ಆರು ತಿಂಗಳುಗಳಿಗೆ ಕಾರ್ಯವನ್ನು ನಿಲ್ಲಿಸಿರುವಲ್ಲಿ][2];

1.1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಸಿ) ನೋಂದಣಿ ಮತ್ತು ವ್ಯವಸ್ಥಾಪನೆ ಬಗ್ಗೆ ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ವಿಧಿಸಿದ ಷರತ್ತುಗಳನ್ನು ಪಾಲಿಸುವುದನ್ನು ಸಹಕಾರ ಸಂಘವು ನಿಲ್ಲಿಸಿರುವಲ್ಲಿ

- ಸಹಕಾರ ಸಂಘವನ್ನು ಸಮಾಪನಗೊಳಿಸುವಂತೆ ನಿರ್ದೇಶಿಸುವ ಆದೇಶವನ್ನು ಮಾಡಬಹುದು.][1]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಸಹಕಾರ ಸಂಘದ ಅಸ್ತಿತ್ವವು ಮುಂದುವರಿಯತಕ್ಕುದೆಂದು ರಿಜಿಸ್ಟ್ರಾರನು ಅಭಿಪ್ರಾಯಪಟಂ್ಥ ಯಾವುದೇ ಸಂದರ್ಭದಲ್ಲಿ, ಯಾವುದೇ ಕಾಲಕ್ಕೆ ಆ ಸಂಘದ ಸಮಾಪನದ ಆದೇಶವನ್ನು ಅವನು ರದ್ದುಪಡಿಸಬಹುದು.

[1][(4) ಈ ಪ್ರಕರಣದಲ್ಲಿ ಏನೇ ಇದ್ದರೂ, ರಿಸರ್ವ್ ಬ್ಯಾಂಕ್‌ನ ಲಿಖಿತ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ಯಾವುದೇ ಸಹಕಾರ ಬ್ಯಾಂಕನ್ನು ಸಮಾಪನಗೊಳಿಸತಕ್ಕುದಲ್ಲ [2][ಅಥವಾ ಸಮಾಪನಗೊಳಿಸುವ ಆದೇಶವನ್ನು ರದ್ದುಗೊಳಿಸತಕ್ಕುದಲ್ಲ.][2]][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(5) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಿಜಿಸ್ಟ್ರಾರನು, ಸಂಘದ ಸಾಮಾನ್ಯ ಸಭೆಯಲ್ಲಿ, ಸಾಮಾನ್ಯ ಸಭೆಯಲ್ಲಿ ಮೂರನೇ ಎರಡು ಬಹುಮತವುಳ್ಳ ಸದಸ್ಯರು ಹಾಜರಿದ್ದು, ಮತದಾನ ಮಾಡಿ, ಹೊರಡಿಸಿದ ಗೊತ್ತುವಳಿಯ ಮೂಲಕ, ಆ ಸಂಘವನ್ನು ಸಮಾಪನಗೊಳಿಸುವುದಕ್ಕೆ ನಿರ್ಧಾರ ಕೈಗೊಂಡಿದ್ದರೆ, ಸಹಕಾರ ಸಂಘವನ್ನು ಸಮಾಪನಗೊಳಿಸುವುದಕ್ಕಾಗಿ ಆದೇಶವನ್ನು ಮಾಡತಕ್ಕದ್ದು][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][72ಎ. ರಿಸರ್ವ್ ಬ್ಯಾಂಕು ಯಾವೊಂದು ಸಹಕಾರ ಬ್ಯಾಂಕನ್ನು ಸಮಾಪನಗೊಳಿಸಬೇಕೆಂದು ಅಗತ್ಯಪಡಿಸುವಲ್ಲಿ ಹಾಗೆ ಮಾಡುವುದು.- ಈ ಅಧಿನಿಯಮದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ ಠೇವಣಿ ವಿಮಾ ನಿಗಮ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 47) 13ನೇ ಪ್ರಕರಣದಲ್ಲಿ ಹೇಳಲಾದ ಸನ್ನಿವೇಶಗಳಲ್ಲಿ , ರಿಸರ್ವ್‌ಬ್ಯಾಂಕು ಸಹಕಾರ ಬ್ಯಾಂಕನ್ನು ಸಮಾಪನಗೊಳಿಸುವ ಆದೇಶವನ್ನು ಮಾಡಬೇಕೆಂದು ಅಗತ್ಯಪಡಿಸಿದರೆ ರಿಜಿಸ್ಟ್ರಾರನು ಹಾಗೆ ಮಾಡಬಹುದು.

72ಬಿ. ಸಮಾಪಕರು ಠೇವಣಿ ವಿಮಾ ನಿಗಮಕ್ಕೆ ಹಣ ತುಂಬಿಕೊಡುವುದು.- ಠೇವಣಿ ವಿಮಾ ನಿಗಮ ಅಧಿನಿಯಮ, 1961ರ ಅರ್ಥದಲ್ಲಿ ವಿಮೆ ಮಾಡಿರತಕ್ಕ ಬ್ಯಾಂಕು ಆಗಿರುವ ಸಹಕಾರ ಬ್ಯಾಂಕನ್ನು ಪರಿಸಮಾಪನಗೊಳಿಸಿರುವಲ್ಲಿ ಅಥವಾ ಸಮಾಪನಗೊಳಿಸಲು ಕ್ರಮ ಕೈಗೊಂಡಿರುವಲ್ಲಿ ಮತ್ತು ಆ ಅಧಿನಿಯಮದ 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಠೇವಣಿ ವಿಮಾ ನಿಗಮವು ವಿಮೆ ಮಾಡಿಸಿದ ಬ್ಯಾಂಕಿನ ಠೇವಣಿದಾರನಿಗೆ

ಹೊಣೆಯಾಗಿರುವಲ್ಲಿ, ಠೇವಣಿ ವಿಮಾ ನಿಗಮಕ್ಕೆ ಸನ್ನಿವೇಶಗಳಲ್ಲಿ ಸಮಾಪಕನು ಅಥವಾ ಅಂಥ ಇತರ ವ್ಯಕ್ತಿಯು, ಠೇವಣಿ ವಿಮಾ ನಿಗಮ ಅಧಿನಿಯಮ, 1961ರ 21ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಹಣ ತುಂಬಿಕೊಡತಕ್ಕುದು.][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

73. ಸಮಾಪಕ.- (1) ಸಹಕಾರ ಸಂಘದ ಸಮಾಪನಕ್ಕಾಗಿ 72ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು, ಆದೇಶವನ್ನು ಮಾಡಿರುವಲ್ಲಿ, ಅವನು ಆ ಉದ್ದೇಶಕ್ಕಾಗಿ ಸಮಾಪಕನನ್ನು ನೇಮಿಸಬಹುದು ಮತ್ತು ಅವನು ಪರಿಶ್ರಮಧನವನ್ನು ನಿಗದಿಪಡಿಸಬಹುದು.

(2) ನೇಮಕದ ತರುವಾಯ ಸಮಾಪಕನು, ಸಂಘವು ಹಕ್ಕು ಹೊಂದಿರುವ ಅಥವಾ ಹಕ್ಕುಹೊಂದಿರುವುದಾಗಿ ಕಂಡು ಬರುವ ಎಲ್ಲ ಸ್ವತ್ತನ್ನು, ಸಾಮಾನು ಸರಂಜಾಮುಗಳನ್ನು ಮತ್ತು ಕ್ರಮಾರ್ಹ ಕ್ಲೇಮುಗಳನ್ನು ತನ್ನ ಅಭಿರಕ್ಷೆಗೆ ಅಥವಾ ನಿಯಂತ್ರಣಕ್ಕೆ ತೆಗೆದುಕೊಳ್ಳತಕ್ಕುದು ಮತ್ತು ಅಂಥ ಸ್ವತ್ತಿನ ಸಾಮಾನು ಸರಂಜಾಮುಗಳ ಮತ್ತು ಕ್ಲೇಮುಗಳ ನಷ್ಟವನ್ನು ಅಥವಾ ಇಳಿಗತಿಯನ್ನು ಅಥವಾ ಹಾನಿಯನ್ನು ತಡೆಗಟ್ಟಲು ಅವಶ್ಯವೆಂದು ಅಥವಾ ವಿಹಿತವೆಂದು ತಾನು ಭಾವಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳತಕ್ಕುದು.

(3) 106ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಿರುವಲ್ಲಿ, 72ನೇ ಪ್ರಕರಣದ ಮೇರೆಗೆ ಮಾಡಿದ ಸಹಕಾರ ಸಂಘವನ್ನು ಸಮಾಪನಗೊಳಿಸುವ ಆದೇಶವು ಆ ತರುವಾಯ ಅಪೀಲಿನಲ್ಲಿ ಆ ಆದೇಶವನ್ನು ದೃಢೀಕರಿಸುವವರೆಗೆ ಪ್ರವರ್ತಿತವಾಗತಕ್ಕುದಲ್ಲ:

ಪರಂತು, ಸಮಾಪಕನು, (2)ನೇ ಉಪಪ್ರಕರಣದಲ್ಲಿ ನಮೂದಿಸಿದ ಸ್ವತ್ತು, ಸಾಮಾನು ಸರಂಜಾಮು ಅಥವಾ ಕ್ರಮಾರ್ಹ ಕ್ಲೇಮುಗಳ ಅಭಿರಕ್ಷೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವುದು ಮುಂದುವರಿಯತಕ್ಕುದು ಮತ್ತು ಆ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕ್ರಮಗಳನ್ನು ಕೈಗೊಳ್ಳಲು ಅವನಿಗೆ ಅಧಿಕಾರವಿರತಕ್ಕುದು.

(4) ಸಹಕಾರ ಸಂಘದ ಸಮಾಪನದ ಆದೇಶವನ್ನು ಅಪೀಲಿನಲ್ಲಿ ತಳ್ಳಿ ಹಾಕಿರುವಲ್ಲಿ ಸಂಘದ ಸ್ವತ್ತು, ಸಾಮಾನು ಸರಂಜಾಮು ಮತ್ತು ಕ್ರಮಾರ್ಹ ಕ್ಲೇಮುಗಳು ಸಂಘದಲ್ಲಿ ಪುನಃ ನಿಹಿತವಾಗತಕ್ಕುದು.

74. ಸಮಾಪಕನ ಅಧಿಕಾರಗಳು.- (1) ಈ ಬಗ್ಗೆ ರಚಿಸಿದ ನಿಯಮಗಳಿಗೊಳಪಟ್ಟು, ಯಾವ ಸಹಕಾರ ಸಂಘಕ್ಕೆ ಸಂಬಂಧಿಸಿ ಸಮಾಪನ ಈ ಆದೇಶವನ್ನು ಮಾಡಲಾಗಿದೆಯೋ ಅದರ ಎಲ್ಲ ಆಸ್ತಿಗಳು, 73ನೇ ಪ್ರಕರಣದ ಮೇರೆಗೆ ನೇಮಿಸಲಾದ ಸಮಾಪಕನಲ್ಲಿ, ಆ ಆದೇಶವು ಪರಿಣಾಮಕಾರಿಯಾಗುವ ದಿನಾಂಕದಿಂದ ನಿಹಿತವಾಗತಕ್ಕುದು ಮತ್ತು ಅಂಥ ಆಸ್ತಿಗಳನ್ನು ಮಾರಾಟಮಾಡಿ ಅಥವಾ ಇತರ ರೀತಿಯಲ್ಲಿ ಹಣಕ್ಕೆ ಪರಿವರ್ತಿಸಿಕೊಳ್ಳಲು ಸಮಾಪಕನು ಅಧಿಕಾರ ಹೊಂದಿರತಕ್ಕುದು.

(2) ಅಂಥ ಸಮಾಪಕನು ರಿಜಿಸ್ಟ್ರಾರನ ನಿಯಂತ್ರಣಕ್ಕೆ ಒಳಪಟ್ಟು ಈ ಕೆಳಕಂಡ ಅಧಿಕಾರಗಳನ್ನು ಸಹ ಹೊಂದಿರತಕ್ಕುದು,-

(ಎ) ತನ್ನ ಪದದ ಹೆಸರಿನಲ್ಲಿ ಸಹಕಾರ ಸಂಘದ ಪರವಾಗಿ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡುವುದು ಮತ್ತು ಪ್ರತಿವಾದಿಸುವುದು;

(ಬಿ) ಸದಸ್ಯರಿಂದ ಅಥವಾ ಹಿಂದಿನ ಸದಸ್ಯರಿಂದ ಅಥವಾ ಮೃತ ಸದಸ್ಯರ ಸಂಪದಗಳಿಂದ, ಅಥವಾ ನಾಮನಿರ್ದೇಶಿತರಿಂದ, ವಾರಸುದಾರರಿಂದ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳಿಂದ, ಅಥವಾ ಯಾರೇ [1][ಪದಾಧಿಕಾರಿಗಳಿಂದ][1] ಅಥವಾ ಹಿಂದಿನ [1][ಪದಾಧಿಕಾರಿಗಳಿಂದ][1] ಸಂಘದ ಆಸ್ತಿಗಳಿಗೆ ಸಂದಾಯಮಾಡತಕ್ಕ ಅಥವಾ ಸಂದಾಯಮಾಡಬೇಕಾಗಿ ಉಳಿದಿರುವ ವಂತಿಗೆಗಳನ್ನು ಕಾಲಕಾಲಕ್ಕೆ ನಿರ್ಧರಿಸುವುದು;

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಸಹಕಾರ ಸಂಘದ ವಿರುದ್ಧ ಮಾಡಲಾದ ಎಲ್ಲ ಕ್ಲೇಮುಗಳನ್ನು ತನಿಖೆಮಾಡುವುದು ಮತ್ತು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಕ್ಲೇಮುದಾರರ ನಡುವೆ ಉದ್ಭವಿಸುವ ಆದ್ಯತೆಯ ಪ್ರಶ್ನೆಗಳನ್ನು ತೀರ್ಮಾನಿಸುವುದು;

(ಡಿ) ಸಹಕಾರ ಸಂಘದ ವಿರುದ್ಧ ಮಾಡಲಾದ ಕ್ಲೇಮುಗಳನ್ನು, ಸಮಾಪನದ ದಿನಾಂಕದವರೆಗಿನ ಬಡ್ಡಿಯು ಸೇರಿ, ಅವುಗಳಿಗೆ ಸಂಬಂಧಿಸಿದ ಆದ್ಯತಾ ಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳಿಗೆ ಅನುಸಾರವಾಗಿ, ಸಂಘದ ಆಸ್ತಿಗಳು ಅನುಮತಿಸಬಹುದಾದಂತೆ ಪೂರ್ತಿಯಾಗಿ ಅಥವಾ ಪ್ರಮಾಣಾನುಸಾರ ಸಂದಾಯಮಾಡುವುದು; ಆ ಕ್ಲೇಮುಗಳನ್ನು ಸಂದಾಯಮಾಡಿದ ತರುವಾಯ ಹೆಚ್ಚುವರಿ ಏನಾದರೂ ಉಳಿದಲ್ಲಿ, ಅದನ್ನು ಸಮಾಪನದ ಅಂಥ ಆದೇಶದ ದಿನಾಂಕದಿಂದ ಅವನು ನಿಗದಿಪಡಿಸಿದ ದರದಲ್ಲಿ, ಆದರೆ ಯಾವುದೇ ಸಂದರ್ಭದಲ್ಲಿ ಕರಾರುದರವನ್ನು ಮಿÃರದ ದರದಲ್ಲಿ ಬಡ್ಡಿಯನ್ನು ಸಂದಾಯಮಾಡಲು ವಿನಿಯೋಗಿಸುವುದು;

(ಇ) ಸಮಾಪನ ಖರ್ಚುಗಳನ್ನು ಯಾವ ವ್ಯಕ್ತಿಗಳು ಮತ್ತು ಯಾವ ಪ್ರಮಾಣಗಳಲ್ಲಿ ವಹಿಸಬೇಕೆಂಬುದನ್ನು ನಿರ್ಧರಿಸುವುದು;

(ಎಫ್) ಯಾರೇ ವ್ಯಕ್ತಿಯು ಸದಸ್ಯನೆ, ಹಿಂದಿನ ಸದಸ್ಯನೆ ಅಥವಾ ಮೃತ ಸದಸ್ಯನೆ, ನಾಮನಿರ್ದೇಶಿತನೆ ಎಂಬುದನ್ನು ನಿರ್ಧರಿಸುವುದು;

(ಜಿ) ಸಂಘದ ಆಸ್ತಿಯ ಸಂಗ್ರಹಣೆ ಮತ್ತು ವಿತರಣೆಗೆ ಸಂಬಂಧಿಸಿ ಸಂಘದ ವ್ಯವಹಾರಗಳನ್ನು ಸಮಾಪನಗೊಳಿಸುವುದಕ್ಕೆ ಅವಶ್ಯವೆಂದು ತನಗೆ ಕಂಡುಬರಬಹುದಾದಂಥ ನಿರ್ದೇಶನಗಳನ್ನು ನೀಡುವುದು;

(ಹೆಚ್) ಸಂಘದ ವ್ಯವಹಾರವನ್ನು ಪ್ರಯೋಜನಕಾರಿಯಾಗುವಂತೆ ಸಮಾಪನಗೊಳಿಸುವ ಸಲುವಾಗಿ ಅವಶ್ಯವಾಗುವಷ್ಟು ಮಟ್ಟಿಗೆ ಅದರ ವ್ಯವಹಾರವನ್ನು ನಡೆಸುವುದು;

(ಐ) ಲೇಣೀದಾರರಿಂದ ಅಥವಾ ಲೇಣೀದಾರರೆಂದು ಕ್ಲೇಮು ಮಾಡುವ ಅಥವಾ ಈಗಿನ ಅಥವಾ ಮುಂದಿನ ಯಾವುದೇ ಕ್ಲೇಮು ಹೊಂದಿರುವ ಅಥವಾ ಯಾವುದೇ ಕ್ಲೇಮು ಇದೆಯೆಂದು ಹೇಳಿಕೊಳ್ಳುವ ವ್ಯಕ್ತಿಗಳೊಡನೆ ಸಂಘವು ಹೊಣೆಯಾಗುವಂಥ ರೀತಿಯಲ್ಲಿ ಯಾವುದೇ ರಾಜಿಯನ್ನು ಅಥವಾ ವ್ಯವಸ್ಥೆ ಯನ್ನು ಮಾಡಿಕೊಳ್ಳುವುದು; ಮತ್ತು

(ಜೆ) ಸಂಘದ ಮತ್ತು ವಂತಿಗೆದಾರ ಅಥವಾ ಹೇಳಿಕೊಳ್ಳುವ ವಂತಿಗೆದಾರ ಅಥವಾ ಇತರ ಋಣಿ ಅಥವಾ ಸಹಕಾರ ಸಂಘವನ್ನು ಹೊಣೆಗಾರಿಕೆಗೆ ಗುರಿಪಡಿಸುವ ವ್ಯಕ್ತಿ ಇವರ ನಡುವೆ ಇರುವ ಅಥವಾ ಇರುವುದಾಗಿ ಭಾವಿಸಲಾದ ಎಲ್ಲಾ ಕರೆಗಳು ಅಥವಾ ಕರೆ ಮತ್ತು ಋಣಗಳ ಹೊಣೆಗಾರಿಕೆಗಳು ಮತ್ತು ಋಣಗಳಾಗಿ ಪರಿಣಮಿಸುವಂಥ ಹೊಣೆಗಾರಿಕೆಗಳು ಮತ್ತು ಈಗಿನ ಅಥವಾ ಮುಂದಿನ ನಿಶ್ಚಿತ ಅಥವಾ ಸಂಭಾವ್ಯ ಕ್ಲೇಮುಗಳು ಮತ್ತು ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳ ಮೇಲೆ ಸಂಘದ ಆಸ್ತಿಗಳಿಗೆ ಅಥವಾ ಸಮಾಪನಕ್ಕೆ ಯಾವುದೇ ರೀತಿಯಲ್ಲಿ ಸಂಬಂಧಿಸಿದ ಅಥವಾ ಅವುಗಳ ಮೇಲೆ ಪರಿಣಾಮ ಬೀರುವಂಥ ಎಲ್ಲಾ ಪ್ರಶ್ನೆಗಳನ್ನು ರಾಜಿಮಾಡಿಕೊಳ್ಳುವುದು ಮತ್ತು ಅಂಥ ಯಾವುದೇ ಕರೆ, ಹೊಣೆಗಾರಿಕೆ, ಋಣ ಅಥವಾ ಕ್ಲೇಮಿನ ತೀರಿಕೆಯ ಸಲುವಾಗಿ ಯಾವುದೇ ಭದ್ರತೆಯನ್ನು ತೆಗೆದುಕೊಳ್ಳುವುದು ಮತ್ತು ಆ ಸಂಬಂಧದಲ್ಲಿ ಪೂರ್ಣ ತೀರಿಕೆಯನ್ನು ನೀಡುವುದು.

(3) ಸಹಕಾರ ಸಂಘದ ವ್ಯವಹಾರಗಳನ್ನು ಸಮಾಪನಗೊಳಿಸಿದಾಗ, ಸಮಾಪಕನು ರಿಜಿಸ್ಟ್ರಾರನಿಗೆ ವರದಿ ಮಾಡತಕ್ಕುದು ಮತ್ತು ಸಂಘದ ದಾಖಲೆಗಳನ್ನು ರಿಜಿಸ್ಟ್ರಾರನು ನಿರ್ದೇಶಿಸಬಹುದಾದಂಥ ಸ್ಥಳದಲ್ಲಿ ಇಡತಕ್ಕುದು.

75. ಸಹಕಾರ ಸಂಘದ ನೋಂದಣಿಯ ರದ್ದಿಯಾತಿ.‑ 72ನೇ ಪ್ರಕರಣದ ಮೇರೆಗೆ ಸಮಾಪನಗೊಳಿಸಬೇಕೆಂದು ಆದೇಶಿಸಲಾದ ಯಾವುದೇ ಸಹಕಾರ ಸಂಘಕ್ಕೆ ಸಂಬಂಧಿಸಿ ಅಂಥ ಆದೇಶದ ದಿನಾಂಕದಿಂದ ಎರಡು ತಿಂಗಳ ತರುವಾಯ 73ನೇ ಪ್ರಕರಣದ ಮೇರೆಗೆ ಸಮಾಪಕನನ್ನು ನೇಮಿಸಿರದಿದ್ದರೆ ಅಥವಾ ಅಂಥ ಆದೇಶದ ದೃಢೀಕರಣದ ದಿನಾಂಕದಿಂದ ಅದರ ಮೇಲೆ ಅಪೀಲು ಸಲ್ಲಿಸಿರುವಲ್ಲಿ ಅಥವಾ ಯಾವ ಸಹಕಾರ ಸಂಘಕ್ಕೆ ಸಂಬಂಧಿಸಿ 73ನೇ ಪ್ರಕರಣದ ಮೇರೆಗೆ ಸಮಾಪಕನನ್ನು ನೇಮಿಸಲಾಗಿರುವುದೋ ಅದರ ವ್ಯವಹಾರಗಳನ್ನು ಸಮಾಪನಗೊಳಿಸಿರುವಲ್ಲಿ, ರಿಜಿಸ್ಟ್ರಾರನು ಆ ಸಂಘದ ನೋಂದಣಿಯನ್ನು ರದ್ದುಗೊಳಿಸುವ ಆದೇಶವನ್ನು ಮಾಡತಕ್ಕುದು ಮತ್ತು ಅಂಥ ರದ್ದಿಯಾತಿಯ ಆದೇಶದ ದಿನಾಂಕದಿಂದ ಸಂಘವು

ವಿಸರ್ಜಿತವಾಗಿರುವುದಾಗಿ ಭಾವಿಸತಕ್ಕುದು ಮತ್ತು ನಿಗಮಿತ ನಿಕಾಯವಾಗಿರತಕ್ಕ ಅದರ ಅಸ್ತಿತ್ವ ಕೊನೆಗೊಳ್ಳತಕ್ಕುದು.

ಅಧ್ಯಾಯ- XI

1[2[ಕೃಷಿ ಮತ್ತು ಗ್ರಾಮೀಣ]1 ಅಭಿವೃದ್ಧಿ ಬ್ಯಾಂಕುಗಳು]2

76. ಪರಿಭಾಷೆಗಳು.- ಈ ಅಧ್ಯಾಯದಲ್ಲಿ, -

(ಎ) `ಮಂಡಲಿ' ಎಂದರೆ 1[ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ]1 ನಿರ್ದೇಶಕರ ಮಂಡಲಿ;

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

1[(ಬಿ) xxx]1

1[(ಸಿ) xxx]1

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಡಿ) `ನ್ಯಾಸಧಾರಿ' ಎಂದರೆ, 77ನೆಯ ಪ್ರಕರಣದಲ್ಲಿ ಉಲ್ಲೇಖಿಸಲಾದ ನ್ಯಾಸಧಾರಿ.

1[2[76-ಎ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಈ ಅಧ್ಯಾಯದ ಅನ್ವಯ.- ಭೂಮಿಗಳ ಆಧಾರ ಅಥವಾ ಅಡಮಾನದ ಮೇಲೆ ಅಥವಾ ಕೃಷಿ ಯಂತ್ರಗಳನ್ನು ಅಥವಾ ಸರ್ಕಾರವು ಈ ಸಂಬಂಧದಲ್ಲಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಉದ್ದೇಶಗಳಿಗಾಗಿ ನೀಡಲಾದ ಸಾಲಗಳಿಂದ ಸೃಜಿಸಲಾದ ಇತರೆ ಆಸ್ತಿಗಳ ಒತ್ತೆಯ ಆಧಾರದ ಮೇಲೆ ಸಾಲಗಳನ್ನು ನೀಡುವ ಸಹಕಾರ ಬ್ಯಾಂಕ್‌ಗಳಿಗೆ ಈ ಅಧ್ಯಾಯವು ಅನ್ವಯವಾಗತಕ್ಕುದು.]2

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

76-ಬಿ. ರಾಜ್ಯದ ಮತ್ತು ಇತರ 1[ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು]1.- (1) 2[ಕರ್ನಾಟಕ]2 ರಾಜ್ಯಕ್ಕಾಗಿ ಒಂದು 1[ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು]1 ಇರತಕ್ಕುದು ಮತ್ತು ಅವಶ್ಯವೆಂದು ಭಾವಿಸಬಹುದಾದಷ್ಟು 2[ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು]2 ಇರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಲಿಖಿತದಲ್ಲಿ ಭೂ ಅಡಮಾನ ಬ್ಯಾಂಕಿಗೆ ಮಾಡಲಾದ ಉಲ್ಲೇಖವನ್ನು [1][ಕರ್ನಾಟಕ][1] ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1964ರ ಪ್ರಾರಂಭದಿಂದ [2][ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1984ರ ಪ್ರಾರಂಭದಿಂದ ದಿನಾಂಕದವರೆಗೆ ಈ ಅಧ್ಯಾಯದ ಅರ್ಥದಲ್ಲಿ ಭೂ ಅಭಿವೃದ್ಧಿ ಬ್ಯಾಂಕಿಗೆ ಮತ್ತು ಆ ತರುವಾಯ ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕಿಗೆ][2] ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1964ರ ಪ್ರಾರಂಭದಿಂದ ಮತ್ತು ಸದರಿ ಅಧಿನಿಯಮದ ಪ್ರಾರಂಭದಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಭೂ ಅಡಮಾನ ಬ್ಯಾಂಕುಗಳು ಮತ್ತು ಸಂಘಗಳ ಹೆಸರುಗಳನ್ನು `ಭೂ ಅಭಿವೃದ್ಧಿ ಬ್ಯಾಂಕು'ಗಳೆಂದು ಬದಲಾಯಿಸುವವರೆಗೆ, ಅವುಗಳ ಮೂಲಕ ಮಾಡಲಾದ ಎಲ್ಲಾ ಕಾರ್ಯಗಳು ಅಥವಾ ಅವು ಅಥವಾ ಅವುಗಳ ಹೆಸರಿಗೆ ಮಾಡಿದ ಅಡಮಾನಗಳು ಮತ್ತು ಬರೆದುಕೊಡಲಾದ ಎಲ್ಲಾ ಇತರ ದಸ್ತಾವೇಜುಗಳನ್ನು ಮತ್ತು ಅವುಗಳಿಂದ ಅಥವಾ ಅವುಗಳ ವಿರುದ್ಧ ಸಲ್ಲಿಸಲಾದ ಎಲ್ಲ ದಾವೆಗಳು ಮತ್ತು ಇತರ ವ್ಯವಹರಣೆಗಳನ್ನು, ಸಂದರ್ಭಾನುಸಾರ, ಭೂ ಅಭಿವೃದ್ಧಿ ಬ್ಯಾಂಕುಗಳಾಗಿ ಅವು ಅಥವಾ ಅವುಗಳ ವಿರುದ್ಧ ಮಾಡಲಾಗಿರುವುದಾಗಿ, ಬರೆದುಕೊಟ್ಟಿರುವುದಾಗಿ ಅಥವಾ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು.][1]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(4) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1984ರ ಪ್ರಾರಂಭದಿಂದ ಮತ್ತು ಸದರಿ ಅಧಿನಿಯಮದ ಪ್ರಾರಂಭದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಭೂ ಅಡಮಾನ ಬ್ಯಾಂಕುಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳ ಹೆಸರುಗಳನ್ನು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳೆಂದು ಬದಲಾಯಿಸುವವರೆಗೆ, (3)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಅವುಗಳು ಮಾಡಿದ ಎಲ್ಲ ಕಾರ್ಯಗಳನ್ನು ಅಥವಾ ಅವು ಮಾಡಿದ ಅಥವಾ ಅವುಗಳ ಹೆಸರಿಗೆ ಮಾಡಲಾದ ಅಡಮಾನ ಅಥವಾ ಬರೆದು ಕೊಡಲಾದ ದಸ್ತಾವೇಜುಗಳನ್ನು ಮತ್ತು ಅವುಗಳಿಂದ ಅವುಗಳ ವಿರುದ್ಧ ಸಲ್ಲಿಸಲಾದ

ಎಲ್ಲ ದಾವೆಗಳು ಮತ್ತು ಇತರ ವ್ಯವಹರಣೆಗಳನ್ನು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಾಗಿ ಸಂದರ್ಭಾನುಸಾರ, ಅವು ಅಥವಾ ಅವುಗಳ ವಿರುದ್ಧ ಮಾಡಲಾಗಿರುವುದಾಗಿ, ಬರೆದುಕೊಟ್ಟಿರುವುದಾಗಿ ಅಥವಾ ಸಲ್ಲಿಸಿರುವುದಾಗಿ ಭಾವಿಸತಕ್ಕುದು.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

77. ನ್ಯಾಸಧಾರಿಯ ನೇಮಕಾತಿ ಮತ್ತು ಅವನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ಮಂಡಲಿಯು ಹೊರಡಿಸಿದ ಡಿಬೆಂಚರುಗಳ ಧಾರಕರ ಸಂಬಂಧದಲ್ಲಿ [1][ರಾಜ್ಯದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹೊಣೆಗಾರಿಕೆಗಳ ನೆರವೇರಿಕೆಯನ್ನು ಭದ್ರಗೊಳಿಸುವ ಉದ್ದೇಶಕ್ಕಾಗಿ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಯಾರೇ ಇತರ ವ್ಯಕ್ತಿಯನ್ನು ನಿಯಮಿಸಿರುವಲ್ಲಿ ಅಂಥ ವ್ಯಕ್ತಿಯು ನ್ಯಾಸಧಾರಿಯಾಗಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ನ್ಯಾಸಧಾರಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಈ ಅಧಿನಿಯಮವು ಉಪಬಂಧಗಳು ಮತ್ತು, ಬ್ಯಾಂಕು ಮತ್ತು ನ್ಯಾಸಧಾರಿಯ ನಡುವೆ ನಿರ್ವಹಿಸಲಾದ ಮತ್ತು ಮಂಡಲಿ ಮತ್ತು ನ್ಯಾಸಧಾರಿ ಇವರ ನಡುವಣ ಪರಸ್ಪರ ಒಪ್ಪಂದದ ಮೂಲಕ ಕಾಲಕಾಲಕ್ಕೆ ಮಾರ್ಪಾಟಾದಂಥ ನ್ಯಾಸಪತ್ರ ಇವುಗಳಿಗೆ ಅಧೀನವಾಗಿ ನಿರ್ವಹಿಸಲ್ಪಡತಕ್ಕುದು.

78. ನ್ಯಾಸಧಾರಿಯು ಏಕೈಕ ನಿಗಮವಾಗಿರುವುದು.- 77ನೇ ಪ್ರಕರಣದ ಮೇರೆಗೆ ನಿಯಮಿಸಲಾದ ನ್ಯಾಸಧಾರಿಯು ಡಿಬೆಂಚರುಗಳ ನ್ಯಾಸಧಾರಿಯ ಹೆಸರಿನಲ್ಲಿ ಏಕೈಕ ನಿಗಮವಾಗಿರತಕ್ಕುದು ಮತ್ತು ಅಂಥ ನಿಗಮವಾಗಿ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕುದು ಮತ್ತು ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡತಕ್ಕುದು ಮತ್ತು ದಾವೆಗೆ ಗುರಿಯಾಗತಕ್ಕುದು.

[1][**79. ಡಿಬೆಂಚರುಗಳ ನೀಡಿಕೆ:**- (1) ರಾಜ್ಯಸರ್ಕಾರದ ಮತ್ತು ನ್ಯಾಸಧಾರಿಯ ಪೂರ್ವ ಮಂಜೂರಾತಿ ಪಡೆದು ಮತ್ತು ರಾಜ್ಯಸರ್ಕಾರವು ವಿಧಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, [2][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು,][2] [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು]2 ಆಗಿ ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಯ

ಮತ್ತು ಅಂಥ ಬಡ್ಡಿ ದರಗಳಲ್ಲಿ ಅಂಥ ಮೌಲ್ಯಗಳ ಡಿಬೆಂಚರುಗಳನ್ನು ಹೊರಡಿಸಬಹುದು [3][ಅಥವಾ ಸಾಲಗಳನ್ನು][3]S

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ಈಗಾಗಲೇ ಪಡೆದಿರುವ [1][ಸಾಲದಿಂದ ಸೃಜಿಸಲಾದ ಕೃಷಿ ಯಂತ್ರಗಳು [2][ಅಥವಾ 33ನೇ ಪ್ರಕರಣದ ಮೇರೆಗೆ ಸಾಲಗಾರರ ಜಮೀನುಗಳ ಮೇಲೆ ಸೃಜಿಸಿದ ಋಣಭಾರಗಳ ಆಧಾರದ ಮೇಲೆ][2] ಅಥವಾ ಇತರ ಆಸ್ತಿಗಳ ಅಡಮಾನ ಅಥವಾ ಅಡಮಾನಗಳ ಒತ್ತೆ; ಅಥವಾ

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎಎ) ಸದಸ್ಯರು ಮಾಲಿಕತ್ವ ಹೊಂದಿದ ಜಮೀನಿನ ಮೇಲೆ ಅಥವಾ ಅಂತಹ ಸದಸ್ಯರು ಗೇಣೀದಾರರಾಗಿ ಹೊಂದಿರುವ ಜಮೀನಿನಲ್ಲಿನ ಹಿತಾಸಕ್ತಿಯ ಮೇಲೆ 33ನೇ ಪ್ರಕರಣ ಮೇರೆಗೆ ಈಗಾಗಲೇ ಸೃಜಿಸಲಾದ ಋಣಭಾರಗಳು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಪಡೆದುಕೊಳ್ಳಬೇಕಾದ [1][ಸಾಲದಿಂದ ಸೃಜಿಸಲಾದ ಕೃಷಿ ಯಂತ್ರಗಳು ಅಥವಾ ಇತರ ಆಸ್ತಿಗಳ][1] ಅಡಮಾನ ಅಥವಾ ಅಡಮಾನಗಳು [1][ಅಥವಾ ಒತ್ತೆ;][1] ಅಥವಾ;

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಬಿಬಿ) ಸದಸ್ಯರು ಮಾಲಿಕತ್ವ ಹೊಂದಿದ ಜಮೀನಿನ ಮೇಲೆ ಅಥವಾ ಅಂಥ ಸದಸ್ಯರು ಗೇಣಿದಾರರಾಗಿ ಹೊಂದಿರುವ ಜಮೀನಿನಲ್ಲಿನ ಹಿತಾಸಕ್ತಿಯ ಮೇಲೆ, 33ನೇ ಪ್ರಕರಣದ ಮೇರೆಗೆ ಸೃಜಿಸಬೇಕಾದ ಋಣಭಾರಗಳು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಸಿ) ಪಡೆದ ಮತ್ತು ಭಾಗಶಃ ಪಡೆದು ಕೊಳ್ಳಬೇಕಾಗಿರುವ [1][ಸಾಲದಿಂದ ಸೃಜಿಸಲಾದ ಕೃಷಿ ಯಂತ್ರಗಳು ಅಥವಾ ಇತರ ಆಸ್ತಿಗಳ][1] ಭಾಗಶಃ ಅಡಮಾನ [1][ಅಥವಾ ಒತ್ತೆ][1]; ಅಥವಾ

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಸಿಸಿ) ಸದಸ್ಯರು ಮಾಲಿಕತ್ವ ಹೊಂದಿರುವ ಜಮೀನುಗಳ ಮೇಲೆ ಅಥವಾ ಅಂಥ ಸದಸ್ಯರು ಗೇಣಿದಾರರಾಗಿ ಹೊಂದಿರುವ ಜಮೀನಿನಲ್ಲಿನ ಹಿತಾಸಕ್ತಿಯ ಮೇಲೆ, 33ನೇ

ಪ್ರಕರಣದ ಮೇರೆಗೆ, ಈಗಾಗಲೇ ಸೃಜಿಸಲಾದ ಋಣಭಾರಗಳ ಮೇಲೆ ಭಾಗಶಃ ಮತ್ತು ಸೃಜಿಸಬೇಕಾದ ಋಣಭಾರಗಳ ಮೇಲೆ ಭಾಗಶಃ;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಿ) ಡಿಬೆಂಚರುಗಳ ಪೂರ್ಣ ತೀರಿಕೆಯ ದಿನಾಂಕದವರೆಗೆ ಡಿಬೆಂಚರುಗಳ [1][ಅಥವಾ ಸಾಲಗಳ][1] ಅಸಲು ಮತ್ತು ಅವುಗಳ ಮೇಲಿನ ಬಡ್ಡಿಯ ಪೂರ್ಣ ಮೊಬಲಗಿಗೆ ಖಾತರಿ ನೀಡುವ ರಾಜ್ಯಸರ್ಕಾರದ ಖಾತರಿ; ಅಥವಾ

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಇ) ಪಡೆದ ಅಥವಾ ಪಡೆದುಕೊಳ್ಳಬೇಕಾಗಿರುವ ಅಡಮಾನಗಳ ಮೇಲೆ ಭಾಗಶಃ ಮತ್ತು ಡಿಬೆಂಚರುಗಳು [1][ಅಥವಾ ಸಾಲಗಳ][1] ಪೂರ್ಣ ತೀರಿಕೆಯವರೆಗೆ ಅಸಲು ಮತ್ತು ಬಡ್ಡಿಗೆ ಸರ್ಕಾರ ನೀಡಿದ ಖಾತರಿಯ ಮೇಲೆ ಭಾಗಶಃ; ಮತ್ತು

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎಫ್) [1][ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕುಗಳ][1] ಸ್ವತ್ತುಗಳು ಮತ್ತು ಇತರ ಆಸ್ತಿಗಳು

Š [2][ಇವುಗಳ ಭದ್ರತೆಯ ಮೇಲೆ][2] ಪಡೆದುಕೊಳ್ಳಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಪ್ರತಿಯೊಂದು ಡಿಬೆಂಚರು ಅದು ವಿಮೋಚನೀಯವಾಗತಕ್ಕ ಅವಧಿಯನ್ನು ನೀಡಿಕೆಯ ದಿನಾಂಕದಿಂದ ಮೂವತ್ತು ವರ್ಷಗಳಿಗೆ ಮಿÁರದ ಅವಧಿಯನ್ನು ನಿಗದಿಗೊಳಿಸುವ, ಅಥವಾ ಅಂಥ ಡಿಬೆಂಚರಿಗೆ ನಿಗದಿಪಡಿಸಿದ ದಿನಾಂಕಕ್ಕೆ ಮುಂಚಿತವಾಗಿ ಯಾವುದೇ ಕಾಲಕ್ಕೆ ಅದನ್ನು ವಿಮೋಚನೆಗೊಳಿಸುವ ಹಕ್ಕನ್ನು ಸಮಿತಿಯಲ್ಲಿ ಕಾದಿರಿಸುವ ನಿಬಂಧನೆಯನ್ನು ಒಳಗೊಂಡಿರಬಹುದು.

(3) [1][ರಾಜ್ಯ ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕು][1] ಹೊರಡಿಸಿದ ಡಿಬೆಂಚರುಗಳ [2][ಅಥವಾ ತೆಗೆದುಕೊಂಡ ಸಾಲಗಳ][2] ಮೇಲೆ ಬಾಕಿ ಇರುವ ಮತ್ತು ಯಾವುದೇ ಕಾಲಕ್ಕೆ ಬಾಕಿ ಉಳಿದಿರುವ ಒಟ್ಟು ಮೊಬಲಗು,Š

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ಡಿಬೆಂಚರುಗಳನ್ನು ನೀಡಿರುವ [1][ಅಥವಾ ಭೂಮಿಯ ಅಡಮಾನವನ್ನು ಅಥವಾ ಭಾರವನ್ನು ಆಧರಿಸಿ ಅಥವಾ ಪಡೆದ ಸಾಲಗಳಿಂದ ಸೃಜಿಸಿದ ಕೃಷಿ

ಯಂತ್ರಗಳು ಅಥವಾ ಇತರ ಆಸ್ತಿಗಳ ಒತ್ತೆಯನ್ನು ಆಧರಿಸಿ ಸಾಲಗಳನ್ನು ತೆಗೆದುಕೊಂಡಿರುವಲ್ಲಿ][1]Š

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) **ಅಡಮಾನಗಳ ಮೇಲೆ ಬಾಕಿ ಇರುವ ಮೊಬಲಗುಗಳು**;

(ii) **ಪ್ರಾಥಮಿಕ** [1][**ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು**][1] 85**ನೇ ಪ್ರಕರಣದ ಮೇರೆಗೆ** [1][**ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ**][1] **ವರ್ಗಾಯಿಸಿದ ಅಥವಾ ವರ್ಗಾಯಿಸಿರುವುದಾಗಿ ಭಾವಿಸಲಾದ ಮತ್ತು ಅಂಥ ಕಾಲದಲ್ಲಿ ಅಸ್ತಿತ್ವದಲ್ಲಿರುವ ಸ್ವತ್ತುಗಳು ಮತ್ತು ಇತರ ಆಸ್ತಿಗಳ ಮೌಲ್ಯ**; **ಮತ್ತು**

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) **ಮೇಲೆ ಹೇಳಿದ ಅಡಮಾನಗಳ ಮೇರೆಗೆ ಸಂದಾಯ ಮಾಡಿದ ಮೊಬಲಗುಗಳು ಮತ್ತು ಆ ಕಾಲಕ್ಕೆ** [1][**ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ**][1] **ಅಥವಾ ನ್ಯಾಸಧಾರಿಯ ಕೈಯಲ್ಲಿ ಉಳಿದಿರುವ ಆಧಾರರಹಿತ ಮೊಬಲಗುಗಳು ಇವುಗಳ ಒಟ್ಟು ಮೊತ್ತವನ್ನು**;

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) **ಡಿಬೆಂಚರುಗಳನ್ನು ಹೊರಡಿಸಿರುವಲ್ಲಿ ಅಥವಾ ಧಾರಣ ಮಾಡಿದ ಅಡಮಾನಗಳ ಮೇಲಲ್ಲದೆ** [1][**ಸಾಲಗಳನ್ನು ತೆಗೆದುಕೊಂಡಿರುವಲ್ಲಿ**][1], (ಎ) **ಖಂಡದ ಮೇರೆಗೆ ಲೆಕ್ಕ ಹಾಕಿದ ಒಟ್ಟು ಮೊಬಲಗು ಡಿಬೆಂಚರುಗಳ ಮೇಲೆ ಪಡೆದ ಮೊಬಲಗಿನ ಪೈಕಿ ಅಡಮಾನಕ್ಕೆ ಒಳಪಡದಿರುವ ಭಾಗದಷ್ಟನ್ನು ಸೇರಿಸಿ ಅಧಿಕಗೊಳಿಸಿದ ಮೊಬಲಗು**

Š **ಇವುಗಳನ್ನು ಮೀರತಕ್ಕುದಲ್ಲ**.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

80. ಕೆಲವೊಂದು ಸ್ವತ್ತುಗಳ ಮೇಲೆ ಡಿಬೆಂಚರು ಧಾರಕರ ಭಾರ.Š **ಡಿಬೆಂಚರು ಧಾರಕನು**Š

(ಎ) 79**ನೇ ಪ್ರಕರಣದ** (8)**ನೇ ಉಪಪ್ರಕರಣದ** (ಎ) **ಖಂಡದಲ್ಲಿ ಉಲ್ಲೇಖಿಸಲಾಗಿರುವಂಥ ಎಲ್ಲ ಅಡಮಾನಗಳು ಮತ್ತು ಆಸ್ತಿಗಳು**;

(ಬಿ) ಅಂಥ ಅಡಮಾನಗಳ ಮೇರೆಗೆ ಸಂದಾಯಮಾಡಲಾದ ಮತ್ತು ಮಂಡಲಿಯ ಅಥವಾ ನ್ಯಾಸಧಾರಿಯ ಕೈಯಲ್ಲಿ ಉಳಿದಿರುವ ಮೊಬಲಗು; ಮತ್ತು

(ಸಿ) 1[ರಾಜ್ಯ ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕಿನ]1 ಇತರ ಸ್ವತ್ತುಗಳು

Š ಇವುಗಳ ಮೇಲೆ ಹಾಲಿ ಭಾರವನ್ನು ಹೊಂದಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

81. ಡಿಬೆಂಚರುಗಳ ಅಸಲು ಮತ್ತು ಅದರ ಮೇಲಣ ಬಡ್ಡಿಗೆ ರಾಜ್ಯಸರ್ಕಾರದ ಖಾತರಿ.Š (1) 79ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಡಿಬೆಂಚರುಗಳ ಅಸಲು ಮತ್ತು ಅವುಗಳ ಮೇಲಿನ ಬಡ್ಡಿಯು, ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಗರಿಷ್ಠ ಮೊಬಲಗಿನ ಸಂಬಂಧದಲ್ಲಿ ಮತ್ತು ಅದು ವಿಧಿಸುವುದು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ರಾಜ್ಯ ಸರ್ಕಾರದ ಖಾತರಿಯನ್ನು ಹೊಂದಿರತಕ್ಕುದು.

(2) ರಾಜ್ಯ ಸರ್ಕಾರವು, ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿಗೆ ಒಳಪಟ್ಟು (1)ನೇ ಉಪಪ್ರಕರಣದ ಮೇರೆಗೆ ಕೊಡಲಾದ ಯಾವುದೇ ಖಾತರಿಯ ಗರಿಷ್ಠ ಮೊಬಲಗನ್ನು ಹೆಚ್ಚಿಸಬಹುದು.

(3) ರಾಜ್ಯಸರ್ಕಾರವು ಮಂಡಲಿಯೊಡನೆ ಮತ್ತು ನ್ಯಾಸಧಾರಿಯೊಡನೆ ಸಮಾಲೋಚಿಸಿದ ತರುವಾಯ,Š

(ಎ) ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ; ಮತ್ತು

(ಬಿ) ರಾಜ್ಯದಲ್ಲಿ ಮತ್ತು ಭಾರತದ ಇತರ ರಾಜ್ಯಗಳಲ್ಲಿ ಇರುವ ಮುಖ್ಯ ವೃತ್ತಪತ್ರಿಕೆಗಳ ಪೈಕಿ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಆಯ್ಕೆ ಮಾಡಬಹುದಾದಂಥ ವೃತ್ತ ಪತ್ರಿಕೆಗಳಲ್ಲಿ ಹದಿನಾಲ್ಕು ದಿವಸಗಳಿಗೆ ಕಡಿಮೆಯಿಲ್ಲದಷ್ಟು ನೋಟೀಸು ಕೊಟ್ಟು

Š ರಾಜ್ಯಪತ್ರದಲ್ಲಿ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಆರು ತಿಂಗಳಿಗಿಂತ ಮುಂಚಿತವಾಗಿಲ್ಲದಂಥ ನಿರ್ದಿಷ್ಟ ದಿನಾಂಕದಿಂದ ಜಾರಿಗೆ ಬರುವಂತೆ ತಾನು ಕೊಟ್ಟಂಥ ಯಾವುದೇ ಖಾತರಿಯನ್ನು ನಿಲ್ಲಿಸಬಹುದು ಅಥವಾ ಅದರ ಗರಿಷ್ಠ ಮೊಬಲಗನ್ನು ಮಿತಗೊಳಿಸಬಹುದು ಅಥವಾ ಯಾವ ಷರತ್ತುಗಳಿಗೊಳಪಟ್ಟು ಅದನ್ನು ನೀಡಲಾಗಿದೆಯೋ ಅವುಗಳನ್ನು ಮಾರ್ಪಡಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗಿನ ಯಾವುದೇ ಖಾತರಿಯನ್ನು ಹಿಂತೆಗೆದುಕೊಳ್ಳುವುದು, ಮಿತಗೊಳಿಸುವುದು ಅಥವಾ ಮಾರ್ಪಡಿಸುವುದು ಹಾಗೆ ಹಿಂತೆಗೆದುಕೊಂಡ, ಮಿತಗೊಳಿಸಿದ ಅಥವಾ ಮಾರ್ಪಡಿಸಿದ ದಿನಾಂಕಕ್ಕೆ ಮುಂಚೆ ಹೊರಡಿಸಿದ ಯಾವುದೇ ಡಿಬೆಂಚರುಗಳು ಹೊಂದಿದ್ದ ಖಾತರಿಗೆ ಯಾವುದೇ ರೀತಿಯಲ್ಲಿ ಬಾಧಕವಾಗತಕ್ಕುದಲ್ಲ.

(4) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಅಧಿಸೂಚನೆ ಮತ್ತು ನೋಟೀಸು, ಖಾತರಿಯ ಗರಿಷ್ಠ ಮೊಬಲಗನ್ನು ಮಿತಗೊಳಿಸಬೇಕಾಗಿರುವಲ್ಲಿ, ಅಥವಾ ಯಾವಷರತ್ತುಗಳಿಗೊಳಪಟ್ಟು ಖಾತರಿಯನ್ನು ಕೊಡಲಾಗಿತ್ತೋ ಅವುಗಳನ್ನು ಮಾರ್ಪಡಿಸಬೇಕಾಗಿರುವಲ್ಲಿ, ಸಂದರ್ಭಾನುಸಾರ, ಮಿತಗೊಳಿಸುವ ಅಥವಾ ಮಾರ್ಪಾಡುಗೊಳಿಸುವ ವ್ಯಾಪ್ತಿಯನ್ನು ಮತ್ತು ಪರಿಣಾಮವನ್ನು ಖಚಿತವಾಗಿ ನಿರೂಪಿಸತಕ್ಕುದು.

82. ರಾಜ್ಯಸರ್ಕಾರದಿಂದ ಇತರ ಖಾತರಿಗಳು.- (1) ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಭೂ ಅಭಿವೃದ್ಧಿಗಾಗಿ [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಅಥವಾ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು][1] ಸದಸ್ಯರಿಗೆ, ಅವರು ರಾಜ್ಯ ಸರ್ಕಾರದಿಂದ ಅನುಮೋದಿತವಾದ ಮೌಲ್ಯ ನಿರ್ಧರಣಾ ತತ್ವಗಳಿಗನುಸಾರವಾಗಿ ನಿರ್ಧಾರಿತವಾದ ಭೂಮಿಗಳ ಮೌಲ್ಯವನ್ನು ಆಧರಿಸಿ ಹಕ್ಕು ಹೊಂದಿರಬಹುದಾದಂಥ ಸಾಲಗಳಿಗೆ ಹೆಚ್ಚುವರಿಯಾಗಿ, ಅಂಥ ಹೆಚ್ಚುವರಿಯು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಿತಿಗಳಿಗೆ ಮಿÁರದಂತೆ ಸಾಲಗಳನ್ನು ನೀಡಲು ಅಧಿಕಾರ ನೀಡಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ನೀಡಲಾದ ಸಾಲಗಳ ಸಂಬಂಧದಲ್ಲಿ ರಾಜ್ಯಸರ್ಕಾರವು, ಆ ಸದಸ್ಯರಿಗೆ ನೀಡಲಾದ ಹೆಚ್ಚುವರಿಯ ಮಟ್ಟಿಗೆ ಸಾಲದ ಮರು ಸಂದಾಯಕ್ಕೆ ನಿರ್ದಿಷ್ಟ ಅವಧಿಯ ಖಾತರಿಯನ್ನು ಕೊಡಬಹುದು.

[1][82ಎ. ಸಾಲಗಳನ್ನು ನೀಡಲು ಮತ್ತು ಭೂಮಿಗಳನ್ನು ಧಾರಣಮಾಡಲು ಭೂ ಅಭಿವೃದ್ಧಿ ಬ್ಯಾಂಕುಗಳ ಅಧಿಕಾರಗಳು.- ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, 76ಎ - ಪ್ರಕರಣದಲ್ಲಿ

ಉಲ್ಲೇಖಿಸಲಾದ ಉದ್ದೇಶಗಳಿಗಾಗಿ ಸಾಲಗಳನ್ನು ನೀಡಲು ಮತ್ತು ಈ ಅಧ್ಯಾಯದ ಉಪಬಂಧಗಳ ಮೇರೆಗೆ ಅವುಗಳಿಗೆ ಸ್ವಾಧೀನವನ್ನು ವರ್ಗಾಯಿಸಲಾದ ಭೂಮಿಗಳನ್ನು ಧಾರಣ ಮಾಡಲು [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು][2] ಸಕ್ಷಮವಾಗಿರತಕ್ಕುದು.

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

82ಬಿ. ಸಾಲಗಳ ಅರ್ಜಿಗಳನ್ನು ವ್ಯವಹರಿಸುವ ವಿಧಾನ.- (1) 76ಎ ಪ್ರಕರಣದಲ್ಲಿ ನಮೂದಿಸಿದ ಉದ್ದೇಶಗಳಲ್ಲಿ ಯಾವೊಂದಕ್ಕಾಗಿ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಿರುವಲ್ಲಿ ನಿಯಮಿಸಿದ ರೀತಿಯಲ್ಲಿ ಅರ್ಜಿಯ ಬಗ್ಗೆ ಸಾರ್ವಜನಿಕ ನೋಟೀಸು ಕೊಡುತ್ತಾ ಅದರಲ್ಲಿ ನಿಗದಿಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಆ ಸಾಲ ನೀಡಿಕೆಗೆ ಆಕ್ಷೇಪಣೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಸಾದರಪಡಿಸಲು ಆಸಕ್ತಿಯುಳ್ಳ ವ್ಯಕ್ತಿಗಳಿಗೆ ಕರೆ ನೀಡಬಹುದು. ರಾಜ್ಯಸರ್ಕಾರವು, ಕಾಲಕಾಲಕ್ಕೆ ಅಂಥ ಸಾರ್ವಜನಿಕ ನೋಟೀಸನ್ನು ಹೊರಡಿಸತಕ್ಕ ವ್ಯಕ್ತಿಗಳು ಮತ್ತು ಆಕ್ಷೇಪಣೆಗಳನ್ನು ಸುನಾವಣೆ ಮಾಡಿ ವಿಲೆ ಮಾಡತಕ್ಕ ರೀತಿ ಇವುಗಳನ್ನು ನಿಯಮಿಸಬಹುದು.

(2) ನಿಯಮಿಸಲಾದ ಅಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಪ್ರತಿಯೊಂದು ಆಕ್ಷೇಪಣೆಯನ್ನು ಪರ್ಯಾಲೋಚಿಸತಕ್ಕುದು ಮತ್ತು ಅದನ್ನು ಎತ್ತಿ ಹಿಡಿಯುವ ಅಥವಾ ತಳ್ಳಿಹಾಕುವ ಲಿಖಿತ ಆದೇಶವನ್ನು ಮಾಡತಕ್ಕುದು:

ಪರಂತು, ಆಕ್ಷೇಪಣೆಯಲ್ಲಿ ಎತ್ತಿದ ಪ್ರಶ್ನೆಯು ಸಿವಿಲ್ ನ್ಯಾಯಾಲಯದ ಹೊರತು ತೃಪ್ತಿಕರವಾಗಿ ತೀರ್ಮಾನಿಸಲಾಗದ ಸ್ವರೂಪದ ಪ್ರಶ್ನೆಯಾಗಿದೆ ಎಂದು ಅಧಿಕಾರಿಯು ಅಭಿಪ್ರಾಯಪಟ್ಟರೆ, ಅವನು ಆ ಪ್ರಶ್ನೆಯನ್ನು ತೀರ್ಮಾನಿಸುವವರೆಗೆ ಆ ಅರ್ಜಿಯ ಮೇಲಣ ವ್ಯವಹರಣೆಗಳನ್ನು ಮುಂದಕ್ಕೆ ಹಾಕತಕ್ಕುದು.

(3) ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸಲಾದ (1)ನೇ ಉಪಪ್ರಕರಣದ ಮೇರೆಗಿನ ನೋಟೀಸನ್ನು, ಈ ಅಧಿನಿಯಮದ ಉದ್ದೇಶಕ್ಕಾಗಿ ಸುಧಾರಿಸಬೇಕಾದ ಅಥವಾ ಸಾಲದ ಸಲುವಾಗಿನ ಭದ್ರತೆಯಾಗಿ ಒದಗಿಸಿದ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ಅಥವಾ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಎಲ್ಲಾ ವ್ಯಕ್ತಿಗಳಿಗೆ ನೀಡಲಾದ ಯುಕ್ತ ನೋಟೀಸು ಎಂದು ಭಾವಿಸತಕ್ಕುದು.

(4) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು][1], ಈ ಅಧ್ಯಾಯದ ಮೇರೆಗೆ ಸಾಲಗಳನ್ನು ನೀಡುವ ಉದ್ದೇಶಕ್ಕಾಗಿ ಯುಕ್ತ ವಿಚಾರಣೆಯ ತರುವಾಯ ಅಂಥ ಅರ್ಜಿಯನ್ನು ಪರ್ಯಾಲೋಚಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

82ಸಿ. ಸಾಲ ಮಂಜೂರು ಮಾಡಿದ ಆದೇಶವು ಕೆಲವು ವಿಷಯಗಳಲ್ಲಿ ನಿರ್ಣಾಯಕವಾಗಿರುವುದು.- [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಅಥವಾ 76ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಅವುಗಳಲ್ಲಿ ಯಾವುದೊಂದು ಉದ್ದೇಶಕ್ಕಾಗಿ ಬ್ಯಾಂಕಿನ ಉಪವಿಧಿಗಳ ಮೇರೆಗೆ ಅಧಿಕೃತರಾದ ವ್ಯಕ್ತಿಗಳು ಅಥವಾ ಸಮಿತಿಗಳು [2][ಕರ್ನಾಟಕ][2] ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1964 ಇದರ ಪ್ರಾರಂಭಕ್ಕೆ ಮುಂಚೆ ಅಥವಾ ಆ ತರುವಾಯ ಲಿಖಿತ ಆದೇಶದಲ್ಲಿ ನಮೂದಿಸಿದ ವ್ಯಕ್ತಿಗೆ ಅಥವಾ ಅವನ ಸಮ್ಮತಿಯಿಂದ ಸಾಲವನ್ನು ಭೂಮಿಯ ಪ್ರಯೋಜನಕ್ಕಾಗಿ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ಉತ್ಪಾದನಾ ಉದ್ದೇಶಕ್ಕಾಗಿ ಅದರಲ್ಲಿ ನಿದಿಷ್ಟಪಡಿಸಿದ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಲವನ್ನು ನೀಡುವ ಲಿಖಿತ ಆದೇಶವು ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ನಿರ್ಣಾಯಕವಾಗಿರತಕ್ಕುದು, ಎಂದರೆ:-

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎ) ವಿವರಿಸಲಾದ ಕಾಮಗಾರಿ ಅಥವಾ ಯಾವ ಉದ್ದೇಶಕ್ಕಾಗಿ ಸಾಲವನ್ನು ನೀಡಲಾಗಿದೆಯೋ ಆ ಉದ್ದೇಶವು 76ಎ ಪ್ರಕರಣದ ಅರ್ಥದಲ್ಲಿ, ಸಂದರ್ಭಾನುಸಾರ, ಒಂದು ಸುಧಾರಣೆ ಅಥವಾ ಉತ್ಪಾದಕ ಉದ್ದೇಶವಾಗಿರುವುದು;

(ಬಿ) ಸಂದರ್ಭಾನುಸಾರ, ಅಂಥ ಸುಧಾರಣೆ ಮಾಡಲು ಅಥವಾ ಉತ್ಪಾದಕ ಉದ್ದೇಶಕ್ಕಾಗಿ ವೆಚ್ಚಗಳನ್ನು ವಹಿಸಲು ಆ ವ್ಯಕ್ತಿಯು ಆ ಆದೇಶದ ದಿನಾಂಕದಂದು ಹಕ್ಕು ಹೊಂದಿದ್ದನು; ಮತ್ತು

(ಸಿ) ಆ ಸುಧಾರಣೆಯು ನಿರ್ದಿಷ್ಟಪಡಿಸಿದ ಭೂಮಿಗೆ ಪ್ರಯೋಜನ ಒದಗಿಸುವ ಸುಧಾರಣೆಯಾಗಿರುವುದು ಮತ್ತು ಉತ್ಪಾದಕ ಉದ್ದೇಶವು ಆಧಾರವಾಗಿ ಒದಗಿಸಿದ

ಭೂಮಿಗೆ ಅಥವಾ ಸುಸಂಗತವಾಗುವಂತೆ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿರುವುದು.]1

83. ಕೆಲವು ಕ್ಲೇಮುಗಳ ಮೇಲೆ ಅಡಮಾನದ ಆದ್ಯತೆ.- [1][(1)][1] [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][2] ಹೆಸರಿಗೆ ಬರೆದುಕೊಟ್ಟ ಅಡಮಾನವು, ಆ ಅಡಮಾನವನ್ನು ಬರೆದುಕೊಟ್ಟ ತರುವಾಯ, [3][ಕರ್ನಾಟಕ ಭೂ ಸುಧಾರಣೆ ಸಾಲಗಳ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 16) ಅಥವಾ ಕರ್ನಾಟಕ ಕೃಷಿಕರ ಸಾಲ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 17)][3]ರ ಮೇರೆಗೆ ನೀಡಲಾದ ಸಾಲದಿಂದ ಉದ್ಭವಿಸುವ ಸರ್ಕಾರದ ಯಾವುದೇ ಕ್ಲೇಮಿನ ಮೇಲೆ ಆದ್ಯತೆ ಹೊಂದಿರತಕ್ಕುದು.

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆನೀಡಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರಲ್ಲಿ ಏನೇ ಇದ್ದರೂ, [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ]2 ಹೆಸರಿಗೆ ಬರೆದುಕೊಟ್ಟ ಅಡಮಾನವು ಗೇಣಿದಾರ ಖರೀದಿದಾರ ಅಥವಾ ಗೇಣಿದಾರನು ಹಿತಾಸಕ್ತಿ ಹೊಂದಿರುವ ಭೂಮಿಗೆ ಸಂಬಂಧಪಟ್ಟಿರುವಲ್ಲಿ ಆ ಅಡಮಾನವು ಅಂಥ ಹಿತಾಸಕ್ತಿಯ ಭದ್ರತೆಯನ್ನು ಆಧರಿಸಿರಬಹುದು ಮತ್ತು ಅಡಮಾನ ಪಡೆದವನ ಹಕ್ಕುಗಳು ಗೇಣಿದಾರ ಖರೀದಿದಾರ ಅಥವಾ ಗೇಣಿದಾರನು ಸದರಿ ಅಧಿನಿಯಮದ ಅಗತ್ಯತೆಗಳನ್ನು ಪಾಲಿಸಲು ತಪ್ಪಿದ ಕಾರಣ ಬಾಧಿತವಾಗತಕ್ಕುದಲ್ಲ ಮತ್ತು ಸದರಿ ಅಧಿನಿಯಮದ ಮೇರೆಗೆ ಮಾಡಲಾದ ಭೂಮಿಯ ಮಾರಾಟ ಮತ್ತು ಅದರಲ್ಲಿನ ಅವನ ಹಿತಾಸಕ್ತಿ ಇವು [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][2] ಮುಂಚಿನ ಭಾರಕ್ಕೆ ಒಳಪಟ್ಟಿರತಕ್ಕುದು.][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

84. ಅಡಮಾನ ಮಾಡಲಾದ ಸ್ವತ್ತನ್ನು ಖರೀದಿಸಲು 1[ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಥವಾ [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹಕ್ಕು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಅಥವಾ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಈ ಅಧ್ಯಾಯದ ಮೇರೆಗೆ ಮಾರಾಟ ಮಾಡಿದ ಯಾವುದೇ

ಅಡಮಾನ ಸ್ವತ್ತನ್ನು ಖರೀದಿಸುವುದು ಕಾನೂನು ಸಮ್ಮತವಾಗಿರತಕ್ಕುದು ಮತ್ತು ಹಾಗೆ ಖರೀದಿಸಿದ ಸ್ವತ್ತನ್ನು ಅಂಥ ಬ್ಯಾಂಕು ನ್ಯಾಸಧಾರಿಯು ನಿಗದಿಪಡಿಸಬಹುದಾದಂಥ ಅವಧಿಯೊಳಗೆ ಮಾರಾಟದ ಮೂಲಕ ವಿಲೇ ಮಾಡತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಕೃಷಿ ಹಿಡುವಳಿಯ ಗರಿಷ್ಠ ಮಿತಿಯನ್ನು ನಿಗದಿಪಡಿಸುವ ಯಾವುದೇ ಕಾನೂನಿನಲ್ಲಿ ಇರುವುದು ಯಾವುದೂ, (1)ನೇ ಉಪಪ್ರಕರಣದ ಮೇರೆಗೆ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಅಥವಾ [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು]1 ಮಾಡಿದ ಭೂ ಆರ್ಜನೆಗೆ ಅನ್ವಯವಾಗತಕ್ಕುದಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

85. [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹೆಸರಿಗೆ ಬರೆದುಕೊಟ್ಟ ಅಡಮಾನಗಳು [1][ರಾಜ್ಯ ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕಿನಲ್ಲಿ][1] ನಿಹಿತವಾಗಿರುವುದು.Š [1][ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕಿನ][1] ಹೆಸರಿಗೆ, ಅದರ ಸದಸ್ಯರು ಬರೆದುಕೊಟ್ಟ ಅಡಮಾನಗಳು ಮತ್ತು ವರ್ಗಾಯಿಸಿದ ಎಲ್ಲಾ ಇತರ ಆಸ್ತಿಗಳನ್ನು ಹಾಗೆ ಬರೆದುಕೊಟ್ಟ ಅಥವಾ ವರ್ಗಾಯಿಸಿದ ದಿನಾಂಕದಿಂದ ಅಂಥ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ][1] [1][ರಾಜ್ಯ ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕಿಗೆ][1] ವರ್ಗಾಯಿಸಿರುವುದಾಗಿ ಭಾವಿಸತಕ್ಕುದು ಮತ್ತು ನ್ಯಾಸಧಾರಿಯಲ್ಲಿ ನಿಹಿತವಾಗತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][85ಎ. [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ]2 ಹೆಸರಿಗೆ ಅಡಮಾನ ಅಥವಾ ಗುತ್ತಿಗೆಯ ನೋಂದಣಿ.Š ಭಾರತ ನೋಂದಣಿ ಅಧಿನಿಯಮ, 1908ರಲ್ಲಿ ಏನೇ ಇದ್ದರೂ, [2][ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕುಗಳ][2] ಹೆಸರಿಗೆ ಬರೆದುಕೊಟ್ಟ ಅಡಮಾನಗಳನ್ನು ಅಥವಾ ಗುತ್ತಿಗೆಗಳನ್ನು ನೋಂದಾಯಿಸುವುದು ಅವಶ್ಯವಾಗತಕ್ಕುದಲ್ಲ: ಪರಂತು, ಸಂಬಂಧಪಟ್ಟ [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][2] ಯಾವ ಲಿಖಿತದ ಮೂಲಕ ಸ್ಥಿರ ಸ್ವತ್ತನ್ನು ಅಡಮಾನ ಮಾಡಲಾಯಿತೋ ಅಥವಾ ಗುತ್ತಿಗೆಗೆ ಕೊಡಲಾಯಿತೋ ಅದರ ಒಂದು ಪ್ರತಿಯನ್ನು, ಅಡಮಾನ ಮಾಡಲಾದ ಅಥವಾ ಸಂದರ್ಭಾನುಸಾರ ಗುತ್ತಿಗೆಗೆ ಕೊಡಲಾದ ಆ ಇಡೀ ಸ್ವತ್ತು ಅಥವಾ ಅದರ ಯಾವುದೇ ಭಾಗವು ಯಾವ ನೋಂದಣಿ ಅಧಿಕಾರಿಯ ಸ್ಥಳೀಯ ಪರಿಮಿತಿಗಳಲ್ಲಿ

ಇರುವುದೋ ಆ ನೋಂದಣಿ ಅಧಿಕಾರಿಗೆ, ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಕಳುಹಿಸಬೇಕು ಮತ್ತು ಅಂಥ ನೋಂದಣಿ ಅಧಿಕಾರಿಯು ಸಂದರ್ಭಾನುಸಾರ ಆ ಪ್ರತಿಯನ್ನು ಅಥವಾ ಪ್ರತಿಗಳನ್ನು ಭಾರತ ನೋಂದಣಿ ಅಧಿನಿಯಮ, 1908ರ 51ನೇ ಪ್ರಕರಣದ ಮೇರೆಗೆ ನಿಯಮಿಸಲಾದ ತನ್ನ ಪುಸ್ತಕ ಸಂಖ್ಯೆ 1ರಲ್ಲಿ ದಾಖಲು ಮಾಡತಕ್ಕುದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

86. ಹಣಗಳನ್ನು ಸ್ವೀಕರಿಸಲು ಮತ್ತು ವಿಮೋಚನೆ ನೀಡಲು 1[ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಧಿಕಾರ.- [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹೆಸರಿಗೆ ಬರೆದುಕೊಟ್ಟ ಅಡಮಾನವನ್ನು [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] 85ನೇ ಪ್ರಕರಣದ ಉಪಬಂಧಗಳ ಮೇರೆಗೆ ವರ್ಗಾಯಿಸಲಾಗಿದ್ದರೂ ಅಥವಾ ವರ್ಗಾಯಿಸಲಾಗಿದೆಯೆಂದು ಭಾವಿಸಲಾಗಿದ್ದರೂ,-

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಅಡಮಾನದ ಮೇರೆಗೆ ಬಾಕಿ ಇರುವ ಎಲ್ಲಾ ಹಣಗಳು ಮಂಡಲಿ ಅಥವಾ ನ್ಯಾಸಧಾರಿಯು ತದ್ವಿರುದ್ಧವಾಗಿ ಹೊರಡಿಸಿದ ಮತ್ತು ಅಡಮಾನದಾರನಿಗೆ ತಿಳಿಸಿದ ಯಾವುದೇ ನಿರ್ದಿಷ್ಟ ನಿರ್ದೇಶನವಿಲ್ಲದಿದ್ದರೂ, [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಸಂದಾಯವಾಗತಕ್ಕುದು ಮತ್ತು ಅಂಥ ಸಂದಾಯವು ಅಡಮಾನವನ್ನು ಹಾಗೆ ವರ್ಗಾಯಿಸಿರದಿದ್ದರೆ ಹೇಗೋ ಹಾಗೆ ಸಿಂಧುವಾಗಿರತಕ್ಕುದು; ಮತ್ತು

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು,][1] ಮಂಡಲಿ ಅಥವಾ ನ್ಯಾಸಧಾರಿಯು ತದ್ವಿರುದ್ಧವಾಗಿ ಹೊರಡಿಸಿದ ಮತ್ತು [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ತಿಳಿಸಿದ ಯಾವುದೇ ನಿರ್ದಿಷ್ಟ ನಿರ್ದೇಶನವಿಲ್ಲದಿದ್ದರೂ ಅಡಮಾನದ ಮೇರೆಗೆ ಬಾಕಿ ಇರುವ ಹಣಗಳ ವಸೂಲಿಯ ಸಲುವಾಗಿ ಅಡಮಾನವನ್ನು ಆಧರಿಸಿ ದಾವೆ ಹೂಡಲು ಅಥವಾ ಇತರ ಯಾವುವೇ ವ್ಯವಹರಣೆಗಳನ್ನು ಕೈಗೊಳ್ಳಲು ಹಕ್ಕು ಹೊಂದಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][86ಎ. [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][2] ಗಳಿಂದ ಸಾಲಗಳ ವಸೂಲಿ:- [2][ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕುಗಳು][2] ನೀಡಿದ ಎಲ್ಲಾ

ಸಾಲಗಳು, ಅವುಗಳ ಮೇಲೆ ವಿಧಿಸಬಹುದಾದ ಬಡ್ಡಿಗಳು ಯಾವುದಾದರೂ ಇದ್ದರೆ ಆ ಎಲ್ಲಾ ಬಡ್ಡಿಗಳು ಮತ್ತು ಅವುಗಳನ್ನು ನೀಡುವ ಬಗ್ಗೆ ವಹಿಸಿದ ವೆಚ್ಚಗಳು ಯಾವುದಾದರೂ ಇದ್ದರೆ ಅವು ಬಾಕಿಯಾದಾಗ ಸಂಬಂಧಪಟ್ಟ [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ][2] ವಸೂಲೀಯವಾಗತಕ್ಕುದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

87. ಅಡಮಾನಕಾರನ ಮುಂಚಿನ ಋಣಗಳನ್ನು ಸಂದಾಯಮಾಡಲು [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಧಿಕಾರ.ಽ (1) ಅಡಮಾನಕಾರನ ಮುಂಚಿನ ಋಣಗಳ ಸಂದಾಯದ ಸಲುವಾಗಿ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹೆಸರಿಗೆ ಅಡಮಾನವನ್ನು ಬರೆದುಕೊಟ್ಟಿರುವಲ್ಲಿ, ಆ ಬ್ಯಾಂಕು, ಸ್ವತ್ತು ವರ್ಗಾವಣೆ ಅಧಿನಿಯಮ, 1882ರ (1882ರ ಕೇಂದ್ರ ಅಧಿನಿಯಮ IV) 83 ಮತ್ತು 84ನೇ ಪ್ರಕರಣಗಳ ಉಪಬಂಧಗಳು ಏನೇ ಇದ್ದರೂ, ಲಿಖಿತ ನೋಟೀಸಿನ ಮೂಲಕ, ಅಂಥ ಯಾವುದೇ ಋಣ ಯಾರೇ ವ್ಯಕ್ತಿಗೆ ಬಾಕಿ ಇದೆಯೋ ಆ ವ್ಯಕ್ತಿಗೆ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗೆ ಬ್ಯಾಂಕಿನಿಂದ ಅದರ ನೋಂದಾಯಿತ ಕಚೇರಿಯಲ್ಲಿ ಅಂಥ ಋಣದ ಸಂದಾಯವನ್ನು ಸ್ವೀಕರಿಸುವಂತೆ ಅಗತ್ಯಪಡಿಸಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಯಾರೇ ವ್ಯಕ್ತಿಯು ಅಂಥ ನೋಟೀಸನ್ನು ಅಥವಾ ಅಂಥ ಸಂದಾಯವನ್ನು ಸ್ವೀಕರಿಸಲು ತಪ್ಪಿದರೆ, ಅಂಥ ಋಣವು ಅಥವಾ ಸಂದರ್ಭಾನುಸಾರ ಅದರ ಭಾಗವು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಗಿದಂದಿನಿಂದ ಬಡ್ಡಿಗಳಿಸುವುದು ಕೊನೆಗೊಳ್ಳತಕ್ಕುದು:

ಪರಂತು, ಅಂಥ ಯಾವುದೇ ಋಣದ ಮೊಬಲಗಿನ ಸಂಬಂಧದಲ್ಲಿ ಯಾವೊಂದು ವಿವಾದವಿರುವಲ್ಲಿ, ಯಾವ ವ್ಯಕ್ತಿಗೆ ಅಂಥ ಋಣವು ಬಾಕಿಯಾಗಿರುವುದೋ ಆ ವ್ಯಕ್ತಿಯು, ಋಣದ ಬಗ್ಗೆ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಕೊಡಮಾಡಿದ ಮೊಬಲಗಿನ ಸಂದಾಯವನ್ನು ಸ್ವೀಕರಿಸಲು ಬದ್ಧನಾಗಿರತಕ್ಕುದು, ಆದರೆ ಅಂಥ ಸ್ವೀಕೃತಿಯು ಅಂಥ ವ್ಯಕ್ತಿಯು ಕ್ಲೇಮು ಮಾಡಿದ ಶಿಲ್ಕನ್ನು ವಸೂಲು ಮಾಡುವ ಬಗ್ಗೆ ಅವನಿಗೆ ಅಧಿಕಾರ ಯಾವುದಾದರೂ ಇದ್ದರೆ ಅದಕ್ಕೆ ಬಾಧಿತವಾಗತಕ್ಕುದಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮುಂಚಿನ ಋಣಗಳ ವಿವರಗಳನ್ನು ನಿರ್ಧರಿಸುವ ಉದ್ದೇಶಗಳಿಗಾಗಿ ರಾಜ್ಯಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಅಧಿಕೃತಗೊಳಿಸಿದ [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಥವಾ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಯಾರೇ ಅಧಿಕಾರಿಯು, ನಿಯಮಿಸಬಹುದಾದಂಥ ನಿರ್ಬಂಧಗಳಿಗೆ, ಪರಿಮಿತಿಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಲಿಖಿತ ಆದೇಶದ ಮೂಲಕ ಮುಂಚಿನ ಋಣಗಳು ಯಾವ ವ್ಯಕ್ತಿಗೆ ಬಾಕಿ ಇರಬಹುದೋ ಆ ವ್ಯಕ್ತಿಗೆ ಅಂಥ ಋಣಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಅಥವಾ ಯಾವುದೇ ದಸ್ತಾವೇಜನ್ನು ಒದಗಿಸಲು ಅಗತ್ಯಪಡಿಸಬಹುದು ಮತ್ತು ಆ ತರುವಾಯ ಅಂಥ ವ್ಯಕ್ತಿಯು ಹಾಗೆ ಅಗತ್ಯಪಡಿಸಲಾದ ಮಾಹಿತಿಯನ್ನು ಅಥವಾ ದಸ್ತಾವೇಜನ್ನು ಒದಗಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][87ಎ. ಏಕತ್ರ ಹಿಂದೂ ಕುಟುಂಬದ ವ್ಯವಸ್ಥಾಪಕರು ಬರೆದುಕೊಟ್ಟ ಅಡಮಾನಗಳು.- (1) [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][2] ಅಥವಾ [2][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][2] ನೀಡುವ ಸಾಲಗಳ ಸಂಬಂಧದಲ್ಲಿ, ಕೃಷಿ ಭೂಮಿಯ ಅಥವಾ ಸಾಗುವಳಿ ಪದ್ಧತಿಗಳ ಸುಧಾರಣೆಗಾಗಿ ಅಥವಾ ಭೂಮಿಯ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸುವ ಇತರ ಯಾವುದೇ ಸಾಧನೆಗಳಿಗೆ ಹಣ ಒದಗಿಸುವುದಕ್ಕಾಗಿ ಅಥವಾ ಭೂಮಿಯ ಉತ್ಪಾದನೆಯನ್ನು ಹೆಚ್ಚಿಸುವ ಇತರ ಸಾಧನಗಳಿಗಾಗಿ ಅಥವಾ ಭೂಮಿಯ ಖರೀದಿಯ ಸಲುವಾಗಿ ಏಕತ್ರ ಹಿಂದೂ ಕುಟುಂಬದ ವ್ಯವಸ್ಥಾಪಕನು, [3][ಕರ್ನಾಟಕ][3] ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1964ರ ಪ್ರಾರಂಭಕ್ಕೆ ಮುಂಚೆ ಅಥವಾ ಆ ತರುವಾಯ ಮಾಡಿದ ಅಡಮಾನಗಳಿಗೆ ತದ್ವಿರುದ್ಧವಾದ ಯಾವುದೇ ಕಾನೂನು ಇದ್ದರೂ, ಅಂಥ ಏಕತ್ರ ಕುಟುಂಬದ ಪ್ರತಿಯೊಬ್ಬ ಸದಸ್ಯನು ಬದ್ಧನಾಗಿರತಕ್ಕುದು.

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇತರ ಸಂದರ್ಭಗಳಲ್ಲಿ, [1][ಕರ್ನಾಟಕ][1] ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1964ರ ಪ್ರಾರಂಭಕ್ಕೆ ಮುಂಚೆ ಅಥವಾ ಆ ತರುವಾಯ, [2][ಕೃಷಿ ಮತ್ತು

ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][2] ಅಥವಾ [2][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][2] ಹೆಸರಿಗೆ ಬರೆದುಕೊಟ್ಟ ಅಡಮಾನವನ್ನು ಏಕತ್ರ ಹಿಂದೂ ಕುಟುಂಬದ ವ್ಯವಸ್ಥಾಪಕನು ಆ ಕುಟುಂಬದ ಸದಸ್ಯರಿಗೆ ಬಂಧನಕಾರಿಯಾಗದ ಉದ್ದೇಶಕ್ಕಾಗಿ (ಅಂಥ ಸದಸ್ಯರು ಪ್ರಾಪ್ತ ವಯಸ್ಕರಾಗಿರಲಿ ಅಥವಾ ಆಗಿಲ್ಲದಿರಲಿ) ಬರೆದುಕೊಟ್ಟಿದ್ದನೆಂಬ ಕಾರಣದ ಮೇಲೆ ಪ್ರಶ್ನಿಸಿರುವಲ್ಲಿ, ಅದನ್ನು ರುಜುವಾತುಪಡಿಸುವ ಭಾರವು, ತದ್ವಿರುದ್ಧವಾದ ಯಾವುದೇ ಕಾನೂನು ಇದ್ದರೂ, ಅದನ್ನು ಆಪಾದಿಸಿದ ಪಕ್ಷಕಾರನದಾಗಿರತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

87ಬಿ. **ಗುತ್ತಿಗೆಯ ಮೇಲಣ ನಿರ್ಬಂಧಗಳು.**– (1) ಸ್ವತ್ತು ವರ್ಗಾವಣೆ ಅಧಿನಿಯಮ, 1882ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಅಡಮಾನ ಮಾಡಿದ ಸ್ವತ್ತಿನ ಯಾರೇ ಅಡಮಾನಕಾರನು, ಬ್ಯಾಂಕಿನ ಲಿಖಿತ ಪೂರ್ವ ಸಮ್ಮತಿ ಪಡೆದ ಮತ್ತು ಬ್ಯಾಂಕು ವಿಧಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟ ಹೊರತು, ಅಂಥ ಯಾವುದೇ ಸ್ವತ್ತನ್ನು ಗುತ್ತಿಗೆಗೆ ಕೊಡತಕ್ಕುದಲ್ಲ ಅಥವಾ ಅದರ ಮೇಲೆ ಯಾವುದೇ ಗೇಣಿಯ ಅಧಿಕಾರಗಳನ್ನು ಸೃಷ್ಟಿಸತಕ್ಕುದಲ್ಲ:

ಪರಂತು, [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಧಿಕಾರಗಳನ್ನು, ಸಂದರ್ಭಾನುಸಾರ, ಗೇಣಿದಾರ ಖರೀದಿದಾರನ, ಗುತ್ತಿಗೆದಾರನ ಅಥವಾ ಗೇಣಿದಾರನ ವಿರುದ್ಧ ಅವನೇ ಅಡಮಾನಕಾರನಾಗಿದ್ದರೆ ಹೇಗೋ ಹಾಗೆ ಜಾರಿಗೊಳಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಸ್ವಾಧೀನದೊಡನೆ ಅಡಮಾನ ಮಾಡಿದ ಭೂಮಿಯು ಗೇಣಿದಾರನ ವಾಸ್ತವ ಸ್ವಾಧೀನದಲ್ಲಿ ಇರುವಲ್ಲಿ, ಅಡಮಾನಕಾರನು ಅಥವಾ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು,][1] ಗುತ್ತಿಗೆ ಮತ್ತು ಅಡಮಾನವು ಜಾರಿಯಲ್ಲಿರುವ ಅವಧಿಯಲ್ಲಿ ಗೇಣಿಯನ್ನು [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಸಂದಾಯಮಾಡಲು ಗೇಣಿದಾರನಿಗೆ ನೋಟೀಸನ್ನು ಕೊಡತಕ್ಕುದು ಮತ್ತು ಅಂಥ ನೋಟೀಸನ್ನು ಕೊಟ್ಟ ತರುವಾಯ ಗೇಣಿದಾರನು [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ನೂತನ ಒಡೆತನವನ್ನು ಅಂಗೀಕರಿಸಿದ್ದಾನೆಂದು ಭಾವಿಸತಕ್ಕುದು.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

88. ಜಪ್ತಿ ಯಾವಾಗ ಮಾಡುವುದು.- (1) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹೆಸರಿಗೆ ಬರೆದುಕೊಟ್ಟ ಅಡಮಾನದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಕಂತು ಅಥವಾ ಅಂಥ ಕಂತಿನ ಯಾವುದೇ ಭಾಗವು ಅದು ಬಾಕಿಯಾದ ದಿನಾಂಕದಿಂದ ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಸಂದಾಯವಾಗದೆ ಉಳಿದಿದ್ದರೆ, ಸಮಿತಿಯು ಬ್ಯಾಂಕಿಗೆ ಲಭ್ಯವಿರುವ ಇತರ ಯಾವುದೇ ಕ್ರಮೋಪಾಯದ ಜೊತೆಗೆ, ಅಡಮಾನ ಮಾಡಿದ ಭೂಮಿಯಲ್ಲಿರುವ ಬೆಳೆಯೂ ಸೇರಿದಂತೆ ಅದರ ಹುಟ್ಟುವಳಿಯನ್ನು ಜಪ್ತಿಮಾಡುವ ಮತ್ತು ಮಾರಾಟ ಮಾಡುವ ಮೂಲಕ ಅಂಥ ಕಂತನ್ನು ಅಥವಾ ಅದರ ಭಾಗವನ್ನು ವಸೂಲು ಮಾಡುವ ಸಲುವಾಗಿ ರಿಜಿಸ್ಟ್ರಾರನಿಗೆ ಅರ್ಜಿಯನ್ನು ಸಲ್ಲಿಸಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ರಿಜಿಸ್ಟ್ರಾರನು, ಸ್ವತ್ತು ವರ್ಗಾವಣೆ ಅಧಿನಿಯಮ, 1882ರಲ್ಲಿ (1882ರ ಕೇಂದ್ರ ಅಧಿನಿಯಮ IV) ಏನೇ ಇದ್ದರೂ, ಅಂಥ ಹುಟ್ಟುವಳಿಯನ್ನು ಜಪ್ತಿಮಾಡುವ ಮತ್ತು ಮಾರಾಟ ಮಾಡುವ ಉದ್ದೇಶಕ್ಕಾಗಿ ನಿಯಮಿಸಿದ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳಬಹುದು:

ಪರಂತು, ಕಂತು ಬಾಕಿಯಾದ ದಿನಾಂಕದಿಂದ [1][ಮೂವತ್ತಾರು ತಿಂಗಳು][1] ಕಳೆದ ತರುವಾಯ ಯಾವುದೇ ಜಪ್ತಿಯನ್ನು ಮಾಡತಕ್ಕುದಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಜಪ್ತಿ ಮಾಡಲಾದ ಸ್ವತ್ತಿನ ಮೌಲ್ಯವು ಸಾಧ್ಯವಾದಷ್ಟು ಮಟ್ಟಿಗೆ ಬಾಕಿ ಇರುವ ಮೊಬಲಗಿಗೆ ಮತ್ತು ಜಪ್ತಿಯ ವೆಚ್ಚಗಳು ಮತ್ತು ಮಾರಾಟದ ವೆಚ್ಚಗಳಿಗೆ ಸಮನಾಗಿರತಕ್ಕುದು.

89. ಮಾರಾಟದ ಅಧಿಕಾರವನ್ನು ಯಾವಾಗ ಚಲಾಯಿಸುವುದು.- (1) ಸ್ವತ್ತು ವರ್ಗಾವಣೆ ಅಧಿನಿಯಮ, 1882ರಲ್ಲಿ (1882ರ ಕೇಂದ್ರ ಅಧಿನಿಯಮ IV) ಏನೇ ಇದ್ದರೂ, ನ್ಯಾಯಾಲಯದ ಮಧ್ಯ ಪ್ರವೇಶವಿಲ್ಲದೆ ಮಾರಾಟದ ಅಧಿಕಾರವನ್ನು ಅಡಮಾನ ಪತ್ರದ ಮೂಲಕ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಸ್ಪಷ್ಟವಾಗಿ ಪ್ರದಾನ ಮಾಡಿರುವಲ್ಲಿ, ಅಂಥ ಬ್ಯಾಂಕಿನ ಸಮಿತಿಯು ಅಥವಾ ಅಂಥ ಸಮಿತಿಯು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಅಡಮಾನದ ಹಣವನ್ನು ಅಥವಾ ಅದರ

ಯಾವುದೇ ಭಾಗವನ್ನು ಸಂದಾಯ ಮಾಡಲು ತಪ್ಪಿರುವ ಸಂದರ್ಭದಲ್ಲಿ, ಬ್ಯಾಂಕಿಗೆ ಇರುವ ಇತರ ಯಾವುದೇ ಕ್ರಮೋಪಾಯದ ಜೊತೆಗೆ, ಅಡಮಾನ ಮಾಡಲಾದ ಭೂಮಿಯನ್ನು ನ್ಯಾಯಾಲಯದ ಮಧ್ಯ ಪ್ರವೇಶವಿಲ್ಲದೆ ಮಾರಾಟ ಮಾಡವ ಅಧಿಕಾರವನ್ನು ಹೊಂದಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಯಾವುದೇ ಅಧಿಕಾರವನ್ನು,Š

(ಎ) ಅಡಮಾನಕಾರನ ಆಕ್ಷೇಪಣೆಗಳು ಯಾವುದಾದರೂ ಇದ್ದರೆ, ಅವುಗಳ ಸುನಾವಣೆ ಮಾಡಿದ ತರುವಾಯ, (1)ನೇ ಉಪಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರವನ್ನು ಚಲಾಯಿಸಲು ಮಂಡಲಿಯನ್ನು ಮುಂಚಿತವಾಗಿ ಅಧಿಕೃತಗೊಳಿಸಿದ ಹೊರತು ಮತ್ತು ಅಧಿಕೃತಗೊಳಿಸುವವರೆಗೆ;

(ಬಿ) ಅಂಥ ಅಡಮಾನದ ಹಣವನ್ನು ಅಥವಾ ಅದರ ಭಾಗವನ್ನು ಸಂದಾಯ ಮಾಡುವಂತೆ ಅಗತ್ಯಪಡಿಸುವ ಲಿಖಿತ ನೋಟೀಸನ್ನು,Š

(i) ಅಡಮಾನಕಾರನಿಗೆ;

(ii) ಅಡಮಾನ ಮಾಡಲಾದ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಅಥವಾ ಭಾರವನ್ನು ಅಥವಾ ಅದನ್ನು ವಿಮೋಚನೆಗೊಳಿಸುವ ಅಧಿಕಾರದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಗೆ;

(iii) ಅಡಮಾನ ಋಣದ ಅಥವಾ ಅದರ ಯಾವುದೇ ಭಾಗದ ಸಂದಾಯದ ಸಲುವಾಗಿ ಯಾರೇ ಜಾಮಿÁನುದಾರನಿಗೆ; ಮತ್ತು

(iv) ತನ್ನ ಸಂಪದದ ಆಡಳಿತದ ಸಲುವಾಗಿ ಇರುವ ದಾವೆಯಲ್ಲಿ ಅಡಮಾನ ಮಾಡಲಾದ ಸ್ವತ್ತಿನ ಮಾರಾಟದ ಡಿಕ್ರಿಯನ್ನು ಪಡೆದ ಅಡಮಾನಕಾರನ ಯಾರೇ ಲೇಣೀದಾರನಿಗೆ

Š ಜಾರಿ ಮಾಡಿದ ಹೊರತು ಮತ್ತು ಮಾಡುವವರೆಗೆ; ಮತ್ತು

(ಸಿ) ಹಾಗೆ ಜಾರಿ ಮಾಡಿದ ತರುವಾಯ ಮೂರು ತಿಂಗಳುಗಳವರೆಗೆ ಅಂಥ ಅಡಮಾನದ ಹಣವನ್ನು ಅಥವಾ ಅದರ ಭಾಗವನ್ನು ಸಂದಾಯ ಮಾಡಲು ತಪ್ಪಿದ ಹೊರತು ಮತ್ತು ತಪ್ಪುವವರೆಗೆ

Š ಚಲಾಯಿಸಲ್ಪಡತಕ್ಕುದಲ್ಲ.

[1][(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಅಧ್ಯಾಯದ ಮೇರೆಗೆ ಮಾರಾಟ ಮಾಡುವ ಯಾವುದೇ ಅಡಮಾನ ಸ್ವತ್ತನ್ನು [2][ಒಂದು][2] [3][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][3] ಅಥವಾ [3][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು]3 ಖರೀದಿಸುವುದು ಕಾನೂನು ಸಮ್ಮತವಾಗಿರತಕ್ಕದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**89ಎ. ಮಾರಾಟದ ಸ್ಥಿರೀಕರಣ.**- (1) 89ನೇ ಪ್ರಕರಣದ ಮೇರೆಗೆ 2[ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು]2 ಮಾರಾಟವನ್ನು ಮಾಡಿದ ತರುವಾಯ ಆ ಬ್ಯಾಂಕು, ಮಾರಾಟವನ್ನು ಮಾಡಿದ ರೀತಿಯನ್ನು ಮತ್ತು ಮಾರಾಟದ ಫಲಿತಾಂಶವನ್ನು ನಿರೂಪಿಸುವ ವರದಿಯನ್ನು, ನಿಯಮಿಸಿದ ರೀತಿಯಲ್ಲಿ [2][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][2] ಮತ್ತು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದು ಮತ್ತು [2][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][2] ರಿಜಿಸ್ಟ್ರಾರನ ಅನುಮೋದನೆಯನ್ನು ಪಡೆದು ಆ ಮಾರಾಟವನ್ನು ಸ್ಥಿರೀಕರಿಸಬಹುದು ಅಥವಾ ರದ್ದುಗೊಳಿಸಬಹುದು.

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 89ನೇ ಪ್ರಕರಣದ ಮೇರೆಗೆ ಮಾರಾಟವನ್ನು [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಅಥವಾ ನ್ಯಾಸಧಾರಿಯು ಮಾಡಿರುವಲ್ಲಿ, ಸಂದರ್ಭಾನುಸಾರ, [1][ಆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಅಥವಾ ಆ ನ್ಯಾಸಧಾರಿಯು, ಮಾರಾಟವನ್ನು ಮಾಡಿದ ರೀತಿಯನ್ನು ಮತ್ತು ಮಾರಾಟದ ಫಲಿತಾಂಶವನ್ನು ನಿರೂಪಿಸುವ ವರದಿಯನ್ನು, ನಿಯಮಿಸಿದ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದು ಮತ್ತು ರಿಜಿಸ್ಟ್ರಾರನು ಆ ಮಾರಾಟವನ್ನು ಸ್ಥಿರೀಕರಿಸಬಹುದು ಅಥವಾ ರದ್ದುಗೊಳಿಸಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

89ಬಿ. ಮಾರಾಟದ ಉತ್ಪತ್ತಿಯ ವಿಲೆ.- 89ನೇ ಪ್ರಕರಣದ ಮೇರೆಗೆ ಮಾಡಿದ ಮತ್ತು 89ಎ ಪ್ರಕರಣದ ಮೇರೆಗೆ ಸ್ಥಿರೀಕರಿಸಿದ ಪ್ರತಿಯೊಂದು ಮಾರಾಟದ ಉತ್ಪತ್ತಿಯನ್ನು ಮೊದಲನೆಯದಾಗಿ, ಮಾರಾಟದ ಅಥವಾ ಪ್ರಯತ್ನಿಸಿದ ಮಾರಾಟಗಳ ಸಂಬಂಧದಲ್ಲಿ

ವಹಿಸಿದ ಎಲ್ಲಾ ಖರ್ಚುಗಳು, ಚಾರ್ಜುಗಳು ಮತ್ತು ವೆಚ್ಚಗಳ ಸಂದಾಯಕ್ಕಾಗಿ, ಎರಡನೆಯದಾಗಿ ಅಡಮಾನ ಸ್ವತ್ತನ್ನು ಮಾರಾಟ ಮಾಡಿದ ಪರಿಣಾಮವಾಗಿ ಅಡಮಾನದ ಬಗ್ಗೆ ಬಾಕಿ ಇರುವ ಯಾವುದೇ ಬಡ್ಡಿಯ ಅಥವಾ ಎಲ್ಲಾ ಬಡ್ಡಿಯ ಸಂದಾಯಕ್ಕಾಗಿ ಮತ್ತು ಮೂರನೆಯದಾಗಿ, ವಸೂಲಿಗೆ ಸಂಬಂಧಿಸಿದ ಪ್ರಾಸಂಗಿಕ ಖರ್ಚುಗಳು ಮತ್ತು ಚಾರ್ಜುಗಳೂ ಸೇರಿ ಅಡಮಾನದ ಬಗ್ಗೆ ಬಾಕಿ ಇರುವ ಅಸಲಿನ ಸಂದಾಯಕ್ಕಾಗಿ ವಿನಿಯೋಗಿಸತಕ್ಕುದು.

ಮಾರಾಟದ ಉತ್ಪತ್ತಿಯಿಂದ ಯಾವುದೇ ಹಣ ಉಳಿದರೆ, ಅದನ್ನು ಮಾರಾಟ ಮಾಡಿದ ಸ್ವತ್ತಿನಲ್ಲಿ ತಾನು ಹಿತಾಸಕ್ತಿ ಹೊಂದಿರುವುದಾಗಿ ರುಜುವಾತುಪಡಿಸುವ ವ್ಯಕ್ತಿಗೆ, ಅಥವಾ ಅಂಥ ವ್ಯಕ್ತಿಗಳು ಒಬ್ಬನಿಗಿಂತ ಹೆಚ್ಚಾಗಿದ್ದರೆ, ಆಗ ಅಂಥ ವ್ಯಕ್ತಿಗಳಿಗೆ, ಅವರ ಜಂಟಿ ರಸೀದಿಯ ಮೇಲೆ ಅಥವಾ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ನಿರ್ಧರಿಸಬಹುದಾದಂತೆ ಅದರಲ್ಲಿ ಅನುಕ್ರಮವಾಗಿ ಅವರವರಿಗಿರುವ ಹಿತಾಸಕ್ತಿಗೆ ಅನುಸಾರವಾಗಿ ಸಂದಾಯಮಾಡತಕ್ಕುದು:]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅಂಥ ಯಾವುದೇ ಸಂದಾಯಗಳನ್ನು ಮಾಡುವುದಕ್ಕೆ ಮುಂಚೆ,-

(ಎ) ಅಡಮಾನಕಾರನಿಂದ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಬರಬೇಕಾದ ಭದ್ರತೆಯಿಲ್ಲದ ಬಾಕಿಗಳಿಗೆ ಸರಿಹೊಂದಿಸಬಹುದು; ಮತ್ತು

(ಬಿ) ಅಡಮಾನಕಾರನು ಯಾವ ಸದಸ್ಯನಿಗೆ ಅಥವಾ ಹಿಂದಿನ ಸದಸ್ಯನಿಗೆ ಋಣಿಯಾಗಿದ್ದಾನೋ ಆ ಯಾರೇ ಸದಸ್ಯನಿಂದ ಅಥವಾ ಹಿಂದಿನ ಸದಸ್ಯನಿಂದ ಬರಬೇಕಾದ ಭದ್ರತೆಯಿಲ್ಲದ ಬಾಕಿಗಳಿಗೆ ಸಹ ಅಂಥ ಸದಸ್ಯನು ಮತ್ತು ಹಿಂದಿನ ಸದಸ್ಯನು ಕೊಟ್ಟ ಲಿಖಿತ ಅಧಿಕಾರ ಪತ್ರದ ಮೇರೆಗೆ ಮತ್ತು ಅವಶ್ಯವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಸರಿಹೊಂದಿಸಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

89ಸಿ. ಖರೀದಿಸುವುದು, ಸ್ವತ್ತನ್ನು ಒಪ್ಪಿಸುವುದು ಮತ್ತು ಖರೀದಿದಾರನ ಹಕ್ಕಿಗೆ ಸಂಬಂಧಿಸಿದ ಪ್ರಮಾಣಪತ್ರ.- (1) 89ಎ ಪ್ರಕರಣದ ಮೇರೆಗೆ ಅಡಮಾನ ಸ್ವತ್ತಿನ ಮಾರಾಟವು ಪೂರ್ಣಗೊಂಡಿರುವಲ್ಲಿ ಮತ್ತು ಮಾರಾಟದ ಉತ್ಪತ್ತಿಯನ್ನು [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಪೂರ್ತಿಯಾಗಿ ಸ್ವೀಕರಿಸಿರುವಲ್ಲಿ, ಆ ಬ್ಯಾಂಕು

ಮಾರಾಟಮಾಡಿದ ಸ್ವತ್ತು, ಮಾರಾಟದ ಬೆಲೆ, ಅದರ ಮಾರಾಟದ ದಿನಾಂಕ, ಮಾರಾಟದ ಸಮಯದಲ್ಲಿ ಖರೀದಿದಾರನೆಂದು ಘೋಷಿಸಲಾದ ವ್ಯಕ್ತಿಯ ಹೆಸರು ಮತ್ತು ಮಾರಾಟವು ಪೂರ್ಣಗೊಂಡ ದಿನಾಂಕ ಇವುಗಳನ್ನು ಪ್ರಮಾಣೀಕರಿಸಿದ ಒಂದು ಪ್ರಮಾಣಪತ್ರವನ್ನು ನಿಯಮಿಸಿದ ನಮೂನೆಯಲ್ಲಿ ಖರೀದಿದಾರನಿಗೆ ನೀಡತಕ್ಕುದು ಮತ್ತು ಅಂಥ ಪ್ರಮಾಣ ಪತ್ರವನ್ನು ಹಾಜರುಪಡಿಸಿದಾಗ ಭಾರತ ನೋಂದಣಿ ಅಧಿನಿಯಮ, 1908ರ ಮೇರೆಗೆ ನೇಮಕಗೊಂಡ ಮತ್ತು ಆ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಇಡೀ ಸ್ವತ್ತು ಅಥವಾ ಅದರ ಯಾವುದೇ ಭಾಗವು ಯಾರ ಅಧಿಕಾರ ವ್ಯಾಪ್ತಿಯ ಪರಿಮಿತಿಗಳಲ್ಲಿ ಇರುವುದೋ ಆ ಸಬ್‌ರಿಜಿಸ್ಟ್ರಾರನು ಅಂಥ ಪ್ರಮಾಣಪತ್ರದಲ್ಲಿರುವ ಒಳಾಂಶಗಳನ್ನು ಸ್ಥಿರ ಸ್ವತ್ತಿಗೆ ಸಂಬಂಧಿಸಿದ ತನ್ನ ರಿಜಿಸ್ಟರಿನಲ್ಲಿ ನಮೂದಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (ಎ) ಮಾರಾಟ ಮಾಡಲಾದ ಅಡಮಾನ ಸ್ವತ್ತು ಅಡಮಾನಕಾರನ ಅಥವಾ ಅವನ ಪರವಾಗಿ ಯಾವೊಬ್ಬ ವ್ಯಕ್ತಿಯ, ಅಥವಾ [1][ರಾಜ್ಯ ಕೃಷಿ ಮತ್ತು ಗ್ರಾಮಿÁಣ ಅಭಿವೃದ್ಧಿ ಬ್ಯಾಂಕಿನ][1] ಅಥವಾ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹೆಸರಿಗೆ ಅಡಮಾನ ಮಾಡಿದ ತರುವಾಯ ಅಡಮಾನಕಾರನು ಸೃಜಿಸಿದ ಹಕ್ಕಿನ ಅಡಿಯಲ್ಲಿ ಕ್ಲೇಮು ಮಾಡುವ ಯೊವೊಬ್ಬ ವ್ಯಕ್ತಿಯ ಅನುಭೋಗದಲ್ಲಿರುವಲ್ಲಿ ಮತ್ತು ಹಿಂದೆ ಹೇಳಿದ ಉಪಪ್ರಕರಣದ ಮೇರೆಗೆ ಆ ಸಂಬಂಧದಲ್ಲಿ ಪ್ರಮಾಣಪತ್ರವನ್ನು ಕೊಟ್ಟಿರುವಲ್ಲಿ, ಡೆಪ್ಯೂಟಿ ಕಮೀಷನರನು ಖರೀದಿದಾರನ ಅರ್ಜಿಯ ಮೇಲೆ ಆ ಸ್ವತ್ತಿನ ಸ್ವಾಧೀನವನ್ನು ಅಂಥ ಖರೀದಿದಾರನಿಗೆ ಅಥವಾ ಅವನು ತನ್ನ ಪರವಾಗಿ ವಶಾವಣೆ ಪಡೆಯಲು ನೇಮಕ ಮಾಡಬಹುದಾದ ವ್ಯಕ್ತಿಗೆ ಒಪ್ಪಿಸಿ ವಶಾವಣೆ ಮಾಡುವಂತೆ ಆದೇಶಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಮಾರಾಟ ಮಾಡಲಾದ ಸ್ವತ್ತು ಗೇಣಿದಾರನ ಅಥವಾ ಅದರ ಅನುಭೋಗಕ್ಕೆ ಹಕ್ಕುಳ್ಳ ಇತರ ವ್ಯಕ್ತಿಯ ಅನುಭೋಗದಲ್ಲಿರುವಲ್ಲಿ ಮತ್ತು ಈ ಹಿಂದೆ ಹೇಳಿದ ಉಪ ಪ್ರಕರಣದ ಮೇರೆಗೆ ಆ ಸಂಬಂಧದಲ್ಲಿ ಪ್ರಮಾಣ ಪತ್ರವನ್ನು ನೀಡಿರುವಲ್ಲಿ, ಡೆಪ್ಯುಟಿ ಕಮೀಷನರನು ಖರೀದಿದಾರನ ಅರ್ಜಿಯ ಮೇಲೆ ಮತ್ತು ಅಂಥ ಗೇಣಿದಾರರಿಗೆ ಅಥವಾ ಇತರ ವ್ಯಕ್ತಿಗಳಿಗೆ, ನೋಟೀಸು ಕೊಟ್ಟ ತರುವಾಯ, ಮಾರಾಟದ ಪ್ರಮಾಣಪತ್ರದ ಪ್ರತಿಯನ್ನು ಸ್ವತ್ತಿನ ಮೇಲೆ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವ ಮೂಲಕ ಮತ್ತು ಯಾವೊಂದು ಅನುಕೂಲಕರ ಸ್ಥಳದಲ್ಲಿ ಡಂಗುರ ಬಾರಿಸುವ ಅಥವಾ ಇತರ ರೂಢಿಗತ

ಪದ್ಧತಿಯ ಮೂಲಕ ಆ ಅನುಭೋಗದಾರನಿಗೆ, ಅಡಮಾನಕಾರನ ಅಧಿಕಾರ, ಹಕ್ಕು ಮತ್ತು ಹಿತಾಸಕ್ತಿ ಇವುಗಳು ಖರೀದಿದಾರನಿಗೆ ವರ್ಗಾಯಿತವಾಗಿರುವುದಾಗಿ ಘೋಷಿಸುವ ಮೂಲಕ ವಶಾವಣೆ ಮಾಡುವಂತೆ ಆದೇಶಿಸತಕ್ಕುದು.

(3) [1][89ನೇ ಪ್ರಕರಣದ][1] ಮೇರೆಗಿನ ಮಾರಾಟದ ಅಧಿಕಾರವನ್ನು ಚಲಾಯಿಸಿ, ಅಥವಾ ಚಲಾಯಿಸಲಾಗಿದೆಯೆಂದು ತಾತ್ಪರ್ಯವಾಗುವಲ್ಲಿ ಯಾವುದೇ ಸ್ವತ್ತನ್ನು ಮಾರಾಟ ಮಾಡಿರುವಲ್ಲಿ ಖರೀದಿದಾರನ ಹಕ್ಕನ್ನು ಆ ಮಾರಾಟವನ್ನು ಅಧಿಕೃತಗೊಳಿಸುವುದಕ್ಕೆ ಅಗತ್ಯವಾದ ಸನ್ನಿವೇಶಗಳು ಉದ್ಭವಿಸಿರುವುದಿಲ್ಲವೆಂಬ, ಅಥವಾ ಮಾರಾಟದ ಬಗ್ಗೆ ಸೂಕ್ತ ನೋಟೀಸನ್ನು ಕೊಟ್ಟಿಲ್ಲವೆಂಬ ಅಥವಾ ಮಾರಾಟದ ಅಧಿಕಾರವನ್ನು ಅನ್ಯಥಾ ಅನುಚಿತವಾಗಿ ಅಥವಾ ಅಕ್ರಮವಾಗಿ ಚಲಾಯಿಸಲಾಗಿದೆ ಎಂಬ ಕಾರಣದ ಮೇಲೆ ಪ್ರಶ್ನಿಸತಕ್ಕುದಲ್ಲ:

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅಂಥ ಅಧಿಕಾರವನ್ನು ಅನಧಿಕೃತವಾಗಿ, ಅನುಚಿತವಾಗಿ ಅಥವಾ ಅಕ್ರಮವಾಗಿ ಚಲಾಯಿಸಲಾಗಿರುವ ಕಾರಣದಿಂದ ನಷ್ಟವನ್ನು ಅನುಭವಿಸಿದ ಯಾರೇ ವ್ಯಕ್ತಿಯು, ಅಂಥ ನಷ್ಟಕ್ಕಾಗಿ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ][1] ಪರಿಹಾರವನ್ನು ಪಡೆಯಲು ಅವಕಾಶ ಹೊಂದಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

89ಡಿ. ರಿಜಿಸ್ಟ್ರಾರನು ಕೊಟ್ಟ ಪ್ರಮಾಣಪತ್ರದ ಮೇಲೆ ಸಾಲಗಳ ವಸೂಲಿ.ಽ (1) 70 ಮತ್ತು 71ನೇ ಪ್ರಕರಣಗಳಲ್ಲಿ ಏನೇ ಇದ್ದರೂ, [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು,][1] ಅದು ತನ್ನ ಸದಸ್ಯರಿಗೆ ಮುಂಗಡವಾಗಿ ನೀಡಿದ ಯಾವುದೇ ಮೊತ್ತದ ಬಾಕಿಗಳ ವಸೂಲಿಗಾಗಿ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಬಾಕಿಗಳ ಸಂಬಂಧದಲ್ಲಿ ಲೆಕ್ಕಗಳ ತಃಖ್ತೆಯನ್ನು ಒದಗಿಸಿದ ಮೇಲೆ, ರಿಜಿಸ್ಟ್ರಾರನು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ಮಾಡಿದ ತರುವಾಯ, ಪ್ರಮಾಣಪತ್ರದಲ್ಲಿ ಬಾಕಿ ಇರುವುದಾಗಿ ತಿಳಿಸಿದ ಮೊಬಲಗಿನ ವಸೂಲಿಗಾಗಿ ಪ್ರಮಾಣಪತ್ರವನ್ನು ನೀಡಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಕೊಟ್ಟ ಪ್ರಮಾಣಪತ್ರವು ಬಾಕಿಗಳಿಗೆ ಸಂಬಂಧಿಸಿದಂತೆ ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕುದು. ಅದರಲ್ಲಿ ಬಾಕಿಯಾಗಿರುವುದಾಗಿ ಹೇಳಲಾದ ಬಾಕಿಗಳು ಭೂ ಕಂದಾಯದ ಬಾಕಿಗಳ ವಸೂಲಿಯ

ಸಲುವಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ವಸೂಲೀಯವಾಗಿರತಕ್ಕುದು.

(3) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಸಂದಾಯವಾಗತಕ್ಕ ಬಾಕಿಗಳನ್ನು, ಬಡ್ಡಿ ಮತ್ತು ಅಂಥ ಬಾಕಿಗಳ ವಸೂಲಿಗಾಗಿ ವಹಿಸಿದ ಯಾವುದೇ ಆನುಷಂಗಿಕ ವೆಚ್ಚಗಳ ಸಹಿತ ಸಂದಾಯ ಮಾಡುವವರೆಗೆ ಅಥವಾ ರಿಜಿಸ್ಟ್ರಾರನಿಗೆ ಮನದಟ್ಟಾಗುವಂತೆ ಅಂಥ ಬಾಕಿಗಳ ಸಂದಾಯದ ಬಗ್ಗೆ ಭದ್ರತೆಯನ್ನು ಒದಗಿಸುವವರೆಗೆ ಡೆಪ್ಯುಟಿ ಕಮಿÁಷನರರನು, [2][ಕರ್ನಾಟಕ][2] ಭೂ ಕಂದಾಯ ಅಧಿನಿಯಮ, 1964ರ 188ನೆಯ ಪ್ರಕರಣದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅಥವಾ ಅದಕ್ಕೆ ಸಂವಾದಿಯಾದ ಉಪಬಂಧದ ಮೂಲಕ ಅಧಿಕೃತ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳುವುದು ಕಾನೂನು ಸಮ್ಮತವಾಗಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(4) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಸಲ್ಲತಕ್ಕ ಬಾಕಿಗಳನ್ನು ಅಂಥ ಬಾಕಿಗಳ ಮೇಲಿನ ಬಡ್ಡಿ ಮತ್ತು ಅವುಗಳನ್ನು ವಸೂಲು ಮಾಡುವಲ್ಲಿ ವಹಿಸಿದ ಪ್ರಾಸಂಗಿಕ ವೆಚ್ಚಗಳ ಸಮೇತವಾಗಿ ಸಂದಾಯ ಮಾಡುವವರೆಗೆ ಅಥವಾ ಅಂಥ ಬಾಕಿಗಳ ಸಂದಾಯಕ್ಕಾಗಿ ರಿಜಿಸ್ಟ್ರಾರನಿಗೆ ಮನದಟ್ಟಾಗುವಂತೆ ಭದ್ರತೆಯನ್ನು ಒದಗಿಸುವವರೆಗೆ, ಅಡಮಾನಕಾರನ ಸ್ವತ್ತಿನ ಷರತ್ತುಪೂರ್ವಕ ಜಪ್ತಿಗಾಗಿ ನಿರ್ದೇಶಿಸುವುದಕ್ಕೆ ರಿಜಿಸ್ಟ್ರಾರನು ಅಥವಾ ಅವನಿಂದ ಅಧಿಕೃತನಾದ ವ್ಯಕ್ತಿಯು ಸಕ್ಷಮನಾಗಿರತಕ್ಕುದು ಮತ್ತು ಈ ಪ್ರಕರಣದ ಮೇರೆಗೆ ಮಾಡಲಾದ ಅಥವಾ ಮಾಡಬೇಕಾದ ಯಾವುದೇ ಸ್ವತ್ತಿನ ಷರತ್ತು ಪೂರ್ವಕ ಜಪ್ತಿಗೆ 95ನೇ ಪ್ರಕರಣದ ಉಪಬಂಧಗಳು ಉಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

89ಇ. ಕೆಲವೊಂದು ಅವಧಿಯಲ್ಲಿ ಡೆಪ್ಯುಟಿ ಕಮಿಷನರರನು ವಸೂಲಿ ಮಾಡುವುದು.Š (1) ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ಅವಧಿಯಲ್ಲಿ [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ] ಸಲ್ಲತಕ್ಕ ಎಲ್ಲ ಮೊತ್ತಗಳನ್ನು (ವಸೂಲಿಯ ಖರ್ಚು ಸೇರಿ) ವಸೂಲು

ಮಾಡುವ ಸಂಬಂಧದಲ್ಲಿ ಅರ್ಜಿಯನ್ನು [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಡೆಪ್ಯುಟಿ ಕಮಿಷನರನಿಗೆ ಸಲ್ಲಿಸಿ ಅವನು ಆ ಎಲ್ಲ ಮೊತ್ತಗಳನ್ನು ವಸೂಲು ಮಾಡಲು ಸಕ್ಷಮನಾಗಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಸಲ್ಲತಕ್ಕ ಯಾವುದೇ ಮೊಬಲಗು ಮುಂದೆ ಹೇಳಿರುವ ಎಲ್ಲ ಅಥವಾ ಯಾವುವೇ ಬಗೆಗಳಲ್ಲಿ ಡೆಪ್ಯುಟಿ ಕಮೀಷನರನಿಂದ ಅಥವಾ ಈ ಬಗ್ಗೆ ಡೆಪ್ಯುಟಿ ಕಮೀಷನರನಿಂದ ವಿಶೇಷವಾಗಿ ಅಧಿಕೃತನಾದ ಯಾರೇ ಅಧಿಕಾರಿಯಿಂದ ವಸೂಲೀಯವಾಗತಕ್ಕುದು, ಎಂದರೆ:-

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಸಾಲ ಪಡೆದವನಿಂದ ಅವು ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ;

(ಬಿ) ಯಾವ ಭೂಮಿಯ ಪ್ರಯೋಜನದ ಸಲುವಾಗಿ ಸಾಲವನ್ನು ಮಂಜೂರು ಮಾಡಲಾಗಿದೆಯೋ ಆ ಭೂಮಿಯಿಂದ ಭೂ ಕಂದಾಯದ ವಸೂಲಿಯ ಸಲುವಾಗಿ ಸ್ಥಿರ ಸ್ವತ್ತನ್ನು ಮಾರಾಟ ಮಾಡವ ಪ್ರಕ್ರಿಯೆಗೆ ಅನುಸಾರವಾಗಿ;

(ಸಿ) ಜಾಮೀನುದಾರನು ಯಾವನಾದರೂ ಇದ್ದರೆ ಅವನಿಂದ ಸಲ್ಲತಕ್ಕ ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ಆ ಜಾಮೀನುದಾರನಿಂದ;

(ಡಿ) ಸಹ ಭದ್ರತೆಯನ್ನೊಳಗೊಂಡ ಸ್ವತ್ತು ಯಾವುದಾದರೂ ಇದ್ದರೆ ಅದರಿಂದ, ಭೂ ಕಂದಾಯದ ವಸೂಲಿಯ ಸಲುವಾಗಿ ಸ್ಥಿರ ಸ್ವತ್ತನ್ನು ಮಾರಾಟ ಮಾಡುವ ಪ್ರಕ್ರಿಯೆಯ ಮೇರೆಗೆ.

89ಎಫ್. ಬ್ಯಾಂಕಿನ ಅಧಿಕಾರಿಗಳು ಮಾರಾಟಗಳಲ್ಲಿ ಸವಾಲು ಮಾಡಲಾಗದು.- ಈ ಅಧ್ಯಾಯದ ಉಪಬಂಧಗಳ ಮೇರೆಗೆ ನಡೆಸಲಾದ ಚರ ಅಥವಾ ಸ್ಥಿರ ಸ್ವತ್ತಿನ ಯಾವುದೇ ಮಾರಾಟದಲ್ಲಿ, [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಥವಾ [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಯಾರೇ ಅಧಿಕಾರಿ ಅಥವಾ ನೌಕರ, ಅವನು ಯಾವ ಬ್ಯಾಂಕಿನ ಅಧಿಕಾರಿಯು ಅಥವಾ ನೌಕರನು ಇರುತ್ತಾನೋ ಆ ಬ್ಯಾಂಕಿನ ಪರವಾಗಿ ಹೊರತು, ಮತ್ತು ಅಂಥ ಮಾರಾಟಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯದ ಚಾಲನೆಯನ್ನು ಹೊಂದಿದ ಯಾವ ವ್ಯಕ್ತಿಯೂ ಅಂಥ ಸ್ವತ್ತಿನ ಹಿತಾಸಕ್ತಿಗಾಗಿ

ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸವಾಲು ಮಾಡತಕ್ಕುದಲ್ಲ ಅಥವಾ ಅದನ್ನು ಆರ್ಜಿಸತಕ್ಕುದಲ್ಲ ಅಥವಾ ಆರ್ಜಿಸಲು ಪ್ರಯತ್ನಿಸತಕ್ಕುದಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

89ಜಿ. [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ][1] ಪರ ಆದ ಪರಭಾರೆಗೆ 1947ರ ಮುಂಬೈ 28ನೆಯ ಅಧಿನಿಯಮದ 40ನೆಯ ಪ್ರಕರಣವು ಅನ್ವಯಿಸತಕ್ಕುದಲ್ಲ.- ಮುಂಬೈ ಕೃಷಿ ಸಾಲಗಾರರ ಋಣ ಪರಿಹಾರ ಅಧಿನಿಯಮ, 1947ರ 40ನೆಯ ಪ್ರಕರಣದಲ್ಲಿ ಅಥವಾ ರಾಜ್ಯದ ಯಾವುದೇ ಭಾಗದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಸಂವಾದಿ ವಿಧಿಯಲ್ಲಿ ಇರುವುದು ಯಾವುದೂ, [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ]1 ಪರವಾಗಿನ ಯಾವುದೇ ಪರಭಾರೆಗೆ ಅನ್ವಯಿಸತಕ್ಕುದಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

89ಹೆಚ್. ಕೆಲವೊಂದು ನಷ್ಟಗಳನ್ನು ತುಂಬಲು ಆಶ್ವಾಸನಾ ನಿಧಿಗಳ ಏರ್ಪಾಡು.- (1) ರಾಜ್ಯ ಸರ್ಕಾರವು, ಸ್ಥಿರ ಸ್ವತ್ತಿನ ಹಕ್ಕುಗಳ ಮೇಲೆ [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಗಳಿಂದ ಸಾಲಗಳು ಕೊಡಲ್ಪಟ್ಟು ತದನಂತರ ಆ ಹಕ್ಕುಗಳು ದೋಷಯುಕ್ತವಾದವುಗಳೆಂದು ಕಂಡುಬಂದುದರ ಪರಿಣಾಮವಾಗಿ ಉದ್ಭವಿಸಬಹುದಾದ ನಷ್ಟಗಳನ್ನು ತುಂಬುವುದಕ್ಕಾಗಿ ಅಥವಾ ಈ ಅಧ್ಯಾಯದ ಇತರ ಯಾವುದೇ ಉದ್ದೇಶಕ್ಕಾಗಿ ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ಒಂದು ಪ್ರತ್ಯೇಕವಾದ ಖಾತರಿ ನಿಧಿಯನ್ನು ಏರ್ಪಡಿಸುವುದು ಅಥವಾ ಸೃಜಿಸುವುದು ಅವಶ್ಯಕವಿದ್ದರೆ ಅದು ಯೋಗ್ಯವೆಂದು ಭಾವಿಸುವಂಥ ನಿರ್ಬಂಧಗಳ ಮತ್ತು ಷರತ್ತುಗಳ ಮೇರೆಗೆ ಅಂಥ ಒಂದು ಅಥವಾ ಹೆಚ್ಚು ಆಶ್ವಾಸನ ನಿಧಿಗಳನ್ನು ರಚಿಸಲು ಸಕ್ಷಮವಾಗಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಮತ್ತು [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು][1] ಇಂಥ ನಿಧಿಗಳಿಗೆ ನಿಯಮಿಸಲ್ಪಡಬಹುದಾದಂಥ ದರಗಳ ಮೇರೆಗೆ ಕೊಡುಗೆಗಳನ್ನು ಕೊಡತಕ್ಕುದು. ಮತ್ತು ಇಂಥ ನಿಧಿಗಳ ರಚನೆಗೆ, ಪರಿರಕ್ಷಣೆಗೆ ಮತ್ತು ಉಪಯೋಗಕ್ಕೆ, ರಾಜ್ಯ ಸರ್ಕಾರದಿಂದ ಈ ಬಗ್ಗೆ ಮಾಡಲ್ಪಡಬಹುದಾದಂಥ ನಿಯಮಗಳು ಅನ್ವಯಿಸತಕ್ಕುದು.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

90. ಅಡಮಾನದ ಸ್ವತ್ತು ನಾಶವಾದಾಗ ಅಥವಾ ಭದ್ರತೆಯು ಸಾಕಾಗುವಷ್ಟು ಆದಾಗ [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಧಿಕಾರಗಳು.š [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಅಡಮಾನ ಮಾಡಲ್ಪಟ್ಟ ಯಾವುದೇ ಸ್ವತ್ತು ಪೂರ್ತಿಯಾಗಿ ಅಥವಾ ಭಾಗಶಃ ನಾಶವಾದಾಗ ಅಥವಾ ಭದ್ರತೆಯು ಸಾಕಾಗದಷ್ಟು ಆದಾಗ ಮತ್ತು ಸಾಕಷ್ಟಾಗುವಂತೆ ಹೆಚ್ಚಿನ ಭದ್ರತೆಯನ್ನು ಒದಗಿಸಲು ಅಥವಾ ಸಮಿತಿಗಳಿಂದ ನಿರ್ಧರಿಸಲ್ಪಡಬಹುದಾದಷ್ಟು ಸಾಲದ ಭಾಗದ ಮರುಸಂದಾಯ ಮಾಡಲು ಅಡಮಾನಕಾರನಿಗೆ [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಸಮಿತಿಯಿಂದ ಯೋಗ್ಯವಾದ ಅವಕಾಶವನ್ನು ಕೊಟ್ಟಿರುವಾಗ, ಅವನು ಅಂಥ ಭದ್ರತೆಯನ್ನು ಒದಗಿಸಲು ಅಥವಾ ಸಾಲದ ಅಂಥ ಭಾಗವನ್ನು ಮರುಸಂದಾಯ ಮಾಡಲು ತಪ್ಪಿದರೆ, ಪೂರ್ತಿ ಸಾಲವು ಕೂಡಲೇ ಸಲ್ಲತಕ್ಕದ್ದಾಗಿ ಇರುತ್ತದೆಂದು ಭಾವಿಸಲ್ಪಡತಕ್ಕುದು ಮತ್ತು ಅದರ ವಸೂಲಿಯ ಸಲುವಾಗಿ 88ನೇ ಪ್ರಕರಣದ ಅಥವಾ 89ನೇ ಪ್ರಕರಣದ ಮೇರೆಗೆ ಅಡಮಾನಕಾರನ ವಿರುದ್ಧ ಕ್ರಮ ಕೈಕೊಳ್ಳಲು ಸಮಿತಿಗೆ ಹಕ್ಕು ಇರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ವಿವರಣೆ.š ಈ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ, ಅಡಮಾನಮಾಡಿದ ಸ್ವತ್ತಿನ ಮೌಲ್ಯವು ಅಡಮಾನದ ಮೇಲೆ ತತ್ಕಾಲದಲ್ಲಿ ಬಾಕಿ ಇರುವ ಮೊಬಲಗಿಗಿಂತ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಉಪವಿಧಿಗಳಲ್ಲಿ ಉಲ್ಲೇಖಿಸಬಹುದಾದ ದಾಮಾಷಾದಲ್ಲಿ ಹೆಚ್ಚಾಗಿರದಿದ್ದರೆ ಸಾಕಷ್ಟಾಗುವುದಿಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

91. ಸ್ವತ್ತಿನ ಜಪ್ತಿ ಮತ್ತು ಮಾರಾಟ ಮೊದಲಾದುವುಗಳನ್ನು ಮಾಡಲು ಮಂಡಲಿಯ ಅಥವಾ ನ್ಯಾಸಧಾರಿಯ ಅಧಿಕಾರ.š (1) 88ನೆಯ ಪ್ರಕರಣದ, 89ನೆಯ ಪ್ರಕರಣದ ಅಥವಾ 90ನೆಯ ಪ್ರಕರಣದ ಮೇರೆಗೆ ಬಾಕಿದಾರನ ವಿರುದ್ಧ ಕ್ರಮಕೈಕೊಳ್ಳಲು ಮಂಡಲಿಯು ಅಥವಾ ನ್ಯಾಸಧಾರಿಯು [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಸಮಿತಿಗೆ ನಿರ್ದೇಶಿಸಬಹುದು ಮತ್ತು ಆ ಸಮಿತಿಯು ಹಾಗೆ ಮಾಡಲು ಅಲಕ್ಷಿಸಿದರೆ ಅಥವಾ ತಪ್ಪಿದರೆ, ಮಂಡಲಿಯು ಅಥವಾ ನ್ಯಾಸಧಾರಿಯು ಅಂಥ ಕ್ರಮ ಕೈಕೊಳ್ಳಬಹುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (ಎ) ಮಂಡಲಿಯು ಅಂಥ ಕ್ರಮವನ್ನು ಕೈಕೊಂಡಿರುವಲ್ಲಿ ಈ ಅಧ್ಯಾಯದ ಮತ್ತು ಈ ಬಗ್ಗೆ ಮಾಡಲಾದ ಯಾವುವೇ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳು, ಆ ಉಪಬಂಧದಲ್ಲಿ [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಅಥವಾ ಅದರ ಸಮಿತಿಗೆ ಮಾಡಲಾದ ಎಲ್ಲಾ ಉಲ್ಲೇಖಗಳು ಅನುಕ್ರಮವಾಗಿ [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಮತ್ತು ಮಂಡಲಿಗೆ ಮಾಡಲಾದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಅಂಥ ಕ್ರಮವನ್ನು ನ್ಯಾಸಧಾರಿಯು ಕೈಕೊಂಡಿರುವಲ್ಲಿ, ಆ ಬಗ್ಗೆ ಈ ಅಧಿನಿಯಮದ ಮತ್ತು ಇದರ ಮೇರೆಗೆ ಮಾಡಲಾದ ಯಾವುವೇ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳು, ಆ ಉಪಬಂಧಗಳಲ್ಲಿ [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅಥವಾ ಅದರ ಸಮಿತಿಗೆ ಮಾಡಲಾದ ಎಲ್ಲ ಉಲ್ಲೇಖಗಳು ನ್ಯಾಸಧಾರಿಗೆ ಮಾಡಲಾದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

92. ಅಕ್ರಮ, ಮೊದಲಾದವುಗಳ ಕಾರಣದ ಮೇಲೆ ಖರೀದಿದಾರನ ಹಕ್ಕನ್ನು ಪ್ರಶ್ನಿಸತಕ್ಕುದಲ್ಲ.Š 89ನೇ ಪ್ರಕರಣದ ಮೇರೆಗೆ ಮಾರಾಟದ ಅಧಿಕಾರವನ್ನು ಚಲಾಯಿಸಿ ಅಥವಾ ಚಲಾಯಿಸಿದಂತೆ ಭಾವಿಸುವ ಹಾಗೆ ಯಾವುದೇ ಸ್ವತ್ತು ಮಾರಲ್ಪಟ್ಟಿರುವಲ್ಲಿ, ಖರೀದಿದಾರನ ಹಕ್ಕನ್ನು,Š

(ಎ) ಮಾರಾಟವನ್ನು ಅಧಿಕೃತಗೊಳಿಸಲು ಅಗತ್ಯವಾದ ವಿದ್ಯಮಾನಗಳು ಉದ್ಭವಿಸಿರಲಿಲ್ಲವೆಂಬ; ಅಥವಾ

(ಬಿ) ಮಾರಾಟದ ಅಧಿಕಾರವನ್ನು ಅನ್ಯಥಾ ಅನುಚಿತವಾಗಿ ಅಥವಾ ಅಕ್ರಮವಾಗಿ ಚಲಾಯಿಸಲಾಯಿತೆಂಬ

Š ಕಾರಣದ ಮೇಲೆ ಪ್ರಶ್ನಿಸತಕ್ಕುದಲ್ಲ;

ಆದರೆ ಅಂಥ ಯಾವುದೇ ಅಧಿಕಾರವನ್ನು ಅನಧಿಕೃತವಾಗಿ, ಅನುಚಿತವಾದ ಅಥವಾ ಅಕ್ರಮವಾದ ಚಲಾವಣೆಯಿಂದಾದ ಯಾವುದೇ ನಷ್ಟವನ್ನು ಅನುಭವಿಸಿರುವ ಯಾವನೇ ವ್ಯಕ್ತಿಯು, [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ವಿರುದ್ಧ ನಷ್ಟದ ಬಗ್ಗೆ ಪರಿಹಾರ ಪಡೆಯಲು ಅವಕಾಶವಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

93. ಅಡಮಾನದಾರನ ದಿವಾಳಿಯಿಂದಾಗಿ ಅಡಮಾನವು ಪ್ರಶ್ನಿಸತಕ್ಕುದಲ್ಲ.ೱ ದಿವಾಳಿಗೆ ಸಂಬಂಧಿಸಿದ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಹೆಸರಿನಲ್ಲಿ ಬರೆದುಕೊಡಲಾದ ಅಡಮಾನವನ್ನು ಮೌಲ್ಯಯುಕ್ತವಾದ ಪ್ರತಿಫಲದ ಸಲುವಾಗಿ ಸದುದ್ದೇಶದಿಂದ ಬರೆದು ಕೊಟ್ಟಿರಲಿಲ್ಲವೆಂಬ ಕಾರಣದ ಮೇಲೆ ಅಥವಾ ಅಡಮಾನಕಾರನ ಇತರ ಲೇಣೀದಾರರ ಮೇಲೆ [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ಪ್ರಾಶಸ್ತ್ಯ ಕೊಡುವ ದೃಷ್ಟಿಯಿಂದ ಬರೆದುಕೊಡಲಾಗಿತ್ತೆಂಬ ಕಾರಣದ ಮೇಲೆ ಪ್ರಶ್ನಿಸತಕ್ಕುದಲ್ಲ.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

94. ರಿಸೀವರನ ನಿಯುಕ್ತಿ ಮತ್ತು ಅಧಿಕಾರಗಳು.ೱ (1) [1][ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][1] ಅರ್ಜಿಯ ಮೇಲೆ ಮತ್ತು 89ನೇ ಪ್ರಕರಣದಿಂದ ಪ್ರದತ್ತವಾದ ಮಾರಾಟ ಅಧಿಕಾರಗಳನ್ನು ಯಾವ ವಿದ್ಯಮಾನಗಳಲ್ಲಿ ಚಲಾಯಿಸಲ್ಪಡಬಹುದೋ ಆ ವಿದ್ಯಮಾನಗಳಲ್ಲಿ, ಅಡಮಾನದ ಸ್ವತ್ತಿನ ಅಥವಾ ಅವುಗಳ ಯಾವುದೇ ಭಾಗದ ಉತ್ಪನ್ನದ ಮತ್ತು ಆದಾಯದ ಬಗ್ಗೆ ರಿಸೀವರನನ್ನು ಮಂಡಲಿಯು ಲಿಖಿತದ ಆದೇಶದ ಮೂಲಕ ನೇಮಿಸಬಹುದು ಮತ್ತು ಅಂಥ ರಿಸೀವರನು, ಸಂದರ್ಭಾನುಸಾರ, ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಳ್ಳಲು ಅದರ ಉತ್ಪನ್ನವನ್ನು ಅಥವಾ ಆದಾಯವನ್ನು ವಸೂಲು ಮಾಡಲು, ತಾನು ವಸೂಲು ಮಾಡಿದ ಯಾವುದೇ ಹಣದಿಂದ ತನ್ನ ವ್ಯವಸ್ಥಾಪನೆಯ ಖರ್ಚುಗಳನ್ನು ಮತ್ತು ಮಂಡಲಿಯಿಂದ ತನಗೆ ಯಾವುದಾದರೂ ಪರಿಶ್ರಮಧನ ನಿಗದಿಯಾಗಿದ್ದು ಅದನ್ನು ಸೇರಿಸಿ ತಾನು ಇಟ್ಟುಕೊಳ್ಳಲು ಮತ್ತು ಉಳಿದಿದ್ದನ್ನು ಸ್ವತ್ತಿನ ವರ್ಗಾವಣೆ ಅಧಿನಿಯಮ, 1882ರ (1882ರ ಕೇಂದ್ರ ಅಧಿನಿಯಮ IV) 69ಎ ಪ್ರಕರಣದ (8)ನೇ ಉಪಪ್ರಕರಣದ ಉಪಬಂಧಗಳ ಅನುಸಾರ ಉಪಯೋಗಿಸಲು ಹಕ್ಕುಳ್ಳವನಾಗಿರತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೆಯ ಉಪಪ್ರಕರಣದ ಮೇರೆಗೆ ನೇಮಿಸಲ್ಪಟ್ಟ ರಿಸೀವರನನ್ನು ಸಾಕಷ್ಟು ಕಾರಣವಿದ್ದಲ್ಲಿ ಮತ್ತು ಅಡಮಾನದಾರನಿಂದ ಮಾಡಲಾದ ಅರ್ಜಿಯ ಮೇಲೆ ಅವನನ್ನು ಮಂಡಲಿಯು ತೆಗೆದುಹಾಕಬಹುದು.

(3) ರಿಸೀವರನ ಪದವು ಖಾಲಿಯಾದಲ್ಲಿ ಅದನ್ನು ಮಂಡಲಿಯು ತುಂಬಬಹುದು.

(4) ಅಡಮಾನದ ಸ್ವತ್ತು, ಸಿವಿಲ್ ನ್ಯಾಯಾಲಯದಿಂದ ನೇಮಿಸಲ್ಪಟ್ಟ ರಿಸೀವರನ ಸ್ವಾಧೀನದಲ್ಲಿ ಈಗಾಗಲೇ ಇದ್ದಲ್ಲಿ, ಈ ಪ್ರಕರಣದಲ್ಲಿರುವುದು ಯಾವುದೂ, ರಿಸೀವರನನ್ನು ನೇಮಿಸುವ ಅಧಿಕಾರವನ್ನು ಮಂಡಲಿಗೆ ಕೊಡತಕ್ಕುದಲ್ಲ.

95. ಗುತ್ತಿಗೆಗೆ ಕೊಡಲು ಅಡಮಾನದಾರನ ಅಧಿಕಾರಗಳು.Š (1) ಸ್ವತ್ತು ವರ್ಗಾವಣೆ ಅಧಿನಿಯಮ, 1882ರಲ್ಲಿ (1882ರ ಕೇಂದ್ರಾಧಿನಿಯಮ IV) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಅಡಮಾನದಾರನು ಐದು ವರ್ಷಗಳಿಗೆ ಮೀರುವ ಅವಧಿಗಾಗಿ ಅಡಮಾನದ ಸ್ವತ್ತನ್ನು ಗುತ್ತಿಗೆಗೆ ಕೊಡತಕ್ಕುದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸಿ ನೀಡಲಾದ ಯಾವುದೇ ಗುತ್ತಿಗೆಯು ಶೂನ್ಯವಾಗಿರತಕ್ಕುದು.

96. ಮಂಡಲಿಯು ಕೆಲವೊಂದು ಅಧಿಕಾರಗಳನ್ನು ಪ್ರತ್ಯಾಯೋಜಿಸುವುದು.Š ಮಂಡಲಿಯು, ತಾನು ಸೂಕ್ತವೆಂದು ಭಾವಿಸಿದರೆ, 89,91 ಮತ್ತು 94 ಈ ಪ್ರಕರಣಗಳ ಮೇರೆಗಿನ ತನ್ನ ಎಲ್ಲ ಅಧಿಕಾರಗಳನ್ನು ಅಥವಾ ಅವುಗಳಲ್ಲಿ ಯಾವುವೇ ಅಧಿಕಾರಗಳನ್ನು ತಾನು ರಚಿಸಿದ, ಮತ್ತು ತನ್ನ ಸದಸ್ಯರಲ್ಲಿ ಇಬ್ಬರು ಅಥವಾ ಹೆಚ್ಚು ಜನ ಸದಸ್ಯರನ್ನೊಳಗೊಂಡ ಕಾರ್ಯನಿರ್ವಾಹಕ ಸಮಿತಿಗೆ ಪ್ರತ್ಯಾಯೋಜಿಸಬಹುದು.

97. ಸ್ವತ್ತು ವರ್ಗಾವಣೆ ಅಧಿನಿಯಮ, 1882ರ 102, 103 ಮತ್ತು 104ನೇ ಪ್ರಕರಣಗಳು ಈ ಅಧ್ಯಾಯದ ಮೇರೆಗಿನ ನೋಟೀಸುಗಳಿಗೆ ಅನ್ವಯವಾಗುವುದು.Š (1) ಸ್ವತ್ತು ವರ್ಗಾವಣೆ ಅಧಿನಿಯಮ, 1882ರಲ್ಲಿ (1882ರ ಕೇಂದ್ರ ಅಧಿನಿಯಮ IV) 102 ಮತ್ತು 103ನೇ ಪ್ರಕರಣಗಳ ಮತ್ತು ಸದರಿ ಪ್ರಕರಣಗಳ ಉದ್ದೇಶಗಳನ್ನು ಈಡೇರಿಸಲು ಆ ಅಧಿನಿಯಮದ 104ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ರಚಿಸಿದ ಯಾವುವೇ ನಿಯಮಗಳ ಉಪಬಂಧಗಳು, ಈ ಅಧ್ಯಾಯದ ಮೇರೆಗೆ ಜಾರಿ ಮಾಡಬೇಕಾದ ಎಲ್ಲ ನೋಟೀಸುಗಳಿಗೆ ಸಂಬಂಧಿಸಿ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕುದು.

[1][97ಎ. ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಾಗಿ ನೌಕರರ ಸಾಮಾನ್ಯ ವೃಂದದ ರಚನೆ.- (1) ಈ ಅಧಿನಿಯಮ, ನಿಯಮಗಳು ಅಥವಾ ಉಪವಿಧಿಗಳಲ್ಲಿ ಏನೇ ಇದ್ದರೂ, ರಿಜಿಸ್ಟ್ರಾರನು, ಸಹಕಾರಿ ಆಂದೋಲನದ

ಹಿತಾಸಕ್ತಿಯಲ್ಲಿ, ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗೆ ಸಂಯೋಜನೆಯಾಗಿರುವ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಾಗಿ ನೌಕರರ ಸಾಮಾನ್ಯ ವೃಂದವನ್ನು ಸೃಜಿಸುವುದು ಅವಶ್ಯವೆಂದು ಪರಿಗಣಿಸಿದಲ್ಲಿ, ಆತನು, ತಾನು ನಿರ್ದಿಷ್ಟಪಡಿಸಬಹುದಾದಂತೆ, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕ್‌ನ ನೌಕರರ ಅಂಥ ವರ್ಗದ ಸಂಬಂಧದಲ್ಲಿ ನೇಮಕಾತಿ, ವರ್ಗಾವಣೆ ಮತ್ತು ಶಿಸ್ತು ಕ್ರಮದ ಅಧಿಕಾರವನ್ನು ಚಲಾಯಿಸುವುದಕ್ಕಾಗಿ ಅವಶ್ಯಕವಾಗಬಹುದಾದ ವಿನಿಯಮವನ್ನು ಮಾಡಲು ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅನ್ನು ಪ್ರಾಧಿಕೃತಗೊಳಿಸತಕ್ಕದ್ದು. ಹಾಗೆ ರಿಜಿಸ್ಟ್ರಾರರಿಂದ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಕೆಎಸ್‌ಸಿಎಆರ್‌ಇಡಿ) ಬ್ಯಾಂಕ್, ಪ್ರಾಧಿಕೃತಗೊಂಡಿದ್ದಲ್ಲಿ, ಸಂಯೋಜನೆಗೊಂಡ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕ್, ಅಂಥ ವಿನಿಯಮಗಳು ಅನುಮತಿ ನೀಡಿದ ವ್ಯಾಪ್ತಿಯ ಹೊರತು ನೌಕರರ ಅಂಥ ವರ್ಗದೊಡನೆ ವ್ಯವಹರಿಸಲು ಅಧಿಕಾರಗಳನ್ನು ಹೊಂದಿರತಕ್ಕದ್ದಲ್ಲ.

(2) ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಕೆಎಸ್‌ಸಿಎಆರ್‌ಡಿ) ಬ್ಯಾಂಕ್ ಈ ಉದ್ದೇಶಕ್ಕಾಗಿ ವೆಚ್ಚವನ್ನು ವಹಿಸಬಹುದಾದ್ದರಿಂದ, ರಿಜಿಸ್ಟ್ರಾರರು, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕ್‌ಗಳನ್ನು ಪ್ರತಿ ವರ್ಷವೂ ವೆಚ್ಚಕ್ಕಾಗಿ ಅಂಥ ಮೊತ್ತವನ್ನು ವಂತಿಗೆಯಾಗಿ ನೀಡಬೇಕೆಂದು ಅಗತ್ಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ಯಾವುದೇ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕ್ ಸದರಿ ಮೊತ್ತವನ್ನು ಸಂದಾಯ ಮಾಡಲು ತಪ್ಪಿದಲ್ಲಿ, ರಿಜಿಸ್ಟ್ರಾರ್ ಅಥವಾ ಆತನು ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಿಯು, ಆತನು ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಅರ್ಜಿಯ ಮೇಲೆ, ಮತ್ತು ತಾನು ಅವಶ್ಯಕವೆಂದು ಪರಿಗಣಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕ್‌ಗೆ ಮೊತ್ತವನ್ನು ಪಾವತಿ ಮಾಡುವುದನ್ನು ಅಗತ್ಯಪಡಿಸುವ ಆದೇಶವನ್ನು ಮಾಡುವುದು ಮತ್ತು ಅಂಥ ಪ್ರತಿಯೊಂದು

ಆದೇಶವನ್ನು ಅಂಥ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕ್‌ನ ವಿರುದ್ಧ, ಆ ಆದೇಶವು 71ನೇ ಪ್ರಕರಣದಡಿಯಲ್ಲಿ ಐತೀರ್ಪನ್ನು ನೀಡಿದ್ದರೆ ಹೇಗೋ ಹಾಗೆಯೇ ಜಾರಿಯಾಗತಕ್ಕದ್ದು.][1]

1. 2011ರ ಅಧಿನಿಯಮ ಸಂಖ್ಯೆ 4ರ ಮೂಲಕ 10.02.2011 ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂ: ಸಿಒ 24 ಸಿಎಲ್‌ಎಂ 2011ರ ಮೂಲಕ ಪ್ರತಿಯೋಜಿಸಲಾಗಿದೆ.

[1][98. [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ][2] ಮೇಲ್ವಿಚಾರಣೆ ಮಾಡಲು ಮತ್ತು ವಿನಿಯಮಗಳನ್ನು ರಚಿಸಲು [2][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][2] [3][ಮಂಡಲಿಗೆ][3] ಅಧಿಕಾರ.Š [2][ರಾಜ್ಯದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ][2] [3][ಮಂಡಲಿಯು][3] [2][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ][2] ಮೇಲ್ವಿಚಾರಣೆಯ ಸಾಮಾನ್ಯ ಅಧಿಕಾರವನ್ನು ಹೊಂದಿರತಕ್ಕುದು ಮತ್ತು ರಾಜ್ಯಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ, ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗದಂಥ ವಿನಿಯಮಗಳನ್ನು ರಚಿಸಬಹುದು, ಎಂದರೆ Š

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ][1] ಲೆಕ್ಕದ ಪುಸ್ತಕಗಳನ್ನು ಮತ್ತು ವ್ಯವಹರಣೆಗಳನ್ನು ಪರಿಶೀಲಿಸುವುದು;

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಅಂಥ ಬ್ಯಾಂಕುಗಳು ತಮ್ಮ ವ್ಯವಹಾರಗಳ ಸಂಬಂಧದಲ್ಲಿ ವಿವರ ಪಟ್ಟಿಕೆಗಳನ್ನು ಮತ್ತು ವರದಿಗಳನ್ನು ಸಲ್ಲಿಸುವುದು;

(ಸಿ) ಅಂಥ ಬ್ಯಾಂಕುಗಳು [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ][1] ವರ್ಗಾಯಿಸಿದ ಅಡಮಾನಗಳ ಮೇಲೆ ವಸೂಲು ಮಾಡಿದ ಮೊಬಲಗುಗಳ ಸಂದಾಯಕ್ಕೆ ಸಂಬಂಧಿಸಿದ ಲೆಕ್ಕಗಳಾಗಿರುವ ಅಂಥ ಬ್ಯಾಂಕುಗಳ ಮತ್ತು [1][ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಇವುಗಳ ನಡುವಣ ಲೆಕ್ಕಗಳ ನಿಯತಕಾಲಿಕ ಇತ್ಯರ್ಥ;

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಸಾಲಗಳಿಗಾಗಿ ಅಂಥ ಬ್ಯಾಂಕುಗಳಿಗೆ ಸಲ್ಲಿಸತಕ್ಕ ಅರ್ಜಿಗಳ ನಮೂನೆ ಮತ್ತು ಅಂಥ ಸಾಲಗಳಿಗಾಗಿ ಭದ್ರತೆಯಾಗಿ ಒದಗಿಸಿದ ಸ್ವತ್ತುಗಳ ಮೌಲ್ಯಮಾಪನ;

(ಇ) ಅಡಮಾನಕಾರರಿಂದ ವಸೂಲು ಮಾಡಿದ ಹಣಗಳ ಹೂಡಿಕೆ;

(ಎಫ್) ಅಂಥ ಬ್ಯಾಂಕುಗಳ ನೌಕರರ ಸೇವಾ ಷರತ್ತುಗಳು;

(ಜಿ) ಅಂಥ ಬ್ಯಾಂಕುಗಳು ಸಾಲಗಳನ್ನು ನೀಡುವಲ್ಲಿ ಅನುಸರಿಸಬೇಕಾದ ಕಾರ್ಯಕ್ರಮ ಮತ್ತು ಕಾರ್ಯನೀತಿ;

(ಹೆಚ್) ಅಂಥ ಬ್ಯಾಂಕುಗಳು ಸಾಲಗಳನ್ನು ನೀಡಲು ಪಡೆದುಕೊಳ್ಳಬೇಕಾದ ಭದ್ರತೆಯ ಮಾದರಿಗಳು ಮತ್ತು ವ್ಯಾಪ್ತಿ;

(ಐ) ಸಾಮಾನ್ಯವಾಗಿ ಪಕ್ಷಕಾರರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಉದ್ದೇಶಕ್ಕಾಗಿ ಅಂಥ ಬ್ಯಾಂಕುಗಳ ಕಾರ್ಯಚಟುವಟಿಕೆಗಳ ವಿಸ್ತರಣೆ ಮತ್ತು ಈ ಅಧ್ಯಾಯದ ಉದ್ದೇಶಗಳ ನೆರವೇರಿಕೆ.][1]

[1][ಅಧ್ಯಾಯ XI ಎ

ಸಹಕಾರ ಪತ್ತಿನ ವ್ಯವಸ್ಥೆಯಲ್ಲಿಯ (ರಚನೆಯಲ್ಲಿಯ) ಸಂಘಗಳಿಗೆ ಅನ್ವಯವಾಗುವ ವಿಶೇಷ ಉಪಬಂಧಗಳು

98ಎ. ಈ ಅಧ್ಯಾಯದ ಅನ್ವಯ:- ಈ ಅಧ್ಯಾಯವು ಸಹಕಾರ ಪತ್ತಿನ ವ್ಯವಸ್ಥೆಯಲ್ಲಿಯ (ರಚನೆಯಲ್ಲಿಯ) ಸಹಕಾರ ಸಂಘಗಳಿಗೆ ಮಾತ್ರ ಅನ್ವಯವಾಗತಕ್ಕದ್ದು.

98ಬಿ. XIಎ ಅಧ್ಯಾಯದ ಅಧ್ಯಾರೋಹಿ ಪರಿಣಾಮ.- ಈ ಅಧಿನಿಯಮದ ಯಾವುದೇ ಇತರ ಅಧ್ಯಾಯದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅಥವಾ ಯಾವುದೇ ಸಹಕಾರ ಸಂಘದ ಉಪವಿಧಿಗಳಲ್ಲಿ ಅಥವಾ ಅದರ ಅಡಿಯಲ್ಲಿ ಹೊರಡಿಸಿದ ಆದೇಶಗಳಲ್ಲಿ ವಿರುದ್ಧವಾದುದು ಅಥವಾ ಅಸಂಗತವಾದುದು ಏನೇ ಒಳಗೊಂಡಿದ್ದರೂ, ಈ ಅಧ್ಯಾಯದ ಉಪಬಂಧಗಳು ಸಹಕಾರ ಪತ್ತಿನ ರಚನೆಯಲ್ಲಿನ ಸಂಘಗಳಿಗೆ ಸಂಬಂಧಪಟ್ಟಂತೆ [1][12, 16, 17, 19ಎ, 20, 27, 27ಎ, 27ಬಿ, 28, 28ಎ, [2][28ಸಿ, 28ಡಿ,][2] 29ಸಿ, 29ಇ, 29ಎಫ್, 29ಜಿ, 29ಎಚ್, 30, 2[30ಬಿ,]2 31, 39ಎ, 39ಎಎ, 56, 57ಎ, 63, 64, 65, 70, 72, 108 ಮತ್ತು

[3][109 ಹಾಗೂ 121ನೇ][3] ಪ್ರಕರಣಗಳ ಉಪಬಂಧಗಳನ್ನು ಹೊರತುಪಡಿಸಿ][1] ಅಧ್ಯಾರೋಹಿ ಪರಿಣಾಮವನ್ನು ಹೊಂದಿರತಕ್ಕದ್ದು.

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

98ಸಿ. ಉಪವಿಧಿಗಳ ಅನುಮೋದನೆ.- (1) ಸಹಕಾರ ಪತ್ತಿನ ರಚನೆಯಲ್ಲಿನ ಸಂಘದ ಉಪವಿಧಿಗಳನ್ನು ಅಥವಾ ಉಪವಿಧಿಗಳಿಗೆ ಮಾಡಿರುವ ಯಾವುವೇ ತಿದ್ದುಪಡಿಗಳನ್ನು, ರಿಜಿಸ್ಟ್ರಾರರು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನೋಂದಣಿ ಮಾಡತಕ್ಕದ್ದು.

(2) ಪ್ರಸ್ತಾವಿತ ಉಪ-ವಿಧಿಗಳು ಅಥವಾ ಉಪವಿಧಿಗಳ ತಿದ್ದುಪಡಿಗಳು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿವೆಯೆಂದು ರಿಜಿಸ್ಟ್ರಾರರಿಗೆ ಮನದಟ್ಟಾದರೆ, ಅವರು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಅದರ ಬಗ್ಗೆ ಕಾರಣಗಳನ್ನು ವಿಧ್ಯುಕ್ತವಾಗಿ ದಾಖಲ್ಮಾಡಿ ಅದನ್ನು ತಿರಸ್ಕರಿಸತಕ್ಕದ್ದು.

[1][**98ಡಿ. ಠೇವಣಿದಾರರಿಗೆ ಸದಸ್ಯತ್ವವನ್ನು ಖಚಿತಪಡಿಸುವುದು.-** (1) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕನಿಷ್ಠ ನಿರಂತರ ಒಂದು ವರ್ಷದ ಅವಧಿಯವರೆಗೆ ಐದು ಸಾವಿರ ರೂಪಾಯಿಗಳ ಕನಿಷ್ಠ ಠೇವಣಿಯನ್ನು ಇಟ್ಟಿರುವ ಪ್ರತಿಯೊಬ್ಬ ವ್ಯಕ್ತಿಯು ಅಥವಾ ಪ್ರತಿಯೊಂದು ಗುಂಪು (ಸಮೂಹ), ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಷೇರು ಬಂಡವಾಳವನ್ನು ವಂತಿಕೆಯಾಗಿ ನೀಡಿ ಆ ಸಂಘದ ಸದಸ್ಯನಾಗತಕ್ಕದ್ದು ಮತ್ತು ಪೂರ್ಣ ಸದಸ್ಯತ್ವವನ್ನು ಮತ್ತು ಮತ ನೀಡುವ ಹಕ್ಕುಗಳನ್ನು ಹೊಂದಿರತಕ್ಕದ್ದು:

ಪರಂತು, ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ, ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಮೊತ್ತದ ಠೇವಣಿ ಹೊಂದಿರುವ ವ್ಯಕ್ತಿಯು ನಾಮ ಮಾತ್ರ ಸದಸ್ಯನಾಗಿ ಇರತಕ್ಕದ್ದು.

(2) ಸಾಲ ಪಡೆದುಕೊಳ್ಳುವ ಒಂದು ಗುಂಪು (ಸಮೂಹ), ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾದ ನಿಯಮಿಸಿದ ಷೇರು ಬಂಡವಾಳವನ್ನು ವಂತಿಗೆ ನೀಡುವ ಮೂಲಕ 16ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ

ಸಂಘದ ಸದಸ್ಯನಾಗತಕ್ಕದ್ದು ಮತ್ತು ಮತದಾನದ ಪೂರ್ಣ ಹಕ್ಕುಗಳನ್ನು ಹೊಂದಿರತಕ್ಕದ್ದು.

(3) 16ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸದಸ್ಯನಾಗಿ ಪ್ರವೇಶ ಪಡೆದ ಪ್ರತಿಯೊಂದು ಠೇವಣಿದಾರರ ಗುಂಪು (ಸಮೂಹ) ಅಥವಾ ಸಾಲ ಪಡೆದುಕೊಳ್ಳುವವರ ಗುಂಪು (ಸಮೂಹ), ಆ ಗುಂಪಿನಿಂದ ನಾಮ ನಿರ್ದೇಶಿತನಾದ ಒಬ್ಬ ಪ್ರತಿನಿಧಿಯ ಮೂಲಕ ಮತ ನೀಡುವ ಹಕ್ಕು ಹೊಂದಿರತಕ್ಕದ್ದು.][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ ಸೇರಿಸಲಾಗಿದೆ, ಆದರೆ 29.06.2010ರವರೆಗೂ ಸಹ ಜಾರಿಗೊಳಿಸಿರುವುದಿಲ್ಲ

98ಇ. ಎಲ್ಲಾ ಹಣಕಾಸು ಮತ್ತು ಆಂತರಿಕ ಆಡಳಿತ ವಿಷಯಗಳಲ್ಲಿ ಸ್ವಾತಂತ್ರ್ಯ.- ಸಹಕಾರ ಪತ್ತಿನ ವ್ಯವಸ್ಥೆಯ (ರಚನೆಯ) ಅಡಿಯಲ್ಲಿನ ಸಹಕಾರ ಸಂಘವು, ತನ್ನ ಹಣಕಾಸು ಮತ್ತು ಆಂತರಿಕ ಆಡಳಿತವನ್ನು ನಿರ್ಧರಿಸಲು ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು, ಅವು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:-

(i) ಠೇವಣಿಗಳ ಮತ್ತು ಸಾಲಗಳ ಮೇಲಿನ ಬಡ್ಡಿದರಗಳು:

ಪರಂತು, ರಾಜ್ಯ ಸಹಕಾರ ಬ್ಯಾಂಕಿನ ಮತ್ತು ಕೇಂದ್ರ ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ, ಬಡ್ಡಿಯ ದರಗಳು ರಿಸರ್ವ್ ಬ್ಯಾಂಕ್ ಹೊರಡಿಸಿದ ಮಾರ್ಗದರ್ಶಿಕೆ ಗಳಿಗೆ ಅನುಗುಣವಾಗಿರತಕ್ಕದ್ದು;

(ii) ಸಾಲ ಪಡೆದುಕೊಳ್ಳುವುದು, ಹಣ ಹೂಡಿಕೆ, ತನ್ನ ಹೆಚ್ಚುವರಿ ನಿಧಿಯನ್ನು ಠೇವಣಿ ಇಡುವುದು, ಸಾಲ ನೀಡಿಕೆ ನೀತಿಗಳು (ವೈಯಕ್ತಿಕ ಸಾಲಗಳೂ ಒಳಗೊಂಡಂತೆ) ಮತ್ತು ಇತರ ವ್ಯವಹಾರ ನೀತಿಗಳು;

(iii) [1][xxx][1]

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(iv) ಆಂತರಿಕ ತಪಾಸಣೆಗಳು ಮತ್ತು ನಿಯಂತ್ರಣ ವ್ಯವಸ್ಥೆ, ಲೆಕ್ಕ ಪರಿಶೋಧಕರ ನೇಮಕ, ಲೆಕ್ಕಪರಿಶೋಧನೆಗಾಗಿ ಪರಿಹಾರ ಮತ್ತು ಇತರ ಆಂತರಿಕ ಆಡಳಿತ ವಿಷಯಗಳು; ಮತ್ತು

(v) ಸಂಘದ ಮತ್ತು ಅದರ ಸದಸ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಭಾರತದ ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುವ ಯಾವುದೇ ಹಣಕಾಸು ಸಂಸ್ಥೆಯಿಂದ ಸಾಲ ಪಡೆದುಕೊಳ್ಳುವುದು.

98ಎಫ್. ರಾಜ್ಯ ಸರ್ಕಾರದ ವಂತಿಗೆಯ ಮೇಲೆ ಪರಿಮಿತಿ.- ಸಹಕಾರ ಪತ್ತಿನ ವ್ಯವಸ್ಥೆಯ ಅಡಿಯಲ್ಲಿನ ಯಾವುದೇ ಸಂಘದ ಷೇರು ಬಂಡವಾಳಕ್ಕೆ ಸರ್ಕಾರ ನೀಡುವ ವಂತಿಗೆ ಹಣವು ಅಂಥ ಸಂಘದ ಒಟ್ಟು ಸಂದಾಯಿತ ಷೇರು ಬಂಡವಾಳದ ಶೇಕಡ ಇಪ್ಪತ್ತೈದರಷ್ಟನ್ನು ಮೀರತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರವು, ತಾನು ನೀಡುವ ವಂತಿಗೆ ಹಣವನ್ನು ಮತ್ತಷ್ಟು ಕಡಿಮೆಮಾಡಬಹುದು ಅಥವಾ ಅಂಥ ಸಂಘವು ರಾಜ್ಯ ಸರ್ಕಾರದ ವಂತಿಗೆ ಹಣವನ್ನು ಮತ್ತಷ್ಟು ಮರುಸಂದಾಯ ಮಾಡುವ ಆಯ್ಕೆಯ ಅವಕಾಶ ಹೊಂದಿರತಕ್ಕದ್ದು ಮತ್ತು ಸಂಘವು ರಾಜ್ಯ ಸರ್ಕಾರದ ವಂತಿಗೆ ಹಣವನ್ನು ಮರುಸಂದಾಯ ಮಾಡಲು ಉದ್ದೇಶಿಸಿದರೆ, ಅದು ಹಾಗೆ ಮಾಡುವುದನ್ನು ರಾಜ್ಯ ಸರ್ಕಾರವು ಅಡ್ಡಿಪಡಿಸತಕ್ಕದ್ದಲ್ಲ.

98ಜಿ. ಸರ್ಕಾರದ ನಾಮನಿರ್ದೇಶಿತರ ಸಂಖ್ಯೆಯ ಮೇಲೆ ನಿರ್ಬಂಧ.- (1) ಸರ್ಕಾರವು, ಷೇರು ಬಂಡವಾಳಕ್ಕೆ ವಂತಿಗೆ ಹಣವನ್ನು ನೀಡಿರುವಲ್ಲಿ, ರಾಜ್ಯ ಸಹಕಾರ ಬ್ಯಾಂಕಿನ ಅಥವಾ ಕೇಂದ್ರ ಸಹಕಾರ ಬ್ಯಾಂಕಿನ ಅಥವಾ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಅಥವಾ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸಮಿತಿಯಲ್ಲಿ ರಾಜ್ಯ ಸರ್ಕಾರದ ಕೇವಲ ಒಬ್ಬ ನಾಮನಿರ್ದೇಶಿತನು ಇರತಕ್ಕದ್ದು.

(2) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ರಾಜ್ಯ ಸರ್ಕಾರವು ವಂತಿಗೆಹಣವನ್ನು ನೀಡಿರಲಿ ಅಥವಾ ನೀಡಿಲ್ಲದಿರಲಿ, ಅಂಥ ಸಂಘದ ಸಮಿತಿಯಲ್ಲಿ ರಾಜ್ಯ ಸರ್ಕಾರದ ಯಾವೊಬ್ಬ ನಾಮ ನಿರ್ದೇಶಿತನು ಇರತಕ್ಕದ್ದಲ್ಲ.

98ಎಚ್. ಒಕ್ಕೂಟ ಸಂಘದೊಂದಿಗೆ ಸಂಯೋಜನೆಗೊಳ್ಳುವ ಅಥವಾ ಸಂಯೋಜನೆಯನ್ನು ಹಿಂತೆಗೆದುಕೊಳ್ಳುವ ಸ್ವಾತಂತ್ರ್ಯ.- (1) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ಸಹಕಾರ ಪತ್ತಿನ ರಚನೆಯಲ್ಲಿನ ಸಂಘವು, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಉಪಬಂಧಗಳ ಅಡಿಯಲ್ಲಿ ನೋಂದಾಯಿತವಾದ ಒಕ್ಕೂಟ ಸಂಘದ ಅಥವಾ ಸೆಕೆಂಡರಿ ಸಂಘದ ಸದಸ್ಯನಾಗಲು ಅರ್ಹವಾಗಿರತಕ್ಕದ್ದು.

(2) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಡಿಯಲ್ಲಿ ನೋಂದಾಯಿತವಾದ ಸಹಕಾರಿಯು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ಒಕ್ಕೂಟ ಸಂಘದ ಅಥವಾ ಸೆಕೆಂಡರಿ ಸಂಘದ ಸದಸ್ಯನಾಗಬಹುದು.

(3) ಸಹಕಾರ ಪತ್ತಿನ ರಚನೆ ಅಡಿಯಲ್ಲಿನ ಸಹಕಾರ ಸಂಘವು, ಒಕ್ಕೂಟ ಸಂಘದ ಅಥವಾ ಸೆಕೆಂಡರಿ ಸಂಘದ ಆರ್ಥಿಕ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಂಡು ತನ್ನ ಆಯ್ಕೆಯಂತೆ ಯಾವುದೇ ಒಕ್ಕೂಟ ಸಂಘದೊಂದಿಗೆ ಅಥವಾ ಸೆಕೆಂಡರಿ ಸಂಘದೊಂದಿಗೆ ಸಂಯೋಜನೆಗೊಳ್ಳುವ ಅಥವಾ ಸಂಯೋಜನೆಯನ್ನು ಹಿಂತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು:

ಪರಂತು, ಒಕ್ಕೂಟ ಸಂಘದೊಂದಿಗೆ ಅಥವಾ ಸೆಕೆಂಡರಿ ಸಂಘದೊಂದಿಗೆ ಸಂಯೋಜನೆಗೊಳ್ಳುವುದನ್ನು ಅಥವಾ ಅದರೊಂದಿಗಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದನ್ನು ಅನುಮೋದಿಸುವ ನಿರ್ಣಯವನ್ನು, ಆ ಉದ್ದೇಶಕ್ಕಾಗಿ ನಡೆಯುವ ವಾರ್ಷಿಕ ಮಹಾಸಭೆಯಲ್ಲಿ, ಒಟ್ಟು ಸದಸ್ಯರ ನಾಲ್ಕನೇ ಮೂರರಷ್ಟು ಬಹುಮತದೊಂದಿಗೆ ಅಂಗೀಕರಿಸತಕ್ಕದ್ದು:

ಮತ್ತೂ ಪರಂತು, ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಮುಂಚೆ, ಆ ಸಂಘವು, ಯಾವ ಸಂಘದಿಂದ ಸಂಯೋಜನೆಯನ್ನು ಹಿಂತೆಗೆದುಕೊಳ್ಳುತ್ತಿದೆಯೋ ಆ ಸಂಘಕ್ಕೆ ತನ್ನ ಹಣಕಾಸಿನ ಹೊಣೆ ಯಾವುದಾದರೂ ಇದ್ದರೆ ಅದನ್ನು ತೀರಿಸತಕ್ಕದ್ದು.

98ಐ. ಕಾರ್ಯಾಚರಣೆಯ ಪ್ರದೇಶಕ್ಕೆ ಸಂಬಂಧಪಟ್ಟಂತೆ ನಿರ್ಬಂಧ.- ಸಹಕಾರ ಪತ್ತಿನ ರಚನೆಯ ಅಡಿಯಲ್ಲಿನ ಸಹಕಾರ ಸಂಘವು, ಯಾವುದೇ ಹಂತದಲ್ಲಿ ಪ್ರವೇಶಿಸುವ ಮತ್ತು ನಿರ್ಗಮಿಸುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು ಮತ್ತು ತನ್ನ ವ್ಯವಹಾರ ಕಾರ್ಯಾಚರಣೆಗಳನ್ನು ನಡೆಸಲು ಭೌಗೋಳಿಕ ಗಡಿಗಳ ಯಾವುದೇ ಕಡ್ಡಾಯ ನಿರ್ಬಂಧಗಳು ಇರತಕ್ಕದ್ದಲ್ಲ.

98ಜೆ. ಹಣ ಹೂಡಿಕೆಯ ಮತ್ತು ಠೇವಣಿಯ ಸ್ವಾತಂತ್ರ್ಯ.- ಸಹಕಾರ ಪತ್ತಿನ ರಚನೆಯ ಅಡಿಯಲ್ಲಿನ ಸಹಕಾರ ಸಂಘವು, ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳು, ಯಾವುದಾದರು ಇದ್ದರೆ, ಅವುಗಳಿಗೆ ಒಳಪಟ್ಟು, ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುತ್ತಿರುವ ಯಾವುದೇ ಬ್ಯಾಂಕಿನಲ್ಲಿ ಅಥವಾ ಹಣಕಾಸು ಸಂಸ್ಥೆಯಲ್ಲಿ

ತನ್ನ ನಿಧಿಯನ್ನು ಹೂಡಿಕೆ ಮಾಡಬಹುದು ಅಥವಾ ಠೇವಣಿ ಇಡಬಹುದು, ಆದರೆ ಆ ಸಹಕಾರ ಸಂಘವು, ತಾನು ಸಂಯೋಜನೆಗೊಂಡಿರುವಂಥ ಒಕ್ಕೂಟ ಸಂಘದಲ್ಲಿ ಹೂಡಿಕೆ ಮಾಡುವ ಅಥವಾ ಠೇವಣಿ ಇಡುವ ಅಗತ್ಯವಿಲ್ಲ.

98ಕೆ. ಸಾಲ ಪಡೆದುಕೊಳ್ಳುವ ಸ್ವಾತಂತ್ರ್ಯ.- ಸಹಕಾರ ಪತ್ತಿನ ರಚನೆಯ ಅಡಿಯಲ್ಲಿನ ಸಹಕಾರ ಸಂಘವು, ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುವ ಯಾವುದೇ ಬ್ಯಾಂಕಿನಿಂದ ಅಥವಾ ಹಣಕಾಸು ಸಂಸ್ಥೆಯಿಂದ ಸಾಲಗಳನ್ನು ಪಡೆಯಬಹುದು ಮತ್ತು ರಾಷ್ಟ್ರೀಯ ಬ್ಯಾಂಕಿನಿಂದ ಅಥವಾ ಯಾವುದೇ ಇತರ ಹಣಕಾಸು ಸಂಸ್ಥೆಯಿಂದ ನೇರವಾಗಿ ಅಥವಾ ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುವ ಹಣಕಾಸು ಸಂಸ್ಥೆಯ ಮುಖಾಂತರ ಪುನರ್-ಹಣಕಾಸನ್ನು ಪಡೆದುಕೊಳ್ಳಬಹುದು, ಆದರೆ ಅದು ಸಂಯೋಜನೆಗೊಂಡಿರುವಂಥ ಒಕ್ಕೂಟ ಸಂಘದಿಂದ ಅವುಗಳನ್ನು ತೆಗೆದುಕೊಳ್ಳುವುದು ಅಗತ್ಯವಲ್ಲ.

98ಎಲ್. ಲಾಭಾಂಶದ ಸಂದಾಯಕ್ಕೆ ಮಾರ್ಗಸೂಚಿಗಳು.- *ರಿಜಿಸ್ಟ್ರಾರನು, ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿ ರೂಪಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಲಾಭಾಂಶವನ್ನು ಸಂದಾಯ ಮಾಡಬಹುದು.*

98ಎಂ. ಯಾವುದೇ ನಿಧಿಗೆ ವಂತಿಗೆ.- ರಿಜಿಸ್ಟ್ರಾರನು, ಸಹಕಾರ ಪತ್ತಿನ ವ್ಯವಸ್ಥೆಯಲ್ಲಿಯ (ರಚನೆಯಲ್ಲಿಯ) ಯಾವುದೇ ಸಹಕಾರ ಸಂಘಕ್ಕೆ, ತನ್ನ ನಿವ್ವಳ ಮೌಲ್ಯವನ್ನು ಅಥವಾ ಸಂಚಿತ ನಿಧಿಯನ್ನು ಅಭಿವೃದ್ಧಿಪಡಿಸಲು ಅಗತ್ಯಪಡಿಸಲಾಗಿರುವುದನ್ನು ಹೊರತುಪಡಿಸಿ, ಯಾವುದೇ ನಿಧಿಗೆ ವಂತಿಗೆ ನೀಡುವಂತೆ ನಿರ್ದೇಶನ ನೀಡುವ ಯಾವುದೇ ಅಧಿಕಾರ ಹೊಂದಿರತಕ್ಕದ್ದಲ್ಲ.

98ಎನ್. ಸಹಕಾರ ಪತ್ತಿನ ರಚನೆಯ ಸಮಿತಿಯ ಸದಸ್ಯರ ಅನರ್ಹತೆ.- ಯಾವೊಬ್ಬ ವ್ಯಕ್ತಿಯು,-

(i) ಕೇಂದ್ರ ಸಹಕಾರ ಬ್ಯಾಂಕಿನ ಅಥವಾ ರಾಜ್ಯ ಸಹಕಾರ ಬ್ಯಾಂಕಿನ ಅಥವಾ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸಮಿತಿಯಲ್ಲಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಅಥವಾ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕನ್ನು ಹೊರತುಪಡಿಸಿದ ಒಂದು ಸಂಘವನ್ನು ಪ್ರತಿನಿಧಿಸುವ ವ್ಯಕ್ತಿಯು, ಅಂಥ ಯಾವ ಸಂಘವು

ಸುಸ್ತಿದಾರನಾಗಿರುವ ಬಗ್ಗೆ ಸಂಬಂಧಪಟ್ಟ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯು ತಿಳಿಸಿದಾಗ ಅಂಥ ಬ್ಯಾಂಕಿಗೆ ಸಂದಾಯಗಳನ್ನು ಮಾಡಲು ತಪ್ಪಿದ್ದರೆ;

(ii) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಥವಾ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆÀ ಹೊಣೆಗಳನ್ನು ತೀರಿಸಲು ತಪ್ಪಿರುವ ವ್ಯಕ್ತಿಯಾಗಿದ್ದರೆ, ಅಥವಾ ಕೇಂದ್ರ ಸಹಕಾರ ಬ್ಯಾಂಕಿನ ಅಥವಾ ರಾಜ್ಯ ಸಹಕಾರ ಬ್ಯಾಂಕಿನ ಅಥವಾ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸಮಿತಿಯಲ್ಲಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಅಥವಾ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕನ್ನು ಪ್ರತಿನಿಧಿಸುವ ವ್ಯಕ್ತಿಯು, ಅಂಥ ಸಂಘದ ಸುಸ್ತಿದಾರನಾಗಿರುವ ಬಗ್ಗೆ ಸಂಬಂಧಪಟ್ಟ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯು ತಿಳಿಸಿದಾಗ, ಅಂಥ ಬ್ಯಾಂಕಿಗೆ ಸಂದಾಯಗಳನ್ನು ಮಾಡಲು ತಪ್ಪಿದ್ದರೆ;

(iii) ಒಬ್ಬ ವ್ಯಕ್ತಿಯು-

(ಎ) ಯಾವ ಸಂಘದ ಸಮಿತಿಯನ್ನು ರದ್ದುಗೊಳಿಸಲಾಗಿದೆಯೋ ಆ ಸಂಘವನ್ನು ಪ್ರತಿನಿಧಿಸುತ್ತಿದ್ದರೆÀ, ಅಥವಾ

(ಬಿ) ಅಂಥ ಸಂಘದ ಸದಸ್ಯನಾಗಿಲ್ಲದಿದ್ದರೆ, ಅಥವಾ

(ಸಿ) ನಾಮ ನಿರ್ದೇಶನ ಪತ್ರವನ್ನು ದಾಖಲ್ಮಾಡುವ ದಿನಾಂಕದಂದು ಅವನು ತೆಗೆದುಕೊಂಡಿದ್ದ ಸಾಲದ ಸಂಬಂಧದಲ್ಲಿ ಆ ಸಂಘಕ್ಕೆ ಅಥವಾ ಯಾವುದೇ ಇತರ ಸಹಕಾರ ಸಂಘಕ್ಕೆ ಸುಸ್ತಿದಾರನಾಗಿದ್ದರೆ ಅಥವಾ ಸಂಘದ ಯಾವುದೇ ಬಾಕಿಗಳನ್ನು ಉಳಿಸಿಕೊಂಡಿದ್ದರೆÀ, ಅಥವಾ

(ಡಿ) ಸಂಘದೊಂದಿಗೆ ಮಾಡಿಕೊಳ್ಳಲಾಗಿರುವ ಅಸ್ತಿತ್ವದಲ್ಲಿರುವ ಯಾವುದೇ ಕರಾರಿನಲ್ಲಿ ಅಥವಾ ಸಂಘವು ಮಾರಾಟ ಮಾಡಿರುವ ಅಥವಾ ಖರೀದಿಸಿರುವ ಯಾವುದೇ ಸ್ವತ್ತಿನಲ್ಲಿ ಅಥವಾ ಸಂಘದಲ್ಲಿ ಮಾಡಿರುವ ಯಾವುದೇ ಹಣ ಹೂಡಿಕೆಯನ್ನು ಅಥವಾ ಸಂಘದಿಂದ ತೆಗೆದುಕೊಂಡಿರುವ ಯಾವುದೇ ಸಾಲವನ್ನು ಹೊರತುಪಡಿಸಿ ಸಂಘದ ಯಾವುದೇ ಇತರ ವ್ಯವಹಾರದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ಹಿತಾಸಕ್ತಿಯನ್ನು ಹೊಂದಿದ್ದರೆ, ಅಥವಾ

(ಇ) ಯಾವುದೇ ಸಹಕಾರ ಸಂಘಕ್ಕೆ ಸಂಬಂಧಪಟ್ಟಂತೆ 69ನೇ ಪ್ರಕರಣದ ಅಡಿಯಲ್ಲಿ ಅಧಿಭಾರದ ವಸೂಲಿಯ ಸಂಬಂಧದಲ್ಲಿ ಆತನ ವಿರುದ್ಧ ಯಾವುದೇ ವ್ಯವಹರಣೆಯು ಇತ್ಯರ್ಥದಲ್ಲಿದ್ದರೆ, ಅಥವಾ

(ಎಫ್) ಯಾವುದೇ ಸಹಕಾರ ಸಂಘದ ಯಾವುವೇ ವ್ಯವಹರಣೆಗೆ ಸಂಬಂಧಪಟ್ಟಂತೆ ಆತನ ವಿರುದ್ಧ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿರುವ ಕ್ರಿಮಿನಲ್ ವ್ಯವಹರಣೆಗಳು ಇತ್ಯರ್ಥದಲ್ಲಿದ್ದರೆ,

- ಆ ವ್ಯಕ್ತಿಯಾಗಿದ್ದರೆ, ಅವನನ್ನು ಸಹಕಾರ ಪತ್ತಿನ ರಚನೆಯಲ್ಲಿನ ಸಂಘದ ಸಮಿತಿಯ ಸದಸ್ಯನಾಗಿ ಚುನಾಯಿಸತಕ್ಕದ್ದಲ್ಲ, ನಾಮ ನಿರ್ದೇಶನ ಮಾಡತಕ್ಕದ್ದಲ್ಲ ಅಥವಾ ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳತಕ್ಕದ್ದಲ್ಲ ಅಥವಾ ಸದಸ್ಯನಾಗಿ ಮುಂದುವರೆಯಲು ಅವಕಾಶ ನೀಡತಕ್ಕದ್ದಲ್ಲ.

98ಒ. ಹೊಸ ಸಮಿತಿಯ ಚುನಾವಣೆಗೆ 20ನೇ ಪ್ರಕರಣ ಮತ್ತು 20ಸಿ ಪ್ರಕರಣದ ಅನ್ವಯ.- ಸಹಕಾರ ಪತ್ತಿನ ರಚನೆಯಲ್ಲಿಯ ಸಂಘದ ಹೊಸ ಸಮಿತಿಯ ಚುನಾವಣೆಗೆ 20ನೇ ಪ್ರಕರಣದ ಮತ್ತು 20ಸಿ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

98ಪಿ. [1][xxx][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

98ಕ್ಯೂ. ಚುನಾವಣೆಗಳು.- (1) ಸಹಕಾರ ಪತ್ತಿನ ವ್ಯವಸ್ಥೆಯ ಅಡಿಯಲ್ಲಿನ ಸಹಕಾರ ಸಂಘದ ಸಮಿತಿಗೆ ಚುನಾವಣೆಯನ್ನು, [1][39ಎ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ][1] ನಡೆಸತಕ್ಕದ್ದು ಮತ್ತು ಅಂಥ ಸಹಕಾರ ಸಂಘದ ಸಮಿತಿಯನ್ನು ರದ್ದುಗೊಳಿಸಿದ ಸಂದರ್ಭದಲ್ಲಿ, ಚುನಾವಣೆಯನ್ನು, ರದ್ದುಗೊಳಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ನಡೆಸತಕ್ಕದ್ದು:

1. 2011ರ ಅಧಿನಿಯಮ ಸಂಖ್ಯೆ 4ರ ಮೂಲಕ 10.02.2011 ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂ: ಸಿಒ 24 ಸಿಎಲ್ಎಂ 2011ರ ಮೂಲಕ ಸೇರಿಸಲಾಗಿದೆ.

ಪರಂತು, ನಿಯಂತ್ರಣ ಮೀರಿದ ಸಂದರ್ಭಗಳಲ್ಲಿ, ರದ್ದುಗೊಳಿಸಿದ ದಿನಾಂಕದಿಂದ ಆರು ತಿಂಗಳುಗಳನ್ನು ಮೀರದ ಅವಧಿಯೊಳಗಾಗಿ ಅಂಥ ಚುನಾವಣೆಗಳನ್ನು ನಡೆಸಲು ರಾಜ್ಯ ಸರ್ಕಾರವು, ಅವಕಾಶ ನೀಡಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರದ್ದುಗೊಳಿಸಲಾಗಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಮಿತಿಯ ಒಬ್ಬ ಸದಸ್ಯನು, ರದ್ದುಗೊಳಿಸಿದ ದಿನಾಂಕದಿಂದ ನಾಲ್ಕು ನಿರಂತರ ವರ್ಷಗಳ ಅವಧಿಗೆ ಸಮಿತಿಯ ಸದಸ್ಯನಾಗಿ ಪುನ: ಚುನಾಯಿತನಾಗಲು, ಪುನರ್‌ನೇಮಕಗೊಳ್ಳಲು, ಪುನರ್ ನಾಮನಿರ್ದೇಶಿತನಾಗಲು ಅಥವಾ ಪುನ: ಸಹ-ಸದಸ್ಯನಾಗಲು ಅರ್ಹನಾಗಿರತಕ್ಕದ್ದಲ್ಲ.

98ಆರ್. ವಿವೇಚನಾಯುಕ್ತ (ಪ್ರುಡೆನ್ಸಿಯಲ್) ಮಾನದಂಡಗಳು.- ಬಂಡವಾಳ ಹಾಗೂ ನಷ್ಟಸಂಭವವನ್ನು ಸರಿದೂಗಿಸುವ ಆಸ್ತಿಗಳು (ರಿಸ್ಕ್‌ವೇಟೆಡ್ ಅಸೆಟ್ಸ್) ಒಳಗೊಂಡಂತೆ, ವಿವೇಚನಾಯುಕ್ತ ಮಾನದಂಡಗಳನ್ನು, ರಿಜಿಸ್ಟ್ರಾರನು, ರಾಷ್ಟ್ರೀಯ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಲುವಾಗಿ ನಿಯಮಿಸತಕ್ಕದ್ದು.

98ಎಸ್. ನಿರ್ದೇಶಕರು ಮತ್ತು ಕಾರ್ಯನಿರ್ವಹಣಾಧಿಕಾರಿಗಳನ್ನು ತೆಗೆದುಹಾಕುವುದು.- (1) ರಾಜ್ಯ ಸಹಕಾರ ಬ್ಯಾಂಕಿನ ಅಥವಾ ಕೇಂದ್ರ ಸಹಕಾರ ಬ್ಯಾಂಕುಗಳ ಸಮಿತಿಯ ಸದಸ್ಯರು ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ, ರಿಸರ್ವ್ ಬ್ಯಾಂಕು ನಿಯಮಿಸಿದ ಮಾನದಂಡಗಳನ್ನು ಈಡೇರಿಸತಕ್ಕದ್ದು.

(2) ರಿಸರ್ವ್‌ಬ್ಯಾಂಕ್ ಗೊತ್ತುಪಡಿಸಿದ ಮಾನದಂಡಗಳನ್ನು ಈಡೇರಿಸದ, ರಾಜ್ಯ ಸಹಕಾರ ಬ್ಯಾಂಕು ಅಥವಾ ಕೇಂದ್ರ ಸಹಕಾರ ಬ್ಯಾಂಕಿನ ಸದಸ್ಯನು ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹುದ್ದೆಯನ್ನು ಹೊಂದಿರುವ ಒಬ್ಬ ವ್ಯಕ್ತಿಯು, ಅಂಥ ಹುದ್ದೆಗೆ ಅನರ್ಹನೆಂದು ಪರಿಗಣಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಹುದ್ದೆ ಧಾರಣ ಮಾಡಿದ್ದರೆ, ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಹಾಗೆ ಸಲಹೆ ನೀಡಿದ ಎರಡು ತಿಂಗಳೊಳಗೆ, ರಿಜಿಸ್ಟ್ರಾರನು ಅಥವಾ ಸಂದರ್ಭಾನುಸಾರ ನೇಮಕಾತಿ ಪ್ರಾಧಿಕಾರವು, ಆತನನ್ನು ತೆಗೆದುಹಾಕತಕ್ಕದ್ದು. ಆದಾಗ್ಯೂ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2009ರ ಪ್ರಾರಂಭದ ದಿನಾಂಕದಂದು ಅಂಥ ಸದಸ್ಯರಾಗಿ ತಮ್ಮ ಹುದ್ದೆಯನ್ನು ಧಾರಣ ಮಾಡಿರುವ ಸಮಿತಿಯ ಹಾಲಿ ಚುನಾಯಿತ ಸದಸ್ಯರು, ತಮ್ಮ ಉಳಿದ ಅವಧಿಯು ಮುಕ್ತಾಯವಾಗುವವರೆಗೂ ತಮ್ಮ ಪದಗಳನ್ನು ಧಾರಣಮಾಡಿರುವುದು ಮುಂದುವರೆಸತಕ್ಕದ್ದು.

[1][98ಟಿ. xxx][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

98ಯು. ಲೆಕ್ಕಗಳ ಲೆಕ್ಕ ಪರಿಶೋಧನೆ.- ರಾಜ್ಯ ಸಹಕಾರಿ ಬ್ಯಾಂಕು ಮತ್ತು ಕೇಂದ್ರ ಸಹಕಾರಿ ಬ್ಯಾಂಕು, ಲೆಕ್ಕ ಪರಿಶೋಧನೆ ಮಾಡಿಸುವಂತೆ ಮಾಡತಕ್ಕದ್ದು ಮತ್ತು ರಾಷ್ಟ್ರೀಯ ಬ್ಯಾಂಕಿನಿಂದ ಅನುಮೋದಿತವಾದ ಪಟ್ಟಿಯಿಂದ ಅದು ಆಯ್ಕೆ ಮಾಡಿದ ಚಾರ್ಟರ್ಡ್ ಅಕೌಂಟೆಂಟ್‌ರಿಂದ ತನ್ನ ಲೆಕ್ಕಗಳನ್ನು ಪ್ರಮಾಣೀಕರಿಸಿಕೊಳ್ಳತಕ್ಕದ್ದು.

98ವಿ. ಸಹಕಾರಿ ಪತ್ತಿನ ರಚನೆಯ ವಿಶೇಷ ಲೆಕ್ಕ ಪರಿಶೋಧನೆ.- ಸಹಕಾರಿ ಲೆಕ್ಕ ಪರಿಶೋಧನೆಯ ನಿರ್ದೇಶಕರು, ರಿಸರ್ವ್ ಬ್ಯಾಂಕು ಗೊತ್ತುಪಡಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ, ರಿಸರ್ವ್ ಬ್ಯಾಂಕಿನ ಕೋರಿಕೆಯ ಮೇರೆಗೆ, ರಾಜ್ಯ ಸಹಕಾರಿ ಬ್ಯಾಂಕು ಅಥವಾ ಕೇಂದ್ರ ಸಹಕಾರಿ ಬ್ಯಾಂಕುಗಳ ವಿಶೇಷ ಲೆಕ್ಕ ಪರಿಶೋಧನೆಯನ್ನು ಮಾಡಿಸುವ ವ್ಯವಸ್ಥೆ ಮಾಡತಕ್ಕದ್ದು ಮತ್ತು ವಿಶೇಷ ಲೆಕ್ಕ ಪರಿಶೋಧನೆಯ ವರದಿಯ ಪ್ರತಿಯನ್ನು ರಿಸರ್ವ್ ಬ್ಯಾಂಕಿಗೆ ಮತ್ತು ರಾಷ್ಟ್ರೀಯ ಬ್ಯಾಂಕಿಗೆ, ನಿಗದಿಪಡಿಸಲಾದ ಅವಧಿಯೊಳಗೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದ ಉಪಬಂಧಗಳು, ಅಂಥ ವಿಶೇಷ ಲೆಕ್ಕಪರಿಶೋಧನೆಗೂ ಸಹಾ ಅನ್ವಯವಾಗತಕ್ಕದ್ದು.

98ಡಬ್ಲ್ಯೂ. 'ಬ್ಯಾಂಕು' ಪದದ ಬಳಕೆಯ ನಿರ್ಬಂಧ.- ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) ಅಡಿಯಲ್ಲಿ ಬ್ಯಾಂಕು ಎಂದು ಕಾರ್ಯನಿರ್ವಹಿಸಲು ಅನುಮತಿ ಪಡೆದವುಗಳನ್ನು ಹೊರತುಪಡಿಸಿ, ಯಾವುದೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಥವಾ ಅದರ ಒಕ್ಕೂಟ ಅಥವಾ ಸಂಘವು, ತನ್ನ ನೋಂದಾಯಿತ ಹೆಸರಿನಲ್ಲಿ 'ಬ್ಯಾಂಕು', 'ಬ್ಯಾಂಕರು' , 'ಬ್ಯಾಂಕಿಂಗ್' ಅಥವಾ 'ಬ್ಯಾಂಕು' ಎಂಬ ಪದದ ಯಾವುದೇ ಇತರ ವ್ಯುತ್ಪನ್ನ ಪದದೊಡನೆ ನೋಂದಾಯಿತಗೊಳ್ಳತಕ್ಕದ್ದಲ್ಲ ಅಥವಾ ಅದನ್ನೇ ತನ್ನ ಹೆಸರಿನ ಭಾಗವಾಗಿ ಬಳಸತಕ್ಕದ್ದಲ್ಲ:

ಪರಂತು, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2009ರ ಪ್ರಾರಂಭಕ್ಕೆ ಮೊದಲು ಬ್ಯಾಂಕಿಂಗ್ ನಿಯಂತ್ರುನ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) ಅಡಿಯಲ್ಲಿ ಬ್ಯಾಂಕು ಎಂಬುದಾಗಿ ಕಾರ್ಯ ನಿರ್ವಹಿಸಲು ಅನುಮತಿ

ಪಡೆದವುಗಳನ್ನು ಹೊರತುಪಡಿಸಿ, ಯಾವುದೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಥವಾ ಅದರ ಒಕ್ಕೂಟ ಅಥವಾ ಸಂಘವು, 'ಬ್ಯಾಂಕು' ಎಂಬ ಪದದೊಂದಿಗೆ ನೋಂದಾಯಿತವಾಗಿದ್ದಲ್ಲಿ ಅಥವಾ ತನ್ನ ಹೆಸರಿನ ಭಾಗವಾಗಿ ಯಾವುದೇ ಅದರ ವ್ಯುತ್ಪನ್ನ ಪದದೊಡನೆ ತನ್ನ ಹೆಸರಿನ ಭಾಗವಾಗಿ ಅದನ್ನೇ ಬಳಸುತ್ತಿದ್ದಲ್ಲಿ, ಅಂಥ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳುಗಳೊಳಗೆ, ಅದರ ಹೆಸರಿನೊಂದಿಗೆ 'ಬ್ಯಾಂಕು' ಪದವನ್ನು ಅಥವಾ ಅದರ ವ್ಯುತ್ಪನ್ನ ಪದವು ಯಾವುದಾದರೂ ಇದ್ದಲ್ಲಿ, ಅದನ್ನು ತೆಗೆದುಹಾಕಿ ಅದರ ಹೆಸರನ್ನು ಬದಲಾಯಿಸತಕ್ಕದ್ದು:

ಮತ್ತೂ ಪರಂತು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮೇಲಿನ ಉಪಬಂಧಗಳನ್ನು ಪಾಲಿಸಲು ಯಾವುದೇ ಸಹಕಾರ ಸಂಘವು ತಪ್ಪಿದಲ್ಲಿ, ರಿಜಿಸ್ಟ್ರಾರನು, ಅಂಥ ಸಂಘವನ್ನು ಕೂಡಲೇ ಸಮಾಪನಗೊಳಿಸಲು ಆದೇಶಿಸತಕ್ಕದ್ದು.

98ಎಕ್ಸ್. ರಿಸರ್ವ್ ಬ್ಯಾಂಕಿನ ನಿಯಂತ್ರಕ ನಿಯಮನಗಳ ಅನುಷ್ಠಾನ.- (1) ರಿಜಿಸ್ಟ್ರಾರನು, ರಿಸರ್ವ್ ಬ್ಯಾಂಕಿನಿಂದ ಸಲಹೆಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಅಥವಾ ರಿಸರ್ವ್ ಬ್ಯಾಂಕ್ ಅನುಮತಿಸಬಹುದಾದ ಅಂಥ ಸಮಯದೊಳಗಾಗಿ, ರಾಜ್ಯ ಸಹಕಾರ ಬ್ಯಾಂಕು ಮತ್ತು ಕೇಂದ್ರ ಸಹಕಾರ ಬ್ಯಾಂಕುಗಳ ಸಮಿತಿಯ ರದ್ದತಿ ಮತ್ತು ಸಮಾಪನದ ಶಿಫಾರಸು ಒಳಗೊಂಡಂತೆ ರಿಸರ್ವ್ ಬ್ಯಾಂಕು ನೀಡಿದ ನಿಯಂತ್ರಕ ನಿಯಮನಗಳ ಅನುಷ್ಠಾನವನ್ನು ಖಚಿತಪಡಿಸತಕ್ಕದ್ದು.

(2) ರದ್ದುಗೊಳಿಸುವಂತೆ ಅಥವಾ ಸಮಾಪನಗೊಳಿಸಲು ರಿಸರ್ವ್ ಬ್ಯಾಂಕು ಸಲಹೆ ಮಾಡಿದ ಮೇಲೆ, ರಿಜಿಸ್ಟ್ರಾರನು, ರಿಸರ್ವ್ ಬ್ಯಾಂಕಿನಿಂದ ಸಲಹೆಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಅಥವಾ ರಿಸರ್ವ್ ಬ್ಯಾಂಕು ಅನುಮತಿಸಬಹುದಾದ ಅಂಥ ಸಮಯದೊಳಗೆ ಆಡಳಿತಗಾರ ಅಥವಾ ಸಂದರ್ಭಾನುಸಾರ ಸಮಾಪಕನನ್ನು ನೇಮಕ ಮಾಡಿರುವುದರರ ಬಗ್ಗೆ ಖಚಿತಪಡಿಸತಕ್ಕದ್ದು.

(3) ರಾಜ್ಯ ಸಹಕಾರ ಬ್ಯಾಂಕು ಅಥವಾ ಕೇಂದ್ರ ಸಹಕಾರ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, ರಿಸರ್ವ್ ಬ್ಯಾಂಕು ನಿರ್ದಿಷ್ಟಪಡಿಸಿದ ಅರ್ಹತಾ ಮಾನದಂಡಗಳನ್ನು ನೆರವೇರಿಸಿರುವುದಿಲ್ಲವೆಂದು, ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಅಭಿಪ್ರಾಯಪಟ್ಟಲ್ಲಿ, ರಿಜಿಸ್ಟ್ರಾರನು, ರಿಸರ್ವ್ ಬ್ಯಾಂಕಿನ ಅಥವಾ

ಸಂದರ್ಭಾನುಸಾರ ರಾಷ್ಟ್ರೀಯ ಬ್ಯಾಂಕಿನ ಆದೇಶಗಳನ್ನು, ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಹಾಗೆ ಸಲಹೆ ಮಾಡಿದ ದಿನಾಂಕದಿಂದ ಎರಡು ತಿಂಗಳೊಳಗೆ ಪಾಲಿಸುವಂತೆ ನಿರ್ದೇಶನಗಳನ್ನು ನೀಡತಕ್ಕದ್ದು.

(4) ರಿಸರ್ವ್ ಬ್ಯಾಂಕು, ಗೊತ್ತುಪಡಿಸಿದಂತೆ ಅಂಥ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಅಥವಾ ಅನುಭವವನ್ನು ಹೊಂದಿಲ್ಲದ ಒಬ್ಬ ವ್ಯಕ್ತಿಯನ್ನು ರಾಜ್ಯ ಸಹಕಾರ ಬ್ಯಾಂಕು ಅಥವಾ ಕೇಂದ್ರ ಸಹಕಾರ ಬ್ಯಾಂಕಿನ ಸಮಿತಿಯ ಸಹ-ಸದಸ್ಯನನ್ನಾಗಿ ಆಯ್ಕೆ ಮಾಡಲಾಗಿದೆಯೆಂದು ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಅಭಿಪ್ರಾಯಪಟ್ಟಲ್ಲಿ, ರಿಜಿಸ್ಟ್ರಾರನು, ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕಿನಿಂದ ಸಲಹೆಯನ್ನು ಪಡೆದ ಮೇಲೆ, ರಿಸರ್ವ್ ಬ್ಯಾಂಕು ಅಥವಾ ಸಂದರ್ಭಾನುಸಾರ ರಾಷ್ಟ್ರೀಯ ಬ್ಯಾಂಕಿನ ಆದೇಶಗಳನ್ನು, ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕಿನಿಂದ ಹಾಗೆ ಸಲಹೆ ಪಡೆದ ಎರಡು ತಿಂಗಳುಗಳೊಳಗೆ, ಪಾಲಿಸತಕ್ಕದ್ದೆಂದು ನಿರ್ದೇಶನಗಳನ್ನು ನೀಡತಕ್ಕದ್ದು.

98ವೈ. [2][xxx][2][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಅಧ್ಯಾಯ- XII

ಐತೀರ್ಪುಗಳು, ಡಿಕ್ರಿಗಳು, ಆದೇಶಗಳು ಮತ್ತು ತೀರ್ಮಾನಗಳ ಅಮಲ್ಜಾರಿ

99. ಭಾರದ ಅಮಲ್ಜಾರಿ.ೆ ಈ ಹಿನೇ ಅಧ್ಯಾಯದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಆದರೆ ಈ ಅಧಿನಿಯಮದಲ್ಲಿ ಉಪಬಂಧಿಸಲಾದ ವಸೂಲಿಯ ಇತರ ಯಾವುದೇ ವಿಧಾನಕ್ಕೆ ಪ್ರತಿಕೂಲವಾಗದಂತೆ, ರಿಜಿಸ್ಟ್ರಾರನು ಅಥವಾ ಈ ಬಗ್ಗೆ ರಿಜಿಸ್ಟ್ರಾರನು ಸಮರ್ಥಗೊಳಿಸಿದ ಅವನ ಅಧೀನನಾಗಿರುವ ಯಾರೇ ವ್ಯಕ್ತಿಯು, ಸಹಕಾರ ಸಂಘವು ಅರ್ಜಿ ಸಲ್ಲಿಸಿದ ಮೇಲೆ, ಯಾರೇ ಸದಸ್ಯನಿಂದ ಅಥವಾ ಹಿಂದಿನ ಅಥವಾ ಮೃತ ಸದಸ್ಯನಿಂದ ಸಂಘಕ್ಕೆ ಬಾಕಿಯಾದ ಯಾವುದೇ ಋಣವನ್ನು ಅಥವಾ ಬಾಕಿ ತಗಾದೆಯನ್ನು 32ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭಾರಕ್ಕೆ ಒಳಪಟ್ಟ

ಸ್ವತ್ತನ್ನು ಮಾರಾಟ ಮಾಡುವ ಮೂಲಕ ಸಂದಾಯ ಮಾಡಬೇಕೆಂದು ನಿರ್ದೇಶಿಸುವ ಆದೇಶವನ್ನು ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು, ಅರ್ಜಿಯ ನೋಟೀಸನ್ನು ಸದಸ್ಯನಿಗೆ, ಹಿಂದಿನ ಸದಸ್ಯನಿಗೆ ಅಥವಾ ಮೃತ ಸದಸ್ಯನ ನಾಮನಿರ್ದೇಶಿತನಿಗೆ, ವಾರಸುದಾರನಿಗೆ ಅಥವಾ ಕಾನೂನು ಸಮ್ಮತ ಪ್ರತಿನಿಧಿಗೆ ಜಾರಿ ಮಾಡಲಾಗಿದ್ದು, ಅಂಥ ಜಾರಿಯ ದಿನಾಂಕದಿಂದ ಏಳು ದಿನಗಳೊಳಗೆ ಆ ಋಣವನ್ನು ಅಥವಾ ಬಾಕಿ ತಗಾದೆಯನ್ನು ಸಂದಾಯಮಾಡಲು ತಪ್ಪಿದ ಹೊರತು, ಮಾಡತಕ್ಕುದಲ್ಲ.

100. ಸಂಘಗಳಿಗೆ ಬಾಕಿ ಇರುವ ಹಣಗಳ ವಸೂಲಿ.- 9ನೇ ಅಧ್ಯಾಯದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಬೆಳೆಗಳಿಗೆ ಹಣ ಒದಗಿಸಿದ ಅಥವಾ ಹಂಗಾಮು ನಿಮಿತ್ತ ಹಣ ಒದಗಿಸಿದ ಕಾರಣಕ್ಕಾಗಿ ಸಂಘವು ತನ್ನ ಸದಸ್ಯರಲ್ಲಿ ಯಾರೊಬ್ಬರಿಗೆ ಮುಂಗಡವಾಗಿ ಕೊಟ್ಟ ಯಾವುದೇ ಮೊತ್ತದ ಬಾಕಿಗಳ ವಸೂಲಿ ಕೋರಿ ಅನುಮೋದಿತ ಸಂಘವು ಅರ್ಜಿ ಸಲ್ಲಿಸಿದ ಮೇಲೆ ಮತ್ತು ಅದು ಬಾಕಿಗಳ ಬಗ್ಗೆ ಲೆಕ್ಕಗಳ ತಃಖ್ತೆಯನ್ನು ಒದಗಿಸಿದ ಮೇಲೆ ರಿಜಿಸ್ಟ್ರಾರನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆ ಮಾಡಿದ ತರುವಾಯ, ಬಾಕಿಯಾಗಿರುವುದಾಗಿ ಅದರಲ್ಲಿ ಹೇಳಲಾದ ಮೊಬಲಗಿನ ವಸೂಲಿಯ ಸಲುವಾಗಿ ಪ್ರಮಾಣಪತ್ರವನ್ನು ನೀಡಬಹುದು:

ಪರಂತು, ಯಾರೇ ವ್ಯಕ್ತಿಯಿಂದ ಸಂಘಕ್ಕೆ ಬಾಕಿ ಇರುವ ಮೊಬಲಗಿನ ನಿರ್ಧರಣೆಯು, ಸಂಗತಿಯ ಅಥವಾ ಕಾನೂನಿನ ತೊಡಕಿನ ಪ್ರಶ್ನೆಗಳ ತೀರ್ಮಾನವನ್ನು ಅವಲಂಬಿಸಿದ್ದರೆ, ರಿಜಿಸ್ಟ್ರಾರನು ಅದನ್ನು 70ನೇ ಪ್ರಕರಣದ ಮೇರೆಗೆ ತೀರ್ಮಾನಕ್ಕಾಗಿ ತನಗೆ ಉಲ್ಲೇಖಿಸಿದ ತೇವಣಿಯಾಗಿದ್ದರೆ ಹೇಗೋ ಹಾಗೆ 71ನೇ ಪ್ರಕರಣದ ಉಪಬಂಧಗಳ ಮೇರೆಗೆ ಆ ಪ್ರಕರಣವನ್ನು ವಿಲೆ ಮಾಡತಕ್ಕುದು.

(2) (1) ನೇ ಉಪಪ್ರಕರಣದ ಮೇರೆಗೆ ರಿಜಿಸ್ಟ್ರಾರನು ನೀಡಿದ ಪ್ರಮಾಣಪತ್ರವು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕುದು. ಬಾಕಿಯಾಗಿರುವುದಾಗಿ ಅದರಲ್ಲಿ ಹೇಳಲಾದ ಬಾಕಿಗಳು ಭೂ ಕಂದಾಯದ ಬಾಕಿಗಳಂತೆ ಅಥವಾ 101ನೇ ಪ್ರಕರಣದಲ್ಲಿ ಉಪಬಂಧಿಸಿದ ಪ್ರಕ್ರಿಯೆಗೆ ಅನುಸಾರವಾಗಿ ವಸೂಲೀಯವಾಗಿರತಕ್ಕುದು:

ಪರಂತು, ರಿಜಿಸ್ಟ್ರಾರನು ತಾನಾಗಿಯೇ ಅಥವಾ ಸಂಘವು ಅಥವಾ ಆ ಪ್ರಮಾಣಪತ್ರದಿಂದ ಬಾಧಿತನಾದ ಸದಸ್ಯನು ಅರ್ಜಿ ಸಲ್ಲಿಸಿದ ಮೇಲೆ ಅಂಥ ಪ್ರಮಾಣಪತ್ರದಲ್ಲಿನ ಯಾವುದೇ ತಪ್ಪನ್ನು ಸರಿಪಡಿಸಬಹುದು.

(3) ಡೆಪ್ಯುಟಿ ಕಮಿÁಷನರನು, ಸಂಘಕ್ಕೆ ಸಲ್ಲತಕ್ಕ ಬಾಕಿಗಳನ್ನು, ಬಡ್ಡಿಯ ಮತ್ತು ಅಂಥ ಬಾಕಿಗಳ ವಸೂಲಿಗಾಗಿ ವಹಿಸಿದ ಯಾವುದೇ ಆನುಷಂಗಿಕ ಚಾರ್ಜುಗಳ ಸಹಿತ ಸಂದಾಯ ಮಾಡುವವರೆಗೆ ಅಥವಾ ಅಂಥ ಬಾಕಿಗಳ ಸಂದಾಯಕ್ಕಾಗಿ ರಿಜಿಸ್ಟ್ರಾರನಿಗೆ ಮನದಟ್ಟಾಗುವ ಭದ್ರತೆಯನ್ನು ಒದಗಿಸುವವರೆಗೆ, [1][ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 188ನೇ ಪ್ರಕರಣದ][1] ಮೂಲಕ ಅಧಿಕೃತಗೊಳಿಸಿದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಕಾನೂನುಸಮ್ಮತವಾಗಿರತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ವಿವರಣೆ.Š ಈ ಪ್ರಕರಣದ ಉದ್ದೇಶಕ್ಕಾಗಿ,Š

(i) ``ಅನುಮೋದಿತ ಸಂಘ'' ಎಂದರೆ ಈ ಪ್ರಕರಣದ ಉದ್ದೇಶಗಳಿಗಾಗಿ ನಿಯಮಗಳ ಮೂಲಕ ಅನುಮೋದಿತ ಸಂಘಗಳೆಂದು ಘೋಷಿಸಲಾದ ಸಂಘ ಅಥವಾ ಸಂಘಗಳ ಅಂಥ ವರ್ಗ;

(ii) ``ಬೆಳೆಗಳಿಗೆ ಹಣ ಒದಗಿಸುವುದು'' ಎಂದರೆ ಉಳುವ ಹಂಗಾಮಿನಲ್ಲಿ ಬೆಳೆ ತೆಗೆಯಲು ಅಥವಾ ಆ ತರುವಾಯ ಉಳಲು, ಕಳೆ ಕೀಳಲು, ಕುಯಿಲು ಮಾಡಲು, ಬೀಜಗಳು ಮತ್ತು ಗೊಬ್ಬರ ಖರೀದಿ ಮಾಡಲು ಅಥವಾ [1][xxx][1] ಇತರ ಉದ್ದೇಶಗಳಿಗೆ ಕೊಡಲಾಗುವ ಮತ್ತು ಯಾವ ಬೆಳೆಗಳ ಸಲುವಾಗಿ ಸಾಲ ನೀಡಲಾಗಿದೆಯೋ ಆ ಬೆಳೆಗಳ ಸುಗ್ಗಿಯ ಹಂಗಾಮಿನಲ್ಲಿ ಮರುಸಂದಾಯವಾಗತಕ್ಕಂಥ ಸಾಲಗಳ ನೀಡಿಕೆ;

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(iii) "ಋತುಮಾನಕ್ಕನುಸಾರವಾಗಿ ಹಣ ಒದಗಿಸುವುದು" ಎಂದರೆ, ಮೇಲೆ (ii) ನೇ ಬಾಬಿನಲ್ಲಿ ಹೇಳಲಾದ ಉದ್ದೇಶಗಳಿಗಾಗಿ ಸಾಲಗಳನ್ನು ನೀಡುವುದು; ಅಂಥ ಸಾಲಗಳು, ಮುಂಬರುವ ಮಾರ್ಚ್ 31ರಂದು ಅಥವಾ ಅದಕ್ಕೆ ಮೊದಲು ಅಥವಾ ಹಣ ನೀಡುವ ಬ್ಯಾಂಕು ಅಥವಾ ಪತ್ತಿನ ಏಜನ್ಸಿಯು, ನಿರ್ದಿಷ್ಟಪಡಿಸಬಹುದಾದ ಅಂಥ ಇತರ ದಿನಾಂಕದಂದು ಅಥವಾ ಅದಕ್ಕೆ ಮೊದಲು, ಮರುಸಂದಾಯವಾಗಬೇಕಾದಂತಹವು ಗಳಾಗಿರತಕ್ಕದ್ದು.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

101. ಆದೇಶ, ಮುಂತಾದುವುಗಳ ಜಾರಿ.ಽ [1][(1)][1] 69ನೇ ಪ್ರಕರಣದ [2][(1)][2]ನೇ ಉಪಪ್ರಕರಣದ ಮೇರೆಗೆ ಅಥವಾ 99ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಪ್ರತಿಯೊಂದು ಆದೇಶವು, 71ನೇ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ತೀರ್ಮಾನವು ಅಥವಾ ಐತೀರ್ಪು, 74ನೇ ಪ್ರಕರಣದ ಮೇರೆಗೆ ಸಮಾಪಕನು ಮಾಡಿದ ಪ್ರತಿಯೊಂದು ಆದೇಶವು, ಮತ್ತು 105 ಮತ್ತು 107ನೇ ಪ್ರಕರಣಗಳ ಮೇರೆಗೆ ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ಆದೇಶವು ಮತ್ತು 106ನೇ ಅಥವಾ 108ನೇ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವು ಈ ಅಧಿನಿಯಮದ ಇತರ ಯಾವುದೇ ಉಪಬಂಧಕ್ಕೆ ಒಳಪಟ್ಟು, ಆ ಆದೇಶವನ್ನು, ತೀರ್ಮಾನವನ್ನು ಅಥವಾ ಐತೀರ್ಪನ್ನು ಯಾವ ವ್ಯಕ್ತಿಯ ಅಥವಾ ಸಹಕಾರ ಸಂಘದ ವಿರುದ್ಧ ಪಡೆಯಲಾಗಿದೆಯೋ ಅಥವಾ ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಸಂಘಕ್ಕೆ ಬಂಧನಕಾರಿಯಾಗಿರತಕ್ಕುದು ಮತ್ತು ಅದನ್ನು ಈಡೇರಿಸದಿದ್ದರೆ,ಽ

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪುನರಂಕಿತಗೊಳಿಸಲಾಗಿದೆ.

2. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ರಿಜಿಸ್ಟ್ರಾರನು ಅಥವಾ ಅವನು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣಪತ್ರಾನುಸಾರ ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯೆಂದು ಭಾವಿಸತಕ್ಕುದು ಮತ್ತು ಅದನ್ನು ನ್ಯಾಯಾಲಯದ ಡಿಕ್ರಿಯೆಂಬಂತೆ ಅದೇ ರೀತಿಯಲ್ಲಿ ಜಾರಿಮಾಡತಕ್ಕುದು; ಅಥವಾ

(ಬಿ) ಭೂ ಕಂದಾಯದ ಬಾಕಿಗಳನ್ನು ವಸೂಲು ಮಾಡಲು ಅದನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಮತ್ತು ನಿಯಮಗಳ ಮೇರೆಗೆ ಜಾರಿಗೊಳಿಸತಕ್ಕುದು:

ಪರಂತು, ಅಂಥ ಯಾವುದೇ ಮೊತ್ತವನ್ನು ಅಂಥ ರೀತಿಯಲ್ಲಿ ವಸೂಲು ಮಾಡಲು ಅರ್ಜಿಯನ್ನು,ಽ

(i) ಡೆಪ್ಯುಟಿ ಕಮೀಷನರರಿಗೆ ಸಲ್ಲಿಸತಕ್ಕುದು ಮತ್ತು ರಿಜಿಸ್ಟ್ರಾರನು ಅಥವಾ ಅವನು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣ ಪತ್ರವನ್ನು ಅದಕ್ಕೆ ಲಗತ್ತಿಸತಕ್ಕುದು;

(ii) ಆ ಆದೇಶದಲ್ಲಿ, ತೀರ್ಮಾನದಲ್ಲಿ ಅಥವಾ ಐತೀರ್ಪಿನಲ್ಲಿ ನಿಗದಿಪಡಿಸಿದ ದಿನಾಂಕದಿಂದ ಮತ್ತು ಅಂಥ ಯಾವುದೇ ದಿನಾಂಕವನ್ನು ನಿಗದಿಪಡಿಸಿರದಿದ್ದರೆ

ಸಂದರ್ಭಾನುಸಾರ, ಆ ಆದೇಶದ, ತೀರ್ಮಾನದ ಅಥವಾ ಐತೀರ್ಪಿನ ದಿನಾಂಕದಿಂದ ಹನ್ನೆರಡು ವರ್ಷಗಳೊಳಗೆ ಸಲ್ಲಿಸತಕ್ಕುದು; ಅಥವಾ

(ಸಿ) ಆ ಆದೇಶದ, ತೀರ್ಮಾನ ಅಥವಾ ಐತೀರ್ಪನ್ನು ಯಾವ ವ್ಯಕ್ತಿಯ ಅಥವಾ ಸಹಕಾರ ಸಂಘದ ವಿರುದ್ಧ ಪಡೆಯಲಾಗಿದೆಯೋ ಅಥವಾ ಮಾಡಲಾಗಿದೆಯೋ ಆ ವ್ಯಕ್ತಿಯ ಅಥವಾ ಸಂಘದ ಯಾವುದೇ ಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಅಥವಾ ಜಪ್ತಿಯಿಲ್ಲದೆ ಮಾರಾಟದ ಮೂಲಕ, ರಿಜಿಸ್ಟ್ರಾರನು ಅಥವಾ ಅವನು ಈ ಬಗ್ಗೆ ಸಮರ್ಥಗೊಳಿಸಿದ ಇತರ ಯಾರೇ ಅಧೀನ ವ್ಯಕ್ತಿಯು ಜಾರಿಗೊಳಿಸತಕ್ಕುದು.

[1][(2) (ಎ) ಈ ಅಧಿನಿಯಮದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶ, ತೀರ್ಮಾನ ಅಥವಾ ಐತೀರ್ಪಿನ ಜಾರಿ, ನಿರ್ವಹಣೆ ಅಥವಾ ತೀರಿಕೆಗೆ ಸಂಬಂಧಿಸಿದ ಅಥವಾ (1)ನೇ ಉಪಪ್ರಕರಣದ (ಸಿ) ಖಂಡದ ಅನುಸರಣೆಯಲ್ಲಿ ಅಂಥ ಆದೇಶ, ತೀರ್ಮಾನ ಅಥವಾ ಐತೀರ್ಪಿನ ಜಾರಿಯಲ್ಲಿ ನಡೆಸಿದ ಮಾರಾಟದ ಸ್ಥಿರೀಕರಣ ಅಥವಾ ತಳ್ಳಿಹಾಕುವಿಕೆಗೆ ಸಂಬಂಧಿಸಿದ ಅಥವಾ 103ನೇ ಪ್ರಕರಣದ ಮೇರೆಗೆ ಅಥವಾ ಸದರಿ (ಸಿ) ಖಂಡದ ಅನುಸರಣೆಯ ಜಾರಿಯಲ್ಲಿ ಮಾಡಲಾದ ಯಾವುದೇ ಸ್ವತ್ತಿನ ಜಪ್ತಿಗೆ ಸಲ್ಲಿಸಿದ ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಗೆ ಸಂಬಂಧಿಸಿದ ಪ್ರತಿಯೊಂದು ಪ್ರಶ್ನೆಯನ್ನು, ರಿಜಿಸ್ಟ್ರಾರನು ಅಥವಾ ಸದರಿ (ಸಿ) ಖಂಡದ ಮೇರೆಗೆ ರಿಜಿಸ್ಟ್ರಾರನು ಶಕ್ತಗೊಳಿಸಿದ (ಈ ಪ್ರಕರಣದಲ್ಲಿ ಇನ್ನು ಮುಂದೆ ಅಧಿಕೃತ ವ್ಯಕ್ತಿ ಎಂದು ಕರೆಯಲಾಗುವ) ಅವನಿಗೆ ಅಧೀನನಾದ ಯಾವ ವ್ಯಕ್ತಿಯ ಮುಂದೆ ಅಂಥ ಪ್ರಶ್ನೆಯು ಉದ್ಭವಿಸುವುದೋ ಆ ಯಾರೇ ಇತರ ವ್ಯಕ್ತಿಯು ಆದೇಶದ ಮೂಲಕ ತೀರ್ಮಾನಿಸತಕ್ಕುದು.

(ಬಿ) (i) 103ನೇ ಪ್ರಕರಣದ ಮೇರೆಗೆ ಅಥವಾ (1)ನೇ ಉಪಪ್ರಕರಣದ (ಸಿ) ಖಂಡದ ಅನುಸರಣೆಯ ಜಾರಿಯಲ್ಲಿ ಯಾವುದೇ ಸ್ವತ್ತನ್ನು ಜಪ್ತಿ ಮಾಡಿರುವಲ್ಲಿ ಸದರಿ ಸ್ವತ್ತು ಅಂಥ ಜಪ್ತಿಗೆ ಒಳಪಡತಕ್ಕುದಲ್ಲ ಎಂಬ ಕಾರಣದ ಮೇಲೆ ಅಂಥ ಜಪ್ತಿಯ ವಿರುದ್ಧ ಯಾವುದೇ ಕ್ಲೇಮನ್ನು ಸಲ್ಲಿಸಿರುವಲ್ಲಿ ಅಥವಾ ಯಾವುದೇ ಆಕ್ಷೇಪಣೆ ಮಾಡಿರುವಲ್ಲಿ ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಆ ಕ್ಲೇಮು ಅಥವಾ ಆಕ್ಷೇಪಣೆಯನ್ನು ತನಿಖೆ ಮಾಡಲು ಕ್ರಮ ಕೈಗೊಳ್ಳತಕ್ಕುದು:

ಪರಂತು, ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಆ ಕ್ಲೇಮು ಅಥವಾ ಆಕ್ಷೇಪಣೆಯನ್ನು ಉದ್ದೇಶಪೂರ್ವಕವಾಗಿ ಅಥವಾ ಅನಾವಶ್ಯಕವಾಗಿ ವಿಳಂಬಿಸಲಾಯಿತೆಂದು ಪರಿಗಣಿಸಿದರೆ, ಅವನು ಅಂಥ ತನಿಖೆಯನ್ನು ನಿರಾಕರಿಸುವ ಆದೇಶವನ್ನು ಮಾಡತಕ್ಕುದು.

(ii) ಸದರಿ ತನಿಖೆಯ ತರುವಾಯ, ರಿಜಿಸ್ಟ್ರಾರನಿಗೆ ಅಥವಾ ಅಧಿಕೃತ ವ್ಯಕ್ತಿಗೆ ಆ ಕ್ಲೇಮು ಅಥವಾ ಆಕ್ಷೇಪಣೆಯಲ್ಲಿ ಹೇಳಲಾದ ಕಾರಣಗಳಿಗಾಗಿ ಅಂಥ ಸ್ವತ್ತು ಜಪ್ತಿಯ ದಿನಾಂಕದಂದು ಯಾವ ವ್ಯಕ್ತಿಯ ಅಥವಾ ಸಹಕಾರ ಸಂಘದ ವಿರುದ್ಧ ಆದೇಶ, ತೀರ್ಪು ಅಥವಾ ಐತೀರ್ಪನ್ನು ಪಡೆಯಲಾಯಿತೋ ಅಥವಾ ಮಾಡಲಾಯಿತೋ ಆ ವ್ಯಕ್ತಿ ಅಥವಾ ಸಹಕಾರ ಸಂಘದ (ಈ ಪ್ರಕರಣದಲ್ಲಿ ಇನ್ನುಮುಂದೆ ನಿರ್ಣೀತ ಋಣಿ ಎಂದು ಉಲ್ಲೇಖಿಸಲಾಗಿದೆ) ಅಥವಾ ನಿರ್ಣೀತ ಋಣಿಯ ನ್ಯಾಸವಾಗಿ ಯಾವೊಬ್ಬ ವ್ಯಕ್ತಿಯ ಸ್ವಾಧೀನದಲ್ಲಿ, ಅಥವಾ ನಿರ್ಣೀತ ಋಣಿಗೆ ಬಾಡಿಗೆ ಸಂದಾಯ ಮಾಡುತ್ತಿರುವ ಬಾಡಿಗೆದಾರ ಅಥವಾ ಇತರ ವ್ಯಕ್ತಿಯ ಅನುಭೋಗದಲ್ಲಿ ಇರಲಿಲ್ಲವೆಂದು ಅಥವಾ ಆ ದಿನಾಂಕದಂದು ನಿರ್ಣೀತ ಋಣಿಯ ಸ್ವಾಧೀನದಲ್ಲಿ ಇದ್ದರೂ ಅವನ ಸ್ವಂತ ಖಾತೆಯಲ್ಲಿ ಇಲ್ಲದೆಯೇ ಅಥವಾ ಅವನ ಸ್ವಂತ ಸ್ವತ್ತಾಗಿ ಇಲ್ಲದೆಯೇ ಆದರೆ ಇನ್ನೊಬ್ಬ ವ್ಯಕ್ತಿಯ ಖಾತೆಯಲ್ಲಿ ಅಥವಾ ನ್ಯಾಸದಲ್ಲಿ ಅಥವಾ ಭಾಗಶಃ ಅವನ ಖಾತೆಯಲ್ಲಿ ಮತ್ತು ಇನ್ನೊಬ್ಬ ವ್ಯಕ್ತಿಯ ಖಾತೆಯಲ್ಲಿ ಹಾಗೆ ಅವನ ಸ್ವಾಧೀನದಲ್ಲಿತ್ತೆಂದು ಮನದಟ್ಟಾದಲ್ಲಿ, ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಜಪ್ತಿಯಿಂದ ಸ್ವತ್ತನ್ನು ಪೂರ್ಣವಾಗಿ ಅಥವಾ ತಾನು ಸೂಕ್ತವೆಂದು ಭಾವಿಸುವಷ್ಟರ ಮಟ್ಟಿಗೆ ಬಿಡುಗಡೆಗೊಳಿಸುವ ಆದೇಶವನ್ನು ಮಾಡತಕ್ಕುದು.

(iii) ರಿಜಿಸ್ಟ್ರಾರನಿಗೆ ಅಥವಾ ಅಧಿಕೃತ ವ್ಯಕ್ತಿಗೆ ಸದರಿ ದಿನಾಂಕದಂದು ಆ ಸ್ವತ್ತು ನಿರ್ಣೀತ ಋಣಿಯ ಸ್ವಾಧೀನದಲ್ಲಿ ಇದೆಯೆಂದು ಮತ್ತು ಯಾರೇ ಇತರ ವ್ಯಕ್ತಿಯ ಖಾತೆಯಲ್ಲಿಲ್ಲವೆಂದು ಅಥವಾ ಅವನಿಗೆ ಬಾಡಿಗೆ ಸಂದಾಯ ಮಾಡುತ್ತಿರುವ ಒಬ್ಬ ಬಾಡಿಗೆದಾರ ಅಥವಾ ಇತರ ವ್ಯಕ್ತಿಯ ಅನುಭೋಗದಲ್ಲಿ ಇದೆಯೆಂದು ಮನದಟ್ಟಾದರೆ, ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಆ ಕ್ಲೇಮನ್ನು ತಳ್ಳಿಹಾಕತಕ್ಕುದು.

(iv) ಕ್ಲೇಮು ಅಥವಾ ಆಕ್ಷೇಪಣೆಯನ್ನು ಸಲ್ಲಿಸಿರುವಲ್ಲಿ, ಯಾವ ಪಕ್ಷಕಾರನ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ಪಕ್ಷಕಾರನು ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ವಿವಾದದ ಸ್ವತ್ತಿನಲ್ಲಿ ಅವನು ಕ್ಲೇಮುಮಾಡುವಂಥ ಹಕ್ಕನ್ನು ಸ್ಥಾಪಿಸಲು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬಹುದು, ಆದರೆ ಅಂಥ ದಾವೆಯ

ಫಲಿತಾಂಶ, ಯಾವುದಾದರೂ ಇದ್ದರೆ, ಅದಕ್ಕೆ ಒಳಪಟ್ಟು, ರಿಜಿಸ್ಟ್ರಾರನ ಅಥವಾ ಅಧಿಕೃತ ವ್ಯಕ್ತಿಯ ಆದೇಶವು ನಿರ್ಣಾಯಕವಾಗಿರತಕ್ಕುದು.][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 1.6.1960 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**101ಎ. ಪ್ರಮಾಣಪತ್ರ ಕೊಟ್ಟ ತರುವಾಯ ಮಾಡಲಾದ ಸ್ವತ್ತಿನ ವರ್ಗಾವಣೆಯು ಸಹಕಾರ ಸಂಘದ ವಿರುದ್ಧ ಶೂನ್ಯವಾಗಿರುವುದು.**- 101ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಅಥವಾ ಅವನಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು ಪ್ರಮಾಣಪತ್ರ ನೀಡಿದ ತರುವಾಯ, ಸ್ವತ್ತಿನ ಯಾವುದೇ ಖಾಸಗಿ ವರ್ಗಾವಣೆ ಅಥವಾ ವಶಾವಣೆ ಅಥವಾ ಅದರ ಮೇಲೆ ನಿರ್ಮಿಸಲಾದ ಯಾವುದೇ ಋಣಭಾರ ಅಥವಾ ಭಾರವು, ಯಾವ ಸಹಕಾರ ಸಂಘದ ಅರ್ಜಿಯ ಮೇಲೆ ಪ್ರಮಾಣಪತ್ರ ನೀಡಲಾಯಿತೋ ಅದರ ವಿರುದ್ಧ ಶೂನ್ಯವಾಗಿರತಕ್ಕುದು.

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

101ಬಿ. ಮಾರಾಟ ಮಾಡಲಾಗದ ಸ್ವತ್ತಿನ ವರ್ಗಾವಣೆ:- (1) 101ನೇ ಪ್ರಕರಣದ ಮೇರೆಗೆ ಜಾರಿ ಕೋರಲಾದ ಆದೇಶದ ಯಾವುದೇ ಅಮಲ್ಜಾರಿಯಲ್ಲಿ, ಅಂಥ ಸ್ವತ್ತು ಸುಸ್ತಿದಾರನ ಅಥವಾ ಅವನ ಪರವಾಗಿ ಯಾವೊಬ್ಬ ವ್ಯಕ್ತಿಯ, ಅಥವಾ 101ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಪ್ರಮಾಣಪತ್ರ ನೀಡಿದ ತರುವಾಯ, ಸುಸ್ತಿದಾರನು ನಿರ್ಮಿಸಿದ ಹಕ್ಕಿನ ಅಡಿಯಲ್ಲಿ ಕ್ಲೇಮು ಮಾಡುವ ವ್ಯಕ್ತಿಯ ಅಧಿಭೋಗದಲ್ಲಿದ್ದ ಕಾರಣದಿಂದಾಗಿ ಖರೀದಿದಾರರ ಅಭಾವದಿಂದ ಅಂಥ ಸ್ವತ್ತನ್ನು ಮಾರಾಟಮಾಡಲು ಸಾಧ್ಯವಾಗದಿದ್ದರೆ, ಸಂದರ್ಭಾನುಸಾರ, ನ್ಯಾಯಾಲಯ, ಡೆಪ್ಯುಟಿ ಕಮೀಷನರ್ ಅಥವಾ ರಿಜಿಸ್ಟ್ರಾರನು ತತ್ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸದರಿ ಆದೇಶದ ಜಾರಿಗಾಗಿ ಯಾವ ಸಹಕಾರಸಂಘವು ಅರ್ಜಿ ಸಲ್ಲಿಸಿದೆಯೋ ಅದಕ್ಕೆ ಆ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ನಿಯಮಿಸಲಾದ ರೀತಿಯಲ್ಲಿ ವರ್ಗಾಯಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ಸ್ವತ್ತನ್ನು (1)ನೇ ಉಪಪ್ರಕರಣದ ಮೇರೆಗೆ ಸಹಕಾರ ಸಂಘಕ್ಕೆ ವರ್ಗಾಯಿಸಿರುವಲ್ಲಿ ಅಥವಾ ಸ್ವತ್ತನ್ನು 101ನೇ ಪ್ರಕರಣದ ಮೇರೆಗೆ ಮಾರಾಟ ಮಾಡಿರುವಲ್ಲಿ, ಸಂದರ್ಭಾನುಸಾರ, ನ್ಯಾಯಾಲಯ, ಡೆಪ್ಯುಟಿ ಕಮೀಷನರ್ ಅಥವಾ ರಿಜಿಸ್ಟ್ರಾರನು ವರ್ಗಾಯಿಸಲಾದ ಅಥವಾ ಮಾರಾಟಮಾಡಲಾದ ಸ್ವತ್ತನ್ನು ನಿಯಮಗಳಿಗೆ ಅನುಸಾರವಾಗಿ, ಸಂದರ್ಭಾನುಸಾರ, ಸಂಘ ಅಥವಾ ಖರೀದಿದಾರನ ಸ್ವಾಧೀನದಲ್ಲಿರಿಸಬಹುದು.

(3) ಈ ಬಗ್ಗೆ ಮಾಡಬಹುದಾದ ನಿಯಮಗಳಿಗೆ ಒಳಪಟ್ಟು, ಮತ್ತು ಯಾರೇ ವ್ಯಕ್ತಿಯ ಹೆಸರಿನಲ್ಲಿ ಕಾನೂನು ಸಮ್ಮತವಾಗಿ ಅಸ್ತಿತ್ವದಲ್ಲಿರುವ ಯಾವುವೇ ಹಕ್ಕುಗಳಿಗೆ, ಋಣಭಾರಗಳಿಗೆ ಅಥವಾ ಈಕ್ವಿಟಿಗಳಿಗೆ ಒಳಪಟ್ಟು, ಸಂದರ್ಭಾನುಸಾರ, ನ್ಯಾಯಾಲಯ, ಡೆಪ್ಯುಟಿ ಕಮೀಷನರ್ ಅಥವಾ ರಿಜಿಸ್ಟ್ರಾರ್ ಮತ್ತು ಸದರಿ ಸಂಘ ಇವರ ನಡುವೆ ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಸದರಿ ಸಂಘವು (1)ನೇ ಉಪಪ್ರಕರಣದ ಮೇರೆಗೆ ಅಂಥ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಧಾರಣಮಾಡತಕ್ಕುದು.

(4) ಡೆಪ್ಯುಟಿ ಕಮೀಷನರನು ಅಥವಾ ರಿಜಿಸ್ಟ್ರಾರನು, ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ಈ ಪ್ರಕರಣದ ಮೇರೆಗೆ ಡೆಪ್ಯುಟಿ ಕಮೀಷನರ್ ಅಥವಾ ರಿಜಿಸ್ಟ್ರಾರನು ಚಲಾಯಿಸುವ ಅಧಿಕಾರಗಳನ್ನು ಸಹಾಯಕ ಕಮಿಷನರನ ಅಥವಾ ಸಹಾಯಕ ರಿಜಿಸ್ಟ್ರಾರನ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿಗೆ ಪ್ರತ್ಯಾಯೋಜಿಸಿ ಕೊಡಬಹುದು.]1

[1][101ಸಿ. xxx][1]

1. 1 985ರ ಅಧಿನಿಯಮ ಸಂಖ್ಯೆ 34ರ ಮೂಲಕ 27.6.1985 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1991ರ ಅಧಿನಿಯಮ ಸಂಖ್ಯೆ 34ರ ಮೂಲಕ 10.12.1991 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

102. ರಿಜಿಸ್ಟ್ರಾರನು ಅಥವಾ ಅವನಿಂದ ಶಕ್ತಗೊಳಿಸಲಾದ ವ್ಯಕ್ತಿಯು ಕೆಲವು ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವಾಗಿರುವುದು.- ರಿಜಿಸ್ಟ್ರಾರನು ಅಥವಾ ಈ ಬಗ್ಗೆ ಅವನಿಂದ ಶಕ್ತಗೊಳಿಸಲಾದ ಯಾರೇ ವ್ಯಕ್ತಿಯು, ಸ್ವತ್ತನ್ನು ಜಪ್ತಿಮಾಡುವ ಮತ್ತು ಮಾರಾಟಮಾಡುವ ಮೂಲಕ ಅಥವಾ ಜಪ್ತಿ ಮಾಡದೆಯೇ ಮಾರಾಟ ಮಾಡುವ ಮೂಲಕ, ಯಾವುದೇ ಮೊಬಲಗಿನ ವಸೂಲಿಯ ಸಲುವಾಗಿ ಈ ಅಧಿನಿಯಮದ ಮೇರೆಗೆ ಯಾವುವೇ ಅಧಿಕಾರಗಳನ್ನು ಚಲಾಯಿಸುವಾಗ ಅಥವಾ ಅಂಥ ವಸೂಲಿಯ ಬಗ್ಗೆ ಅಥವಾ ಅಂಥ ವಸೂಲಿಗೆ ಸಹಾಯಕ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಅವನಿಗೆ ಸಲ್ಲಿಸಲಾದ ಯಾವುವೇ ಅರ್ಜಿಯ ಮೇಲೆ ಯಾವುದೇ ಆದೇಶಗಳನ್ನು ಮಾಡುವಾಗ [1][ಕಾಲಪರಿಮಿತಿ ಅಧಿನಿಯಮ, 1963][1]ರ ಒಂದನೇ ಅನುಸೂಚಿಯ 182ನೇ ಅನುಚ್ಛೇದದ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯವಾಗಿರುವುದಾಗಿ ಭಾವಿಸತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

103. ಐತೀರ್ಪಿಗೆ ಅಥವಾ ಆದೇಶಕ್ಕೆ ಮುಂಚೆ ಸ್ವತ್ತಿನ ಜಪ್ತಿ.- [1][(1)][1] ಯಾರೇ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತನ್ನ ವಿರುದ್ಧ ಮಾಡಬಹುದಾಗಿರುವ

ಯಾವುದೇ ಆದೇಶ, ತೀರ್ಪು ಅಥವಾ ಐತೀರ್ಪಿನ ಜಾರಿಯಲ್ಲಿ ವಿಳಂಬ ಮಾಡುವ, ಅಡ್ಡಿ ಮಾಡುವ ಆಶಯದಿಂದ,Š

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪುನರಂಕಿತಗೊಳಿಸಲಾಗಿದೆ.

(ಎ) ತನ್ನ ಎಲ್ಲ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ವಿಲೆ ಮಾಡಲಿರುವನೆಂದು; ಅಥವಾ

(ಬಿ) ತನ್ನ ಎಲ್ಲ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು, ಸಂದರ್ಭಾನುಸಾರ, ರಿಜಿಸ್ಟ್ರಾರನ, ಮಧ್ಯಸ್ಥಗಾರನ ಅಥವಾ ಸಮಾಪಕನ ಅಧಿಕಾರ ವ್ಯಾಪ್ತಿಯಿಂದ ಹೊರಗೆ ಒಯ್ಯಲಿರುವನೆಂದು

Š ರಿಜಿಸ್ಟ್ರಾರನಿಗೆ ಅರ್ಜಿ, ವರದಿ, ವಿಚಾರಣೆ ಅಥವಾ ಅನ್ಯಥಾ ರೀತಿಯಿಂದ ಮನದಟ್ಟಾದರೆ, ಸಾಕಷ್ಟು ಭದ್ರತೆಯನ್ನು ಒದಗಿಸಿದ ಹೊರತು ಅವನ ಸದರಿ ಸ್ವತ್ತಿನ ಜಪ್ತಿಯನ್ನು ನಿರ್ದೇಶಿಸಬಹುದು; ಮತ್ತು ಅಂಥ ಜಪ್ತಿಯು ಸಕ್ಷಮ ಸಿವಿಲ್ ನ್ಯಾಯಾಲಯದಿಂದ ಮಾಡಲಾದ ಜಪ್ತಿಯಂತೆಯೇ ಪ್ರಭಾವನ್ನು ಹೊಂದಿರತಕ್ಕುದು.

[1][(2) ರಿಜಿಸ್ಟ್ರಾರನು, (1)ನೆಯ ಉಪಪ್ರಕರಣದ ಮೇರೆಗೆ ಸ್ವತ್ತಿನ ಜಪ್ತಿಗೆ ನಿರ್ದೇಶಿಸುವಲ್ಲಿ, ಯಾವ ವ್ಯಕ್ತಿಯ ಸ್ವತ್ತನ್ನು ಹಾಗೆ ಜಪ್ತಿ ಮಾಡಲಾಗಿದೆಯೋ ಆ ವ್ಯಕ್ತಿಗೆ ಅವನು ತನಗೆ ಸಾಕಷ್ಟೆನಿಸುವ ಭದ್ರತೆಯನ್ನು ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ಒದಗಿಸಬೇಕೆಂದು ಕರೆ ನೀಡಿ, ನೋಟೀಸನ್ನು ಹೊರಡಿಸತಕ್ಕುದು, ಮತ್ತು ಹಾಗೆ ಕೇಳಿದ ಭದ್ರತೆಯನ್ನು ಒದಗಿಸಲು ಆ ವ್ಯಕ್ತಿಯು ತಪ್ಪಿದರೆ, ರಿಜಿಸ್ಟ್ರಾರನು ಆ ಆದೇಶವನ್ನು ಸ್ಥಿರೀಕರಿಸಬಹುದು; ಮತ್ತು ವಿವಾದದಲ್ಲಿ ತೀರ್ಮಾನವಾದ ಅಥವಾ ಈ ಹಿಂದಿನ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವ್ಯವಹರಣೆಗಳು ಮುಕ್ತಾಯವಾದ ತರುವಾಯ ಕ್ಲೇಮನ್ನು ಐತೀರ್ಪು ಮಾಡಿದರೆ ಆ ಬಗ್ಗೆ ಹಾಗೆ ಜಪ್ತಿ ಮಾಡಲಾದ ಸ್ವತ್ತನ್ನು ವಿಲೆ ಮಾಡಲು ನಿರ್ದೇಶಿಸಬಹುದು.

(3) ಈ ಪ್ರಕರಣದ ಮೇರೆಗೆ ಮಾಡಿದ ಜಪ್ತಿಯು, ಆ ಜಪ್ತಿಗೆ ಸಂಬಂಧಿಸಿದ ವ್ಯವಹರಣೆಗಳಲ್ಲಿ ಪಕ್ಷಕಾರರಾಗಿರುವ ವ್ಯಕ್ತಿಗಳು ಅಂಥ ಜಪ್ತಿಗಿಂತ ಮುಂಚೆ ಹೊಂದಿದ್ದು ಅಸ್ತಿತ್ವದಲ್ಲಿರುವ ಅಧಿಕಾರಗಳನ್ನು ಬಾಧಿಸತಕ್ಕುದಲ್ಲ; ಅಥವಾ ಯಾವ ವ್ಯಕ್ತಿಯ ಸ್ವತ್ತನ್ನು ಹಾಗೆ ಜಪ್ತಿ ಮಾಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಡಿಕ್ರಿ ಧಾರಣ ಮಾಡಿದ ವ್ಯಕ್ತಿಯನ್ನು, ಜಪ್ತಿಯಾಗಿದ್ದ ಸ್ವತ್ತನ್ನು ಅಂಥ ಡಿಕ್ರಿಯ ಜಾರಿಯಲ್ಲಿ ಮಾರಾಟ ಮಾಡಿಸುವ ಸಲುವಾಗಿ ಅರ್ಜಿ ಸಲ್ಲಿಸದಂತೆ ಅಡ್ಡಿಪಡಿಸತಕ್ಕುದಲ್ಲ.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

104. ಸರ್ಕಾರಕ್ಕೆ ಸಲ್ಲಬೇಕಾದ ಮೊಬಲಗುಗಳ ವಸೂಲಿ.- (1) ಈ ಅಧಿನಿಯಮದ ಯಾವುದೇ ಉಪಬಂಧದ ಅಡಿಯಲ್ಲಿ ಸರ್ಕಾರಕ್ಕೆ ಐತೀರ್ಪಿನಿಂದ ಕೊಡಲಾದ ಯಾವುವೇ ಖರ್ಚುಗಳೂ ಸೇರಿ ಸರ್ಕಾರಕ್ಕೆ ಸಹಕಾರ ಸಂಘದಿಂದ ಅಥವಾ ಸಹಕಾರ ಸಂಘದ [1][ಪದಾಧಿಕಾರಿಗಳಿಂದ][1] ಅಥವಾ ಸದಸ್ಯನಿಂದ ಅಥವಾ ಆ ಸಂಘದ ಸದಸ್ಯನಾಗಿ ಹಿಂದಿನ ಸದಸ್ಯನಿಂದ ಸರ್ಕಾರಕ್ಕೆ ಸಲ್ಲತಕ್ಕ ಎಲ್ಲಾ ಮೊಬಲಗುಗಳನ್ನು ಈ ಬಗ್ಗೆ ರಿಜಿಸ್ಟ್ರಾರನಿಂದ [2][ಅಥವಾ [3][ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು][3]][2] ಕೊಟ್ಟ ಪ್ರಮಾಣಪತ್ರದ ಮೇಲೆ ಭೂ ಕಂದಾಯದ ಬಾಕಿಗಳನ್ನು ವಸೂಲು ಮಾಡುವ ರೀತಿಯಲ್ಲಿ ವಸೂಲು ಮಾಡಬಹುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1980ರ ಅಧಿನಿಯಮ ಸಂಖ್ಯೆ 3ರ ಮೂಲಕ 11.8.1977 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸರ್ಕಾರಕ್ಕೆ ಸಂಘದಿಂದ ಸಲ್ಲತಕ್ಕ ಮತ್ತು (1)ನೇ ಉಪಪ್ರಕರಣದ ಮೇರೆಗೆ ವಸೂಲಾಗಬೇಕಾದ ಮೊಬಲಗುಗಳನ್ನು, ಮೊದಲನೆಯದಾಗಿ ಸಂಘದ ಸ್ವತ್ತಿನಿಂದ; ಎರಡನೆಯದಾಗಿ, ಯಾವ ಸಂಘದ ಸದಸ್ಯರ ಹೊಣೆಯು ನಿಯಮಿತವಾಗಿದೆಯೋ ಅಂಥ ಸಂಘದ ಸಂದರ್ಭದಲ್ಲಿ ಸದಸ್ಯರಿಂದ, ಹಿಂದಿನ ಸದಸ್ಯರಿಂದ ಅಥವಾ ಮೃತಪಟ್ಟ ಸದಸ್ಯರ ಎಸ್ಟೇಟುಗಳಿಂದ ಅವರವರ ಹೊಣೆಯ ಪರಿಮಿತಿಗೊಳಪಟ್ಟು; ಮತ್ತು, ಮೂರನೆಯದಾಗಿ, ಬೇರೆ ಸಂಘಗಳ ಸಂದರ್ಭದಲ್ಲಿ ಸದಸ್ಯರಿಂದ, ಹಿಂದಿನ ಸದಸ್ಯರಿಂದ ಅಥವಾ ಮೃತಪಟ್ಟ ಸದಸ್ಯರ ಎಸ್ಟೇಟುಗಳಿಂದ ವಸೂಲು ಮಾಡಬಹುದು:

ಪರಂತು, ಹಿಂದಿನ ಸದಸ್ಯರ ಹೊಣೆಯು ಮತ್ತು ಮೃತಪಟ್ಟ ಸದಸ್ಯರ ಎಸ್ಟೇಟುಗಳ ಹೊಣೆಯು ಎಲ್ಲ ಸಂದರ್ಭಗಳಲ್ಲಿ 25ನೇ ಪ್ರಕರಣದ ಉಪಬಂಧಗಳಿಗೊಳಪಟ್ಟಿರತಕ್ಕುದು.

[1][(3) ಹಿಂದಿನ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಒಂದು ಸಹಕಾರ ಸಂಘದಿಂದ ಸಲ್ಲತಕ್ಕ ಲೆಕ್ಕಪರಿಶೋಧನಾ ಫೀಜನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ವಸೂಲಿ ಮಾಡಬಹುದು.][1]

1. 1980ರ ಅಧಿನಿಯಮ ಸಂಖ್ಯೆ 3ರ ಮೂಲಕ 11.8.1977 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][104ಎ. ಬೇರೆ ರಾಜ್ಯಗಳಲ್ಲಿರುವ ಸಹಕಾರ ಸಂಘಗಳಿಗೆ ಈ ಅಧ್ಯಾಯದ ಅನ್ವಯ.- 103ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿನ ವಸೂಲಿಗೆ ಸಂಬಂಧಿಸಿದ ಅಥವಾ ಯಾವುದೇ ರೀತಿಯಲ್ಲಿ ಅದಕ್ಕೆ ಸಂಬಂಧಪಟ್ಟ ಈ ಅಧ್ಯಾಯದ ಮತ್ತು ಈ ಅಧಿನಿಯಮದ

ಮೇರೆಗೆ ಮಾಡಲಾದ ಎಲ್ಲ ನಿಯಮಗಳ ಉಪಬಂಧಗಳು ರಾಜ್ಯ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಭಾರತದ ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿಸಲಾಗಿದೆಯೆಂದು ಭಾವಿಸಲಾದಂಥ ಸಹಕಾರ ಸಂಘಗಳಿಗೆ ಸಲ್ಲತಕ್ಕ ಅಂಥವೇ ಮೊಬಲಗುಗಳ ವಸೂಲಿಯ ಸಂಬಂಧದಲ್ಲಿ, ಈ ಅಧಿನಿಯಮದ ಮೇರೆಗೆ [2][ಕರ್ನಾಟಕ ರಾಜ್ಯ][2] ದಲ್ಲಿ ಅಂಥ ಸಹಕಾರ ಸಂಘಗಳು ನೋಂದಾಯಿತವಾಗಿದ್ದಿದ್ದರೆ ಹೇಗೋ ಹಾಗೆ, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಮಾರ್ಪಾಟುಗಳು, ಯಾವುದಾದರೂ ಇದ್ದರೆ, ಅಂಥ ಮಾರ್ಪಾಟುಗಳೊಂದಿಗೆ ಅನ್ವಯಿಸತಕ್ಕುದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಅಧ್ಯಾಯ- XIII

ಅಪೀಲುಗಳು, ಪುನರೀಕ್ಷಣೆ ಮತ್ತು ಪುನರ್ವಿಲೋಕನ

105. ನ್ಯಾಯಾಧಿಕರಣಕ್ಕೆ ಅಪೀಲುಗಳು.- [2][(1)][2] ಯಾರೇ ವ್ಯಕ್ತಿಯು,-

(ಎ) 71ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಯಾವುದೇ ತೀರ್ಮಾನದಿಂದ; ಅಥವಾ

(ಬಿ) 71ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಸರ್ಕಾರವು ಆ ಬಗ್ಗೆ ಅಧಿಕಾರಗಳನ್ನು ನಿಹಿತಗೊಳಿಸಿದ ವ್ಯಕ್ತಿಯ ಯಾವುದೇ ತೀರ್ಮಾನದಿಂದ;

(ಸಿ) 71ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಮಧ್ಯಸ್ಥಗಾರನ ಯಾವುದೇ ಐತೀರ್ಪಿನಿಂದ; ಅಥವಾ

(ಡಿ) 74ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಸಮಾಪಕನ ಯಾವುದೇ ನಿರ್ಧಾರದಿಂದ;

(ಇ) [1][69ನೇ ಮತ್ತು 71ನೇ ಪ್ರಕರಣದ ಮೇರೆಗೆ ಮಾಡಬಹುದಾದ ಯಾವುದೇ ಆದೇಶದ, ತೀರ್ಮಾನದ ಅಥವಾ ಐತೀರ್ಪಿನ ಜಾರಿಗೆ][1] ಆದ ಯಾವುದೇ ವಿಳಂಬವನ್ನು ಅಥವಾ ಅಡ್ಡಿಯನ್ನು ಪ್ರತಿಬಂಧಿಸುವ ದೃಷ್ಟಿಯಿಂದ 103ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದಿಂದ;

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

[1][(ಎಫ್) 69ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದಿಂದ][1]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಕ ಬಾಧಿತನಾದರೆ, ಸಂದರ್ಭಾನುಸಾರ ತೀರ್ಮಾನ, ಐತೀರ್ಪು ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.

[1][(2) ಹಣದ ಸಂದಾಯಕ್ಕಾಗಿನ ಯಾವುದೇ ಆದೇಶದ, ನಿರ್ಣಯದ ಅಥವಾ ಐತೀರ್ಪಿನ ವಿರುದ್ಧ ಸಲ್ಲಿಸುವ ಅಪೀಲಿನ ಜೊತೆಯಲ್ಲಿ, ಆ ಆದೇಶದ, ನಿರ್ಣಯದ ಅಥವಾ ಐತೀರ್ಪಿನ ಪ್ರಕಾರ ಬಾಕಿ ಇರುವ ಮೊಬಲಗಿನ ಶೇಕಡಾ ಇಪ್ಪತ್ತೈದರಷ್ಟನ್ನು ಸಂಬಂಧಪಟ್ಟ ಸಂಘದಲ್ಲಿ ಠೇವಣಿ ಇಟ್ಟಿರುವ ಬಗ್ಗೆ ತೃಪ್ತಿಕರವಾದ ರುಜುವಾತನ್ನು ಸಲ್ಲಿಸಿದ್ದ ಹೊರತು, ಅಪೀಲು ಪ್ರಾಧಿಕಾರವು ಆ ಯಾವುದೇ ಅಪೀಲನ್ನು ಪರಿಗಣಿಸತಕ್ಕದ್ದಲ್ಲ. ಅಪೀಲನ್ನು ವಿಲೆ ಮಾಡಿದ ತರುವಾಯ, ಹಾಗೆ ಠೇವಣಿ ಇಟ್ಟಿರುವ ಮೊಬಲಗನ್ನು, ಅಪೀಲುದಾರನು ಸಂದಾಯ ಮಾಡಬೇಕಾದ ಮೊಬಲಗಿನ ಸಂಬಂಧದಲ್ಲಿ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಅಪೀಲುದಾರನು ಯಾವುದೇ ಮೊಬಲಗನ್ನು ಸಂದಾಯ ಮಾಡಬೇಕಾಗಿಲ್ಲದ ಸಂದರ್ಭದಲ್ಲಿ, ಹಾಗೆ ಠೇವಣಿ ಇಟ್ಟಿರುವ ಮೊಬಲಗನ್ನು ಸಂಘವು ಅವನಿಗೆ ಮರುಪಾವತಿ ಮಾಡತಕ್ಕದ್ದು.][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**105ಎ. ಸಂಘಗಳಿಗೆ ಸದಸ್ಯರ ಪ್ರವೇಶಕ್ಕೆ ಸಂಬಂಧಿಸಿದ ಅಪೀಲುಗಳು.**ಕ (1)16ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸದಸ್ಯನಾಗಿ ಪ್ರವೇಶ ಕೋರಿ ಅರ್ಜಿ ಸಲ್ಲಿಸಿದ ಯಾರೇ ವ್ಯಕ್ತಿಯು, ಸದಸ್ಯನಾಗಿ ತನಗೆ ಪ್ರವೇಶ ಕೊಡಲು ಸಹಕಾರ ಸಂಘವು ಮಾಡಿದ ಯಾವುದೇ ನಿರಾಕರಣೆಯ ವಿರುದ್ಧ ಅಥವಾ 16ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯೊಳಗಾಗಿ ತನಗೆ ಅದು ಸದಸ್ಯನಾಗಿ ಪ್ರವೇಶ ಕೊಡಲು ಅಥವಾ ಪ್ರವೇಶ ನಿರಾಕರಣೆಯ ನೋಟೀಸು ನೀಡಲು ತಪ್ಪಿದರೆ ಆ ಯಾವುದೇ ತಪ್ಪಿನ ವಿರುದ್ಧ [3][[2][ರಿಜಿಸ್ಟ್ರಾರನಿಗೆ][2]][3] ಅಪೀಲು ಸಲ್ಲಿಸಬಹುದು.

1 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾಗುವ ಪ್ರತಿಯೊಂದು ಅಪೀಲನ್ನು ಸಂದರ್ಭಾನುಸಾರ, ನಿರಾಕರಣೆಯ ತಿಳಿವಳಿಕೆಯ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ

ಅಥವಾ 10ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಪ್ರವೇಶವನ್ನು ನಿರಾಕರಿಸಲಾಗಿದೆಯೆಂದು ಭಾವಿಸತಕ್ಕ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಪ್ರವೇಶ ಬಯಸುವ ವ್ಯಕ್ತಿಯು, ಲಿಖಿತ ಅರ್ಜಿಯ ಮೂಲಕ ಸಲ್ಲಿಸತಕ್ಕದು.[1][xxx][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[2][1][(3) ರಿಜಿಸ್ಟ್ರಾರನು ಸಹಕಾರ ಸಂಘಕ್ಕೆ ಹಾಗೂ ಪ್ರವೇಶವನ್ನು ಕೋರುತ್ತಿರುವ ವ್ಯಕ್ತಿಗೆ ನೋಟೀಸನ್ನು ನೀಡಿದ ತರುವಾಯ ಮತ್ತು ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿ, ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಹೊರಡಿಸತಕ್ಕದ್ದು. ಸಹಕಾರ ಸಂಘವು ಆದೇಶವನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗಾಗಿ ತೀರ್ಮಾನವನ್ನು ಜಾರಿಗೆ ತರತಕ್ಕದ್ದು.][1]][2]

1. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) [1][xxx][1]

(5) [1][xxx][1]

1. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

106. ಇತರ ಪ್ರಾಧಿಕಾರಿಗಳಿಗೆ ಅಪೀಲುಗಳು.Š (1) [1][108ಎ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು]1 ,Š

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಎ) 7ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;

(ಬಿ) 12ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 30.03.2010 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಸಿ) 17ನೇ ಪ್ರಕರಣದ ಮೇರೆಗಿನ ರಿಜಿಸ್ಟ್ರಾರನ ಆದೇಶ;

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ ಮತ್ತು 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22.3.2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಿ) 27ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;

[1][(ಡಿ-1) 28ಎ(5) ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][[2][(ಡಿŠ2)][2] 29ಸಿ ಪ್ರಕರಣದ ಮೇರೆಗಿನ ರಿಜಿಸ್ಟ್ರಾರನ ಆದೇಶ;][1]

1. 1976ರ ಅಧಿನಿಯಮ ಸಂಖ್ಯೆ 70ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಮರುಸಂಖ್ಯೆ ನೀಡಲಾಗಿದೆ.

(ಇ) [1][xxx][1] 30ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಇ-1) 31ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ [2][xxx][2] ರಿಜಿಸ್ಟ್ರಾರನ ಆದೇಶ;][1]

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 22.3.2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಎಫ್) 66ನೇ ಪ್ರಕರಣದ ಮೇರೆಗೆ ಪುಸ್ತಕಗಳನ್ನು ಅಥವಾ ಸ್ವತ್ತನ್ನು ಅಭಿಗ್ರಹಣ ಮಾಡುವುದು ಮತ್ತು ಪರಿಬದ್ಧಗೊಳಿಸುವುದು;

(ಜಿ) 64ನೇ ಪ್ರಕರಣದ ಮೇರೆಗೆ ಮಾಡಲಾದ ತನಿಖೆಯ ಅಥವಾ 65ನೇ ಪ್ರಕರಣದ ಮೇರೆಗೆ ಮಾಡಲಾದ ಪರಿಶೀಲನೆಯ ಖರ್ಚುಗಳನ್ನು ಹಂಚಿಹಾಕಿ 67ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;

(ಹೆಚ್) 68ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನ ಆದೇಶ;

[1][(ಐ) x x x][1]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಜೆ) [1][xxx][1] 72ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಕೆ) ಸಹಕಾರ ಸಂಘದ ಸಮಾಪಕನು 74ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಆದರೆ, ಆ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗಿನ ನಿರ್ಧಾರದ ಹೊರತಾದ ಯಾವುದೇ ಆದೇಶ;

[1][(ಕೆ-1) 99ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎಲ್) 101ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ; ಅಥವಾ

(ಎಂ) 105ನೇ ಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಿದ ಆದೇಶದ ಹೊರತಾದ ಯಾವುದೇ ಸ್ವತ್ತಿನ ಬಗ್ಗೆ 103ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಯಾವುದೇ ಜಪ್ತಿ ಆದೇಶ;

[1][(ಎನ್) 105ಎ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಆದೇಶ;

(ಒ) 111ನೇ ಪ್ರಕರಣದ ಮೇರೆಗೆ ಮಾಡಿದ ರಿಜಿಸ್ಟ್ರಾರನ ಆದೇಶ.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಽ ಇವುಗಳ ವಿರುದ್ಧ ಈ ಪ್ರಕರಣದ ಮೇರೆಗೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕುದು.

(2) (1)ನೇ ಉಪ ಪ್ರಕರಣದ ಮೇರೆಗಿನ ಯಾವುದೇ ಕಾರ್ಯ, ತೀರ್ಮಾನ ಅಥವಾ ಆದೇಶದ ವಿರುದ್ಧ ಸಲ್ಲಿಸಲಾಗುವ ಅಪೀಲನ್ನು ಆ ಕಾರ್ಯ, ತೀರ್ಮಾನ ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ,ಽ

[1][(ಎ) ಒಂದು ಕಾರ್ಯ, ತೀರ್ಮಾನ ಅಥವಾ ಆದೇಶವನ್ನು ಸಹಾಯಕ ರಿಜಿಸ್ಟ್ರಾರನು ಮಾಡಿದ್ದರೆ, ಕ್ಷೇತ್ರಾಧಿಕಾರ ಹೊಂದಿರುವ ಉಪ ರಿಜಿಸ್ಟ್ರಾರನಿಗೆ;

(ಬಿ) ಒಂದು ಕಾರ್ಯ, ತೀರ್ಮಾನ ಅಥವಾ ಆದೇಶವನ್ನು ಉಪ ರಿಜಿಸ್ಟ್ರಾರನು ಮಾಡಿದ್ದರೆ, ಕ್ಷೇತ್ರಾಧಿಕಾರ ಹೊಂದಿರುವ ಜಂಟಿ ರಿಜಿಸ್ಟ್ರಾರನಿಗೆ;

(ಸಿ) ಒಂದು ಕಾರ್ಯ, ತೀರ್ಮಾನ ಅಥವಾ ಆದೇಶವನ್ನು ಜಂಟಿ ರಿಜಿಸ್ಟ್ರಾರನು ಮಾಡಿದ್ದರೆ, ಕ್ಷೇತ್ರಾಧಿಕಾರ ಹೊಂದಿರುವ ಹೆಚ್ಚುವರಿ ರಿಜಿಸ್ಟ್ರಾರನಿಗೆ ಅಥವಾ ಸಂದರ್ಭಾನುಸಾರ ರಿಜಿಸ್ಟ್ರಾರನಿಗೆ ;

(ಡಿ) ಒಂದು ಕಾರ್ಯ, ತೀರ್ಮಾನ ಅಥವಾ ಆದೇಶವನ್ನು ಹೆಚ್ಚುವರಿ ರಿಜಿಸ್ಟ್ರಾರನು ಮಾಡಿದ್ದರೆ, ರಿಜಿಸ್ಟ್ರಾರನಿಗೆ ;

(ಇ) ಒಂದು ಕಾರ್ಯ, ತೀರ್ಮಾನ ಅಥವಾ ಆದೇಶವನ್ನು ರಿಜಿಸ್ಟ್ರಾರನು ಮಾಡಿದ್ದರೆ, ರಾಜ್ಯ ಸರ್ಕಾರಕ್ಕೆ ;][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಮತ್ತೂ ಪರಂತು, ಸದರಿ ಅವಧಿಯೊಳಗೆ ಅಪೀಲು ಸಲ್ಲಿಸದಿರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದುವೆಂದು ಅಪೀಲು ಪ್ರಾಧಿಕಾರಕ್ಕೆ ಮನವರಿಕೆಯಾದರೆ, ಅರವತ್ತು ದಿನಗಳ ಸದರಿ ಅವಧಿಯ ತರುವಾಯ ಅದು ಅಪೀಲನ್ನು ಅಂಗೀಕರಿಸಬಹುದು.][1]

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5.9.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**ವಿವರಣೆ.**- x x x x][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ

[1][(3) ಅಪೀಲನ್ನು ಸಲ್ಲಿಸಿದಾಗ, ಅಪೀಲು ಪ್ರಾಧಿಕಾರವು ನ್ಯಾಯೋದ್ದೇಶಗಳು ವಿಫಲವಾಗುವುದನ್ನು ತಡೆಯಲು ಅಪೀಲಿನ ಅಂತಿಮ ತೀರ್ಮಾನವು ಇತ್ಯರ್ಥದಲ್ಲಿರುವಾಗ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವಾದಕಾಲೀನ ಆದೇಶಗಳನ್ನು ಹೊರಡಿಸಬಹುದು.

(4) ಈ ಪ್ರಕರಣದ ಅಡಿಯಲ್ಲಿ ಒಂದು ಅಪೀಲನ್ನು ವಿಲೆ ಮಾಡುವಲ್ಲಿ ಅಪೀಲು ಪ್ರಾಧಿಕಾರವು, ಪಕ್ಷಕಾರರಿಗೆ ಅವರ ಮನವಿಗಳನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅದರ ಮೇಲೆ ಅಂಥ ಆದೇಶವನ್ನು ಜಾರಿಗೊಳಿಸಬಹುದು.][1]

[1][(5) ಅಪೀಲನ್ನು, ನ್ಯಾಯಾಲಯವು ತಡೆಯಾಜ್ಞೆಯನ್ನೇನಾದರು ನೀಡಿದ್ದರೆ, ಆ ಅವಧಿಯನ್ನು ಹೊರತುಪಡಿಸಿ, ಹನ್ನೆರಡು ತಿಂಗಳ ಅವಧಿಯೊಳಗಾಗಿ ತೀರ್ಮಾನಿಸತಕ್ಕದ್ದು. ಆದಾಗ್ಯೂ, ರಿಜಿಸ್ಟ್ರಾರನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಆ ಅವಧಿಯನ್ನು ಹದಿನೆಂಟು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದು:

[1][ಪರಂತು, ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ಮಾಡಿದ ವರದಿಯ ಮೇಲೆ ವಿಸ್ತರಣೆಗೆ ನೈಜ ಅಥವಾ ಸಮಂಜಸ ಆಧಾರಗಳಿವೆ ಎಂದು ಅದಕ್ಕೆ ಮನದಟ್ಟಾದರೆ, ಹದಿನೆಂಟು ತಿಂಗಳುಗಳಿಗೆ ಮೀರಿದ ಅವಧಿಗೆ ವಿಸ್ತರಿಸಬಹುದು.][1]

1. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ಹಣದ ಸಂದಾಯಕ್ಕಾಗಿನ ಯಾವುದೇ ಆದೇಶದ ನಿರ್ಣಯ ಅಥವಾ ಐತೀರ್ಪಿನ ವಿರುದ್ಧ ಸಲ್ಲಿಸುವ ಅಪೀಲಿನ ಜೊತೆಯಲ್ಲಿ, ಆ ಆದೇಶದ, ನಿರ್ಣಯದ ಅಥವಾ ಐತೀರ್ಪಿನ ಪ್ರಕಾರ ಬಾಕಿ ಇರುವ ಮೊಬಲಗಿನ ಶೇಕಡಾ ಇಪ್ಪತ್ತೈದರಷ್ಟನ್ನು ಸಂಬಂಧಪಟ್ಟ ಸಂಘದಲ್ಲಿ ಠೇವಣಿ ಇಟ್ಟಿರುವ ಬಗ್ಗೆ ತೃಪ್ತಿಕರವಾದ ರುಜುವಾತನ್ನು ಸಲ್ಲಿಸಿದ್ದ ಹೊರತು, ಅಪೀಲು ಪ್ರಾಧಿಕಾರವು ಆ ಯಾವುದೇ ಅಪೀಲನ್ನು ಪರಿಗಣಿಸತಕ್ಕದ್ದಲ್ಲ. ಅಪೀಲನ್ನು ವಿಲೆ ಮಾಡಿದ ತರುವಾಯ, ಹಾಗೆ ಠೇವಣಿ ಇಟ್ಟಿರುವ ಮೊಬಲಗನ್ನು, ಅಪೀಲುದಾರನು ಸಂದಾಯ ಮಾಡಬೇಕಾದ ಮೊಬಲಗಿನ ಸಂಬಂಧದಲ್ಲಿ ಹೊಂದಾಣಿಕೆ ಮಾಡತಕ್ಕದ್ದು ಮತ್ತು

ಅಪೀಲುದಾರನು ಯಾವುದೇ ಮೊಬಲಗನ್ನು ಸಂದಾಯ ಮಾಡಬೇಕಾಗಿಲ್ಲದ ಸಂದರ್ಭದಲ್ಲಿ, ಹಾಗೆ ಠೇವಣಿ ಇಟ್ಟಿರುವ ಮೊಬಲಗನ್ನು ಸಂಘವು ಅವನಿಗೆ ಮರುಪಾವತಿ ಮಾಡತಕ್ಕದ್ದು.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

107. ನ್ಯಾಯಾಧಿಕರಣದಿಂದ ಪುನರೀಕ್ಷಣೆ.- [1][108ಎ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ನ್ಯಾಯಾಧಿಕರಣವು][1] ಸ್ವಪ್ರೇರಣೆಯಿಂದ ಅಥವಾ ಬಾಧಿತನಾದ ಯಾರೇ ವ್ಯಕ್ತಿಯ ಅರ್ಜಿಯ ಮೇಲೆ ಯಾವ ವ್ಯವಹರಣೆಗಳಲ್ಲಿ ಅದಕ್ಕೆ ಅಪೀಲು ಸಲ್ಲಿಸಲು ಅವಕಾಶವಿರುವುದೋ ಆ ಯಾವುದೇ ವ್ಯವಹರಣೆಗಳ ದಾಖಲೆಯನ್ನು ಮಾಡಲಾದ ಯಾವುದೇ ತೀರ್ಮಾನದ ಅಥವಾ ಆದೇಶದ ಕಾನೂನು ಮಾನ್ಯತೆ ಅಥವಾ ಔಚಿತ್ಯವನ್ನು ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶದಿಂದ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು, ಮತ್ತು ಯಾವುದೇ ಸಂದರ್ಭದಲ್ಲಿ ಅಂಥ ತೀರ್ಮಾನವನ್ನು ಅಥವಾ ಆದೇಶವನ್ನು ಮಾರ್ಪಡಿಸತಕ್ಕುದೆಂದು, ಶೂನ್ಯಗೊಳಿಸತಕ್ಕುದೆಂದು ಅಥವಾ ಪುನರೀಕ್ಷಿಸತಕ್ಕದ್ದೆಂದು ನ್ಯಾಯಾಧಿಕರಣಕ್ಕೆ ಕಂಡುಬಂದರೆ ಅದರ ಬಗ್ಗೆ ನ್ಯಾಯಾಧಿಕರಣವು ತಾನು ಯುಕ್ತವೆಂದು ಭಾವಿಸುವಂಥ ಆದೇಶ ಮಾಡಬಹುದು.

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

108. ರಾಜ್ಯಸರ್ಕಾರದ ಪುನರೀಕ್ಷಣೆಯ ಅಧಿಕಾರಗಳು.- [1][108ಎ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು][1] ಸ್ವಪ್ರೇರಣೆಯಿಂದ ಯಾವುದೇ ಕಾಲಕ್ಕೆ, ಮತ್ತು ಯಾವುದೇ ಆದೇಶದ ದಿನಾಂಕದಿಂದ ಆರು ತಿಂಗಳೊಳಗಾಗಿ, ಬಾಧಿತನಾದ ಯಾರೇ ವ್ಯಕ್ತಿಯು ಅರ್ಜಿ ಸಲ್ಲಿಸಿದ ಮೇಲೆ, ತನಗೆ ಅಧೀನವಾದ ಯಾರೇ ಅಧಿಕಾರಿಯ ಯಾವುದೇ ಪ್ರಕರಣದ ಅಥವಾ ವ್ಯವಹರಣೆಗಳ ದಾಖಲೆಗಳನ್ನು, ನ್ಯಾಯಾಧಿಕರಣಕ್ಕೆ ಮಾಡಲಾದ ಅಪೀಲಿಗೆ ಅಥವಾ ಅದರ ಪುನರೀಕ್ಷಣೆಗೆ ಒಳಪಟ್ಟವುಗಳನ್ನು ಅಥವಾ [2][106ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಅಥವಾ ಇತರ ಪ್ರಾಧಿಕಾರಗಳಿಗೆ ಸಲ್ಲಿಸಿದ ಅಪೀಲಿಗೆ][2] ಸಂಬಂಧಿಸಿದವುಗಳನ್ನು ಹೊರತುಪಡಿಸಿ, ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು; ಮತ್ತು ರಾಜ್ಯ ಸರ್ಕಾರಕ್ಕೆ ತನಗೆ ಯೋಗ್ಯವೆನಿಸುವಂಥ ತನಿಖೆ ನಡೆಸಿದ ತರುವಾಯ ಅಧಿಕಾರಿಯ ಆದೇಶವು ಕಾನೂನು ವಿರುದ್ಧವಾಗಿದೆಯೆಂದು ಮತ್ತು ನ್ಯಾಯ ವೈಫಲ್ಯದಲ್ಲಿ ಪರಿಣಮಿಸಿದೆಯೆಂದು ಮನದಟ್ಟಾದರೆ, ಅದರ ಮೇಲೆ ರಾಜ್ಯ ಸರ್ಕಾರವು ತನಗೆ ನ್ಯಾಯವೆಂದೆನಿಸುವಂಥ ಆದೇಶ ಮಾಡಬಹುದು:

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಗೆ ಬಾಧಕವಾಗುವಂಥ ಯಾವುದೇ ಆದೇಶವನ್ನು, ಅವನಿಗೆ ಸುನಾವಣೆಯ ಯುಕ್ತ ಅವಕಾಶವನ್ನು ಕೊಟ್ಟ ಹೊರತು ಮಾಡತಕ್ಕುದಲ್ಲ.

[1][108ಎ. **ಕೆಲವು ಪ್ರಕರಣಗಳಲ್ಲಿ ಯಾವುದೇ ಅಪೀಲಿಗೆ ಅಥವಾ ಪುನರೀಕ್ಷಣೆಗೆ ಅವಕಾಶವಿಲ್ಲದಿರುವುದು.**- ಈ ಅಧಿನಿಯಮದಲ್ಲಿ ಏನೇ ಇದ್ದರೂ, ರಿಸರ್ವ್ ಬ್ಯಾಂಕಿನ ಲಿಖಿತಪೂರ್ವ ಮಂಜೂರಾತಿ ಪಡೆದು ಅಥವಾ ಕೋರಿಕೆಯ ಮೇಲೆ,-

(i) ಸಹಕಾರ ಬ್ಯಾಂಕನ್ನು ಸಮಾಪನಗೊಳಿಸಲು ಆದೇಶಿಸಿದ್ದರೆ; ಅಥವಾ

(ii) ಸಹಕಾರ ಬ್ಯಾಂಕಿನ ಸಮ್ಮಿಲನ ಅಥವಾ ಪುನರ್ ಸಂಘಟನೆಯ ಯೋಜನೆಯನ್ನು ಜಾರಿಗೆ ತಂದಿದ್ದರೆ; ಅಥವಾ

(iii) ಸಹಕಾರ ಸಂಘದ ಸಂಬಂಧದಲ್ಲಿ ಸಮಿತಿಯನ್ನು ತೆಗೆದುಹಾಕುವ ಮತ್ತು ಆಡಳಿತಗಾರನನ್ನು [2][ಮತ್ತು ವಿಶೇಷಾಧಿಕಾರಿಯನ್ನು][2] ನೇಮಿಸುವ ಆದೇಶವನ್ನು ಮಾಡಿದ್ದರೆ

- ಅಂಥ ಆದೇಶ ಅಥವಾ ಕ್ರಮದ ವಿರುದ್ಧ ಯಾವುದೇ ಅಪೀಲು ಅಥವಾ

ಪುನರೀಕ್ಷಣೆಗೆ ಅವಕಾಶವಿರತಕ್ಕುದಲ್ಲ ಮತ್ತು ರಿಸರ್ವ್ ಬ್ಯಾಂಕಿನ ಮಂಜೂರಾತಿ ಅಥವಾ ಕೋರಿಕೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿರತಕ್ಕುದಲ್ಲ.][1]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಅಧ್ಯಾಯ- XIV

ಅಪರಾಧಗಳು ಮತ್ತು ದಂಡನೆಗಳು

109. ಅಪರಾಧಗಳು:- (1) ``ಸಹಕಾರ'' ಅಥವಾ ಯಾವುದೇ ಭಾರತೀಯ ಭಾಷೆಯಲ್ಲಿನ ಅದರ ಸಮಾನ ಪದವು ಯಾವ ಹೆಸರಿನ ಅಥವಾ ಶೀರ್ಷಿಕೆಯ ಭಾಗವಾಗಿರುವುದೋ ಆ ಯಾವುದೇ ಹೆಸರಿನಲ್ಲಿ ಅಥವಾ ಶೀರ್ಷಿಕೆಯಲ್ಲಿ, ರಾಜ್ಯ ಸರ್ಕಾರದ ಮಂಜೂರಾತಿ ಇಲ್ಲದೆಯೇ ವ್ಯವಹಾರ ನಡೆಸುವ ಸಹಕಾರ ಸಂಘದ ಹೊರತಾದ ಯಾರೇ ವ್ಯಕ್ತಿಯು [1][ಎರಡು ಸಾವಿರ][1] ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(1ಓಎ) 105ಓಎ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ರಿಜಿಸ್ಟ್ರಾರನ ಆದೇಶವನ್ನು ಕಾರ್ಯರೂಪಕ್ಕೆ ತರಲು ತಪ್ಪಿದರೆ, ಸಹಕಾರ ಸಂಘವು ಮತ್ತು ಸಂಘದ ಕರ್ತವ್ಯಲೋಪ ಮಾಡಿದ ಪ್ರತಿಯೊಬ್ಬ [2][ಪದಾಧಿಕಾರಿಯು][2] ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಮತ್ತು ಮೊದಲ ಕರ್ತವ್ಯಲೋಪದ ತರುವಾಯ, ಕರ್ತವ್ಯ ಲೋಪವು ಮುಂದುವರಿದ ಅವಧಿಯ ಪ್ರತಿದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನಷ್ಟು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 32ನೇ ಅಥವಾ 33ನೇ ಪ್ರಕರಣದ ಮೇರೆಗೆ ಯಾವ ಸ್ವತ್ತಿನ ಬಗ್ಗೆ ಸಹಕಾರ ಸಂಘವು ಪ್ರಥಮ ಚಾರ್ಜನ್ನು ಹೊಂದಿರಲು ಹಕ್ಕು ಹೊಂದಿರುವುದೋ ಆ ಸ್ವತ್ತನ್ನು ಸದರಿ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ವಿಲೆ ಮಾಡುವ ಅಥವಾ ಅಂಥ ಕ್ಲೇಮಿಗೆ ಬಾಧಕವಾಗುವ ಯಾವುದೇ ಇತರ ಕೃತ್ಯವನ್ನು ಮಾಡುವ ಸಂಘದ ಯಾರೇ ಸದಸ್ಯ ಅಥವಾ ಹಿಂದಿನ ಸದಸ್ಯ ಅಥವಾ ಮೃತ ಸದಸ್ಯನ ನಾಮನಿರ್ದೇಶಿತನು, ವಾರಸುದಾರನು ಅಥವಾ ಕಾನೂನುಸಮ್ಮತ ಪ್ರತಿನಿಧಿಯು, [1][ಐದು ಸಾವಿರ][1] ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಬುದ್ಧಿಪೂರ್ವಕವಾಗಿ ಸುಳ್ಳು ವಿವರಪತ್ರ ತಯಾರಿಸುವ ಅಥವಾ ಸುಳ್ಳು ಮಾಹಿತಿಯನ್ನು ಒದಗಿಸುವ ಸಹಕಾರ ಸಂಘವು ಅಥವಾ ಅದರ [1][ಪದಾಧಿಕಾರಿಯು][1] ಅಥವಾ ಸದಸ್ಯನು, ಅಥವಾ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಹೊರಡಿಸಲಾದ ಯಾವುದೇ ಸಮನನ್ನು, ಕೋರಿಕೆಯನ್ನು ಅಥವಾ ಕಾನೂನುಸಮ್ಮತ ಲಿಖಿತ ಆದೇಶವನ್ನು ಬುದ್ಧಿಪೂರ್ವಕವಾಗಿ ಅಥವಾ ಯಾವುದೇ ಯುಕ್ತ ಕಾರಣವಿಲ್ಲದೆ ಪಾಲಿಸದ ಅಥವಾ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಈ ಬಗ್ಗೆ ಅಧಿಕೃತನಾದ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳ ನಿಕಾಯದಿಂದ ಕೇಳಲಾಗುವ ಯಾವುದೇ ಮಾಹಿತಿಯನ್ನು ಬುದ್ಧಿಪೂರ್ವಕವಾಗಿ ಒದಗಿಸದ ಅಥವಾ ಯಾವುದೇ ದಸ್ತಾವೇಜುಗಳನ್ನು ಅಥವಾ ಸ್ವತ್ತನ್ನು ಒಪ್ಪಿಸಿಕೊಡದ ಯಾರೇ ವ್ಯಕ್ತಿಯು, [2][ಮೂರು ತಿಂಗಳಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐದು ನೂರು ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದು.][2]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) 34ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಕಳೆತವನ್ನು ಮಾಡಲು ಸಾಕಷ್ಟು ಕಾರಣವಿಲ್ಲದೆ ತಪ್ಪುವ ಅಥವಾ 34ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ತಾನು ಕಳೆತ ಮಾಡಿದ ಮೊಬಲಗನ್ನು ಅಂಥ ಕಳೆತವನ್ನು ಮಾಡಿದ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯೊಳಗೆ ಆ ಸಹಕಾರ ಸಂಘಕ್ಕೆ ಸಂದಾಯ ಮಾಡಲು ತಪ್ಪುವ ಯಾರೇ ನಿಯೋಜಕನು, ಅವನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಮೇರೆಗೆ ಅವನ ವಿರುದ್ಧ ಕೈಕೊಳ್ಳಬಹುದಾದ ಯಾವುದೇ ಕ್ರಮಕ್ಕೆ ಪ್ರತಿಕೂಲವಾಗದಂತೆ, [1][ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) 16ನೇ ಪ್ರಕರಣದ [1][(4)ನೇ ಉಪಪ್ರಕರಣ]1ದ, 24ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ (i)ನೇ ಉಪಖಂಡದ, 28ನೇ ಪ್ರಕರಣದ (1)ನೇ ಉಪಪ್ರಕರಣದ, 56ನೇ ಪ್ರಕರಣದ, 58ನೇ ಪ್ರಕರಣದ, 59ನೇ ಪ್ರಕರಣದ, 60ನೇ ಪ್ರಕರಣದ ಅಥವಾ 62ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ಕರ್ತವ್ಯಲೋಪ ಮಾಡುವ ಕರ್ತವ್ಯಲೋಪ ಮಾಡಿದ ಸಹಕಾರ ಸಂಘ, ಮತ್ತು ಕರ್ತವ್ಯಲೋಪ ಮಾಡಿದ ಆ ಸಂಘದ ಪ್ರತಿಯೊಬ್ಬ [2][ಪದಾಧಿಕಾರಿಯು][2] ಅಥವಾ ಅದರ ಸಮಿತಿಯ ಸದಸ್ಯನು, [3][ಮೂರು][3] ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದು.

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(6) ಯಾರೇ ವ್ಯಕ್ತಿಯು,Ŝ

(i) 17ನೇ ಪ್ರಕರಣದ ಮೇರೆಗೆ ಸದಸ್ಯನಾಗಲು ಅರ್ಹನಲ್ಲದ ವ್ಯಕ್ತಿಯು ಸದಸ್ಯನಾಗಿ ಪ್ರವೇಶ ಕೋರಿ ಸಹಕಾರ ಸಂಘಕ್ಕೆ ಅರ್ಜಿ ಸಲ್ಲಿಸಿದರೆ ಅಥವಾ ಸದಸ್ಯನಾದರೆ ಅಥವಾ ಆ ಪ್ರಕರಣದ [1][(2)ನೇ ಉಪಪ್ರಕರಣದ ಮೇರೆಗೆ ಸದಸ್ಯನಾಗಿರುವುದು ಮುಕ್ತಾಯವಾದ ತರುವಾಯ ಅಂಥ ಯಾವುದೇ ಸಹಕಾರ ಸಂಘದ ಸದಸ್ಯನಾಗಿ ವರ್ತಿಸಿದರೆ ಅಥವಾ ಸದಸ್ಯನ ಯಾವುವೇ ಹಕ್ಕುಗಳನ್ನು ಅಥವಾ ವಿಶೇಷಾಧಿಕಾರಗಳನ್ನು ಚಲಾಯಿಸಿದರೆ;][1]

1. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) 19ನೇ ಪ್ರಕರಣದ ಉಪಬಂಧಗಳನ್ನು ಉಲಂಘಿಸಿ ಸದಸ್ಯನ ಹಕ್ಕುಗಳನ್ನು ಚಲಾಯಿಸಿದರೆ;

(iii) 87ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸಿ ಮಾಹಿತಿಯನ್ನು ಅಥವಾ ದಸ್ತಾವೇಜನ್ನು ಒದಗಿಸಲು ಬುದ್ಧಿಪೂರ್ವಕವಾಗಿ ತಪ್ಪಿದರೆ;

(iv) 95ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಉಲಂಘಿಸಿ, ಅಡಮಾನ ಸ್ವತ್ತನ್ನು ಗುತ್ತಿಗೆಗೆ ಕೊಟ್ಟರೆ

ಕ ಅವನು [1][ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ][1] ದಂಡನೀಯನಾಗತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(7) 26ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮತನೀಡಲು ಅರ್ಹನಲ್ಲದ ಯಾವನೇ ವ್ಯಕ್ತಿಯು ಅಂಥ ಮತವನ್ನು ಚಲಾಯಿಸಿದರೆ, ಅವನು [2][ಮೂರು ಸಾವಿರ][2] ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದು.][1]

1. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(8) ರೂಪುಗೊಳ್ಳುತ್ತಿರುವ ಸಹಕಾರ ಸಂಘದ ಸಲುವಾಗಿ ಷೇರು ಹಣವೆಂದು ಯಾವುದೇ ಹಣವನ್ನು ಸಂಗ್ರಹಿಸುತ್ತಿರುವ ಯಾರೇ ವ್ಯಕ್ತಿಯು ಆ ಹಣವನ್ನು, ರೂಪುಗೊಳ್ಳುತ್ತಿರುವ ಆ ಸಹಕಾರ ಸಂಘದ ಹೆಸರಿನಲ್ಲಿ ಈ ಬಗ್ಗೆ ರಿಜಿಸ್ಟ್ರಾರನು ನಿರ್ದಿಷ್ಟಪಡಿಸಬಹುದಾದ ಸಹಕಾರ ಬ್ಯಾಂಕಿನಲ್ಲಿ ಅದನ್ನು ಸಂಗ್ರಹಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಠೇವಣಿ ಇಡದೇ ಇದ್ದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ (8) ರಿಂದ (16)ರ ವರೆಗಿನ ಪ್ರಕರಣಗಳನ್ನು ಸೇರಿಸಲಾಗಿದೆ.

(9) ಯಾವುದೇ ಮಾಹಿತಿ, ಪುಸ್ತಕಗಳು ಮತ್ತು ದಾಖಲೆಗಳನ್ನು ತನ್ನ ವಶದಲ್ಲಿ ಹೊಂದಿರುವ ಸಹಕಾರ ಸಂಘದ ಯಾರೇ [1][ಪದಾಧಿಕಾರಿ][1] ಅಥವಾ ಸದಸ್ಯನು 30,[1][31][1], 63,64,65, 65ಬಿ ಅಥವಾ 73 ಕ ಈ ಪ್ರಕರಣಗಳ ಮೇರೆಗೆ ರಾಜ್ಯಸರ್ಕಾರದಿಂದ ಅಥವಾ ರಿಜಿಸ್ಟ್ರಾರನಿಂದ

ಅಥವಾ ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನಿಂದ ನೇಮಿಸಲಾದ ಅಥವಾ ಅಧಿಕೃತನಾದ ಮತ್ತು ಅವುಗಳ ಸ್ವಾಧೀನ ಪಡೆಯಲು ಹಕ್ಕುದಾರನಾದ ವ್ಯಕ್ತಿಗೆ ಅಂಥ ಮಾಹಿತಿ ನೀಡಲು ಅಥವಾ ಅಂಥ ಪುಸ್ತಕ ಇಲ್ಲವೇ ದಾಖಲೆಯನ್ನು ಹಾಜರುಪಡಿಸಲು ಅಥವಾ ನೆರವು ನೀಡಲು ತಪ್ಪಿದಲ್ಲಿ, ಅವನು ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(10) ಸಹಕಾರ ಸಂಘಕ್ಕೆ ಸೇರಿದ ಪುಸ್ತಕಗಳು, ದಾಖಲೆಗಳು, ನಗದು, ಭದ್ರತೆಗಳು ಮತ್ತು ಇತರ ಸ್ವತ್ತು ೇ ಇವುಗಳ ಅಭಿರಕ್ಷೆಯನ್ನು, 30, [1][31][1] ಅಥವಾ 73 ೇ ಈ ಪ್ರಕರಣಗಳ ಮೇರೆಗೆ ನೇಮಿಸಲಾದ ವ್ಯಕ್ತಿಗೆ ಅಥವಾ ಅವುಗಳ ಸ್ವಾಧೀನವನ್ನು ಪಡೆಯಲು ಹಕ್ಕುದಾರನಾದ ಯಾರೇ ಇತರ ವ್ಯಕ್ತಿಗೆ ಅಥವಾ [1][ಪದಾಧಿಕಾರಿಗೆ][1] ಒಪ್ಪಿಸಿ ಕೊಡಲು ತಪ್ಪಿದ ಸಹಕಾರ ಸಂಘದ ಯಾರೇ [1][ಪದಾಧಿಕಾರಿ][1] ಅಥವಾ ಇತರ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(11) ರಿಜಿಸ್ಟ್ರಾರನು ಅಥವಾ ಮಧ್ಯಸ್ಥಗಾರ ಅಥವಾ ನ್ಯಾಯಾಧಿಕರಣವು ಮಾಡಿದ ನಿರ್ಧಾರ, ಐತೀರ್ಪು ಅಥವಾ ಆದೇಶವನ್ನು ಪಾಲಿಸಲು ಬುದ್ಧಿಪೂರ್ವಕವಾಗಿ ತಪ್ಪುವ, ಸಹಕಾರ ಸಂಘದ ಯಾರೇ [1][ಪದಾಧಿಕಾರಿ][1] ಅಥವಾ ಸದಸ್ಯನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(12) ತನ್ನ ಸ್ವಂತ ಬಳಕೆಗಾಗಿ ಅಥವಾ ಪ್ರಯೋಜನಕ್ಕಾಗಿ ಅಥವಾ ತನಗೆ ಹಿತಾಸಕ್ತಿ ಇರುವ ವ್ಯಕ್ತಿಯ ಬಳಕೆ ಅಥವಾ ಪ್ರಯೋಜನಕ್ಕಾಗಿ ಯಾರೇ ಇತರ ವ್ಯಕ್ತಿಯ ಹೆಸರಿನಲ್ಲಿ ಬುದ್ಧಿಪೂರ್ವಕವಾಗಿ ಸಾಲ ಮಂಜೂರಾತಿಗೆ ಶಿಫಾರಸು ಮಾಡುವ ಅಥವಾ ಅದನ್ನು ಮಂಜೂರು ಮಾಡುವ, ಸಹಕಾರ ಸಂಘಗಳ ಯಾರೇ [1][ಪದಾಧಿಕಾರಿ][1] ಅಥವಾ ಸದಸ್ಯನು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(12ಎ) 63ನೇ ಪ್ರಕರಣದ ಮೇರೆಗೆ ಲೆಕ್ಕ ಪರಿಶೋಧನೆಯನ್ನು ಅಥವಾ 64ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ಅಥವಾ 65ನೇ ಪ್ರಕರಣದ ಅಥವಾ 65ಬಿ ಪ್ರಕರಣದ ಮೇರೆಗೆ ಪರಿಶೀಲನೆಯನ್ನು ನಡೆಸುತ್ತಿರುವ ಯಾರೇ ವ್ಯಕ್ತಿಯು;

(i) ಅವನು ಲೆಕ್ಕ ಪರಿಶೋಧನೆ, ವಿಚಾರಣೆ ಅಥವಾ ಪರಿಶೀಲನೆಯ ಸಮಯದಲ್ಲಿ ಗಮನಿಸಿದ ಅಥವಾ ಆ ಸಮಯದಲ್ಲಿ ಸರಿಯಾಗಿ ಶ್ರದ್ಧೆ ವಹಿಸಿದ್ದರೆ ಗಮನಕ್ಕೆ ಬರಬಹುದಾಗಿದ್ದ ಯಾವುದೇ ದೋಷಗಳು ಅಥವಾ ಅಕ್ರಮವನ್ನು ಅವನ ವರದಿಯಲ್ಲಿ ಉದ್ದೇಶಪೂರ್ವಕವಾಗಿ ನಮೂದಿಸುವುದನ್ನು ಬಿಟ್ಟರೆ; ಅಥವಾ

(ii) ಅವನ ವರದಿಯಲ್ಲಿ ಉದ್ದೇಶಪೂರ್ವಕವಾಗಿ ತಪ್ಪು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ; ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅವನ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಇತರ ಕ್ರಮಕ್ಕೆ ಪ್ರತಿಕೂಲವಾಗದಂತೆ ಆರುತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಮೂರು ಸಾವಿರ ರೂ.ಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(12ಬಿ) ಒಬ್ಬ ಮುಖ್ಯ ಕಾರ್ಯನಿರ್ವಾಹಕನು ನಗದು ಪುಸ್ತಕಗಳ ನಿಯಮ ಕಾಲಿಕ ಉದ್ಧೃತಗಳನ್ನು ಮತ್ತು ಸಾಮಾನ್ಯ ಸಭೆಗಳ ಮತ್ತು ಸಮಿತಿ ಸಭೆಗಳ ವ್ಯವಹರಣೆಗಳ ಪ್ರಮಾಣಿತ ಪ್ರತಿಗಳನ್ನು 29ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ರಿಜಿಸ್ಟ್ರಾರರಿಗೆ ಮತ್ತು ಹಣಕಾಸು ನೀಡಿಕೆ ಬ್ಯಾಂಕಿಗೆ ಅಥವಾ ಸಾಲನೀಡಿಕೆ ಏಜೆನ್ಸಿಗೆ ಕಳುಹಿಸಲು ವಿಫಲವಾದಲ್ಲಿ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಕಾರಾವಾಸದಿಂದ ಅಥವಾ ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ (12-ಎ) ಮತ್ತು (12-ಬಿ) ಉಪಪ್ರಕರಣಗಳನ್ನು ಸೇರಿಸಲಾಗಿದೆ.

(13) ಸಮುಚಿತ ಅಪೀಲು ಪ್ರಾಧಿಕಾರವು ನೀಡಿದ ಆದೇಶ ಯಾವುದಾದರೂ ಇದ್ದರೆ ಅದೂ ಸೇರಿದಂತೆ, 71ನೇ ಪ್ರಕರಣದ ಮೇರೆಗಿನ ಯಾವುದೇ ತೀರ್ಮಾನ ಅಥವಾ ಐತೀರ್ಪನ್ನು ಜಾರಿಗೆ ತರುವಲ್ಲಿ ತಪ್ಪುವ ಯಾವುದೇ ಸಹಕಾರ ಸಂಘ ಅಥವಾ ಅದರ ಯಾರೇ [1][ಪದಾಧಿಕಾರಿ][1] ಅಥವಾ ನಿಯೋಜಿತ ಅಥವಾ ವೇತನ ಪಡೆಯುವ ನೌಕರನು ಅಂಥ ನಿರ್ಧಾರ ಇಲ್ಲವೇ ಐತೀರ್ಪು ಹಣದ ಡಿಕ್ರಿಯಾಗಿಲ್ಲದಿರುವಲ್ಲಿ, ಅಂಥ ಕರ್ತವ್ಯಲೋಪವನ್ನು,ಽ

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಮಂಡಲಿಯು ಮಾಡಿರುವಲ್ಲಿ, ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು, ಮತ್ತು

(ಬಿ) ಅಂಥ ಸಹಕಾರ ಸಂಘದ [1][ಪದಾಧಿಕಾರಿ][1] ಅಥವಾ ನಿಯೋಜಿತ ಅಥವಾ ವೇತನ ಪಡೆಯುವ ನೌಕರನು ಮಾಡಿರುವಲ್ಲಿ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(14) ಯಾವೊಂದು ಸಹಕಾರ ಸಂಘದ ಸ್ವತ್ತುಗಳು ಅಥವಾ ನಿಧಿಗಳನ್ನು ಈ ಅಧಿನಿಯಮ, ಸಂಘದ ನಿಯಮಗಳು ಅಥವಾ ಉಪವಿಧಿಗಳ ಉಪಬಂಧಗಳಿಗನುಸಾರವಾಗಿ ಹೊರತು ಅನ್ಯಥಾ ಬಳಸುವ ಅಥವಾ ಬಳಸಲು ಅವಕಾಶ ನೀಡುವ ಆ ಸಹಕಾರ ಸಂಘದ ಸಮಿತಿಯ ಸದಸ್ಯನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(15) ಸಹಕಾರ ಸಂಘದ [1][ಪದಾಧಿಕಾರಿ][1], ನಿಯೋಜಿತ, ವೇತನ ಪಡೆದ ನೌಕರ ಅಥವಾ ಸದಸ್ಯನು ಬೇನಾಮಿ ಸಾಲವನ್ನು ಪಡೆದಿರುವಲ್ಲಿ ಅಥವಾ ಮಂಜೂರು ಮಾಡಿರುವಲ್ಲಿ, ಯಾವುದೇ ಅಧಿಕೃತ ಕಾರ್ಯವನ್ನು ಮಾಡಲು ಅಥವಾ ಮಾಡದೇ ಇರಲು, ತನ್ನ ಅಧಿಕೃತ ಪ್ರಕಾರ್ಯಗಳನ್ನು ಚಲಾಯಿಸಲು ಯಾರೇ ವ್ಯಕ್ತಿಗೆ ಅನುಗ್ರಹ ಅಥವಾ ಅನುಗ್ರಹ ಕೋರಲು ಇಲ್ಲವೇ ತೋರದೆ ಇರಲು ಪ್ರೇರಣೆ ಅಥವಾ ಬಹುಮಾನವಾಗಿ ಕಾನೂನುಬದ್ಧ ಸಂಭಾವನೆಯಲ್ಲದ ಯಾವುದೇ ಬಗೆಯ ಪರಿತೋಷವನ್ನು ಯಾರೇ ವ್ಯಕ್ತಿಯಿಂದ ತನಗೆ ಅಥವಾ ಇತರ ಯಾರೇ ವ್ಯಕ್ತಿಗಾಗಿ ಸ್ವೀಕರಿಸಿದಲ್ಲಿ ಅಥವಾ ಪಡೆಯುವಲ್ಲಿ ಅಥವಾ ಸ್ವೀಕರಿಸಲು ಒಪ್ಪಿದಲ್ಲಿ ಅಥವಾ ಪಡೆಯಲು ಪ್ರಯತ್ನಿಸಿದಲ್ಲಿ ಅಥವಾ ಈ ಅಧಿನಿಯಮ, ಸಹಕಾರ ಸಂಘದ ನಿಯಮಗಳು ಅಥವಾ ಉಪವಿಧಿಗಳ ಉಪಬಂಧಗಳಿಗನುಸಾರವಾಗಿ ಅಲ್ಲದೆ ಯಾವೊಂದು ಸಹಕಾರ ಸಂಘದ ಸ್ವತ್ತುಗಳನ್ನು ಅಥವಾ ನಿಧಿಗಳನ್ನು ಬಳಸಿದಲ್ಲಿ ಅಥವಾ ಬಳಸಲು ಅವಕಾಶ ನೀಡುವಲ್ಲಿ; ಅಥವಾ ಸಹಕಾರ ಸಂಘದ ಯಾರೇ [1][ಪದಾಧಿಕಾರಿ][1] ಸಭೆಗಳಿಗೆ ವಾಸ್ತವವಾಗಿ ಹಾಜರಾಗದೆ ಮಂಡಳಿಯ ಅಥವಾ ಇತರ ಸಮಿತಿಯ ಸಭೆಯ ನಡವಳಿಗಳಲ್ಲಿ ಸಹಿ ಹಾಕಿದಲ್ಲಿ, ಅವನು ಭ್ರಷ್ಟ ಆಚರಣೆಯ ತಪ್ಪಿತಸ್ಥನಾಗಿದ್ದಾನೆ ಎಂದು ಭಾವಿಸತಕ್ಕುದು, ಮತ್ತು,

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ಯಾವುದೇ ಭ್ರಷ್ಟಾಚಾರ ಎಸಗಿ ತಪ್ಪಿತಸ್ಥನಾಗಿದ್ದಾನೆ ಎಂದು ಕಂಡುಬರುವ ಪ್ರತಿಯೊಬ್ಬ ವ್ಯಕ್ತಿಯು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು;

(ii) (i)ನೇ ಖಂಡದ ಮೇರೆಗೆ ಅಪರಾಧದ ಬಗ್ಗೆ ಅಪರಾಧ ನಿರ್ಣೀತನಾದ ಪ್ರತಿಯೊಬ್ಬ ವ್ಯಕ್ತಿಯು ಯಾವುದೇ ಸಹಕಾರ ಸಂಘದ [1][ಪದಾಧಿಕಾರಿ][1] ಅಥವಾ ನಿಯೋಜಿತ ಅಥವಾ ವೇತನ ಪಡೆಯುವ ನೌಕರನಾಗಿರಲು ಖಾಯಂ ಆಗಿ ಅನರ್ಹನಾಗತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(16) ಬೇರೆಡೆಗಳಲ್ಲಿ ಯಾವ ದಂಡನೆಯನ್ನೂ ಉಪಬಂಧಿಸಿರದ ಈ ಅಧಿನಿಯಮದ ಉಪಬಂಧಗಳ ಯಾವುದೇ ಉಲಂಘನೆಗಾಗಿ ತಪ್ಪಿತಸ್ಥನಾದ ಯಾವುದೇ ಸಹಕಾರ ಸಂಘ ಅಥವಾ ಅದರ ಸಮಿತಿಯ ಸದಸ್ಯ ಅಥವಾ ಅದರ ಯಾರೇ ನಿಯೋಜಿತನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.]1

[1][(17) ಗೊತ್ತುಪಡಿಸಿದ ಅವಧಿಯೊಳಗೆ 63ನೇ ಪ್ರಕರಣದ ಅನ್ವಯ ಲೆಕ್ಕಪರಿಶೋಧಕನು ಅಗತ್ಯಪಡಿಸಿದ ಲೆಕ್ಕಪತ್ರಗಳು ಮತ್ತು ಮಾಹಿತಿಯನ್ನು ಸಲ್ಲಿಸಲು ತಪ್ಪಿದ ಮಂಡಳಿಯ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕನು, ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

(18) ಗೊತ್ತುಪಡಿಸಿದ ಅವಧಿಯೊಳಗೆ 63ನೇ ಪ್ರಕರಣದ ಅನ್ವಯ ಹಿಂದಿನ ವರ್ಷಕ್ಕಾಗಿನ ತನ್ನ ಲೆಕ್ಕಪತ್ರಗಳನ್ನು ಪರಿಶೋಧನೆಗೊಳಿಸಲು ಮತ್ತು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಅದನ್ನು ಹಾಜರುಪಡಿಸಲು ತಪ್ಪಿದ, ಮಂಡಳಿಯ ಪತ್ರಿಯೊಬ್ಬ ಸದಸ್ಯ ಮತ್ತು ಮುಖ್ಯ ಕಾರ್ಯನಿರ್ವಾಹಕನು, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಹುದಾದ ದಂಡದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

(19) 27ಬಿ ಪ್ರಕರಣದ ಮೇರೆಗೆ ಮಂಡಳಿಯ ಪ್ರತಿಯೊಬ್ಬ ಸದಸ್ಯ ಮತ್ತು ಮುಖ್ಯ ಕಾರ್ಯ ನಿರ್ವಾಹಕನು ರಿಜಿಸ್ಟ್ರಾರರವರ ಜೊತೆಯಲ್ಲಿ ವಾರ್ಷಿಕ ವಿವರಪಟ್ಟಿಗಳನ್ನು ಸಲ್ಲಿಸಲು

ವಿಫಲವಾದಲ್ಲಿ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು;

(20) ಸಕಾಲದಲ್ಲಿ ಅವಶ್ಯಕ ಪುಸ್ತಕಗಳನ್ನು ಮತ್ತು ಮಾಹಿತಿಯನ್ನು ಒದಗಿಸಲು ಮತ್ತು 39ಎಎ ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಚುನಾವಣೆಗಳನ್ನು ನಡೆಸಲು ಸಹಕಾರಿ ಚುನಾವಣಾ ಆಯೋಗಕ್ಕೆ ನೆರವುನೀಡಲು ವಿಫಲವಾದಲ್ಲಿ ಮಂಡಳಿಯ ಪ್ರತಿಯೊಬ್ಬ ಸದಸ್ಯ ಮತ್ತು ಮುಖ್ಯ ಕಾರ್ಯನಿರ್ವಾಹಕನು ಆರು ತಿಂಗಳುಗಳ ವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(21) ಯಾವೊಬ್ಬ ವ್ಯಕ್ತಿಯು, 39ಸಿ ಪ್ರಕರಣದಡಿಯಲ್ಲಿ ಮಂಡಳಿಯ ಸದಸ್ಯರ ಅಥವಾ ಪದಾಧಿಕಾರಿಗಳ ಚುನಾವಣೆಗೆ ಮೊದಲು, ಚುನಾವಣೆಯ ಸಮಯದಲ್ಲಿ ಅಥವಾ ಚುನಾವಣೆಯ ತರುವಾಯ ಯಾವುದೇ ಭ್ರಷ್ಟಾಚಾರವನ್ನು ಒಪ್ಪಿಕೊಂಡಲ್ಲಿ ಅಥವಾ 39ಕೆ ಪ್ರಕರಣದ ಅಡಿಯಲ್ಲಿನ ಯಾವುದೇ ಚುನಾವಣೆ ಅಪರಾಧಗಳನ್ನು ಎಸಗಿದಲ್ಲಿ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯ ನಾಗತಕ್ಕದ್ದು.][1]

1. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

110. ಕಂಪನಿಗಳಿಂದ ಅಪರಾಧಗಳು.- (1) 109ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (4)ನೇ ಉಪಪ್ರಕರಣದ ಮೇರೆಗೆ ಅಥವಾ ಯಾವುದೇ ನಿಯಮದ ಮೇರೆಗೆ ಕಂಪನಿಯು ಅಪರಾಧವನ್ನು ಎಸಗಿರುವಲ್ಲಿ, ಆ ಅಪರಾಧವನ್ನು ಎಸಗಲಾದ ಕಾಲಕ್ಕೆ, ಕಂಪನಿಯ ವ್ಯವಹಾರಗಳ ನಿರ್ವಹಣೆಯ ಬಗ್ಗೆ ಕಂಪನಿಯ ಪ್ರಭಾರದಲ್ಲಿದ್ದ ಅಥವಾ ಅದಕ್ಕೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಕಂಪನಿಯೂ ಸಹ, ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ತದನುಸಾರ ಅವರ ವಿರುದ್ಧದ ವ್ಯವಹರಣೆಗಳಿಗೆ ಗುರಿಯಾಗಲು ಮತ್ತು ದಂಡಿತರಾಗಲು ಬದ್ಧರಾಗತಕ್ಕುದು:

ಪರಂತು, ಅಂಥ ಯಾರೇ ವ್ಯಕ್ತಿಯು ಆ ಅಪರಾಧವು ತನ್ನ ಅರಿವಿಗೆ ಬಾರದಂತೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ಎಲ್ಲಾ ಯುಕ್ತ

ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿರುವುದು ಯಾವುದೂ, ಅಂಥ ವ್ಯಕ್ತಿಯನ್ನು ಈ ಹಿಂದೆ ಹೇಳಿದ ಉಪಪ್ರಕರಣದಲ್ಲಿ ಅಥವಾ ಯಾವುದೇ ನಿಯಮಗಳಲ್ಲಿ ಉಪಬಂಧಿಸಲಾದ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, 109ನೇ ಪ್ರಕರಣದ (1)ನೇ ಅಥವಾ (4)ನೇ ಉಪಪ್ರಕರಣದ ಅಥವಾ ಯಾವುದೇ ನಿಯಮದ ಮೇರೆಗಿನ ಅಪರಾಧವನ್ನು ಯಾವುದೇ ಕಂಪೆನಿಯು ಎಸಗಿರುವಲ್ಲಿ ಮತ್ತು ಆ ಅಪರಾಧವು ಕಂಪೆನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ಯಾವುದೇ ನಿರ್ಲಕ್ಷ ್ಯತೆಗೆ ಆರೋಪಿಸಬಹುದಾಗಿದೆಯೆಂದು ರುಜುವಾತಾಗಿರುವಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ, ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವರು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ದಂಡನೀಯರಾಗತಕ್ಕುದು.

ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) `ಕಂಪನಿ' ಎಂದರೆ ನಿಗಮಿತ ನಿಕಾಯ ಮತ್ತು ಅದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ `ನಿರ್ದೇಶಕ' ಅಂದರೆ, ಫರ್ಮಿನ ಪಾಲುಗಾರ.

[1][**110ಎ. ಅಪರಾಧಗಳ ರಾಜಿಗೆ ಅಧಿಕಾರ.–** (1) ರಿಜಿಸ್ಟ್ರಾರನು, ಒಬ್ಬ ವ್ಯಕ್ತಿಯು [2][63ನೇ ಪ್ರಕರಣದ ಉಲ್ಲಂಘನೆಯ ಸಂಬಂಧದಲ್ಲಿ ಒಂದು ಅಪರಾಧವನ್ನು ಹೊರತುಪಡಿಸಿ]2 109ನೇ ಪ್ರಕರಣದ (1), (1ಎ), (2), (5) (7) (8) (13) ಮತ್ತು (14)ನೇ ಉಪ–ಪ್ರಕರಣಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಿದ್ದಾನೆಂದು ಯುಕ್ತ ಅನುಮಾನ ಉಂಟಾದ ಯಾರೇ ವ್ಯಕ್ತಿಯಿಂದ, ಅಂಥ ವ್ಯಕ್ತಿಯು ಅಪರಾಧ ಮಾಡಿದ್ದಾನೆಂದು ಅನುಮಾನಿಸಲಾದ ಅಪರಾಧಕ್ಕಾಗಿ ರಾಜಿ ರೂಪದಲ್ಲಿ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಲ್ಲದಂತಹ ಮೊತ್ತವನ್ನು ಸ್ವೀಕರಿಸಬಹುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22.3.2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(1ಎ) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು, 109ನೇ ಪ್ರಕರಣದ (9)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಮತ್ತು 63ನೇ ಪ್ರಕರಣದ ಉಲಂಘನೆಯ ಸಂಬಂಧದಲ್ಲಿನ ಒಂದು ಅಪರಾಧ ಮಾಡಿದ್ದಾನೆಂದು ಅನುಮಾನಿಸಲಾದ ಒಬ್ಬ ವ್ಯಕ್ತಿಯಿಂದ ಅಂಥ ವ್ಯಕ್ತಿಯು ಎಸಗಿದ್ದಾನೆಂದು ಅನುಮಾನಿಸಲಾದ ಅಪರಾಧಕ್ಕೆ ರಾಜಿ ರೂಪದಲ್ಲಿ ಒಂದು ಸಾವಿರ ರೂಪಾಯಿಗಳಿಗೆ ಮೀರದ ಮೊತ್ತದ ಮೊಬಲಗನ್ನು ಸ್ವೀಕರಿಸಬಹುದು.][1]

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22.3.2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಅಂಥ ಹಣವನ್ನು ರಿಜಿಸ್ಟ್ರಾರನಿಗೆ [1][ಅಥವಾ ಸಂದರ್ಭಾನುಸಾರ ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನಿಗೆ][1] ಸಂದಾಯ ಮಾಡಿದ ನಂತರ ಅನುಮಾನಿತ ವ್ಯಕ್ತಿಯು ಬಂಧನದಲ್ಲಿದ್ದರೆ, ಅವನನ್ನು ಬಿಟ್ಟುಬಿಡತಕ್ಕುದು. ಯಾವುದಾದರೂ ಸ್ವತ್ತನ್ನು ಆಸ್ತಿ ಮಾಡಿದ್ದರೆ ಅದನ್ನು ಬಿಡುಗಡೆ ಮಾಡತಕ್ಕುದು ಮತ್ತು ಅಂಥ ವ್ಯಕ್ತಿಯ ಅಥವಾ ಸ್ವತ್ತಿನ ವಿರುದ್ಧ ಯಾವ ಮುಂದಿನ ವ್ಯವಹರಣೆಯನ್ನು ನಡೆಸತಕ್ಕುದಲ್ಲ.][1]

1. 2004ರ ಅಧಿನಿಯಮ ಸಂಖ್ಯೆ 13ರ ಮೂಲಕ 22.3.2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

111. **ಅಪರಾಧಗಳ ಸಂಜ್ಞಾನ.**- (1) ಮೊದಲ ದರ್ಜೆಯ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆಯಲ್ಲದ ಯಾವ ನ್ಯಾಯಾಲಯವೂ, ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧಗಳ ಅಧಿವಿಚಾರಣೆ ಮಾಡತಕ್ಕುದಲ್ಲ.

[1][(2) (ಎ) ಸಹಕಾರ ಪತ್ತಿನ ರಚನೆಯಲ್ಲಿಯ ಸಂಘಕ್ಕೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ, ಲೆಕ್ಕ ಪರಿಶೋಧನೆಯ ಕಾರಣದಿಂದ ಉದ್ಭವಿಸುವ ವಿಷಯಗಳಲ್ಲಿ, ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನ;

(ಬಿ) ಸಹಕಾರ ಪತ್ತಿನ ರಚನೆಯಲ್ಲಿಯ ಸಂಘಕ್ಕೆ ಸಂಬಂಧಪಟ್ಟಂತೆ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದ ವಿಷಯಗಳು ಒಳಗೊಂಡಂತೆ ಎಲ್ಲ ಇತರ ವಿಷಯಗಳ ಸಂಬಂಧದಲ್ಲಿ ರಿಜಿಸ್ಟ್ರಾರನ,

-ಪೂರ್ವ ಮಂಜೂರಾತಿಯಿಲ್ಲದೆ ಈ ಅಧಿನಿಯಮದ ಅಡಿಯಲ್ಲಿ ಯಾವ ಅಭಿಯೋಜನೆಗಳನ್ನು ಹೂಡತಕ್ಕದ್ದಲ್ಲ:

ಪರಂತು, ಸಹಕಾರ ಸಂಘದ ಲೆಕ್ಕ ಪರಿಶೋಧನೆ, ವಿಚಾರಣೆ ಅಥವಾ ತಪಾಸಣೆಯ ಅವಧಿಯಲ್ಲಿ ಅಥವಾ ಸಹಕಾರ ಸಂಘದ ಸಾಮಾನ್ಯ ವ್ಯವಹಾರ ನಡೆಯುತ್ತಿರುವಾಗ, ಪತ್ತೆಯಾದ, ಸಹಕಾರ ಸಂಘದ ನಿಧಿಗಳ ದುರುಪಯೋಗ ಅಥವಾ ದುರ್ವಿನಿಯೋಗಕ್ಕಾಗಿ

ಆರೋಪಿಸಲಾದ ತಪ್ಪಿತಸ್ಥರ ವಿರುದ್ಧದ ಕ್ರಿಮಿನಲ್ ದೂರುಗಳನ್ನು ದಾಖಲು ಮಾಡುವುದಕ್ಕಾಗಿ ರಿಜಿಸ್ಟ್ರಾರನ ಅಥವಾ ಸಹಕಾರಿ ಲೆಕ್ಕ ಪರಿಶೋಧಕರ ಮಂಜೂರಾತಿ ಪಡೆಯುವ ಅಗತ್ಯವಿರತಕ್ಕದ್ದಲ್ಲ.][1]

1.2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) (2)ನೇ ಉಪಪ್ರಕರಣದ ಮೇರೆಗಿನ ಮಂಜೂರಾತಿಯನ್ನು,-

(i) ಸಂಬಂಧಪಟ್ಟ ವ್ಯಕ್ತಿಗೆ ತನ್ನ ಪ್ರಕರಣದ ಬಗ್ಗೆ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಟ್ಟ ಹೊರತು; ಮತ್ತು

(ii) ಸಂದರ್ಭಾನುಸಾರ [1][ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕ][1] ನಿಗೆ ಅಥವಾ ರಿಜಿಸ್ಟ್ರಾರನಿಗೆ ಸಂಬಂಧಪಟ್ಟ ವ್ಯಕ್ತಿಯು ಸದ್ಭಾವನೆಯಿಂದ ವರ್ತಿಸಿದನೆಂದು ಮನದಟ್ಟಾದ ಹೊರತು

- ಕೊಡತಕ್ಕುದಲ್ಲ.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಅಧ್ಯಾಯ- XV

ಸಂಕೀರ್ಣ

[1][[2][111ಎ xxx][2]

1. 1976ರ ಅಧಿನಿಯಮ ಸಂಖ್ಯೆ 19ರ ಮೂಲಕ 20.1.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 27.10.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

111ಬಿ. ದಾಖಲೆಗಳ ಸಂರಕ್ಷಣೆ.- ಸಹಕಾರ ಸಂಘದ ಪುಸ್ತಕಗಳು ಮತ್ತು ಪ್ರತಿಯೊಂದು ದಾಖಲೆಗಳನ್ನು, ರಿಜಿಸ್ಟ್ರಾರನು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಅವಧಿಯವರೆಗೆ ಸಂರಕ್ಷಿಸತಕ್ಕುದು. [1][ಮುಖ್ಯ ಕಾರ್ಯ ನಿರ್ವಾಹಕನು][1], ನಾಶಪಡಿಸಿದ ದಾಖಲೆಗಳ ಪಟ್ಟಿಯೊಂದನ್ನು ತಯಾರಿಸಿ ಇಟ್ಟುಕೊಳ್ಳತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**112. ``ಸಹಕಾರ'' ಪದದ ಉಪಯೋಗದ ವಿರುದ್ಧ ಪ್ರತಿಷೇಧ.-** ಸಹಕಾರ ಸಂಘವಲ್ಲದ ಇತರ ಯಾವನೇ ವ್ಯಕ್ತಿಯು, ``ಸಹಕಾರ'' ಎಂಬ ಪದವು ಅಥವಾ ಭಾರತದ ಯಾವುದೇ

ಭಾಷೆಯಲ್ಲಿ ಅದಕ್ಕೆ ಸಮಾನವಾದ ಪದವು ಯಾವ ಹೆಸರಿನ ಅಥವಾ ಶೀರ್ಷಿಕೆಯ ಭಾಗವಾಗಿರುವುದೋ ಆ ಯಾವುದೇ ಹೆಸರಿನ ಅಥವಾ ಶೀರ್ಷಿಕೆಯ ಅಡಿಯಲ್ಲಿ ಯಾವುದೇ ವ್ಯಾಪಾರ ಮಾಡತಕ್ಕುದಲ್ಲ ಅಥವಾ ವ್ಯವಹಾರ ನಡೆಸತಕ್ಕುದಲ್ಲ:

ಪರಂತು, ಸಹಕಾರ ಸಂಘಗಳ ಅಧಿನಿಯಮ, 1912 (1912ರ ಕೇಂದ್ರ ಅಧಿನಿಯಮ II) ಇದು ಪ್ರವರ್ತನೆಯಲ್ಲಿ ಬಂದ ದಿನಾಂಕದಂದು ಯಾವ ಹೆಸರಿನಲ್ಲಿ ಅಥವಾ ಶೀರ್ಷಿಕೆಯಲ್ಲಿ ಯಾರೇ ವ್ಯಕ್ತಿಯು ಅಥವಾ ಹಿತಾಸಕ್ತಿಯುಳ್ಳ ಅವನ ವಾರಸುದಾರನು ವ್ಯವಹಾರವನ್ನು ನಡೆಸಿದ್ದನೋ ಅಂಥ ಯಾವುದೇ ಹೆಸರನ್ನು ಅಥವಾ ಶೀರ್ಷಿಕೆಯನ್ನು ಅವನು ಉಪಯೋಗಿಸುವುದಕ್ಕೆ, ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕುದಲ್ಲ.

113. ಸಹಕಾರ ಸಂಘದ ವಿಳಾಸ.- [1][(1)][1] ಎಲ್ಲ ನೋಟೀಸುಗಳನ್ನು ಮತ್ತು ತಿಳಿವಳಿಕೆಗಳನ್ನು ಕಳುಹಿಸಿಕೊಡಬಹುದಾದ ಮತ್ತು ನಿಯಮಗಳ ಮೇರೆಗೆ [2][ನೋಂದಾಯಿತ ಕಚೇರಿ ಮತ್ತು ವಿಳಾಸವನ್ನು][2] ಪ್ರತಿಯೊಂದು ಸಹಕಾರ ಸಂಘವು ಹೊಂದಿರತಕ್ಕುದು ಮತ್ತು ಅದರ ಯಾವುದೇ ಬದಲಾವಣೆಯ ಬಗ್ಗೆ ಅಂಥ ಬದಲಾವಣೆಯ ದಿನದಿಂದ ಮೂವತ್ತು ದಿನಗಳೊಳಗೆ ರಿಜಿಸ್ಟ್ರಾರನಿಗೆ ನೋಟೀಸನ್ನು ಕಳುಹಿಸತಕ್ಕುದು.

1. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ಸರ್ವಸದಸ್ಯರ ಸಭೆಯೂ ಸೇರಿದಂತೆ ಸಹಕಾರ ಸಂಘದ ಎಲ್ಲ ಸಭೆಗಳನ್ನೂ ಅದರ ನೋಂದಾಯಿತ ಕಚೇರಿಯಲ್ಲಿ ನಡೆಸತಕ್ಕುದು:

ಪರಂತು, ಅಂಥ ಯಾವುದೇ ಸಭೆಯನ್ನು ನೋಂದಾಯಿತ ಕಚೇರಿಯಲ್ಲಿ ನಡೆಸಲು ಸಾಕಷ್ಟು ಸ್ಥಳಾವಕಾಶ ಇಲ್ಲದಿದ್ದರೆ ನೋಂದಾಯಿತ ಕಚೇರಿಯು ಇರುವ ನಗರ, ಪಟ್ಟಣ ಅಥವಾ ಹಳ್ಳಿಯ ಒಳಗೆ ಇತರ ಯಾವುದೇ ಸ್ಥಳದಲ್ಲಿ [2][xxx][2] ನಡೆಸಬಹುದು.][1]

1. 1976ರ ಅಧಿನಿಯಮ ಸಂಖ್ಯೆ 71ರ ಮೂಲಕ 3.11.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

114. ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಪ್ರತಿಯು ಪರಿಶೀಲನೆಗೆ ಮುಕ್ತವಾಗಿರುವುದು.- ಪ್ರತಿಯೊಂದು ಸಹಕಾರ ಸಂಘವು ಸಂಘದ [1][ನೋಂದಾಯಿತ ಕಚೇರಿಯಲ್ಲಿ][1] ಎಲ್ಲ ಯುಕ್ತ ಕಾಲಗಳಲ್ಲಿಯೂ ಈ ಅಧಿನಿಯಮದ, ನಿಯಮಗಳ ಮತ್ತು ಅದರ ಉಪವಿಧಿಗಳ ಪ್ರತಿಯನ್ನು ಯಾವುದೇ ಶುಲ್ಕವಿಲ್ಲದೆ ಪರಿಶೀಲನೆಗಾಗಿ ಇಡತಕ್ಕುದು.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][115.(xxx)][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

116. ಆದೇಶಗಳ ಉಚ್ಚರಿಸುವಿಕೆ.- ಈ ಅಧಿನಿಯಮದ ಮೇರೆಗೆ ರಿಜಿಸ್ಟ್ರಾರನು ಅಥವಾ ಯಾರೇ ಅಧಿಕಾರಿಯು ಅಥವಾ ಇತರ ವ್ಯಕ್ತಿಯು ಅಥವಾ ಸಮಾಪಕನು ಮಾಡಿದ ಅಥವಾ ಕೊಟ್ಟ ಪ್ರತಿಯೊಂದು ಆದೇಶ, ತೀರ್ಮಾನ ಅಥವಾ ಐತೀರ್ಪನ್ನು, ಮೊಕದ್ದಮೆಯು ಕೊನೆಯದಾಗಿ ಸುನಾವಣೆಯಾದ ದಿನಾಂಕದಂದು ಅಥವಾ ಪಕ್ಷಕಾರರಿಗೆ ಯುಕ್ತ ನೋಟೀಸು ಕೊಟ್ಟು ಯಾವುದೇ ಮುಂದಿನ ದಿನದಂದು ಉಚ್ಚರಿಸತಕ್ಕುದು.

[1][117. ವಿವಾದಗಳ ಇತ್ಯರ್ಥದ ಸಲುವಾಗಿ ಪ್ರಕ್ರಿಯೆ ಮತ್ತು 70ನೇ ಪ್ರಕರಣದ ಮೇರೆಗೆ ವಿವಾದವನ್ನು ತೀರ್ಮಾನಕ್ಕಾಗಿ ಯಾರಿಗೆ ಉಲ್ಲೇಖಿಸಲಾಯಿತೋ ಆ ರಿಜಿಸ್ಟ್ರಾರನ ಅಥವಾ ಯಾರೇ ಇತರ ವ್ಯಕ್ತಿಯ ಅಧಿಕಾರ.- 70ನೇ ಪ್ರಕರಣದ ಮೇರೆಗೆ ತೀರ್ಮಾನಕ್ಕಾಗಿ ವಿವಾದವನ್ನು ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ರಿಜಿಸ್ಟ್ರಾರನು ಅಥವಾ ಯಾರೇ ಇತರ ವ್ಯಕ್ತಿಯು 71ನೇ ಪ್ರಕರಣದ ಮೇರೆಗೆ ವಿವಾದವನ್ನು ಸುನಾವಣೆ ಮಾಡುವಾಗ ನಿಯಮಿಸಲಾದ ರೀತಿಯಲ್ಲಿ ಆ ವಿವಾದವನ್ನು ಸುನಾವಣೆ ಮಾಡತಕ್ಕುದು ಮತ್ತು ಸಿವಿಲ್ ಪ್ರಕ್ರಿಯೆ ಸಂಹಿತೆ, 1908ರ ಮೂಲಕ ಸಿವಿಲ್ ನ್ಯಾಯಾಲಯದ ಸಂಬಂಧದಲ್ಲಿ ಉಪಬಂಧಿಸಲಾದಂತೆ ಅದೇ ಉಪಾಯಗಳ ಮೂಲಕ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಅದೇ ರೀತಿಯಲ್ಲಿ ಹಿತಾಸಕ್ತಿಯುಳ್ಳ ಪಕ್ಷಕಾರರು ಅಥವಾ ಅವರಲ್ಲಿ ಯಾರೊಬ್ಬರು ಸೇರಿ ಸಾಕ್ಷಿಗಳನ್ನು ಸಮನು ಮಾಡುವ ಮತ್ತು ಅವರ ಹಾಜರಾತಿಯನ್ನು ಒತ್ತಾಯಪಡಿಸುವ ಮತ್ತು ಪ್ರಮಾಣ, ದೃಢೀಕರಣ ಅಥವಾ ಶಪಥ ಪತ್ರದ ಮೇಲೆ ಸಾಕ್ಷ್ಯವನ್ನು ಕೊಡುವಂತೆ ಒತ್ತಾಯಪಡಿಸುವ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಒತ್ತಾಯಪಡಿಸುವ ಅಧಿಕಾರಗಳನ್ನು ಹೊಂದಿರತಕ್ಕುದು.

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][xxx][1]

1. 2013 ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) (ಎ) ಸಹಕಾರ ಸಂಘದ ಸದಸ್ಯನಾಗಿ ಇರುವ ಅಥವಾ ಇರದ ವ್ಯಕ್ತಿಯು, ವಿವಾದದ ಪಕ್ಷಕಾರನಾಗಿರುವ ಬೇರೊಬ್ಬ ವ್ಯಕ್ತಿಯ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಆರ್ಜಿಸಿದ್ದಾನೆಂದು ವಿವಾದವನ್ನು ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ರಿಜಿಸ್ಟ್ರಾರನಿಗೆ ಅಥವಾ ಇತರ ಯಾರೇ ವ್ಯಕ್ತಿಗೆ ಮನದಟ್ಟಾದರೆ, ಸ್ವತ್ತಿನಲ್ಲಿ ಹಿತಾಸಕ್ತಿ ಆರ್ಜಿಸಿರುವ ಆ ವ್ಯಕ್ತಿಯು ವಿವಾದಕ್ಕೆ ಪಕ್ಷಕಾರನಾಗಿ ಸೇರಬಹುದೆಂದು ಅವನು ಆದೇಶ ಮಾಡಬಹುದು; ಮತ್ತು ರಿಜಿಸ್ಟ್ರಾರನು ಅಥವಾ ಅವನ ನಾಮನಿರ್ದೇಶಿತನು ಅಥವಾ ಇತರ ಯಾರೇ ವ್ಯಕ್ತಿಯು ಆ ಉಲ್ಲೇಖದ ಮೇಲೆ ಮಾಡಬಹುದಾದಂಥ ಯಾವುದೇ ತೀರ್ಮಾನವು ಹಾಗೆ ಸೇರಿಸಲಾದ

ಪಕ್ಷಕಾರನಿಗೆ ಅವನು ವಿವಾದದ ಮೂಲ ಪಕ್ಷಕಾರನಾಗಿದ್ದರೆ ಹೇಗೋ ಹಾಗೆ ಬಂಧನಕಾರಿಯಾಗತಕ್ಕುದು.

(ಬಿ) ವಿವಾದವನ್ನು ತಪ್ಪು ವ್ಯಕ್ತಿಯ ಹೆಸರಿನಲ್ಲಿ ಹೂಡಿರುವಲ್ಲಿ, ಅಥವಾ ಎಲ್ಲಾ ಪ್ರತಿವಾದಿಗಳನ್ನು ಸೇರಿಸಿಲ್ಲದಿರುವಲ್ಲಿ, 70ನೇ ಪ್ರಕರಣದ ಮೇರೆಗೆ ವಿವಾದವನ್ನು ತೀರ್ಮಾನಕ್ಕಾಗಿ ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ರಿಜಿಸ್ಟ್ರಾರನಿಗೆ ಅಥವಾ ಇತರ ಯಾರೇ ವ್ಯಕ್ತಿಗೆ ವಿವಾದದ ಸುನಾವಣೆಯ ಯಾವುದೇ ಹಂತದಲ್ಲಿ ಆ ತಪ್ಪು ಸದ್ಭಾವನಾಪೂರ್ವಕವಾಗಿದ್ದಿತೆಂದು ಮನದಟ್ಟಾದರೆ, ಅವನು ತನಗೆ ನ್ಯಾಯವೆನಿಸುವ ನಿಬಂಧನೆಗಳ ಮೇಲೆ ಬೇರೆ ಯಾರೇ ಇತರ ವ್ಯಕ್ತಿಯನ್ನು ವಾದಿಯೆಂದು ಅಥವಾ ಪ್ರತಿವಾದಿಯೆಂದು ಪ್ರತಿಸ್ಥಾಪಿಸಲು ಅಥವಾ ಜೊತೆಗೆ ಸೇರಿಸಲು ಆದೇಶ ಮಾಡಬಹುದು.

(ಸಿ) 70ನೇ ಪ್ರಕರಣದ ಮೇರೆಗೆ ವಿವಾದವನ್ನು ತೀರ್ಮಾನಕ್ಕಾಗಿ ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ರಿಜಿಸ್ಟ್ರಾರನು ಅಥವಾ ಯಾರೇ ಇತರ ವ್ಯಕ್ತಿಯು, ವ್ಯವಹರಣೆಗಳ ಯಾವುದೇ ಹಂತದಲ್ಲಿ ಪಕ್ಷಕಾರನ ಅರ್ಜಿಯ ಮೇಲೆ ಅಥವಾ ಅರ್ಜಿ ಇಲ್ಲದೆಯೆ, ಮತ್ತು ಸಂದರ್ಭಾನುಸಾರ, ವಿವಾದವನ್ನು ತೀರ್ಮಾನಿಸುವ ರಿಜಿಸ್ಟ್ರಾರನಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ನ್ಯಾಯವೆಂದು ಕಂಡುಬರಬಹುದಾದಂಥ ನಿಬಂಧನೆಗಳ ಮೇಲೆ ವಾದಿಯೆಂದು ಅಥವಾ ಪ್ರತಿವಾದಿಯೆಂದು ಅನುಚಿತವಾಗಿ ಸೇರಿಸಲಾದ ಯಾರೇ ಪಕ್ಷಕಾರನ ಹೆಸರನ್ನು ತೆಗೆದುಹಾಕತಕ್ಕುದೆಂದು ಮತ್ತು ವಾದಿಯೆಂದು ಅಥವಾ ಪ್ರತಿವಾದಿಯೆಂದು ಸೇರಿಸಬೇಕಾಗಿದ್ದ ಯಾರೇ ವ್ಯಕ್ತಿಯ ಹೆಸರನ್ನು ಸೇರಿಸತಕ್ಕುದೆಂದು ಅಥವಾ ರಿಜಿಸ್ಟ್ರಾರನು ಅಥವಾ ಸಂದರ್ಭಾನುಸಾರ 70ನೇ ಪ್ರಕರಣದ ಮೇರೆಗೆ ವಿವಾದವನ್ನು ತೀರ್ಮಾನಿಸುವ ಯಾರೇ ಇತರ ವ್ಯಕ್ತಿಯ ಮುಂದೆ ಯಾವ ವ್ಯಕ್ತಿಯ ಹಾಜರಾತಿಯು ರಿಜಿಸ್ಟ್ರಾರನಿಗೆ ಅಥವಾ ಅಂಥ ವ್ಯಕ್ತಿಗೆ ಆ ವಿವಾದದಲ್ಲಿ ಒಳಗೊಂಡ ಎಲ್ಲ ಪ್ರಶ್ನೆಗಳನ್ನು ಕುರಿತು ಪರಿಣಾಮಕಾರಿಯಾಗಿ ಮತ್ತು ಸಂಪೂರ್ಣವಾಗಿ ನ್ಯಾಯನಿರ್ಣಯ ಮಾಡಲು ಮತ್ತು ಇತ್ಯರ್ಥಗೊಳಿಸಲು ಅವಶ್ಯವಾಗಬಹುದೋ ಆ ವ್ಯಕ್ತಿಯ ಹೆಸರನ್ನು ಸೇರಿಸತಕ್ಕುದೆಂದು ಆದೇಶ ಮಾಡುವುದು.

(ಡಿ) ವಿವಾದಕ್ಕೆ ಪಕ್ಷಕಾರನಾಗಿದ್ದು ಒಂದೇ ವ್ಯಾಜ್ಯ ಕಾರಣದ ಸಂಬಂಧದಲ್ಲಿ ಒಂದಕ್ಕಿಂತ ಹೆಚ್ಚು ಪರಿಹಾರಗಳಿಗೆ ಹಕ್ಕಿರುವ ಯಾರೇ ವ್ಯಕ್ತಿಯು ಅಂಥ ಎಲ್ಲ ಅಥವಾ ಅವುಗಳಲ್ಲಿ ಯಾವುವೇ ಪರಿಹಾರಗಳನ್ನು ಕ್ಲೇಮು ಮಾಡಬಹುದು, ಆದರೆ ಅಂಥ ಎಲ್ಲಾ ಪರಿಹಾರಗಳನ್ನು ಕ್ಲೇಮು ಮಾಡುವುದನ್ನು ಅವನು ಬಿಟ್ಟಿದ್ದರೆ, 70ನೇ ಪ್ರಕರಣದ ಮೇರೆಗೆ ವಿವಾದವನ್ನು ತೀರ್ಮಾನಕ್ಕಾಗಿ ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ರಿಜಿಸ್ಟ್ರಾರನ ಅಥವಾ ಇತರ ಯಾರೇ

ವ್ಯಕ್ತಿಯ ಅನುಮತಿ ಪಡೆದ ಹೊರತು, ಹಾಗೆ ಬಿಟ್ಟ ಯಾವುದೇ ಪರಿಹಾರದ ಸಲುವಾಗಿ ಅವನು ಕ್ಲೇಮು ಸಲ್ಲಿಸತಕ್ಕುದಲ್ಲ.][1]

118. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.- (1) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, [1][ಯಾವುದೇ ಸಿವಿಲ್, ಕಾರ್ಮಿಕ ಅಥವಾ ರೆವಿನ್ಯೂ ನ್ಯಾಯಾಲಯವು ಅಥವಾ ಕೈಗಾರಿಕಾ ನ್ಯಾಯಾಧಿಕರಣವು][1],-

1. 2000ದ ಅಧಿನಿಯಮ ಸಂಖ್ಯೆ 2ರ ಮೂಲಕ 20.6.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಸಹಕಾರ ಸಂಘದ ಅಥವಾ ಉಪವಿಧಿಗಳ ಅಥವಾ ಯಾವುದೇ ಉಪವಿಧಿಯ ತಿದ್ದುಪಡಿಯ ನೋಂದಣಿಗೆ;

[1][(ಬಿ) ಸದಸ್ಯವನ್ನು ತೆಗೆದುಹಾಕುವುದು ಅಥವಾ ನಿರ್ದೇಶಕರನ್ನು ತೆಗೆದುಹಾಕುವುದು ಮತ್ತು ಅನರ್ಹಗೊಳಿಸುವುದು ಅಥವಾ ಮಂಡಳಿಯನ್ನು ತೆಗೆದುಹಾಕುವುದು;

(ಸಿ) 69ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದ ಯಾವುದೇ ಸರ್‌ಚಾರ್ಜನ್ನು ಅನ್ವಯಿಸುವುದು ಅಥವಾ 70ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದ ಯಾವುದೇ ವಿವಾದವನ್ನು ರಿಜಿಸ್ಟ್ರಾರರಿಗೆ ಉಲ್ಲೇಖಿಸುವುದು ಅಥವಾ 100ನೇ ಪ್ರಕರಣದಡಿಯಲ್ಲಿ ಹಣವನ್ನು ವಸೂಲಿ ಮಾಡುವುದು ಅಥವಾ 101ನೇ ಪ್ರಕರಣದಡಿಯಲ್ಲಿ ಕಾರ್ಯನಿರ್ವಹಣೆಗಾಗಿ ರಿಜಿಸ್ಟ್ರಾರರಿಗೆ ಉಲ್ಲೇಖಿಸಿದ ಯಾವುದೇ ಐತೀರ್ಪು ಅಥವಾ ಆದೇಶವನ್ನು ಕಾರ್ಯರೂಪಕ್ಕೆ ತರುವುದು;][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಸಹಕಾರ ಸಂಘದ ಸಮಾಪನಕ್ಕೆ ಮತ್ತು ವಿಘಟನೆಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ

- ಸಂಬಂಧಪಟ್ಟಂತೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದಲ್ಲ.

(2) ಸಹಕಾರ ಸಂಘವು ಸಮಾಪನಗೊಳ್ಳುತ್ತಿರುವಾಗ, ರಿಜಿಸ್ಟ್ರಾರನ ಅನುಮತಿಯ ಹೊರತು ಮತ್ತು ಅವನು ವಿಧಿಸಬಹುದಾದ ನಿಬಂಧನೆಗಳಿಗೆ ಒಳಪಟ್ಟು, ಅಂಥ ಸಂಘದ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಮುಂದುವರಿಸತಕ್ಕುದಲ್ಲ ಅಥವಾ ಆ ಸಮಾಪಕನ ವಿರುದ್ಧ ಅಥವಾ ಆ ಸಂಘದ ಅಥವಾ ಅದರ ಯಾರೇ ಸದಸ್ಯನ ವಿರುದ್ಧ ಹೂಡತಕ್ಕುದಲ್ಲ.

(3) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಆದೇಶ, ತೀರ್ಮಾನ ಅಥವಾ ಐತೀರ್ಪನ್ನು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಕಾರಣದ ಮೇಲೆ ಪ್ರಶ್ನಿಸತಕ್ಕುದಲ್ಲ.

119. **ಕಾಲಪರಿಮಿತಿ ಅಧಿನಿಯಮದ ಅನ್ವಯ.**- ಭಾರತೀಯ ಕಾಲ ಪರಿಮಿತಿ ಅಧಿನಿಯಮ, 1908ರ 4ನೇ, 5ನೇ, 12ನೇ ಮತ್ತು 14ನೇ ಪ್ರಕರಣಗಳ ಉಪಬಂಧಗಳು, ಈ ಅಧಿನಿಯಮದ ಮೇರೆಗೆ ಪುನರೀಕ್ಷಣೆ ಕೋರಿ ಯಾವುದೇ ಅಪೀಲಿನ ಅಥವಾ ಅರ್ಜಿಯ ಸಲ್ಲಿಕೆಗೆ ಅನ್ವಯವಾಗತಕ್ಕುದು.

120. **ನೋಂದಣಿಯ ಷರತ್ತುಗಳಿಂದ ಸಂಘಗಳನ್ನು ವಿನಾಯಿತಿಗೊಳಿಸುವ ಅಧಿಕಾರ.**- ಈ ಅಧಿನಿಯಮದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ಪ್ರತಿಯೊಂದು ಸಂದರ್ಭದಲ್ಲಿ ಮತ್ತು ಅದು ವಿಧಿಸಬಹುದಾದಂಥ ಷರತ್ತುಗಳು, ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು, ರಾಜ್ಯಪತ್ರದಲ್ಲಿ ಪ್ರಕಟಿಸಿದ ವಿಶೇಷ ಆದೇಶದ ಮೂಲಕ ನೋಂದಣಿಗೆ ಸಂಬಂಧಿಸಿ ಈ ಅಧಿನಿಯಮದ ಯಾವುದೇ ಅಗತ್ಯಗಳಿಂದ ಯಾವುದೇ ಸಹಕಾರ ಸಂಘವನ್ನು ವಿನಾಯಿತಿಗೊಳಿಸಬಹುದು.

[1][121. **ಸಂಘಗಳಿಗೆ ವಿನಾಯಿತಿ ನೀಡುವ ಅಧಿಕಾರ.**- ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಪ್ರಕಟಿಸುವ ಮೂಲಕ ಯಾವುದೇ ಸಹಕಾರ ಸಂಘವನ್ನು ಅಥವಾ ಸಹಕಾರ ಸಂಘಗಳ ಯಾವುದೇ ವರ್ಗವನ್ನು ಈ ಅಧಿನಿಯಮದ ಯಾವುದೇ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು ಅಥವಾ ಅಂಥ ಉಪಬಂಧಗಳು ಅಂಥ ಸಂಘಕ್ಕೆ ಅಥವಾ ಸಂಘಗಳ ವರ್ಗಕ್ಕೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಮಾರ್ಪಾಟುಗಳೊಂದಿಗೆ ಅನ್ವಯವಾಗತಕ್ಕುದೆಂದು ನಿರ್ದೇಶಿಸಬಹುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ ಮತ್ತು 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5.9.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

122. **ಸದಸ್ಯರ ರಿಜಿಸ್ಟರು.**- ಯಾವುದೇ ಸಹಕಾರ ಸಂಘವು ಇಟ್ಟುಕೊಂಡಿರುವ ಸದಸ್ಯರ ಅಥವಾ ಷೇರುಗಳ ಯಾವುದೇ ರಿಜಿಸ್ಟರು ಅಥವಾ ಪಟ್ಟಿಯು, ಅದರಲ್ಲಿ ನಮೂದಿಸಲಾದ ಈ ಕೆಳಕಂಡ ಯಾವುವೇ ವಿವರಗಳ ಬಗ್ಗೆ ಮೊದಲ ನೋಟದ ಸಾಕ್ಷ್ಯವಾಗಿರತಕ್ಕುದು:-

(ಎ) ಯಾರೇ ವ್ಯಕ್ತಿಯ ಹೆಸರನ್ನು ಸದಸ್ಯನೆಂದು ಅಂಥ ರಿಜಿಸ್ಟರಿನಲ್ಲಿ ಅಥವಾ ಪಟ್ಟಿಯಲ್ಲಿ ನಮೂದಿಸಿದ ದಿನಾಂಕ;

(ಬಿ) ಅಂಥ ಯಾರೇ ವ್ಯಕ್ತಿಯು ಸದಸ್ಯನಾಗಿದ್ದುದು ಕೊನೆಗೊಂಡ ದಿನಾಂಕ.

123. ಸಹಕಾರ ಸಂಘಗಳ ಪುಸ್ತಕಗಳಲ್ಲಿರುವ ನಮೂದುಗಳ ರುಜುವಾತು.Š (1) ಸಹಕಾರ ಸಂಘವು ತನ್ನ ವ್ಯವಹಾರ ಕ್ರಮದಲ್ಲಿ ನಿಯತವಾಗಿ ಇಟ್ಟಿರುವ ಸಂಘದ ಪುಸ್ತಕದಲ್ಲಿನ ಯಾವುದೇ ನಮೂದಿನ ಪ್ರತಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಮಾಣೀಕರಿಸಿದರೆ, ಯಾವುದೇ ದಾವೆಯಲ್ಲಿ ಅಥವಾ ಕಾನೂನು ವ್ಯವಹರಣೆಗಳಲ್ಲಿ ಅಂಥ ನಮೂದಿನ ಮೊದಲ ನೋಟದ ಸಾಕ್ಷ್ಯವಾಗಿ ಸ್ವೀಕರಿಸತಕ್ಕುದು ಮತ್ತು ಅದರಲ್ಲಿ ದಾಖಲಿಸಿದ ವಿಷಯಗಳ, ವ್ಯವಹರಣೆಗಳ ಮತ್ತು ಲೆಕ್ಕಗಳ ಮೂಲ ನಮೂದನೆ ಸ್ವೀಕರಿಸಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಸಾಕ್ಷ ್ಯವಾಗಿ ಸ್ವೀಕರಿಸತಕ್ಕುದು.

(2) ಸಹಕಾರ ಸಂಘವು ತನ್ನ ವ್ಯವಹಾರ ಕ್ರಮದಲ್ಲಿ ತಾನು ಪಡೆದುಕೊಂಡ ಮತ್ತು ತಾನು ಇಟ್ಟುಕೊಂಡ ಯಾವುದೇ ದಸ್ತಾವೇಜಿನ ಪ್ರತಿಗಳನ್ನು ಅಥವಾ ಅಂಥ ದಸ್ತಾವೇಜಿನ ಯಾವುವೇ ನಮೂದುಗಳ ಪ್ರತಿಗಳನ್ನು ಕೊಡಬಹುದು ಮತ್ತು ಹೀಗೆ ಕೊಡಲಾದ ಯಾವುದೇ ಪ್ರತಿಯು, ಅದನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಮಾಣೀಕರಿಸಿದರೆ, ಸಂದರ್ಭಾನುಸಾರ, ಮೂಲ ದಸ್ತಾವೇಜು ಅಥವಾ ಅದರಲ್ಲಿ ನಮೂದುಗಳನ್ನು ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಯಾವುದೇ ಉದ್ದೇಶಕ್ಕಾಗಿ ಸಾಕ್ಷ್ಯದಲ್ಲಿ ಸ್ವೀಕರಿಸಬಹುದೋ ಅದೇ ರೀತಿಯಲ್ಲಿ ಮತ್ತು ಅಷ್ಟೇ ಮಟ್ಟಿಗೆ ಸ್ವೀಕರಿಸತಕ್ಕುದು.

(3) ಸಹಕಾರ ಸಂಘದ [1][ಯಾರೇ ಪದಾಧಿಕಾರಿಯನ್ನು][1] ಮತ್ತು ಸಮಾಪನದ ತರುವಾಯ ಯಾವ ಅಧಿಕಾರಿಯ ಕಚೇರಿಯಲ್ಲಿ ಸಹಕಾರ ಸಂಘದ ಪುಸ್ತಕಗಳನ್ನು ಇಡಲಾಗಿದೆಯೋ ಆ ಸಂಘವು ಅಥವಾ ಸಮಾಪಕನು ಪಕ್ಷಕಾರನಾಗಿಲ್ಲದ ಯಾವುದೇ ಕಾನೂನು ವ್ಯವಹರಣೆಗಳಲ್ಲಿ, ಈ ಪ್ರಕರಣದ ಮೇರೆಗೆ ಸಂಘದ ಯಾವ ಪುಸ್ತಕಗಳು ಅಥವಾ ದಸ್ತಾವೇಜುಗಳಲ್ಲಿರುವ ಒಳಾಂಶಗಳನ್ನು ರುಜುವಾತುಪಡಿಸಬಹುದೋ ಅವುಗಳನ್ನು ಹಾಜರುಪಡಿಸುವಂತೆ ಅಥವಾ ಅವುಗಳಲ್ಲಿ ದಾಖಲಾದ ವಿಷಯಗಳನ್ನು, ವಹಿವಾಟುಗಳನ್ನು ಮತ್ತು ಲೆಕ್ಕಗಳನ್ನು ರುಜುವಾತುಪಡಿಸಲು ಸಾಕ್ಷೀದಾರನಾಗಿ ಹಾಜರಾಗುವಂತೆ, ವಿಶೇಷ ಕಾರಣಕ್ಕಾಗಿ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಮಧ್ಯಸ್ಥಗಾರನ ಆದೇಶದ ಮೇರೆಗಲ್ಲದೆ ಒತ್ತಾಯಿಸತಕ್ಕುದಲ್ಲ.

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಂತೆ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

124. ಈ ಅಧಿನಿಯಮದ ಮೇರೆಗೆ ನೋಟೀಸಿನ ಜಾರಿ.- ಈ ಅಧಿನಿಯಮದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ನೋಟೀಸನ್ನು ಅಥವಾ ಮಾಡಲಾದ ಪ್ರತಿಯೊಂದು ಆದೇಶವನ್ನು ಯಾವ ವ್ಯಕ್ತಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಕೊನೆಯ ವಾಸದ ಅಥವಾ ವ್ಯವಹಾರ ಸ್ಥಳವೆಂದು ತಿಳಿಯಲಾದ ಸ್ಥಳದ ವಿಳಾಸಕ್ಕೆ ಸರಿಯಾಗಿ ಬರೆದ ಮತ್ತು ಆ ನೋಟೀಸನ್ನು ಅಥವಾ ಆದೇಶವನ್ನು ಒಳಗೊಂಡಿದ್ದ ಪತ್ರವನ್ನು ಮುಂಚಿತ ಹಣ ಸಂದಾಯ ಮಾಡಿದ ನೋಂದಾಯಿತ ಅಂಚೆಯ ಮೂಲಕ ಜಾರಿ ಮಾಡಬಹುದು ಮತ್ತು ಅದಕ್ಕೆ ವಿರುದ್ಧವಾಗಿ ರುಜುವಾತಾಗದಿದ್ದರೆ, ಅಂಥ ಜಾರಿಯು, ಪತ್ರವು ಸಾಮಾನ್ಯವಾಗಿ ಯಾವ ಕಾಲಕ್ಕೆ ತಲುಪಬಹುದೋ ಆ ಕಾಲಕ್ಕೆ ಜಾರಿಯಾಯಿತೆಂದು ಭಾವಿಸತಕ್ಕುದು:

[1][ಪರಂತು, ಪದಾಧಿಕಾರಿಗಳ ಚುನಾವಣೆಯ ಉದ್ದೇಶಕ್ಕಾಗಿ ನಡೆಸುವ ಸಭೆಯನ್ನು ಹೊರತುಪಡಿಸಿ ಸಹಕಾರ ಸಂಘದ ಯಾವುದೇ ಸಭೆಗೆ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ನೋಟೀಸನ್ನು [2][ಸಂಘವು ತನ್ನ ನೋಂದಾಯಿತ ಕಛೇರಿಗಳ ಮತ್ತು ಇದರ ಶಾಖೆಗಳ ಸೂಚನಾ ಫಲಕಗಳ ಮೇಲೆ ಪ್ರಕಟಿಸತಕ್ಕದ್ದು; ಮತ್ತು

(ಎ) ಸೌಲಭ್ಯಗಳು ಲಭ್ಯವಾಗುವ ಎಲ್ಲಾ ಸ್ಥಳಗಳಲ್ಲಿ ಒಟ್ಟಾಗಿ ಅಂಚೆ ಮೂಲಕ ಕಳುಹಿಸುವುದು; ಅಥವಾ

(ಬಿ) ಇ-ಮೇಲ್ ಅಥವಾ ಎಸ್.ಎಂ.ಎಸ್ ಮೂಲಕ ಕಳುಹಿಸುವುದು; ಅಥವಾ

(ಸಿ) ಸಾಮಾನ್ಯ ಅಂಚೆ ಮೂಲಕ ಕಳುಹಿಸುವುದು ಮತ್ತು

(i) ಯಾರ ಸಹಕಾರ ಸಂಘಗಳ ಕಾರ್ಯನಿರ್ವಹಣೆಯು ಜಿಲ್ಲೆಗಿಂತ ಕಡಿಮೆ ವ್ಯಾಪ್ತಿ ಪ್ರದೇಶದಲ್ಲಿ ಇದೆಯೋ ಅಂಥ ಸ್ಥಳಗಳಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ಒಂದು ಕನ್ನಡ ವಾರ್ತಾಪತ್ರಿಕೆಯಲ್ಲಿ ಅಥವಾ

ಯಾರ ಸಹಕಾರ ಸಂಘಗಳ ಕಾರ್ಯನಿರ್ವಹಣೆಯು, ಜಿಲ್ಲೆಗೆ ವಿಸ್ತರಿಸಿದ ಮತ್ತು ಮೀರಿದ ಮತ್ತು ಇಡೀ ರಾಜ್ಯಕ್ಕೆ ವಿಸ್ತರಿಸಿದಂಥ ವ್ಯಾಪ್ತಿ ಪ್ರದೇಶದಲ್ಲಿ ಇದೆಯೋ ಅಂಥ ಸ್ಥಳಗಳಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ಒಂದು ಕನ್ನಡ ಮತ್ತು ಒಂದು ಇಂಗ್ಲಿಷ್ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸುವುದು.][2]][1]

1. 2001ರ ಅಧಿನಿಯಮ ಸಂಖ್ಯೆ 24ರ ಮೂಲಕ 5.9.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

125. ದಾವೆಗಳಲ್ಲಿ ನೋಟೀಸು ಅವಶ್ಯವಾಗಿರುವುದು- ಸಂಘದ ಸಂಘಟನೆಗೆ, ವ್ಯವಸ್ಥಾಪನೆಗೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ, ವ್ಯಾಜ್ಯ ಕಾರಣವನ್ನು,

ವಾದಿಯ ಹೆಸರನ್ನು ಮತ್ತು ಅವನ ವಾಸಸ್ಥಳ ಮತ್ತು ವಿವರವನ್ನು, ಮತ್ತು ಅವನು ಕ್ಲೇಮು ಮಾಡುವ ಪರಿಹಾರವನ್ನು ನಿರೂಪಿಸುವ ಲಿಖಿತ ನೋಟೀಸನ್ನು ರಿಜಿಸ್ಟ್ರಾರನಿಗೆ ಅಥವಾ ಆತನ ಕಚೇರಿಯಲ್ಲಿ ತಲುಪಿಸಿದ ತರುವಾಯ, ಎರಡು ತಿಂಗಳುಗಳು ಗತಿಸಿದ ಹೊರತು ಸಹಕಾರ ಸಂಘದ ಅಥವಾ ಅದರ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕುದಲ್ಲ ಮತ್ತು ಅಂಥ ನೋಟೀಸನ್ನು ಹಾಗೆ ತಲುಪಿಸಲಾಗಿದೆ ಎಂಬ ಹೇಳಿಕೆಯನ್ನು ಆ ವಾದ ಪತ್ರವು ಒಳಗೊಂಡಿರತಕ್ಕುದು.

126. ಸಹಕಾರ ಸಂಘಗಳ ಕಾರ್ಯಗಳು ಕೆಲವೊಂದು ದೋಷಗಳಿಂದಾಗಿ ಅವಿಧಿಮಾನ್ಯವಾಗದಿರುವುದು.- ಸಹಕಾರ ಸಂಘದ ಅಥವಾ ಯಾವುದೇ ಸಮಿತಿಯ ಅಥವಾ ಯಾರೇ ಅಧಿಕಾರಿಯ ಯಾವ ಕೃತ್ಯವೂ, ಸಂಘವನ್ನು ಅಥವಾ ಸಮಿತಿಯನ್ನು ರಚಿಸುವಲ್ಲಿ, ಅಥವಾ ಅಧಿಕಾರಿಯ ನೇಮಕದಲ್ಲಿ ಅಥವಾ ಚುನಾವಣೆಯಲ್ಲಿ ಯಾವುದೇ ದೋಷವಿದ್ದಿತೆಂಬ ಕಾರಣ ಮಾತ್ರದಿಂದ ಅಥವಾ ಅಂಥ ಅಧಿಕಾರಿಯು ನೇಮಕಕ್ಕೆ ಅರ್ಹನಾಗಿರಲಿಲ್ಲವೆಂಬ ಕಾರಣದ ಮೇಲೆ, ಅವಿಧಿಮಾನ್ಯವಾಗಿರುವುದಾಗಿ ಭಾವಿಸತಕ್ಕುದಲ್ಲ.

[1][126ಎ. xxx][1]

1. 1976ರ ಅಧಿನಿಯಮ ಸಂಖ್ಯೆ 70ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

127. ನಷ್ಟಭರ್ತಿ.- ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲಾಯಿತೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ರಿಜಿಸ್ಟ್ರಾರನ ಅಥವಾ ಅವನ ಅಧೀನದಲ್ಲಿರುವ ಅಥವಾ ಅವನ ಪ್ರಾಧಿಕಾರದ ಮೇಲೆ ಕೆಲಸ ಮಾಡುವ ಯಾರೇ ವ್ಯಕ್ತಿಯ ವಿರುದ್ಧ [1][ಅಥವಾ [2][ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನ][2] ಅಥವಾ ಅವನಿಂದ ಅಧಿಕೃತನಾಗಿ ಕಾರ್ಯ ನಿರ್ವಹಿಸುತ್ತಿರುವ ಇತರ ಯಾರೇ ಅಧೀನ ಅಧಿಕಾರಿಯ][1] ವಿರುದ್ಧ [3][ಅಥವಾ ಸಹಕಾರ ಸಂಘದ ಹೊಸ ಸಮಿತಿಯ ವಿರುದ್ಧ ಅಥವಾ 30ನೇ ಪ್ರಕರಣ ಅಥವಾ 30ಎ ಪ್ರಕರಣದ ಮೇರೆಗೆ ನೇಮಿಸಲಾದ ಆಡಳಿತಗಾರ ಅಥವಾ ವಿಶೇಷಾಧಿಕಾರಿ][3]ಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಶನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕುದಲ್ಲ.

1. 1980ರ ಅಧಿನಿಯಮ ಸಂಖ್ಯೆ 3ರ ಮೂಲಕ 11.8.1977 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1976ರ ಅಧಿನಿಯಮ ಸಂಖ್ಯೆ 70ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][127ಎ. ಸಹಕಾರ ಸಂಘಗಳ [2][ಪದಾಧಿಕಾರಿಗಳು, ಸದಸ್ಯರು ಮತ್ತು ನೌಕರರು][2] ಸರ್ಕಾರಿ ನೌಕರರಾಗಿರುವುದು:- ಮಾರಾಟ ಹಾಗೂ ವಸೂಲಿ ಅಧಿಕಾರಿಗಳೂ ಸೇರಿದಂತೆ ಸಹಕಾರ ಸಂಘದ [2][ಪ್ರತಿಯೊಬ್ಬ ಪದಾಧಿಕಾರಿಯನ್ನು, ಸಮಿತಿಯ ಪ್ರತಿಯೊಬ್ಬ ಸದಸ್ಯನನ್ನು ಮತ್ತು ಪ್ರತಿಯೋಬ್ಬ ನೌಕರನನ್ನು][2] ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಸರ್ಕಾರಿ ನೌಕರನೆಂದು ಭಾವಿಸತಕ್ಕುದು.][1]

1. 1984ರ ಅಧಿನಿಯಮ ಸಂಖ್ಯೆ 5ರ ಮೂಲಕ 9.1.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

128. ಕಂಪನಿಗಳ ಅಧಿನಿಯಮ, 1956 ಅನ್ವಯವಾಗದಿರುವುದು.ಽ ಕಂಪನಿಗಳ ಅಧಿನಿಯಮ, 1956ರ (ಕೇಂದ್ರ ಅಧಿನಿಯಮ 1956ರ 1) ಉಪಬಂಧಗಳು ಸಹಕಾರ ಸಂಘಗಳಿಗೆ ಅನ್ವಯವಾಗತಕ್ಕುದಲ್ಲ.

[1][128ಎ. xxx][1]

1. 2010ರ ಅಧಿನಿಯಮ ಸಂಖ್ಯೆ 6ರ ಮೂಲಕ 03.11.2009 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1]**[128ಬಿ. ಪೊಲೀಸ್ ಅಧಿಕಾರಿಯ ಕರ್ತವ್ಯಗಳು.**ಽ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಉಪ ಕಾನೂನಿನ ಮೇರೆಗೆ ರಿಜಿಸ್ಟ್ರಾರನಲ್ಲಿ ಅಥವಾ ಅಂಥ ಇತರ ವ್ಯಕ್ತಿಯಲ್ಲಿ ನಿಹಿತವಾಗಿರುವ ಯಾವುದೇ ಅಧಿಕಾರವನ್ನು ಕಾನೂನು ರೀತ್ಯಾ ಚಲಾಯಿಸಲು ಪೊಲೀಸ್ ಅಧಿಕಾರಿಯ ನೆರವನ್ನು ನ್ಯಾಯೋಚಿತವಾಗಿ ಕೇಳುವ ರಿಜಿಸ್ಟ್ರಾರನಿಗೆ ಅಥವಾ ರಿಜಿಸ್ಟ್ರಾರನ ಯಾರೇ ಅಧೀನ ವ್ಯಕ್ತಿಗೆ ನೆರವು ನೀಡುವುದು ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿರತಕ್ಕುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

129. ನಿಯಮಗಳನ್ನು ರಚಿಸುವ ಅಧಿಕಾರಗಳು.ಽ (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಪೂರ್ವ ಪ್ರಕಟಣೆಯ ತರುವಾಯ ರಾಜ್ಯ ಸರಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಇಡೀ ರಾಜ್ಯಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಮತ್ತು ಸಹಕಾರ ಸಂಘದ ಯಾವುದೇ ವರ್ಗಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿರುವ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಮುಂಚೆ ಹೇಳಿರುವ ಎಲ್ಲ ಅಥವಾ ಅವುಗಳಲ್ಲಿ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:ಽ

(ಎ) ಸಹಕಾರ ಸಂಘದ ನೋಂದಣಿಯನ್ನು ನಿರಾಕರಿಸುವ ಆದೇಶವನ್ನು ರಿಜಿಸ್ಟ್ರಾರನು ಯಾವ ಅರ್ಜಿದಾರನಿಗೆ ಕಳಿಸಬಹುದು;

(ಬಿ) ಸಹಕಾರ ಸಂಘದ ಹೊಣೆಯ ಸ್ವರೂಪ ಮತ್ತು ವ್ಯಾಪ್ತಿ ಇವುಗಳಲ್ಲಿ ಬದಲಾವಣೆ ಮಾಡುವ ಪ್ರಕ್ರಿಯೆ ಮತ್ತು ಷರತ್ತುಗಳು;

(ಸಿ) ಸಹಕಾರ ಸಂಘದ ಯಾವ ವಿಷಯಗಳ ಬಗ್ಗೆ ಉಪವಿಧಿಗಳನ್ನು ರಚಿಸತಕ್ಕುದು ಅಥವಾ ರಚಿಸಬಹುದು;

(ಡಿ) ಉಪವಿಧಿಗಳ ತಿದ್ದುಪಡಿಯ ಸಲುವಾಗಿ ಸಹಕಾರ ಸಂಘವು ಅನುಸರಿಸಬೇಕಾದ ಪ್ರಕ್ರಿಯೆ;

(ಇ) ಸಹಕಾರ ಸಂಘಗಳ ಸದಸ್ಯರಾಗಿ ಪ್ರವೇಶವನ್ನು ಯಾವ ವ್ಯಕ್ತಿಗಳಿಗೆ ಕೊಡಬಹುದೋ ಆ ವ್ಯಕ್ತಿಗಳ ಅರ್ಹತೆಗಳು;

[1][(ಇ-1) ಸಂಘದೊಂದಿಗಿನ ವ್ಯವಹಾರಗಳ ತಮ್ಮ ವ್ಯವಹರಣೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯುವುದಕ್ಕೆ ಸದಸ್ಯರ ಹಕ್ಕು;][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎಫ್) ಸಹಕಾರ ಸಂಘದ ಸಭೆಯ ಅಧ್ಯಕ್ಷನಿಗೆ ದ್ವಿತೀಯ ಅಥವಾ ನಿರ್ಣಾಯಕ ಮತದ ವ್ಯವಸ್ಥೆ;

[1][(ಜಿ) ಸಹಕಾರಿ ಚುನಾವಣಾ ಆಯುಕ್ತರ ಸೇವಾ ಷರತ್ತುಗಳು;][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಹೆಚ್) xxx][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಐ) ಸದಸ್ಯನು ಮೃತನಾದ ಮೇಲೆ ಅವನ ಷೇರನ್ನು ಮತ್ತು ಹಿತಾಸಕ್ತಿಯನ್ನು ಯಾರಿಗೆ ವರ್ಗಾಯಿಸಬಹುದೋ ಅಥವಾ ಅದರ ಮೌಲ್ಯವನ್ನು ಸಂದಾಯ ಮಾಡಬಹುದೋ ಆ ವ್ಯಕ್ತಿಯ ನಾಮನಿರ್ದೇಶನದ ಪ್ರಕ್ರಿಯೆ;

(ಜೆ) ಮೃತ ಸದಸ್ಯನ ಷೇರಿನ ಮೌಲ್ಯವನ್ನು ಖಚಿತಗೊಳಿಸತಕ್ಕ ರೀತಿ;

[1][(ಕೆ) ರಿಟರ್ನಿಂಗ್ ಆಫೀಸರುಗಳ, ಪ್ರಿಸೈಡಿಂಗ್ ಅಧಿಕಾರಿಗಳ ಮತ್ತು ಅಂಥ ಇತರ ಅಧಿಕಾರಿಗಳ ನೇಮಕಾತಿ ಮತ್ತು ಅವರ ಅಧಿಕಾರಿಗಳು ಮತ್ತು ಪ್ರಕಾರ್ಯಗಳನ್ನು ಒಳಗೊಂಡಂತೆ ಸಹಕಾರ ಸಂಘದ ಸಮಿತಿಯ ಸದಸ್ಯರ ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಎಲ್) ಪ್ರತಿನಿಧಿ ಮಹಾಸಭೆಗಳು ಮತ್ತು ಮಂಡಳಿ ಸಭೆಗಳು ಹಾಗೂ ಮಹಾಸಭೆಗಳು ಮತ್ತು ಮಂಡಳಿ ಸಭೆಗಳ ಕಡ್ಡಾಯ ಕೋರಿಕೆಗಳ ಒಳಗೊಂಡಂತೆ ಈ ಮಹಾಸಭೆಗಳನ್ನು ನಡೆಸುವ ಕಾರ್ಯ ವಿಧಾನ;][1]

1.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಎಲ್-1) ಯಾರೇ ನಿರ್ದೇಶಕನ ವಿರುದ್ಧ ಅವಿಶ್ವಾಸವನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನ;][1]

1.2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎಂ) ರಿಜಿಸ್ಟ್ರಾರನು ತೆಗೆದುಹಾಕಿದ ಸಮಿತಿಯ ಬದಲಾಗಿ ನೇಮಕಗೊಂಡ [2][xxx][2] ಆಡಳಿತಾಧಿಕಾರಿಗೆ ಅಥವಾ ವಿಶೇಷ ಅಧಿಕಾರಿಗೆ ಸಂದಾಯವಾಗತಕ್ಕ ಸಂಭಾವನೆ.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಎನ್) ಸಹಕಾರ ಸಂಘದ ಸಮಿತಿಯ ಸದಸ್ಯತ್ವಕ್ಕೆ ಅರ್ಹತೆಗಳು, [1][xxx][1] [2][ಅನರ್ಹತೆಯ ಪ್ರಶ್ನೆಗಳನ್ನು ತೀರ್ಮಾನಿಸಲು ಸಕ್ಷಮವಾದ ಪ್ರಾಧಿಕಾರ ಮತ್ತು ಅಂಥ ತೀರ್ಮಾನಗಳ ಮೇಲಿನ ಅಪೀಲುಗಳು;][2]

1. 1975ರ ಅಧಿನಿಯಮ ಸಂಖ್ಯೆ 39ರ ಮೂಲಕ 23.9.1975 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಒ) ಸಹಕಾರ ಸಂಘಗಳ ನೌಕರರ ನೇಮಕಾತಿಗಾಗಿ [2][ವಿದ್ಯಾರ್ಹತೆ, ಅನುಭವ ಮತ್ತು ಕಾರ್ಯವಿಧಾನ][2] ಮತ್ತು ಸೇವಾ ಷರತ್ತುಗಳೂ ಒಳಗೊಂಡಂತೆ ನೇಮಕಾತಿ;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಪಿ) ಸಹಕಾರ ಸಂಘದೊಡನೆ ಮಾಡಿಕೊಳ್ಳಲಾಗುವ ಕರಾರುಗಳಲ್ಲಿ ಹಿತಾಸಕ್ತಿ ಹೊಂದಿರಲು ಸಹಕಾರ ಸಂಘದ ಅಧಿಕಾರಿಗಳ ವಿರುದ್ಧ ನಿಷೇಧ;

(ಕ್ಯೂ) ಸಹಕಾರ ಸಂಘಗಳಲ್ಲಿ ರಾಜ್ಯ ಸರ್ಕಾರವು ಹೊಂದಿರುವ ಪ್ರತ್ಯಕ್ಷ ಮತ್ತು ಪರೋಕ್ಷ ಪಾಲುಗಾರಿಕೆಗೆ ಸಂಬಂಧಿಸಿದ ವಿಷಯಗಳು;

(ಆರ್) ಸಹಕಾರ ಸಂಘಗಳು ಲಾಭಾಂಶಗಳನ್ನು ಸಂದಾಯಮಾಡಬಹುದಾದ ದರ;

(ಎಸ್) ಸಹಕಾರ ಸಂಘದ ಮಿÁಸಲು ನಿಧಿಯ ಉದ್ದೇಶಗಳು ಮತ್ತು ಅದರ ಹೂಡಿಕೆಯ ರೀತಿ;

(ಟಿ) ಸಹಕಾರ ಸಂಘದ ಸಮಾಪನವಾದ ಮೇಲೆ ಅದರ ಮಿÁಸಲು ನಿಧಿಯ ವಿಲೆಯ ರೀತಿ;

[1][(ಟಿ-1) ಕರ್ನಾಟಕ ರಾಜ್ಯ ಸಹಕಾರಿ ಒಕ್ಕೂಟವು ಶಿಕ್ಷಣ ನಿಧಿಯ ನಿರ್ವಹಣೆ ಮತ್ತು ನಿಯಂತ್ರಿಸುವ ಸಂಬಂಧಿಸಿದ ಕಾರ್ಯವಿಧಾನ;

(ಟಿ-2) ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ತಗಲುವ ವೆಚ್ಚ;][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಯು) ಸಹಕಾರ ಸಂಘವು ಯಾವ ಪರಿಮಿತಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಠೇವಣಿಗಳನ್ನು ಮತ್ತು ಸಾಲಗಳನ್ನು ಪಡೆಯಬಹುದು;

(ವಿ) ಸದಸ್ಯೇತರರೊಡನೆ ಸಹಕಾರ ಸಂಘವು ನಡೆಸುವ ವಹಿವಾಟುಗಳ ಬಗ್ಗೆ ನಿರ್ಬಂಧಗಳು;

(ಡಬ್ಲ್ಯು) ಸಹಕಾರ ಸಂಘವು ತನ್ನ ಷೇರುಗಳನ್ನು ಆಧರಿಸಿ ಸಾಲಗಳನ್ನು ಮಂಜೂರು ಮಾಡುವುದರ ಬಗ್ಗೆ ನಿರ್ಬಂಧಗಳು;

(ಎಕ್ಸ್) ಠೇವಣಿಗಳನ್ನು ಸ್ವೀಕರಿಸುವ ಮತ್ತು ನಗದು ಸಾಲಗಳನ್ನು ಮಂಜೂರು ಮಾಡುವ ಸಹಕಾರ ಸಂಘಗಳು ದ್ರವ್ಯರೂಪದ ಸಂಪನ್ಮೂಲಗಳನ್ನು ಯಾವ ರೂಪದಲ್ಲಿ ಮತ್ತು ಯಾವ ಪ್ರಮಾಣಗಳಲ್ಲಿ ಇಡಬೇಕು;

(ವೈ) ಸಹಕಾರ ಸಂಘಗಳ [1][ಲೆಕ್ಕಪರಿಶೋಧಕನಿಗೆ ಮತ್ತು ಲೆಕ್ಕಪರಿಶೋಧನಾ ಫರ್ಮಿಗೆ ಸಂದಾಯ ಮಾಡಬೇಕಾದ ಪರಿಶ್ರಮಧನದ][1] ಮೇಲೆ ಲೆಕ್ಕ ಪರಿಶೋಧನೆಯ ಫೀಜುಗಳನ್ನು ವಿಧಿಸುವುದು;

(ಝಡ್) ರಿಜಿಸ್ಟ್ರಾರನ, ಮಧ್ಯಸ್ಥಗಾರನ ಅಥವಾ ವಿವಾದಗಳನ್ನು ತೀರ್ಮಾನಿಸುವ ಇತರ ವ್ಯಕ್ತಿಗಳ ಮುಂದಿರುವ ವ್ಯವಹರಣೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ [1][ಮತ್ತು ಮಧ್ಯಸ್ಥದಾರರಿಗೆ ಸಂದಾಯವಾಗತಕ್ಕ ಫೀಜು;][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎಎ) ಸಹಕಾರ ಸಂಘದ ಆಸ್ತಿಯು ಯಾವ ಷರತ್ತುಗಳಿಗೊಳಪಟ್ಟು ಸಮಾಪಕನಲ್ಲಿ ನಿಹಿತಗೊಳ್ಳತಕ್ಕುದು; ಮತ್ತು ಸಹಕಾರ ಸಂಘದ ಸಮಾಪನದಲ್ಲಿ ಅಂಗೀಕರಿಸಬೇಕಾದ ಪ್ರಕ್ರಿಯೆ;

[1][(ಬಿಬಿ) ಸಹಕಾರ ಸಂಘಕ್ಕೆ ಸಲ್ಲಬೇಕಾದ ಅಥವಾ ಸಂದಾಯವಾಗಬೇಕಾದ ಮೊಬಲಗುಗಳು ವಸೂಲಿಯ ಮತ್ತು 101ಕಬಿ ಪ್ರಕರಣದ ಮೇರೆಗೆ ಸ್ವತ್ತಿನ ವರ್ಗಾವಣೆಯ ಪ್ರಕ್ರಿಯೆ;][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿಸಿ) ತೀರ್ಪಿಗೆ ಮುಂಚೆ ಜಪ್ತಿಯನ್ನು ಮಾಡುವ ರೀತಿ;

[1][(ಡಿಡಿ) ಷಿನೇ ಅಧ್ಯಾಯವು ಅನ್ವಯವಾಗುವ ಸಂಘವು ಹೊರಡಿಸಿದ ಡಿಬೆಂಚರುಗಳ ನೀಡಿಕೆ, ವಿಮೋಚನೆ, ಮರುನೀಡಿಕೆ, ವರ್ಗಾವಣೆ, ಪ್ರತಿಸ್ಥಾಪನೆ ಅಥವಾ ಪರಿವರ್ತನೆ ಇವುಗಳ ಸಂಬಂಧದಲ್ಲಿ ಪ್ರಕ್ರಿಯೆ ಮತ್ತು ಷರತ್ತುಗಳು;

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿಡಿಕ1) XIನೇ ಅಧ್ಯಾಯವು ಯಾವ ಸಂಘಕ್ಕೆ ಅನ್ವಯಿಸುವುದೋ ಆ ಸಂಘವು ಹೊರಡಿಸಿದ ಡಿಬೆಂಚರುಗಳ ಖಾತರಿಗಾಗಿ ಅಸಲು ಮೊಬಲಗಿನ ಗರಿಷ್ಠ ಮಿತಿ, ಬಡ್ಡಿ ದರ ಮತ್ತು ಇತರ ಷರತ್ತುಗಳು;

(ಡಿಡಿಕ2) 89ನೇ ಪ್ರಕರಣದ ಮೇರೆಗೆ ಮಾರಾಟವನ್ನು ಜಾರಿಗೊಳಿಸುವ ಅಧಿಕಾರಿಯ ನೇಮಕಾತಿಗೆ ಅರ್ಹತೆಗಳು ಮತ್ತು ವಿಧಾನಗಳು ಮತ್ತು ಅಂಥ ಅಧಿಕಾರಿಯು ಚಲಾಯಿಸಬಹುದಾದ ಅಧಿಕಾರಗಳು ಮತ್ತು ಪ್ರಕಾರ್ಯ;

(ಡಿಡಿಕ3) 89ನೇ ಪ್ರಕರಣದ ಮೇರೆಗೆ ಮಾರಾಟಕ್ಕಾಗಿ ನಿಗದಿಪಡಿಸಿದ ಅಡಮಾನ ಸ್ವತ್ತಿನ ಉತ್ಪನ್ನ ಮತ್ತು ವರಮಾನದ ರಿಸೀವರನ ನೇಮಕಾತಿ, ಅವನನ್ನು ಯಾವ ಷರತ್ತುಗಳಿಗೊಳಪಟ್ಟು ನೇಮಿಸಬಹುದೋ ಅಥವಾ ತೆಗೆದು ಹಾಕಬಹುದೋ ಆ ಷರತ್ತುಗಳು, ಮತ್ತು ಅವನು ಚಲಾಯಿಸಬಹುದಾದಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಅವನು ಸ್ವೀಕರಿಸಬಹುದಾದ ವ್ಯವಸ್ಥಾಪನಾ ವೆಚ್ಚಗಳು ಮತ್ತು ಪರಿಶ್ರಮಧನ;

(ಡಿಡಿಕ4) [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] 91ನೇ ಪ್ರಕರಣದ ಮೇರೆಗೆ ಅಡಮಾನಕಾರನ ವಿರುದ್ಧ ಯಾವ ವಿದ್ಯಮಾನಗಳಲ್ಲಿ ಕ್ರಮ ಕೈಗೊಳ್ಳಬಹುದೋ ಆ ವಿದ್ಯಮಾನಗಳು;

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿಡಿಕ5) XI ನೇ ಅಧ್ಯಾಯದ ಮೇರೆಗೆ ಸ್ಥಿರ ಸ್ವತ್ತಿನ ಮಾರಾಟದ ಸಂದರ್ಭದಲ್ಲಿ ಕ

(i) ಮಾರಾಟದ ಉದ್ಘೋಷಣೆಯ ಪ್ರಕ್ರಿಯೆ ಮತ್ತು ಮಾರಾಟವನ್ನು ನಡೆಸುವುದು ಮತ್ತು ಪ್ರಸ್ತಾವಿತ ಮಾರಾಟವನ್ನು ಯಾವ ಷರತ್ತುಗಳ ಮೇಲೆ ಬಿಟ್ಟು ಬಿಡಬಹುದೋ ಆ ಷರತ್ತುಗಳು;

[1][(ii) ಸಹಕಾರ ಸಂಘಗಳಿಗೆ ಕಳುಹಿಸಬೇಕಾದ ಲೆಕ್ಕಪರಿಶೋದಕರ ಮತ್ತು ಲೆಕ್ಕಪರಿಶೋಧನಾ ಫರ್ಮ್‌ಗಳ ಹೆಸರುಗಳನ್ನು ಪಟ್ಟಿ ಮಾಡುವ ಕಾರ್ಯವಿಧಾನ;][1]

1. 2013ರ ಅಧಿನಿಯಮ ಸಂಖ್ಯೆ 3ರ ಮೂಲಕ 11.02.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ರೇವಣಿಗಳನ್ನು ಸ್ವೀಕರಿಸುವ ಪ್ರಕ್ರಿಯೆ ಮತ್ತು ಮಾರಾಟದ ಉತ್ಪನ್ನಗಳ ವಿಲೆ;

(iv) ಪ್ರಸ್ತಾವಿತ ಮಾರಾಟವನ್ನು ಬಿಟ್ಟುಕೊಟ್ಟಿರುವಲ್ಲಿ ಅಥವಾ ಖರೀದಿಯ ಹಣವನ್ನು ನಿಯಮಿಸಲಾದ ಕಾಲದೊಳಗಾಗಿ ಠೇವಣಿ ಇಡದಿದ್ದರೆ, ಮರು ಮಾರಾಟದ ಪ್ರಕ್ರಿಯೆ ಮತ್ತು ಖರೀದಿ ಹಣವನ್ನು ಹಾಗೆ ಠೇವಣಿ ಇಡಲು ತಪ್ಪುವ ಖರೀದಿದಾರನ ವಿರುದ್ಧ ವಿಧಿಸಬಹುದಾದ ದಂಡನೆ;

(v) 89ಕಬಿ ಪ್ರಕರಣದ ಮೇರೆಗೆ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಹಣ ವಿಲೆ ಮಾಡುವ ನಮೂನೆ ಮತ್ತು ವಿಧಾನ;

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(vi) 89ಕಸಿ ಪ್ರಕರಣದ ಮೇರೆಗಿನ ಮಾರಾಟ ಪ್ರಮಾಣ ಪತ್ರದ ನಮೂನೆ;

(vii) 89ಕಸಿ ಪ್ರಕರಣದ ಮೇರೆಗೆ ಖರೀದಿಸಲಾದ ಸ್ವತ್ತನ್ನು ನ್ಯಾಯಾಲಯವು ಖರೀದಿದಾರನಿಗೆ ವಶಾವಣೆ ಮಾಡುವ ಪ್ರಕ್ರಿಯೆ;

(viii) 97ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸಿನ ನಮೂನೆ; ಮತ್ತು

(ix) ಅಂಥ ನೋಟೀಸುಗಳ ಜಾರಿಗೆ ಸಂದಾಯವಾಗಬೇಕಾದ ಫೀಜು ಮತ್ತು ಅಂಥ ನೋಟೀಸುಗಳಲ್ಲಿ ನಮೂದಿಸಿದ ಭೂ ಮಾಲೀಕನಿಗೆ ಅಂಥ ನೋಟೀಸುಗಳನ್ನು ಜಾರಿ ಮಾಡುವ ರೀತಿ;

(ಡಿಡಿ6) XIನೇ ಅಧ್ಯಾಯದ ಮೇರೆಗೆ ಸ್ಥಿರ ಸ್ವತ್ತಿನ ಮಾರಾಟದ ಸಮಯದಲ್ಲಿ [1][ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು][1] ಖರೀದಿಸಿದ ಸ್ವತ್ತನ್ನು ಆ ಬ್ಯಾಂಕು ಯಾವ ಸಮಯದೊಳಗಾಗಿ ಮತ್ತು ಯಾವ ಪ್ರಕ್ರಿಯೆಗನುಸಾರ ವಿಲೆ ಮಾಡತಕ್ಕುದೋ ಆ ಸಮಯ ಮತ್ತು ಪ್ರಕ್ರಿಯೆ;][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಇಇ) ಸಹಕಾರ ಸಂಘದ ವಿಳಾಸವನ್ನು ನೋಂದಾಯಿಸುವ ರೀತಿ;

(ಎಫ್‌ಎಫ್) ಸಹಕಾರ ಸಂಘವು ಇಡಬೇಕಾದ [1][ಲೆಕ್ಕ ಪುಸ್ತಕಗಳು ಹಾಗೂ ದಾಖಲೆಗಳು][1] ಮತ್ತು ರಿಜಿಸ್ಟರುಗಳು ಮತ್ತು ಲೆಕ್ಕಗಳನ್ನು ನಮತ್ತು ಪುಸ್ತಕಗಳನ್ನು ಬರೆದಿಡುವಂತೆ ನಿರ್ದೇಶಿಸುವ ರಿಜಿಸ್ಟ್ರಾರನ ಅಧಿಕಾರ;

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಜಿಜಿ) ಸಹಕಾರ ಸಂಘದ ಪುಸ್ತಕಗಳಲ್ಲಿರುವ ನಮೂದುಗಳನ್ನು ಪ್ರಮಾಣೀಕರಿಸುವ ರೀತಿ ಮತ್ತು ಅದು ತನ್ನ ವ್ಯವಹಾರ ಕ್ರಮದಲ್ಲಿ ಇಟ್ಟುಕೊಂಡಿರುವ ದಸ್ತಾವೇಜುಗಳ ಪ್ರತಿಗಳು;

(ಹೆಚ್‌ಹೆಚ್) ಸಹಕಾರ ಸಂಘಗಳು ರಿಜಿಸ್ಟ್ರಾರನಿಗೆ ಒದಗಿಸಬೇಕಾದ ವಿವರಣೆಗಳು ಮತ್ತು ವಿವರಪಟ್ಟಿಕೆಗಳು;

(ಐಐ) ವಕೀಲರಾಗಿ ಹಾಜರಾಗುವ ವ್ಯಕ್ತಿಗಳ ಮೇಲೆ ನಿರ್ಬಂಧಗಳು;

(ಜೆಜೆ) ದಸ್ತಾವೇಜುಗಳ ಪರಿಶೀಲನೆ ಮತ್ತು ಅವುಗಳ ಪ್ರಮಾಣಿತ ಪ್ರತಿಗಳನ್ನು ನೀಡಲು ಫೀಜುಗಳನ್ನು ವಿಧಿಸುವುದು; ಮತ್ತು

(ಕೆಕೆ) ನಿಯಮಿಸಬೇಕೆಂದು ಈ ಅಧಿನಿಯಮದ ಮೂಲಕ ಸ್ಪಷ್ಟವಾಗಿ ಅಗತ್ಯಪಡಿಸಿದ ಅಥವಾ ಅನುಮತಿಸಿದ ವಿಷಯಗಳು;

[1][(ಎಲ್‌ಎಲ್) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಅವಶ್ಯವಿರುವ ಇತರ ಯಾವುದೇ ವಿಷಯ.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಈ ಪ್ರಕರಣದ ಮೇರೆಗೆ ನಿಯಮವನ್ನು ರಚಿಸುವಲ್ಲಿ, ರಾಜ್ಯ ಸರ್ಕಾರವು, ಅದನ್ನು ಉಲಂಘಿಸುವ ತಪ್ಪಿತಸ್ಥ ವ್ಯಕ್ತಿಯು, ಎರಡು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದೆಂದು ಉಪಬಂಧಿಸಬಹುದು.

[1][(4) ಈ ಅಧಿನಿಯಮದ ಮೇರೆಗೆ ನಿಯಮವನ್ನು ಪೂರ್ವಾನ್ವಯ ಪರಿಣಾಮ ಹೊಂದಿರುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ಆ ನಿಯಮವನ್ನು ರಚಿಸುವ ಬಗ್ಗೆ ಕಾರಣಗಳನ್ನು ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸಲಾಗುವ ಹೇಳಿಕೆಯಲ್ಲಿ ನಿರ್ದಿಷ್ಟಪಡಿಸತಕ್ಕುದು. ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು, 130ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಮಾರ್ಪಾಟಿಗೊಳಪಟ್ಟು, ಈ ಅಧಿನಿಯಮದಲ್ಲಿ ಅಧಿನಿಯಮಿಸಿದ್ದರೆ ಹೇಗೋ ಹಾಗೆ ಪರಿಣಾಮ ಹೊಂದಿರತಕ್ಕುದು.][1]

1. 1964ರ ಅಧಿನಿಯಮ ಸಂಖ್ಯೆ 40ರ ಮೂಲಕ 26.6.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**129ಎ. ಮಾದರಿ ಉಪ ವಿಧಿಗಳು.**- (1) 129ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಅನುಸಾರ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಗಳಿಗೆ ಸಂಬಂಧಪಟ್ಟಂತೆ ರಿಜಿಸ್ಟ್ರಾರನು, ಅಧಿಸೂಚನೆಯ ಮೂಲಕ, ಮಾದರಿ ವಿಧಿಗಳನ್ನು ರಚಿಸಬಹುದು ಮತ್ತು ವಿವಿಧ ವರ್ಗದ ಸಂಘಗಳಿಗೆ ವಿವಿಧ ಮಾದರಿ ವಿಧಿಗಳನ್ನು ರಚಿಸಬಹುದು.

(2) ರಿಜಿಸ್ಟ್ರಾರನು, ಆದೇಶದ ಮೂಲಕ, ಯಾವುದೇ ಸಹಕಾರ ಸಂಘವನ್ನು, ಅಥವಾ ಸಹಕಾರ ಸಂಘಗಳ ವರ್ಗವನ್ನು ಅಥವಾ ವರ್ಗಗಳನ್ನು, ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಮಾದರಿ ಉಪ ವಿಧಿಗಳನ್ನು, ಸಂಘದಿಂದ ನಿರ್ದೇಶನವು ಸ್ವೀಕೃತವಾದ ದಿನಾಂಕದಿಂದ ಮೂರು ತಿಂಗಳಿಗಿಂತಲೂ ಕಡಿಮೆಯಿಲ್ಲದ ಅಂಥ ಅವಧಿಯೊಳಗೆ ಅಳವಡಿಸಿಕೊಳ್ಳುವಂತೆ ನಿರ್ದೇಶಿಸಬಹುದು.

(3) ಸಹಕಾರ ಸಂಘವು, ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಮಾದರಿ ವಿಧಿಗಳನ್ನು ಅಳವಡಿಸಿಕೊಳ್ಳುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ತಪ್ಪಿದಲ್ಲಿ, ರಿಜಿಸ್ಟ್ರಾರನು, ಆದೇಶದ ಮೂಲಕ ಸದರಿ ಮಾದರಿ ಉಪ ವಿಧಿಗಳನ್ನು ಅಂಥ ಸಹಕಾರ ಸಂಘವು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಳವಡಿಸಿಕೊಂಡಿದೆಯೆಂದು, ತದನುಸಾರವಾಗಿ ಅಂಥ ವಿಧಿಗಳು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದೆಂದು ಘೋಷಿಸಬಹುದು.][1]

1. 1998ರ ಅಧಿನಿಯಮ ಸಂಖ್ಯೆ 25ರ ಮೂಲಕ 15.8.1998 ರಂತೆ ಜಾರಿಗೆ ಬರುವಂತೆ ಸೇರಿಸಲಾಗಿದೆ.

130. ನಿಯಮಗಳನ್ನು ಮತ್ತು ಆದೇಶಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡುವುದು.\- 37ನೇ, 54ನೇ ಮತ್ತು 132ನೇ ಪ್ರಕರಣಗಳ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, 120ನೇ ಮತ್ತು 121ನೇ ಪ್ರಕರಣಗಳ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಮತ್ತು 129ನೇ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ನಿಯಮವನ್ನು, ಅದನ್ನು ಹೊರಡಿಸಿದ ಅಥವಾ ಮಾಡಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕುದು; ಮತ್ತು ಸದರಿ ಅವಧಿಯ ಮುಕ್ತಾಯಕ್ಕೆ ಮುಂಚೆ ರಾಜ್ಯ ವಿಧಾನ ಮಂಡಲದ ಯಾವೊಂದು ಸದನವು ಆ ಅಧಿಸೂಚನೆಯಲ್ಲಿ, ಆದೇಶದಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಿದರೆ ಅಥವಾ ಆ ಅಧಿಸೂಚನೆ ಅಥವಾ ಆದೇಶ ಅಥವಾ ನಿಯಮವು ಪರಿಣಾಮಕಾರಿಯಾಗತಕ್ಕುದಲ್ಲವೆಂದು ನಿರ್ದೇಶಿಸಿದರೆ, ಮತ್ತು ಆ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ ಆ ಅಧಿಸೂಚನೆ,
ಆದೇಶ ಅಥವಾ ನಿಯಮವು ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗಿರತಕ್ಕುದು ಅಥವಾ ಯಾವುದೇ ರೀತಿಯಲ್ಲಿ ಪರಿಣಾಮಕಾರಿಯಾಗಿರತಕ್ಕುದಲ್ಲ.

131. ನಿರಸನ ಮತ್ತು ಉಳಿಸುವಿಕೆಗಳು.\- [1][ಬೆಳಗಾಂವ ಪ್ರದೇಶದಲ್ಲಿ][1] ಜಾರಿಯಲ್ಲಿದ್ದ ಮುಂಬಯಿ ಸಹಕಾರ ಸಂಘಗಳ ಅಧಿನಿಯಮ, 1925 (ಮುಂಬಯಿ ಅಧಿನಿಯಮ, 1925ರ VII), [1][ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶದಲ್ಲಿ][1] ಜಾರಿಯಲ್ಲಿದ್ದ ಮದ್ರಾಸು ಸಹಕಾರ ಸಂಘಗಳ ಅಧಿನಿಯಮ, 1932 (ಮದ್ರಾಸು ಅಧಿನಿಯಮ, 1932ರ IV), ಮತ್ತು ಮದ್ರಾಸು ಸಹಕಾರ ಭೂ ಅಡಮಾನ ಬ್ಯಾಂಕುಗಳ ಅಧಿನಿಯಮ, 1934 (ಮದ್ರಾಸು ಅಧಿನಿಯಮ 1934ರ V), ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿದ್ದ ಕೊಡಗು ಸಹಕಾರ ಸಂಘಗಳ ಅಧಿನಿಯಮ, 1936 (ಕೊಡಗು ಅಧಿನಿಯಮ, 1936ರ II) ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದ್ದ ಮೈಸೂರು ಸಹಕಾರ ಸಂಘಗಳ ಅಧಿನಿಯಮ, 1948 (ಮೈಸೂರು ಅಧಿನಿಯಮ, 1948ರ ಐII), [2][ಗುಲ್ಬರ್ಗಾ ಪ್ರದೇಶದಲ್ಲಿ][2] ಜಾರಿಯಲ್ಲಿದ್ದ ಹೈದರಾಬಾದು ಸಹಕಾರ ಸಂಘಗಳ ಅಧಿನಿಯಮ, 1952 (ಹೈದರಾಬಾದು ಅಧಿನಿಯಮ, 1952ರ XVI), ಮತ್ತು ಹೈದರಾಬಾದು ಸಹಕಾರ ಭೂ ಅಡಮಾನ ಬ್ಯಾಂಕುಗಳ ಅಧಿನಿಯಮ,1349 ಫಸಲಿ (ಹೈದರಾಬಾದು ಅಧಿನಿಯಮ, 1349ರ ಫಸಲಿ II), ಇವುಗಳನ್ನು ಈ ಮೂಲಕ ನಿರಸಗೊಳಿಸಲಾಗಿದೆ:

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿದ್ದು, ಮೇಲೆ ಹೇಳಿರುವ ನಿರಸನಗೊಳಿಸಿದ ಯಾವುವೇ ಅಧಿನಿಯಮಗಳ ಮೇರೆಗೆ ನೋಂದಾಯಿಸಿದ ಅಥವಾ ನೋಂದಾಯಿಸಲಾಗಿದೆಯೆಂದು ಭಾವಿಸಲಾದ ಯಾವುದೇ ಸಹಕಾರ ಸಂಘವು, ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾಗಿದೆಯೆಂದು ಭಾವಿಸತಕ್ಕುದು; ಮತ್ತು ಅಂಥ ಸಂಘದ ಉಪವಿಧಿಗಳು ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದಷ್ಟು ಮಟ್ಟಿಗೆ ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳ ಮೇರೆಗೆ ಬದಲಾಯಿಸುವ ಅಥವಾ ರದ್ದುಗೊಳಿಸುವವರೆಗೆ ಜಾರಿಯಲ್ಲಿ ಮುಂದುವರಿಯತಕ್ಕುದು:

ಮತ್ತೂ ಪರಂತು, ಈ ಹಿಂದಿನ ಪರಂತುಕಕ್ಕೊಳಪಟ್ಟು [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 ([1][ಕರ್ನಾಟಕ][1] ಅಧಿನಿಯಮ, 1899ರ III) ರ 6ನೇ ಪ್ರಕರಣವು, ಸದರಿ ಅಧಿನಿಯಮಗಳ ರದ್ದಿಯಾತಿಗೆ ಸಂಬಂಧಿಸಿ ಅನ್ವಯವಾಗತಕ್ಕುದು ಮತ್ತು ಸದರಿ ಅಧಿನಿಯಮದ 8ನೇ ಮತ್ತು 24ನೇ ಪ್ರಕರಣಗಳು, ಸದರಿ ಅಧಿನಿಯಮಗಳನ್ನು ರದ್ದುಗೊಳಿಸಿ [1][ಕರ್ನಾಟಕ][1] ಅಧಿನಿಯಮದ ಮೂಲಕ ಪುನಃ ಅಧಿನಿಯಮಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

132. **ತೊಂದರೆಗಳನ್ನು ನಿವಾರಿಸುವ ಅಧಿಕಾರ.**- (1) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ ಈ ಅಧಿನಿಯಮದ ಉಪಬಂಧಗಳಿಗೆ ಪರಿವರ್ತನೆಯಾದ ಪರಿಣಾಮವಾಗಿ, ಸದರಿ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ, ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅವಶ್ಯವೆಂದು ಅಥವಾ ಯುಕ್ತವೆಂದು ಕಂಡುಬರುವಂಥ ಉಪಬಂಧಗಳನ್ನು ಮಾಡಬಹುದು.

(2) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಫಬಂಧಗಳ ಪರಿವರ್ತನೆಗೆ ಸಂಬಂಧಿಸಿದುದನ್ನು ಬಿಟ್ಟು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ [1][ಅಥವಾ ಯಾವುದೇ ಸ್ಪಷ್ಟೀಕರಣವಿದ್ದಲ್ಲಿ][1] ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಆ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರುವಂಥ ಉಪಬಂಧಗಳನ್ನು ರಚಿಸಬಹುದು.

1. 2014ರ ಅಧಿನಿಯಮ ಸಂಖ್ಯೆ 35ರ ಮೂಲಕ 06.09.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

* * * *

ಅಧಿಸೂಚನೆ - I

ಬೆಂಗಳೂರು, ದಿನಾಂಕ: 25ನೇ ಮೇ, 1960 [ಸಂಖ್ಯೆ: ಎ ಮತ್ತು ಎಫ್ 21 ಸಿಎಡಿ 59 (II)]

ಮೈಸೂರು ಸಹಕಾರ ಸಂಘಗಳ ಅಧಿನಿಯಮ, 1959 (1959ರ ಮೈಸೂರು ಅಧಿನಿಯಮ II)ರ 1ನೇ ಪ್ರಕರಣದ (3)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1960ರ ಜೂನ್ 1ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಬಿ. ಬೀರಪ್ಪ)
ಸರ್ಕಾರದ ಕಾರ್ಯದರ್ಶಿ, ಕೃಷಿ ಮತ್ತು ಅರಣ್ಯ ಇಲಾಖೆ.

ಅಧಿಸೂಚನೆ – II

ಬೆಂಗಳೂರು, ದಿನಾಂಕ: 22/23ನೇ ಜೂನ್, 1965 [ಸಂಖ್ಯೆ: ಡಿಪಿಸಿ 88 ಸಿಬಿಎ 64]

ಎಸ್.ಓ. 2640:– ಮೈಸೂರು ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1964 (1964ರ ಮೈಸೂರು ಅಧಿನಿಯಮ 40)ರ 1ನೇ ಪ್ರಕರಣದ (2)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1965ರ ಜೂನ್ 26ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಲ್.ಎಸ್. ಗೈ)

ಅಧೀನ ಕಾರ್ಯದರ್ಶಿ.

ಅಧಿಸೂಚನೆ – III

ಬೆಂಗಳೂರು, ದಿನಾಂಕ: 11ನೇ ಏಪ್ರಿಲ್, 1968 [ಸಂಖ್ಯೆ: ಡಿಪಿಸಿ 257 ಸಿಎಂಡಿ 65]

ಎಸ್.ಓ. 526.– ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ (ವಿನಿಯಮನ) ಅಧಿನಿಯಮ, 1966 (1966ರ ಮೈಸೂರು ಅಧಿನಿಯಮ 27)ರ 1ನೇ ಪ್ರಕರಣದ (3)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1968ರ ಮೇ ಒಂದನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

(ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆ, ಭಾಗ–IV–2ಸಿ (ii) ಸಂಖ್ಯೆ: 314, ದಿನಾಂಕ: 11ನೇ ಏಪ್ರಿಲ್, 1968 ರಲ್ಲಿ ಪ್ರಕಟಿಸಲಾಗಿದೆ.)

ಅಧಿಸೂಚನೆ – IV

ಬೆಂಗಳೂರು, ದಿನಾಂಕ: 30ನೇ ಡಿಸೆಂಬರ್, 1967 [ಸಂಖ್ಯೆ: ಎಫ್‌ಡಿ 421 ಸಿಎಸ್‌ಎಲ್ 67]

ಎಸ್.ಓ. 2511.– ಮೈಸೂರು ಮಾರಾಟ ತೆರಿಗೆ (ತಿದ್ದುಪಡಿ) ಅಧಿನಿಯಮ, 1967 (1967ರ ಅಧಿನಿಯಮ ಸಂಖ್ಯೆ 16)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1968ರ ಜೂನ್ 1ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಎನ್.ಎಸ್. ಭರಥ್)

ಸರ್ಕಾರದ ಉಪ ಕಾರ್ಯದರ್ಶಿ, ಹಣಕಾಸು ಇಲಾಖೆ.

ಅಧಿಸೂಚನೆ ‑ V

ಬೆಂಗಳೂರು, ದಿನಾಂಕ: 17ನೇ ಜುಲೈ, 1975 [ಸಂಖ್ಯೆ: ಡಿಪಿ 87 ಪಿಸಿಎಂ 71]

ಎಸ್.ಓ. 2050.‑ ಕರ್ನಾಟಕ ಕೃಷಿ ಪತ್ತಿನ ಕಾರ್ಯಕ್ಷೇತ್ರಗಳು ಮತ್ತು ಸಂಕೀರ್ಣಗಳ ಉಪಬಂಧಗಳ ಅಧಿನಿಯಮ, 1974 (1975ರ ಕರ್ನಾಟಕ ಅಧಿನಿಯಮ 2)ರ 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1975ರ ಜುಲೈ ಹದಿನೇಳನೆಯ ದಿನವನ್ನು ಸದರಿ ಅಧಿನಿಯಮವು ಕರ್ನಾಟಕ ರಾಜ್ಯದಾದ್ಯಂತ ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಧೀರೇಂದ್ರ ಸಿಂಘ್)

ಸರ್ಕಾರದ ಉಪ ಕಾರ್ಯದರ್ಶಿ, ಯೋಜನೆ ಇಲಾಖೆ.

ಅಧಿಸೂಚನೆ ‑ VI

ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್, 1975 [ಸಂಖ್ಯೆ: ಆರ್‌ಡಿಸಿ 322 ಸಿಇಎ 75]

ಎಸ್.ಓ. 3077:‑ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1975 (1975ರ ಕರ್ನಾಟಕ ಅಧಿನಿಯಮ ಸಂಖ್ಯೆ 39)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1975ರ ಸೆಪ್ಟೆಂಬರ್ ಇಪ್ಪತ್ತಮೂರನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಸಿ.ಎಸ್. ಹುಬಳಿ)

ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ಇಲಾಖೆ.

(ರಾಜ್ಯಪತ್ರ ವಿಶೇಷ ಸಂಚಿಕೆ ದಿನಾಂಕ: 23.09.1975ರ ಸಂಖ್ಯೆ: 3471ರ ಭಾಗ‑IV‑2ಸಿ (i) ರಲ್ಲಿ ಎಸ್.ಓ. 3077 ಎಂದು ಪ್ರಕಟಿಸಲಾಗಿದೆ.)

ಅಧಿಸೂಚನೆ Š VII

ಬೆಂಗಳೂರು, ದಿನಾಂಕ: 12ನೇ ಆಗಸ್ಟ್, 1998 [ಸಂಖ್ಯೆ: ಸಿಎಂಡಬ್ಲ್ಯೂ ೆಯ 131 ಸಿಎಲ್‌ಎಂ 98]

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1997 (1998ರ ಕರ್ನಾಟಕ ಅಧಿನಿಯಮ 25)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1998ರ ಆಗಸ್ಟ್ ಹದಿನೈದನೇ ದಿನವನ್ನು, 5ನೇ ಪ್ರಕರಣದ ಮೂಲಕ 6(2)(iv)ನೇ ಪ್ರಕರಣದ, 29ನೇ ಪ್ರಕರಣದ ಮೂಲಕ ಸೇರಿಸಿದ 29ಜಿ ಪ್ರಕರಣ, 36ನೇ ಪ್ರಕರಣದ ಮೂಲಕ ಸೇರಿಸಿದ 39(ಎ) (3) ಪ್ರಕರಣ, 46ನೇ ಪ್ರಕರಣದ ಮೂಲಕ ಸೇರಿಸಿದ 63(3) ಪ್ರಕರಣ ಮತ್ತು ಈ ಅಧಿನಿಯಮದ 61ನೇ ಪ್ರಕರಣದ ಮೂಲಕ ಬಿಟ್ಟುಬಿಡಲಾದ 111ಎ ಪ್ರಕರಣದ ಉಪಬಂಧಗಳ ಹೊರತಾಗಿ, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ವಿಶೇಷ ಕರ್ತವ್ಯ ಅಧಿಕಾರಿ,

ಸಹಕಾರಿ ಇಲಾಖೆ.

ಅಧಿಸೂಚನೆ Š VIII

ಬೆಂಗಳೂರು, ದಿನಾಂಕ: 27ನೇ ಅಕ್ಟೋಬರ್, 1998 [ಸಂಖ್ಯೆ: ಸಿಎಂಡಬ್ಲ್ಯೂ 131 ಸಿಎಲ್‌ಎಂ 98]

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 1997 (1998ರ ಕರ್ನಾಟಕ ಅಧಿನಿಯಮ 25)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1998ರ ಅಕ್ಟೋಬರ್ ಇಪ್ಪತ್ತೆಳನೇ ದಿನವನ್ನು, 5ನೇ ಪ್ರಕರಣದ ಮೂಲಕ ಸೇರಿಸಿದ 6(2)(iv) ಪ್ರಕರಣ, 29ನೇ ಪ್ರಕರಣದ ಮೂಲಕ ಸೇರಿಸಿದ 29ಜಿ ಪ್ರಕರಣ, 36ನೇ ಪ್ರಕರಣದ ಮೂಲಕ ಸೇರಿಸಿದ 39ಎ(3) ಪ್ರಕರಣ, 46ನೇ ಪ್ರಕರಣದ ಮೂಲಕ ಸೇರಿಸಿದ 63(3) ಪ್ರಕರಣದ ಮತ್ತು ಸದರಿ ಅಧಿನಿಯಮದ 61ನೇ ಪ್ರಕರಣದ ಮೂಲಕ ಬಿಟ್ಟುಬಿಡಲಾದ 111ಎ ಪ್ರಕರಣದ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಂ.ಆರ್. ರಂಗನಾಥ್)

ವಿಶೇಷ ಕರ್ತವ್ಯ ಅಧಿಕಾರಿ,

ಸಹಕಾರ ಇಲಾಖೆ.

ಅಧಿಸೂಚನೆ – IX

ಬೆಂಗಳೂರು, ದಿನಾಂಕ: 20ನೇ ಜೂನ್, 2000 [ಸಂಖ್ಯೆ: ಸಿಎಂಡಬ್ಲೂ 60 ಸಿಎಲ್‌ಎಂ 99]

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 2)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2000ದ ಜೂನ್ ಇಪ್ಪತ್ತನೆಯ ದಿನವನ್ನು, 26ಎ ಪ್ರಕರಣದ ಮೂಲಕ ಸೇರಿಸಿದ 26ಬಿ ಪ್ರಕರಣದ ಹೊರತಾಗಿ, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಲಿಝ್ಯು ಫಿಲಿಪ್ಸ್)
ವಿಶೇಷ ಕರ್ತವ್ಯ ಅಧಿಕಾರಿ,
ಸಹಕಾರ ಇಲಾಖೆ.

ಅಧಿಸೂಚನೆ – X

ಬೆಂಗಳೂರು, ದಿನಾಂಕ: 2ನೇ ಜೂನ್, 2003 [ಸಂಖ್ಯೆ: ಸಿಎಂಡಬ್ಲೂ 90 ಸಿಎಲ್‌ಎಂ 2003]

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 2)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2003ರ ಮೇ 31ನೇ ದಿನವನ್ನು, ಸದರಿ ಅಧಿನಿಯಮದ 2ನೇ ಪ್ರಕರಣದ ಮೂಲಕ ಸೇರಿಸಲಾದ 26ಎ ಮತ್ತು 26ಬಿ ಪ್ರಕರಣದ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್. ಎಸ್. ಹುಚ್ಚಾಚಾರಿ
ವಿಶೇಷ ಕರ್ತವ್ಯ ಅಧಿಕಾರಿ,
ಸಹಕಾರ ಇಲಾಖೆ.

ಅಧಿಸೂಚನೆ - XI

ಬೆಂಗಳೂರು, ದಿನಾಂಕ: 5ನೇ ಸೆಪ್ಟೆಂಬರ್, 2001 [ಸಂಖ್ಯೆ: ಸಿಎಂಡಬ್ಲೂ 48 ಸಿಎಲ್‌ಎಂ 2001]

(ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ –IV-A –ಸಂಖ್ಯೆ 1648 ದಿನಾಂಕ 07.09.2001)

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 24)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2001ರ ಸೆಪ್ಟೆಂಬರ್ ಐದನೇ ದಿನವನ್ನು, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಲಿರ್ಝ್ಯು ಫಿಲಿಪ್ಸ್)
ವಿಶೇಷ ಕರ್ತವ್ಯ ಅಧಿಕಾರಿ,
ಸಹಕಾರ ಇಲಾಖೆ.

ಅಧಿಸೂಚನೆ - XIII

ಬೆಂಗಳೂರು, ದಿನಾಂಕ: 10ನೇ ಫೆಬ್ರುವರಿ, 2011 [ಸಂಖ್ಯೆ: ಸಿಒ 24 ಸಿಎಲ್‌ಎಂ 2011]

(ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ –IV-A –ಸಂಖ್ಯೆ 215 ದಿನಾಂಕ 11.02.2011)

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2011 (2000ರ ಕರ್ನಾಟಕ ಅಧಿನಿಯಮ 4)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2011ರ ಫೆಬ್ರುವರಿ ಹತ್ತನೇ ದಿನವನ್ನು, ಈ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಆರ್. ಎಸ್. ನುಲಿ)
ವಿಶೇಷ ಕರ್ತವ್ಯ ಅಧಿಕಾರಿ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸಹಕಾರಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 164 ಸಿಎಲ್‌ಎಂ 2012 ಬೆಂಗಳೂರು ದಿನಾಂಕ 08.02.2013

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012 (2013ರ ಕರ್ನಾಟಕ ಅಧಿನಿಯಮ 3)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2013ರ ಫೆಬ್ರುವರಿ 11ನೇ ದಿನವನ್ನು, ಅಧಿನಿಯಮದ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಜಿ.ಎಸ್. ರಮಣರೆಡ್ಡಿ)
ವಿಶೇಷ ಕರ್ತವ್ಯ ಅಧಿಕಾರಿ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

The above translation of the Karnataka Co-Operative Societies Act, 1959 (Karnataka Act 11 of 1959) shall be the authoritative text in the Kannada Language under section 5A of the Karnataka Official Language Act, 1963 (Karnataka Act No.26 of 1963).

VAJUBHAI VALA
GOVERNOR OF KARNATAKA
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL
GARDE